ಶನಿವಾರ, ಡಿಸೆಂಬರ್ 23, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಂದಹಾಸ
ಮುಂಬೈನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಬಾಲಿವುಡ್ ನಟಿ ಕಾಜೋಲ್ ಪಾಲ್ಗೊಂಡಿದ್ದರು

BHIMA BRILLIANCE.
DIAMOND JEWELLERY FESTIVAL

ಫ್ಲಾಟ್
₹7,000*
ಇನ್ಸ್‌ಟಂಟ್ ಕ್ಯಾಶ್‌ಬ್ಯಾಕ್ ಪ್ರತಿ ಕ್ಯಾರೆಟ್

ಜೊತೆಗೆ
₹3,00,000*
ಮೌಲ್ಯದವರೆಗೆ ಖಚಿತವಾದ ಉಚಿತ ಉಡುಗೊರೆ ಕಾರ್ಡ್

ನಮ್ಮ ಎಲ್ಲಾ ಮಳಿಗೆಗಳಲ್ಲಿ ಮತ್ತು bhimagold.com ನಲ್ಲಿ ಲಭ್ಯವಿರುತ್ತದೆ

*ನಿಯಮ ಮತ್ತು ಷರತ್ತುಗಳು ಅನ್ವಯ.

BHIMA JEWELLERS
GOLD • DIAMONDS • SILVER • PLATINUM
SINCE 1925

To locate stores, scan QR code

ಬೆಂಗಳೂರು: ಡಿಕನ್ಸನ್ ರಸ್ತೆ • ಜಯನಗರ 3ನೇ ಬ್ಲಾಕ್ • ಕೋರಮಂಗಲ • ಎಚ್.ಬಿ.ಆರ್. ಲೇಔಟ್
ರಾಜಾಜಿನಗರ • ಮಾರತಹಳ್ಳಿ • ಹೂಡಿ • ಮಲ್ಲೇಶ್ವರಂ • ಜಯನಗರ 4ನೇ ಬ್ಲಾಕ್
ಉಡುಪಿ • ಹಾಸನ • ಮಂಗಳೂರು • ಶಿವಮೊಗ್ಗ • ವಿಜಯವಾಡ • ಚೆನ್ನೈ • ರಾಜಮಂಡ್ರಿ • ಹೊಸೂರು • ಬೆಳಗಾವಿ

BHIMA Helpline Toll Free
1800-121-9076
(10:00 a.m. to 7:00 p.m.)

ವ್ಯಾಪಕ ಭ್ರಷ್ಟಾಚಾರ ದೂರು: ರಾಜಧಾನಿಯ ಹತ್ತು ಆಸ್ಪತ್ರೆಗಳಿಗೆ ಅಧಿಕಾರಿಗಳ ದಿಢೀರ್ ಭೇಟಿ

ಚಿಕಿತ್ಸೆಗೂ ಲಂಚ: ಲೋಕಾಯುಕ್ತ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಹಾಗೂ ನಗರ ಜಿಲ್ಲೆಯ ವ್ಯಾಪ್ತಿಯ ಹತ್ತು ಸರ್ಕಾರಿ ಆಸ್ಪತ್ರೆಗಳಿಗೆ ಶುಕ್ರವಾರ ದಿಢೀರ್ ಭೇಟಿ ನೀಡಿದ ಲೋಕಾಯುಕ್ತದ ಅಧಿಕಾರಿಗಳು ಭ್ರಷ್ಟಾಚಾರ, ಸಾರ್ವಜನಿಕರಿಗೆ ಸೇವೆ ಒದಗಿಸುವಲ್ಲಿ ಲೋಪ ಸೇರಿದಂತೆ ವಿವಿಧ ದೂರುಗಳ ಕುರಿತು ಪರಿಶೀಲನೆ ನಡೆಸಿದರು.

ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆ, ಸಿದ್ದಾಪುರದಲ್ಲಿರುವ ಸಂಜಯ ಗಾಂಧಿ ತುರ್ತು ಚಿಕಿತ್ಸೆ ಮತ್ತು ಮೂಳೆ ಆಸ್ಪತ್ರೆ, ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ, ತಿಲಕ್ ನಗರದಲ್ಲಿರುವ ರಾಜೀವ್ ಗಾಂಧಿ ಎದೆ ರೋಗಗಳ ಆಸ್ಪತ್ರೆ, ಶಿವಾಜಿನಗರದ ಗೌಸಿಯಾ ಆಸ್ಪತ್ರೆ, ಚಾಮರಾಜ

ಮುಖ್ಯಾಂಶಗಳು

- ಸೇವೆ ಒದಗಿಸುವಲ್ಲಿ ಲೋಪ: ವ್ಯಾಪಕ ದೂರು
- ದಿಢೀರ್ ಪರಿಶೀಲನೆಗೆ ಲೋಕಾಯುಕ್ತರ ನಿರ್ದೇಶನ

ಪೇಟೆಯಲ್ಲಿರುವ ವಾಣಿ ವಿಲಾಸ ಆಸ್ಪತ್ರೆ, ಜಯನಗರ, ಕೆ.ಆರ್.ಪುರ, ಯಲಹಂಕ ಮತ್ತು ನೆಲಮಂಗಲ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಪರಿಶೀಲನೆ ನಡೆಸಲಾಗಿದೆ.

‘ಸರ್ಕಾರಿ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡಲು ಲಂಚಕ್ಕೆ ಬೇಡಿಕೆ ಇಡುತ್ತಿರುವುದು ಹಾಗೂ ಸಮರ್ಪಕವಾಗಿ ಚಿಕಿತ್ಸೆ ಒದಗಿಸದೇ ಕರ್ತವ್ಯಲೋಪ ಎಸಗುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ. ಈ ರೀತಿಯ

> ಲೋಕಾಯುಕ್ತದ ಎಲ್ಲ ತಂಡಗಳು ತಪಾಸಣೆ ಬಳಿಕ ಸಲ್ಲಿಸುವ ವಿಸ್ತೃತ ವರದಿಗಳನ್ನು ಆಧರಿಸಿ ಕ್ರಮ ಕೈಗೊಳ್ಳಲಾಗುವುದು
>
> **ಬಿ.ಎಸ್. ಪಾಟೀಲ**
> ಲೋಕಾಯುಕ್ತ ನ್ಯಾಯಮೂರ್ತಿ

ದೂರುಗಳನ್ನು ಆಧರಿಸಿ ದಿಢೀರ್ ತಪಾಸಣೆ ನಡೆಸಲಾಗಿದೆ’ ಎಂದು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ‘ಪ್ರಜಾವಾಣಿ’ಗೆ ತಿಳಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿನ ಅವ್ಯವಸ್ಥೆ, ಭ್ರಷ್ಟಾಚಾರ, ದುರಾಡಳಿತದ ಕುರಿತು ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸಲಾಗುತ್ತಿದೆ. ಅದರ ಭಾಗವಾಗಿ ದಿಢೀರ್ ತಪಾಸಣೆ ನಡೆಸಿ ವರದಿ ನೀಡುವಂತೆ ಲೋಕಾಯುಕ್ತರು ನಿರ್ದೇಶನ ನೀಡಿದ್ದರು. ಸಂಸ್ಥೆಯ ಪೊಲೀಸ್, ನ್ಯಾಯಾಂಗ ವಿಭಾಗದ ಅಧಿಕಾರಿಗಳನ್ನು ಒಳಗೊಂಡ 10 ತಂಡಗಳು ಪರಿಶೀಲನೆಯಲ್ಲಿ ಪಾಲ್ಗೊಂಡಿದ್ದವು.

ಲೋಕಾಯುಕ್ತದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಪ್ರಶಾಂತ್ ಕುಮಾರ್ ಠಾಕೂರ್ ಮತ್ತು ಡಿಐಜಿ ಸುಬ್ರಮಣ್ಯೇಶ್ವರ ರಾವ್ ಕೂಡ ಕೆಲವು ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆಸ್ಪತ್ರೆಗಳ ಒಳ ಮತ್ತು ಹೊರ ರೋಗಿಗಳ ದಾಖಲಾತಿ ವಿಭಾಗಗಳು, ಔಷಧಾಲಯಗಳು, ಸ್ಕ್ಯಾನಿಂಗ್ ಕೇಂದ್ರಗಳು, ಪ್ರಯೋಗಾಲಯಗಳು, ದಾಸ್ತಾನು ಕೊಠಡಿಗಳಲ್ಲಿ ತಪಾಸಣೆ ನಡೆಸಲಾಗಿದೆ.

ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ವಾಣಿ ವಿಲಾಸ ಆಸ್ಪತ್ರೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಶುಕ್ರವಾರ ಪರಿಶೀಲನೆ ನಡೆಸಿದರು

ಸುದ್ದಿ 2 ನಿಮಿಷ

ನೈರುತ್ಯ ರೈಲ್ವೆ–ಜೆಎಸ್‌ಡಬ್ಲ್ಯು ಮಿನರಲ್ಸ್ ರೈಲ್ ಲಾಜಿಸ್ಟಿಕ್ಸ್ ಒಪ್ಪಂದ

ಬೆಂಗಳೂರು: ಕಬ್ಬಿಣದ ಅದಿರು ಸಾಗಣೆಗೆ 5 ಬಾಬ್‌ಸನ್ಸ್ (ಸೈಡ್ ಅನ್‌ಲೋಡ್ ಸಿಸ್ಟಂ ಇರುವ ವ್ಯಾಗನ್) ರೇಕ್‌ಗಳ ಕಾರ್ಯಾಚರಣೆಗಾಗಿ ನೈರುತ್ಯ ರೈಲ್ವೆ ಮತ್ತು ಜೆಎಸ್‌ಡಬ್ಲ್ಯು ಮಿನರಲ್ಸ್ ರೈಲ್ ಲಾಜಿಸ್ಟಿಕ್ಸ್ ಪ್ರೈವೆಟ್ ಲಿಮಿಟೆಡ್ ಸಂಸ್ಥೆಗಳು ಒಪ್ಪಂದ ಮಾಡಿಕೊಂಡಿವೆ.

ಬೋಗಿಗಳ ಎರಡೂ ಬದಿಗಳಲ್ಲಿ ಅನ್‌ಲೋಡ್ ಮಾಡುವ ವ್ಯವಸ್ಥೆ ಇರುವ ಈ ರೇಕ್‌ಗಳು ಮಿನರಲ್ ಎಂಟರ್ ಪ್ರೈಸಸ್‌ನ ಸೈಡಿಂಗ್, ಸಾಸಲು ಮತ್ತು ಸ್ವಾಮಿಹಳ್ಳಿಯಲ್ಲಿರುವ ಗಣಿಗಳಿಂದ ತೋರಣಗಲ್ಲು ಜೆಎಸ್‌ಡಬ್ಲ್ಯು ಉಕ್ಕಿನ ಪ್ಲಾಂಟ್‌ಗೆ ಅದಿರು ಸಾಗಿಸಲು ಬಳಕೆಯಾಗಲಿವೆ.

ಪ್ರತಿ ರೇಕ್‌ಗೆ ₹ 29.57 ಕೋಟಿ ಹೂಡಿಕೆ ಮಾಡಿದೆ. ಬಾಕ್ಸಿನ್ ರೇಕ್‌ಗಳಿಗಿಂತ ಶೇ 3.5 ಅಧಿಕ ಅದಿರು ಸಾಗಿಸುವ ಸಾಮರ್ಥ್ಯವನ್ನು ಹೊಂದಿದ್ದು, ಅದಿರು ಇಳಿಸುವ (ಅನ್‌ಲೋಡ್) ಅವಧಿಯು ಬಾಕ್ಸಿನ್ ರೇಕ್‌ಗಿಂತ ಎರಡು ತಾಸು ಕಡಿಮೆ ಸಾಕಾಗುತ್ತದೆ.

ಈ ಒಪ್ಪಂದಕ್ಕೆ ನೈರುತ್ಯ ರೈಲ್ವೆಯ ಸರಕು ಮಾರುಕಟ್ಟೆ ವಾಣಿಜ್ಯ ವ್ಯವಸ್ಥಾಪಕ ಎ. ಸುಂದರ್, ಜೆಎಸ್‌ಡಬ್ಲ್ಯು ಮಿನರಲ್ಸ್ ರೈಲ್ ಲಾಜಿಸ್ಟಿಕ್ಸ್ ಸಂಸ್ಥೆಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ಸುಶೀಲ್ ನೋವಾಲ್ ಸಹಿ ಹಾಕಿದರು. ನೈರುತ್ಯ ರೈಲ್ವೆ ಪ್ರಧಾನ ವಾಣಿಜ್ಯ ವ್ಯವಸ್ಥಾಪಕ ಸತ್ಯಪ್ರಕಾಶ್ ಶಾಸ್ತ್ರಿ, ಉಪ ವಾಣಿಜ್ಯ ವ್ಯವಸ್ಥಾಪಕ ಅರವಿಂದ ಹರ್ಲೆ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕೆಐಎ 2ನೇ ಟರ್ಮಿನಲ್‌ಗೆ ಯುನೆಸ್ಕೊ ಪುರಸ್ಕಾರ

ಬೆಂಗಳೂರು: ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (ಕೆಐಎ) ಎರಡನೇ ಟರ್ಮಿನಲ್‌ಗೆ ಯುನೆಸ್ಕೊದ ಪುರಸ್ಕಾರ ಲಭಿಸಿದೆ.

‘ಎರಡನೇ ಟರ್ಮಿನಲ್‌ನ ಒಳಾಂಗಣ ವಿನ್ಯಾಸವನ್ನು ಗುರುತಿಸಿರುವ ಯುನೆಸ್ಕೊ ಪ್ರಿಕ್ಸ್ ವೆರ್ಸೈಲ್ಸ್, 2023ನೇ ಸಾಲಿನ ವಿಶ್ವದ ಶ್ರೇಷ್ಠ ಒಳಾಂಗಣ ವಿಶೇಷ ಬಹುಮಾನ ನೀಡಿದೆ‘ ಎಂದು ಕೆಐಎ ತಿಳಿಸಿದೆ. ಇಂಥ ಪುರಸ್ಕಾರಕ್ಕೆ ಪಾತ್ರವಾದ ದೇಶದ ಮೊದಲ ವಿಮಾನ ನಿಲ್ದಾಣ ಇದಾಗಿದೆ.

2,55,661 ಚದರ ಮೀಟರ್ ವಿಸ್ತೀರ್ಣದ ಎರಡನೇ ಟರ್ಮಿನಲ್‌ನಲ್ಲಿ ತೂಗುವ ಉದ್ಯಾನ ಹಾಗೂ ಹೊರಾಂಗಣ ಉದ್ಯಾನವಿದೆ. ಇದರೊಳಗೆ ಪ್ರಯಾಣಿಕರು ನಡೆದಾಡಲು ಅವಕಾಶವಿದೆ. ಟರ್ಮಿನಲ್‌ನಲ್ಲಿ ಮರುಬಳಕೆ ಮಾಡಬಹುದಾದ ಇಂಧನವನ್ನು ಬಳಸಲಾಗುತ್ತಿದೆ. ಎರಡನೇ ಟರ್ಮಿನಲ್ ಮೊದಲ ಹಂತ ಕಾರ್ಯಾಚರಣೆಗೆ 2022ರ ನವೆಂಬರ್ 11ರಂದು ಪ್ರಧಾನಿ ನರೇಂದ್ರ ಮೋದಿ ಅವರು ಚಾಲನೆ ನೀಡಿದ್ದರು. ವಾರ್ಷಿಕವಾಗಿ 2.5 ಕೋಟಿ ಪ್ರಯಾಣಿಕರನ್ನು ನಿರ್ವಹಿಸುವ ಸಾಮರ್ಥ್ಯ ಟರ್ಮಿನಲ್‌ಗೆ ಇದೆ.

ಸಂಸದರ ಅಮಾನತು ವಿರೋಧಿಸಿ ‘ಕೈ’ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆಯ ಮೇಲಿನ ದಾಳಿಯ ಕುರಿತು ಚರ್ಚೆಗೆ ಆಗ್ರಹಿಸಿದ 146 ಸಂಸದರನ್ನು ಸಂಸತ್ತಿನಿಂದ ಅಮಾನತುಗೊಳಿಸಿದ ಕ್ರಮವನ್ನು ವಿರೋಧಿಸಿ ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

‘ನ್ಯಾಯ ಕೇಳಿದ ಸಂಸದರಿಗೆ ಹಿಟ್ಲರ್ ಬಿಜೆಪಿ ಸರ್ಕಾರದಿಂದ ಅನ್ಯಾಯ’, ‘ದಾಳಿಕೋರರಿಗೆ ಪಾಸ್ ಪೇಪರ್ ಸಿಂಹ ಅರ್ಹ: ದಾಳಿ ಪ್ರಶ್ನೆ ಮಾಡಿದ ಸಂಸದರು ಅನರ್ಹ’, ‘ಸಂವಿಧಾನ ವಿರೋಧಿ ಸರ್ವಾಧಿಕಾರಿ ನರೇಂದ್ರ ಮೋದಿ’ ಎಂಬ ಫಲಕಗಳನ್ನು ಪ್ರದರ್ಶಿಸಿದ ಪ್ರತಿಭಟನಕಾರರು, ಕೇಂದ್ರ ಸರ್ಕಾರ, ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗಿದರು.

ಪ್ರತಿಭಟನಾ ಸಭೆಯಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಪ್ರಜಾಪ್ರಭುತ್ವ ಹಾಗೂ ಅದರ ಮೌಲ್ಯಗಳನ್ನು ಉಳಿಸುವ ಉದ್ದೇಶದಿಂದ ವಿರೋಧ ಪಕ್ಷಗಳ ಸದಸ್ಯರು ಸಂಸತ್ತಿನಲ್ಲಿ ಚರ್ಚೆಗೆ ಆಗ್ರಹಿಸಿದ್ದರು. ಕೇಂದ್ರ ಸರ್ಕಾರದ ವೈಫಲ್ಯ ಹಾಗೂ ಸಂಸತ್ತಿನಲ್ಲಿನ ಭದ್ರತಾ ಲೋಪವನ್ನು ತೆರೆದಿಡುವುದು ವಿರೋಧ ಪಕ್ಷಗಳ ಉದ್ದೇಶವಾಗಿತ್ತು. ಆದರೆ, ಧ್ವನಿ ಎತ್ತಿದ ಸಂಸದರನ್ನು ಸದನದಿಂದಲೇ ಅಮಾನತು ಮಾಡುವ ಮೂಲಕ ಪ್ರಜಾಪ್ರಭುತ್ವ ವಿರೋಧಿ ಧೋರಣೆ ಪ್ರದರ್ಶಿಸಲಾಗಿದೆ’ ಎಂದರು.

‘ಐದು ರಾಜ್ಯಗಳ ಚುನಾವಣೆಯಲ್ಲಿ ಮುನ್ನಡೆ ಸಾಧಿಸಿರುವ ಕಾರಣಕ್ಕೆ ಏನು ಬೇಕಾದರೂ ಮಾಡಬಹುದು ಎಂಬಂತೆ ಬಿಜೆಪಿಯವರು ವರ್ತಿಸುತ್ತಿದ್ದಾರೆ. ಬಿಜೆಪಿಯ ಸರ್ವಾಧಿಕಾರಿ ಧೋರಣೆಗೆ ಜನರು ತಕ್ಕ ಉತ್ತರ ನೀಡುತ್ತಾರೆ’ ಎಂದರು. ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್, ಶಾಸಕ ಪ್ರಸಾದ್ ಅಬ್ಬಯ್ಯ, ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್, ಮುಖಂಡರಾದ ವಿ.ಎಸ್. ಉಗ್ರಪ್ಪ, ಎಚ್.ಎಂ. ರೇವಣ್ಣ, ಪುಟ್ಟಣ್ಣ, ಜೆ. ಹುಚ್ಚಪ್ಪ ಸೇರಿದಂತೆ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬಿಎಂಸಿಆರ್‌ಐ ಆಸ್ಪತ್ರೆಗಳಲ್ಲಿ ಸಿದ್ಧತೆ

ಕೋವಿಡ್: ವಿಕ್ಟೋರಿಯಾ ಆಸ್ಪತ್ರೆಯಲ್ಲಿ ದಿನಕ್ಕೆ ಸರಾಸರಿ 300 ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ನಿರ್ವಹಣೆಗೆ ಸಂಬಂಧಿಸಿದಂತೆ ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಡಿಯ (ಬಿಎಂಸಿಆರ್‌ಐ) ಆಸ್ಪತ್ರೆಗಳಲ್ಲಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಸಂಸ್ಥೆಯಡಿ ವಿಕ್ಟೋರಿಯಾ, ವಾಣಿವಿಲಾಸ, ಮಿಂಟೊ ಕಣ್ಣಿನ ಆಸ್ಪತ್ರೆ, ಪಿಎಂಎಸ್‌ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಹಾಗೂ ಟ್ರಾಮಾ ಕೇರ್ ಸೆಂಟರ್ ಕಾರ್ಯನಿರ್ವಹಿಸುತ್ತಿವೆ. ಈ ಆಸ್ಪತ್ರೆಗಳಲ್ಲಿ ‘ಸಾರಿ’ (ತೀವ್ರ ಉಸಿರಾಟದ ಸಮಸ್ಯೆ) ಹಾಗೂ ಐಎಲ್‌ಐ ಸಮಸ್ಯೆ (ಶೀತ, ಜ್ವರ ಮಾದರಿ ಅನಾರೋಗ್ಯ ಸಮಸ್ಯೆ) ಇರುವವರ ಗಂಟಲ ದ್ರವದ ಮಾದರಿ ಸಂಗ್ರಹಿಸಿ, ಕೋವಿಡ್ ಪರೀಕ್ಷೆ ನಡೆಸಲಾಗುತ್ತಿದೆ.

ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಸೂಕ್ಷ್ಮ ವಿಜ್ಞಾನ ವಿಭಾಗವು ದಿನಕ್ಕೆ ಸರಾಸರಿ 300 ಕೋವಿಡ್ ಪರೀಕ್ಷೆಗಳನ್ನು ನಡೆಸುತ್ತಿದೆ.

ನಗರದಲ್ಲಿ 2020ರ ಮಾರ್ಚ್ ತಿಂಗಳಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ವಿಕ್ಟೋರಿಯಾ ಹಾಗೂ

ನಗರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಕೋವಿಡ್ ಪರೀಕ್ಷೆಗೆ ಮಾದರಿಗಳನ್ನು ಸಂಗ್ರಹಿಸಲಾಯಿತು – ಪ್ರಜಾವಾಣಿ ಚಿತ್ರ

ಟ್ರಾಮಾ ಕೇರ್ ಸೆಂಟರ್ ಅನ್ನು ಕೋವಿಡ್ ಪೀಡಿತರ ಚಿಕಿತ್ಸೆಗೆ ಮೀಸಲಿಟ್ಟು, ಕೋವಿಡೇತರ ಚಿಕಿತ್ಸೆಗಳನ್ನು ಸ್ಥಗಿತ ಮಾಡಲಾಗಿತ್ತು. ಕೋವಿಡ್ ನಿಯಂತ್ರಣಕ್ಕೆ ಬಂದ ಬಳಿಕ ಕೋವಿಡೇತರ ಚಿಕಿತ್ಸೆ ಪ್ರಾರಂಭಿಸಲಾಗಿತ್ತು.

ಪ್ರತ್ಯೇಕ ಕೊಠಡಿ: ‘ಕೋವಿಡ್ ತಪಾಸಣೆಗೆ ಹೊರರೋಗಿ ವಿಭಾಗದ ನಿರೀಕ್ಷಣಾ ಕೊಠಡಿ ಲಭ್ಯವಿದೆ. ಸಾರಿ ಹಾಗೂ ಐಎಲ್‌ಐ ಸಮಸ್ಯೆ ಹೊಂದಿರುವವರ ಗಂಟಲ ಮತ್ತು ಮೂಗಿನ ದ್ರವದ ಮಾದರಿಗಳನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಒಂದು ವೇಳೆ ಕೋವಿಡ್ ಪ್ರಕರಣ ಹೆಚ್ಚಳವಾದರೆ ಆಸ್ಪತ್ರೆ ಆವರಣದಲ್ಲಿ ಪ್ರತ್ಯೇಕ ತಪಾಸಣಾ ಪ್ರದೇಶ ಗುರುತಿಸಲಾಗುತ್ತದೆ’ ಎಂದು ಬಿಎಂಸಿಆರ್‌ಐ ಡೀನ್ ಡಾ. ರಮೇಶ್ ಕೃಷ್ಣ ತಿಳಿಸಿದ್ದಾರೆ.

‘ಕೇಂದ್ರ ಹಾಗೂ ರಾಜ್ಯ ಸರ್ಕಾರದ ಮಾರ್ಗಸೂಚಿ ಅನುಸಾರ ಕೊರೊನಾ ಸೋಂಕಿತರಿಗೆ ಚಿಕಿತ್ಸೆ ಒದಗಿಸಲಾಗುತ್ತದೆ. ಅಗತ್ಯ ಪ್ರಮಾಣದಲ್ಲಿ ಔಷಧ ಲಭ್ಯವಿದೆ. ಕೋವಿಡ್ ಪೀಡಿತರ ದಾಖಲಾತಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರತ್ಯೇಕ ಬ್ಲಾಕ್ ಗುರುತಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಮುಖ್ಯಾಂಶಗಳು

- ವಿಕ್ಟೋರಿಯಾ ಆಸ್ಪತ್ರೆಯಲ್ಲಿ 6 ತೀವ್ರ ನಿಗಾ ಘಟಕಗಳ ಹಾಸಿಗೆ ಲಭ್ಯ
- ಅಗತ್ಯ ಪ್ರಮಾಣದಲ್ಲಿ ಔಷಧ ದಾಸ್ತಾನು
- ಆಮ್ಲಜನಕ, ಪಿಪಿಇ ಕಿಟ್‌ಗಳ ಕೊರತೆ ಇಲ್ಲ

‘ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪುರುಷರು, ಮಹಿಳೆಯರು ಹಾಗೂ ಮಕ್ಕಳಿಗೆ ಪ್ರತ್ಯೇಕ ಕೊಠಡಿಗಳು ಲಭ್ಯವಿದೆ. ಅಲ್ಲಿ ಆರು ತೀವ್ರ ನಿಗಾ ಘಟಕ ಹಾಸಿಗೆಗಳಿವೆ. ಅಗತ್ಯ ಪ್ರಮಾಣದಲ್ಲಿ ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿ ಇದ್ದಾರೆ. ವೈದ್ಯಕೀಯ ಆಮ್ಲಜನಕ, ಪಿಪಿಇ ಕಿಟ್ ಸೇರಿ ವಿವಿಧ ವೈದ್ಯಕೀಯ ಸಲಕರಣೆಗಳು ಇವೆ’ ಎಂದು ಹೇಳಿದ್ದಾರೆ.

ಮಾಗಿ ಉತ್ಸವ

ಮೈಸೂರಿನ ಅರಮನೆ ಆವರಣದಲ್ಲಿ ‘ಮಾಗಿ ಉತ್ಸವ’ದ ಪ್ರಯುಕ್ತ ಆಯೋಜಿಸುತ್ತಿರುವ ‘ಫಲಪುಷ್ಪ ಪ್ರದರ್ಶನ’ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು. ಡಾ.ಹೆಚ್.ಸಿ. ಮಹದೇವಪ್ಪ, ಶಾಸಕ ಶ್ರೀವತ್ಸ, ಎಂಎಲ್‌ಸಿ ತಿಮ್ಮಯ್ಯ, ಡಿಸಿ ಕೆ.ವಿ. ರಾಜೇಂದ್ರ, ಪೊಲೀಸ್ ಆಯುಕ್ತ ರಮೇಶ್ ಬಾನೋತ್, ಇತರರು ಭಾಗವಹಿಸಿದರು ಪ್ರಜಾವಾಣಿ ಚಿತ್ರ

₹2 ಕೋಟಿ ನಕಲಿ ಬಿಲ್: ದೂರು

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಈ ಹಿಂದಿನ ಉಪನಿರ್ದೇಶಕ ಆರ್.ನಾಗರಾಜ ₹2 ಕೋಟಿಗೂ ಅಧಿಕ ಮೊತ್ತದ ಸುಳ್ಳು ಬಿಲ್ ತೆಗೆದು ಅವ್ಯವಹಾರ ನಡೆಸಿದ್ದಾರೆ. ಅವರ ಮೇಲೆ ತನಿಖೆ ನಡೆಸಬೇಕು’ ಎಂದು ಇನ್ನೊಬ್ಬ ಉಪನಿರ್ದೇಶಕ ಎ.ಎಂ. ಬಸವರಾಜ್ ಅವರು ರಾಜ್ಯ ಸರ್ಕಾರಕ್ಕೆ ದೂರು ನೀಡಿದ್ದಾರೆ.

‘ಡಿ.20ರಂದು ನಾನು ಬೆಳಗಾವಿ ಗ್ರಾಮೀಣ, ರಾಮದುರ್ಗ, ಬೈಲಹೊಂಗಲ ಮತ್ತು ಸವದತ್ತಿ ಎಂಎಸ್‌ಪಿಸಿಗಳಿಗೆ ಭೇಟಿ ನೀಡಿ ಪರಿಶೀಲಿಸಿದ್ದೇನೆ. ಇದಕ್ಕೂ ಮುನ್ನ ಉಪನಿರ್ದೇಶಕರಾಗಿದ್ದ ಆರ್.ನಾಗರಾಜ ಮತ್ತು ವಿಷಯ ನಿರ್ವಾಹಕ ವಿಕ್ರಮ್ ಸೇರಿ ಇದೇ ವರ್ಷದ ಅಕ್ಟೋಬರ್, ನವೆಂಬರ್ ತಿಂಗಳಲ್ಲಿ ಅವ್ಯವಹಾರ ಎಸಗಿದ್ದು ಗೊತ್ತಾಗಿದೆ. ಬೆಂಗಳೂರಿನ ರಾಜಾಜಿನಗರದ ಜಗಾದಿ ಎಂಟರ್‌ಪ್ರೈಸಸ್ ಹೆಸರಿನಲ್ಲಿ ಪೂರಕ ಪೌಷ್ಟಿಕ ಆಹಾರ ಪಡೆದಿದ್ದಾಗಿ ಸುಳ್ಳು ಬಿಲ್ ಸೃಷ್ಟಿಸಿದ್ದಾರೆ’ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಒಟ್ಟು ₹4.57 ಲಕ್ಷ ಬಿಲ್ ತೆಗೆಯಲಾಗಿದೆ. ಇದೇ ರೀತಿ ಬೆಳಗಾವಿ ಗ್ರಾಮೀಣದಲ್ಲಿ ಒಟ್ಟು ₹7.45 ಲಕ್ಷ, ರಾಮದುರ್ಗದಲ್ಲಿ ₹5.53 ಲಕ್ಷದ ಬಿಲ್ ತೆಗೆಯಲಾಗಿದೆ. ಈ ಎಲ್ಲ ಬಿಲ್‌ಗಳನ್ನು ನಾನು ಪರಿಶೀಲಿಸಿದ ಬಳಿಕ ಇವು ನಕಲಿ ಎಂದು ಕಂಡುಬಂದಿದೆ’ ಎಂದೂ ತಿಳಿಸಿದ್ದಾರೆ.

ಕುರ್ಚಿಗಾಗಿ ಸಮರ: ಬಸವರಾಜ್ ಅವರು ವರ್ಷದ ಹಿಂದೆ ಬೆಳಗಾವಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾಗಿದ್ದರು. ಅವರ ವರ್ಗಾವಣೆ ನಂತರ ಆ ಸ್ಥಾನಕ್ಕೆ ನಾಗರಾಜ್ ಅವರನ್ನು ನಿಯೋಜಿಸಲಾಗಿತ್ತು. ಆದರೆ, ಕೆಎಟಿ ಮೂಲಕ ಆದೇಶ ತಂದ ಬಸವರಾಜ ಮತ್ತೆ ತಮ್ಮ ಕುರ್ಚಿ ಮೇಲೆ ಬಂದು ಕುಳಿತರು. ಇಬ್ಬರ ಮಧ್ಯೆ ಕುರ್ಚಿಗಾಗಿ ಸಮರ ನಡೆದೇ ಇದೆ. ಅಧಿಕಾರ ದುರುಪಯೋಗ, ಕಚೇರಿಯ ಮಹಿಳಾ ಸಿಬ್ಬಂದಿಗೆ ಕಿರುಕುಳ ನೀಡಿದ ದೂರಿನ ಮೇರೆಗೆ ಬಸವರಾಜ್ ಅವರನ್ನು ಈಗಾಗಲೇ ಅಮಾನತು ಮಾಡಲಾಗಿದೆ.

ನಗರದಲ್ಲಿ ಇಂದು

ವೈಕುಂಠ ಏಕಾದಶಿ ಪ್ರಯುಕ್ತ ವೈಕುಂಠ ದ್ವಾರ ಪ್ರವೇಶ: ಆಯೋಜನೆ ಹಾಗೂ ಸ್ಥಳ: ಲಕ್ಷ್ಮೀವೆಂಕಟೇಶ್ವರ ದೇವಸ್ಥಾನ, ಮುನೇಶ್ವರ ನಗರ, ಉಲ್ಲಾಳು ಮುಖ್ಯರಸ್ತೆ, ಬೆಳಿಗ್ಗೆ 5ರಿಂದ

ವಿಶ್ವ ಯೋಗ ಶೃಂಗ: ಆಯೋಜನೆ: ರೋಟರಿ ಬೆಂಗಳೂರು ಗ್ಲೋಬಲ್ ಯೋಗ ಕ್ಲಬ್, ಸ್ಥಳ: ಅನಂತ್ಯ, ಗೇಟ್ ಸಂಖ್ಯೆ 9, ಬೆಂಗಳೂರು ಅರಮನೆ ಮೈದಾನ, ಬೆಳಿಗ್ಗೆ 5.30ರಿಂದ

17ನೇ ವಾರ್ಷಿಕೋತ್ಸವ, ವೈಕುಂಠ ಏಕಾದಶಿ, ಶ್ರೀನಿವಾಸ ಕಲ್ಯಾಣ ಮಹೋತ್ಸವ: ಆಯೋಜನೆ ಹಾಗೂ ಸ್ಥಳ: ಶನೈಶ್ಚರಸ್ವಾಮಿ ದೇವಸ್ಥಾನ ಸೇವಾ ಸಮಿತಿ ಟ್ರಸ್ಟ್, ಮಾತಾ ಅಮೃತಾನಂದಮಯಿ ಹೆಬ್ಬಾಗಿಲು, ಮರಿಯಪ್ಪನಪಾಳ್ಯ, ಬೆಳಿಗ್ಗೆ 6ರಿಂದ

ಅಖಿಲ ಭಾರತ ತೆಲುಗು ಸಮಾವೇಶ: ಉದ್ಘಾಟನೆ: ಎಂ. ವೆಂಕಯ್ಯನಾಯ್ಡು, ಮುಖ್ಯ ಅತಿಥಿ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಎ. ರಾಧಾಕೃಷ್ಣ ರಾಜು, ಆಯೋಜನೆ: ತೆಲುಗು ವಿಜ್ಞಾನ ಸಮಿತಿ, ಸ್ಥಳ: ಚೌಡಯ್ಯ ಮೆಮೊರಿಯಲ್ ಹಾಲ್, ವೈಯಾಲಿ ಕಾವಲ್, ಬೆಳಿಗ್ಗೆ 9

ಗೀತೋತ್ಸವ: ಭಗವದ್ಗೀತಾ ಶೋಭಾಯಾತ್ರೆ ಬೆಳಿಗ್ಗೆ 10ಕ್ಕೆ, ಭಗವದ್ಗೀತಾ ಪ್ರದರ್ಶನ ಮಳಿಗೆಗಳ ಉದ್ಘಾಟನೆ ಬೆಳಿಗ್ಗೆ 11.30ಕ್ಕೆ, ಸಾಮೂಹಿಕ ಅಖಂಡ ಭಗವದ್ಗೀತಾ ಪಾರಾಯಣ ಉದ್ಘಾಟನೆ ಮಧ್ಯಾಹ್ನ 12ಕ್ಕೆ, ಪ್ರವೀಣ್ ಗೋಡ್ಖಿಂಡಿ ಅವರಿಂದ ವೇಣು ವಾದನ ಮಧ್ಯಾಹ್ನ 3ಕ್ಕೆ, ಕೋಟಿ ಗೀತಾ ಲೇಖನ ಯಜ್ಞ ದೀಕ್ಷಾ ಸಮಾರಂಭ ಮತ್ತು ಸುಗುಣೇಂದ್ರತೀರ್ಥ ಸ್ವಾಮೀಜಿ ಅವರ ‘ನವನೀತ ಗೀತಾ’ ಪುಸ್ತಕ ಬಿಡುಗಡೆ, ಮುಖ್ಯ ಅತಿಥಿಗಳು: ಡಿ.ಕೆ. ಶಿವಕುಮಾರ್, ಆರ್. ಅಶೋಕ, ರಾಮಲಿಂಗಾರೆಡ್ಡಿ, ತೇಜಸ್ವಿಸೂರ್ಯ, ಜಗ್ಗೇಶ್, ರವಿಸುಬ್ರಹ್ಮಣ್ಯ, ಉದಯ್ ಗರುಡಾಚಾರ್, ವ್ಯಾಸನಕೆರೆ ಪ್ರಭಂಜನಾಚಾರ್ಯ, ಶ್ರೀನಿವಾಸ ವರಖೇಡಿ, ತಿಪ್ಪೇಸ್ವಾಮಿ, ಆಯೋಜನೆ: ಕೋಟಿ ಗೀತಾ ಲೇಖನ ಯಜ್ಞ ಸಮಿತಿ, ಭಾವಿ ಪರ್ಯಾಯ ಶ್ರೀ ಪುತ್ತಿಗೆ ಮಠ ಉಡುಪಿ, ಸ್ಥಳ: ನ್ಯಾಷನಲ್ ಕಾಲೇಜು ಮೈದಾನ, ಬಸವನಗುಡಿ, ಸಂಜೆ 6



ಸುಗುಣೇಂದ್ರ ತೀರ್ಥ ಸ್ವಾಮೀಜಿ

‘ನಲುಗದಿರಲಿ ಪರಿಸರ’ ಕೃತಿ ಬಿಡುಗಡೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ರೂಪಾ ಮೌದ್ಗಿಲ್, ಕೃತಿ ಬಿಡುಗಡೆ: ಎಂ.ಎನ್. ಅನುಚೇತ್, ಪ್ರಶಸ್ತಿ ಪ್ರದಾನ: ಸಿ.ಕೆ. ಬಾಬಾ, ಮುಖ್ಯ ಅತಿಥಿ: ಎಸ್. ಸಿದ್ಧರಾಜು, ಮುಖ್ಯ ಅತಿಥಿ: ಸತೀಶ್ ಕುಮಾರ್ ಹೊಸಮನಿ, ಆಯೋಜನೆ: ನಬಿರೋಶನ್ ಪ್ರಕಾಶನ, ಸ್ಥಳ: ಮಂಗಳ ಕಲ್ಯಾಣ ಮಂಟಪ, ಕೋರಮಂಗಲ, ಬೆಳಿಗ್ಗೆ 10.30

ಡಿಎಸ್‌ಸಿಇ ಹಳೆ ವಿದ್ಯಾರ್ಥಿಗಳ ಸಭೆ: ಅತಿಥಿಗಳು: ಜಯಂತ್ ಕುಮಾರ್, ಸರಸ್ ಮಧುಕರ್, ಪೃಥ್ವಿರಾಜ್ ಎಸ್.ಜೆ., ಆಯೋಜನೆ: ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜು ಹಳೆ ವಿದ್ಯಾರ್ಥಿಗಳ ಸಂಘ, ಸ್ಥಳ: ದಯಾನಂದ ಸಾಗರ್ ಎಂಜಿನಿಯರಿಂಗ್ ಕಾಲೇಜು, ಕುಮಾರಸ್ವಾಮಿ ಬಡಾವಣೆ, ಬೆಳಿಗ್ಗೆ 11

2022–23 ಸಾಲಿನ ವಿದ್ಯಾರ್ಥಿ ವೇತನ ವಿತರಣೆ ಸಮಾರಂಭ: ಸಾನ್ನಿಧ್ಯ: ಶಾಂತಮುನಿ ಶಿವಾಚಾರ್ಯ ಸ್ವಾಮೀಜಿ, ಮುಖ್ಯ ಅತಿಥಿ: ಜಯವಿಭವ ಸ್ವಾಮಿ, ಅಧ್ಯಕ್ಷತೆ: ಎಲ್. ರೇವಣ್ಣಸಿದ್ಧಯ್ಯ, ಆಯೋಜನೆ: ರಾವ್ ಬಹದ್ದೂರ್ ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮ ಸಂಸ್ಥೆ, ಸ್ಥಳ: ಶತಮಾನೋತ್ಸವ ಸ್ಮಾರಕ ಸಭಾಂಗಣ, ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ ವಿದ್ಯಾರ್ಥಿನಿಲಯ, ನಗರ ರೈಲು ನಿಲ್ದಾಣದ ಸಮೀಪ, ಬೆಳಿಗ್ಗೆ 11

ಎಜುಕೇಷನ್ ಪ್ರಮೋಷನ್ ಸೊಸೈಟಿ ಫಾರ್ ಇಂಡಿಯಾದ (ಇಪಿಎಸ್‌ಐ) ರಾಷ್ಟ್ರೀಯ ಸಮಾವೇಶದ ಸಮಾರೋಪ: ಮುಖ್ಯ ಅತಿಥಿಗಳು: ಪ್ರಲ್ಹಾದ ಜೋಶಿ, ಡಾ. ಶರಣ ಪ್ರಕಾಶ್ ಪಾಟೀಲ, ಆಯೋಜನೆ: ಇಪಿಎಸ್‌ಐ, ಸ್ಥಳ: ಫೋರ್ ಸೀಸನ್ಸ್ ಹೋಟೆಲ್, ಬಳ್ಳಾರಿ ರಸ್ತೆ, ಗಂಗಾನಗರ, ಬೆಳಿಗ್ಗೆ 11

ವಿವಿಧ ಲೇಖಕರ 8 ಕೃತಿಗಳ ಲೋಕಾರ್ಪಣೆ: ಹಿ.ಚಿ. ಬೋರಲಿಂಗಯ್ಯ, ಕ್ಯಾಲೆಂಡರ್ ಬಿಡುಗಡೆ: ವೂಡೇ ಪಿ. ಕೃಷ್ಣ, ಕೃತಿ ಬಗ್ಗೆ ಮಾತು: ಶರಣು ಹುಲ್ಲೂರು, ಅಧ್ಯಕ್ಷತೆ: ನಿಡಸಾಲೆ ಪುಟ್ಟಸ್ವಾಮಯ್ಯ, ಆಯೋಜನೆ: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಸ್ಥಳ: ಸಮ್ಮೇಳನ ಸಭಾಂಗಣ, ಶೇಷಾದ್ರಿಪುರ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10.30



ಹಿ.ಚಿ.ಬೋರಲಿಂಗಯ್ಯ

‘ಸುದರ್ಶನ ಗರ್ವಭಂಗ’ ಯಕ್ಷಗಾನ ಪ್ರದರ್ಶನ: ಆಯೋಜನೆ: ಯಕ್ಷ ಸಂಜೀವಿನಿ ಟ್ರಸ್ಟ್, ಸ್ಥಳ: ಆಯುರಾಶ್ರಮ, ಬ್ಯಾಡರಹಳ್ಳಿ, ಮಧ್ಯಾಹ್ನ 2

‘ಪರಿವರ್ತನಶ್ರೀ’ ರಾಜ್ಯ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಬೈರತಿ ಸುರೇಶ್, ನಾರಾಯಣಗುರು ಶಿಕ್ಷಣ ನಿಧಿ ಯೋಜನೆಗೆ ಚಾಲನೆ: ತುಷಾರ್ ವೆಲ್ಲಪ್ಪಲ್ಲಿ, ಕ್ರೀಡೋತ್ಸವ ಯೋಜನೆಗೆ ಚಾಲನೆ: ಜೆ.ಪಿ. ಸುಧಾಕರ್, ಆಯೋಜನೆ: ಬ್ರಹ್ಮಶ್ರೀ ನಾರಾಯಣಗುರು ಧರ್ಮ ಪರಿಪಾಲನಾ ಸಂಘ, ಸ್ಥಳ: ಗಾಂಧಿಭವನ, ಶಿವಾನಂದ ವೃತ್ತ, ಮಧ್ಯಾಹ್ನ 2.30

ಸಿರಿಧಾನ್ಯ ಆಹಾರ ತಯಾರಿಕಾ ಸ್ಪರ್ಧೆ: ಮುಖ್ಯ ಅತಿಥಿಗಳು: ವೈ.ಎಸ್. ಪಾಟೀಲ, ಅನ್ಬುಕುಮಾರ್, ಆಯೋಜನೆ: ಕೃಷಿ ಇಲಾಖೆ, ಸ್ಥಳ: ಸ್ಲರ್ಪ್ ಕಲನರಿ ಅಕಾಡೆಮಿ, ಇಂದಿರಾನಗರ, ಬೆಳಿಗ್ಗೆ 10

ರಂಗಭೂಮಿ ಪ್ರೀಮಿಯರ್ ಲೀಗ್: ಉದ್ಘಾಟನೆ: ಪ್ರಕಾಶ್ ಬೆಳವಾಡಿ, ಮುಖ್ಯ ಅತಿಥಿಗಳು: ಜಯಕರ್ ಎಸ್.ಎಂ., ವೀರಕಪುತ್ರ ಶ್ರೀನಿವಾಸ್, ಕೆ. ರಾಧಾಕೃಷ್ಣಯ್ಯ, ರಾಜೇಂದ್ರ ಕಾರಂತ್, ಆಯೋಜನೆ: ವಿಶ್ವಪಥ ಕಲಾ ಸಂಗಮ, ಸ್ಥಳ: ಆಟದ ಮೈದಾನ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10

ಪ್ರಕಾಶ್ ಬೆಳವಾಡಿ

8ನೇ ವಾರ್ಷಿಕೋತ್ಸವ ಸಮಾರಂಭ, ಗೀತ ಸಂಗೀತ ಮತ್ತು ವಾದ್ಯ ಸಂಗೀತ ಸಂಭ್ರಮ: ಉದ್ಘಾಟನೆ: ಶಿವಕುಮಾರ್ ಆರಾಧ್ಯ, ಅಧ್ಯಕ್ಷತೆ: ಜೆಮ್ ಶಿವು, ಮುಖ್ಯ ಅತಿಥಿಗಳು: ಖಾಸಿಂ ಮಲ್ಲಿಗೆ ಮಡುವು, ಜಯರಾಮ್ ಪಾರೆ ನಾರಾಯಣಮೂರ್ತಿ, ಆಯೋಜನೆ: ಸ್ವರಾಲಯ ಟ್ರಸ್ಟ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30

ರಾವ್‌ಬಹದ್ದೂರ್ ಗುಬ್ಬಿ ತೋಟದಪ್ಪ ಸ್ಮಾರಕ ದತ್ತಿ ಉಪನ್ಯಾಸ: ‘ಚಂದ್ರಯಾನ–3ರಲ್ಲಿ ಎದುರಾದ ಸವಾಲುಗಳು’, ಉಪನ್ಯಾಸಕರು: ರೂಪ ಎಂ.ವಿ., ಅಧ್ಯಕ್ಷತೆ: ಎಲ್. ರೇವಣ್ಣಸಿದ್ಧಯ್ಯ, ಉಪಸ್ಥಿತಿ: ಎಂ. ಸದಾಶಿವಪ್ಪ, ಎಂ. ಕೊಟ್ರೇಶ್, ಆಯೋಜನೆ: ದಿ ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸ್ಮಾರಕ ಸಭಾಂಗಣ, ಧರ್ಮಪ್ರವರ್ತ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ, ನಗರ ರೈಲು ನಿಲ್ದಾಣದ ಸಮೀಪ, ಸಂಜೆ 5.30

‘ರುಕ್ಮಾಂಗದ ಚರಿತ್ರೆ’ ತಾಳಮದ್ದಳೆ: **ಹಿಮ್ಮೇಳ:** ಬಾಲಕೃಷ್ಣ ಹಿಳ್ಳೋಡಿ, ಶಂಕರ್ ಭಟ್ ಬಾರೆ, ನಾರಾಯಣಮೂರ್ತಿ ಹೊಸಬಾಳೆ, ಚಿನ್ಮಯ ಅಂಬಾರಗೋಡ್ಲು, ಮುಮ್ಮೇಳ: ರವಿ ಐತುಮನೆ, ಆದಿತ್ಯ ಹುಲ್ಕೋಡು, ಕೃಷ್ಣ ಕುಮಾರ್ ನೆಗಳಗುಳಿ, ಚಂದನ್ ಕಲಾಹಂಸ, ಸಮರ್ಥ್ ಭಟ್ ಬೆಂಕಟಳ್ಳಿ, ಸಿರಿ ಹಳ್ಳದಾಚೆ, ಸ್ಥಳ: ಪ್ರಸನ್ನ ಮಹಾಗಣಪತಿ ದೇವಾಲಯ, ರೈಲ್ವೆ ಮೆನ್ಸ್ ಕಾಲೊನಿ, ಕಂಠೀರವ ನಗರ, ನಂದಿನಿ ಲೇಔಟ್, ಸಂಜೆ 6

ವೀಣಾ ವಾದನ: ಲತಾ ವೇಣುಗೋಪಾಲ್, ಪಿಟೀಲು: ವೆಂಕಟೇಶ ಜೋಯಿಸ್, ಮೃದಂಗ: ಬಿ.ಆರ್. ಶ್ರೀಧರ್, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.15

ಸಂಗೀತ ಕಛೇರಿ: ಮಾಥುರ್ ಶ್ರೀನಿಧಿ ಮತ್ತು ತಂಡ, ಆಯೋಜನೆ: ಎಂಇಎಸ್ ಕಲಾವೇದಿ, ಸ್ಥಳ: ಎಂಇಎಎಸ್ ಕಲಾ ಕಾಲೇಜು, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in

ಹಳೇ ಶೈಲಿ ಉಳಿಸಿಕೊಂಡೇ ಅಭಿವೃದ್ಧಿ: ನೈರುತ್ಯ ರೈಲ್ವೆ

ಪಾರಂಪರಿಕ ರೈಲು ನಿಲ್ದಾಣಗಳಿಗೆ ಆಧುನಿಕತೆ ಸ್ಪರ್ಶ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶತಮಾನದ ಇತಿಹಾಸವಿರುವ ವಿವಿಧ ರೈಲು ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲು ನೈರುತ್ಯ ರೈಲ್ವೆ ನಿರ್ಧರಿಸಿದ್ದು, ಮೊದಲ ಹಂತದಲ್ಲಿ ದೊಡ್ಡಜಾಲ, ದೇವನಹಳ್ಳಿ, ಆವತಿಹಳ್ಳಿ ಮತ್ತು ನಂದಿ ಹಾಲ್ಟ್ ನಿಲ್ದಾಣಗಳನ್ನು ಆಧುನೀಕರಣಗೊಳಿಸಲಾಗುತ್ತಿದೆ.

ಹಳೆಯ ಶೈಲಿಯನ್ನೇ ಉಳಿಸಿಕೊಂಡು, ನಾಲ್ಕೂ ರೈಲು ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಬ್ರಿಟಿಷರ ಕಾಲದಲ್ಲಿ ವಸಾಹತುಶಾಹಿ ಮತ್ತು ಮೈಸೂರು ಶೈಲಿ ವಾಸ್ತುಶಿಲ್ಪಗಳ ಮಿಶ್ರಣಗೊಳಿಸಿ ಹೈಬ್ರಿಡ್ ವಾಸ್ತುಶಿಲ್ಪ ಶೈಲಿಯಲ್ಲಿ 107 ವರ್ಷಗಳ ಹಿಂದೆ ಈ ನಾಲ್ಕು ಚಿಕ್ಕ ನಿಲ್ದಾಣಗಳನ್ನು ನಿರ್ಮಿಸಲಾಗಿತ್ತು. ದೊಡ್ಡಜಾಲ, ದೇವನಹಳ್ಳಿ, ಆವತಿಹಳ್ಳಿ ನಿಲ್ದಾಣಗಳು ಒಂದೇ ವಿನ್ಯಾಸ ಹೊಂದಿದ್ದು, ನಂದಿ ಹಾಲ್ಟ್ ನಿಲ್ದಾಣ ಮಾತ್ರ ಭಿನ್ನ ವಿನ್ಯಾಸದಲ್ಲಿದೆ.

ಮುಖ್ಯಾಂಶಗಳು

- ಮೂಲ ಶೈಲಿಗೆ ಧಕ್ಕೆಯಾಗದಂತೆ ಅಭಿವೃದ್ಧಿ
- ಇಂಟ್ಯಾಕ್ ಸಂಸ್ಥೆಯಿಂದ ಆರ್ಥಿಕ ನೆರವು
- ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿ ಬಳಕೆ

ಪ್ರತಿ ಕಟ್ಟಡದಲ್ಲಿ ನಾಲ್ಕು ಪಾರ್ಶ್ವಗಳ ಮಂಗಳೂರು ಹೆಂಚಿನ ಗೇಬಲ್ ಚಾವಣಿ, ಪ್ರತಿ ಗೇಬಲ್‌ನಲ್ಲಿ ವೃತ್ತಾಕಾರದ ಕಿಟಕಿ, ಸಣ್ಣ ಪಡಸಾಲೆ, ಸ್ಥಳೀಯ ಕಡಪ ಕಲ್ಲಿನ ನೆಲಹಾಸುಗಳಿವೆ ಎಂದು ಬೆಂಗಳೂರು ವಿಭಾಗದ ಹೆಚ್ಚುವರಿ ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಕುಸುಮಾ ಹರಿಪ್ರಸಾದ್ ಶುಕ್ರವಾರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

ನಿಲ್ದಾಣಗಳ ಕಟ್ಟಡಗಳ ಗೋಡೆಗಳು ಬಿರುಕುಬಿಟ್ಟಿದ್ದವು. ಹೆಂಚುಗಳು ಅಸ್ತವ್ಯಸ್ತವಾಗಿದ್ದವು. ಒಟ್ಟಾರೆ ಕಟ್ಟಡಗಳು ಶಿಥಿಲಗೊಂಡಿದ್ದವು. ಇಂಟ್ಯಾಕ್ ಸಂಸ್ಥೆಯ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು ಪಡೆದು, ಈ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಲಾಗುತ್ತಿದೆ. ನಿಲ್ದಾಣದ ಆಸುಪಾಸಿನಲ್ಲಿ ಆರ್ಟ್ ಗ್ಯಾಲರಿ, ಗ್ರಂಥಾಲಯ, ರೇಷ್ಮೆ ಮ್ಯೂಸಿಯಮ್‌ಗಳ ನಿರ್ಮಾಣ ಸೇರಿದಂತೆ ವಿವಿಧ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ ಎಂದು ವಿವರಿಸಿದರು.

ಯಶವಂತಪುರ–ಚಿಕ್ಕಬಳ್ಳಾಪುರ ರೈಲು ಮಾರ್ಗದ ದೊಡ್ಡಜಾಲ ಪಾರಂಪರಿಕ ರೈಲು ನಿಲ್ದಾಣ ಕಟ್ಟಡ (ಎಡ) ಪುನರುಜ್ಜೀವನಗೊಳ್ಳುತ್ತಿರುವ ನಂದಿ ಹಾಲ್ಟ್ ರೈಲು ನಿಲ್ದಾಣದ ಕಟ್ಟಡ —ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ನಂದಿ ಹಾಲ್ಟ್ ನಿಲ್ದಾಣ ಹೊರತುಪಡಿಸಿ ಉಳಿದ ಮೂರು ನಿಲ್ದಾಣಗಳಲ್ಲಿರುವ ಪಾರಂಪರಿಕ ಕಟ್ಟಡಗಳನ್ನು ದುರಸ್ತಿ ಮಾಡಲಾಗಿದೆ. ಉಳಿದ ಕಾಮಗಾರಿಗಳು ಪೂರ್ಣಗೊಂಡ ಬಳಿಕ ಈ ನಿಲ್ದಾಣಗಳು ಪ್ರವಾಸಿ ತಾಣಗಳಾಗಲಿವೆ. ಚಿಕ್ಕಬಳ್ಳಾಪುರ ಕಡೆಗೆ ತೆರಳುವ ರೈಲುಗಳಲ್ಲಿ ಪ್ರವಾಸಿಗರು ಬಂದು ವೀಕ್ಷಿಸಬಹುದು. ಪ್ರವಾಸಿಗರು ಇಲ್ಲಿಗೆ ಬಂದು ಹೋಗಲು ಬಸ್‌ಗಳ ವ್ಯವಸ್ಥೆ ಮಾಡುವಂತೆಯೂ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರಿಗೆ ಪತ್ರ ಬರೆಯಲಾಗಿದೆ ಎಂದು ತಿಳಿಸಿದರು.

ನೈರುತ್ಯ ರೈಲ್ವೆಗೆ ಯಾವುದೇ ಆರ್ಥಿಕ ಹೊರೆಯಾಗದಂತೆ ಈ ಕಟ್ಟಡಗಳನ್ನು ಪುನರುಜ್ಜೀವಗೊಳ್ಳುತ್ತಿವೆ ಎಂದು ಅವರು ವಿವರಿಸಿದರು.

ಮೌಲ್ಯಮಾಪನ: ಡಾ. ಎಂ.ಸಿ.ಸುಧಾಕರ್

‘ಖಾಸಗಿ ವಿವಿಗಳು ಎಚ್ಚರ ವಹಿಸಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಖಾಸಗಿ ವಿಶ್ವವಿದ್ಯಾಲಯಗಳು ಇತರೆ ವಿಶ್ವವಿದ್ಯಾಲಯಗಳೊಂದಿಗೆ ಸ್ಪರ್ಧೆಗಿಳಿಯುವ ಭರಾಟೆಯಲ್ಲಿ ಮೌಲ್ಯಮಾಪನದಲ್ಲಿ ಅಶಿಸ್ತು ತೋರಿಸುತ್ತಿದ್ದು, ಇದು ಸರ್ಕಾರಿ ಕಾಲೇಜುಗಳ ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರುತ್ತಿದೆ. ಇದನ್ನು ಖಾಸಗಿ ವಿವಿಗಳು ಗಂಭೀರವಾಗಿ ಪರಿಗಣಿಸಬೇಕು ‘ ಎಂದು ಉನ್ನತ ಶಿಕ್ಷಣ ಸಚಿವ ಡಾ. ಎಂ.ಸಿ.ಸುಧಾಕರ್ ಎಚ್ಚರಿಕೆ ನೀಡಿದರು.

ಕಾಮೆಡ್ -ಕೆ ಕೇರ್ ಮತ್ತು ಎಜುಕೇಶನ್ ಪ್ರಮೋಷನ್ ಸೊಸೈಟಿ ಫಾರ್ ಇಂಡಿಯಾ (ಇಪಿಎಸ್‌ಐ) ಸಹಯೋಗದಲ್ಲಿ ಶುಕ್ರವಾರ ಖಾಸಗಿ ಹೋಟೆಲ್‌ನಲ್ಲಿ ಆಯೋಜಿಸಿದ್ದ 'ಜಾಗತಿಕ ಸ್ಪರ್ಧೆಗೆ ಭಾರತೀಯ ಉನ್ನತ ಶಿಕ್ಷಣ ವ್ಯವಸ್ಥೆ ರೂಪಿಸುವುದು' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಖಾಸಗಿ ವಿವಿಗಳು ಹೆಚ್ಚಿವೆ. ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳು ಕಡಿಮೆ ಇವೆ. ಖಾಸಗಿ ವಿವಿಯಲ್ಲಿ ಓದುತ್ತಿರುವ ವಿದ್ಯಾರ್ಥಿ ಗಳಿಗೆ ಹೆಚ್ಚಿನ ಅಂಕಗಳನ್ನು ನೀಡುತ್ತಿದ್ದು, ಸರ್ಕಾರಿ ಕಾಲೇಜಿನಲ್ಲಿ ಓದುವ ವಿದ್ಯಾರ್ಥಿಗಳಿಗೆ ಕಡಿಮೆ ಅಂಕ ಸಿಗುತ್ತಿವೆ. ಖಾಸಗಿ ವಿವಿಗಳ ನಡುವಿನ ಸ್ಪರ್ಧೆಯಿಂದಾಗಿ ಹೀಗಾಗುತ್ತಿದೆ ಎಂದು ತಿಳಿದುಬಂದಿದೆ. ಮುಂದೆ ಈ ರೀತಿ ಆಗದಂತೆ ಎಚ್ಚರವಹಿಸಬೇಕು' ಎಂದರು. ಗೋಕುಲ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಎಂ.ಆರ್.ಜಯರಾಂ, ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ವಿ ಐ ಟಿ) ಸಂಸ್ಥಾಪಕ ಕುಲಪತಿ ಜಿ.ವಿಶ್ವನಾಥನ್ ಮಾತನಾಡಿದರು.

ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಇಪಿಎಸ್‌ಐ ಕಾರ್ಯನಿರ್ವಾಹಕ ಕಾರ್ಯದರ್ಶಿ ಪಳನಿವೇಲು, ಸಲಹಾ ಸದಸ್ಯ ಪ್ರೊ. ತ್ಯಾಗರಾಜನ್, ವಿಐಟಿ ಸಂಸ್ಥಾಪಕ ಕುಲಪತಿ ಡಾ.ಜಿ.ವಿಶ್ವನಾಥನ್, ಉನ್ನತ ಶಿಕ್ಷಣ ಖಾತೆ ಸಚಿವ ಡಾ. ಎಂ.ಸಿ.ಸುಧಾಕರ್, ಗೋಕುಲ ಶಿಕ್ಷಣ ಸಂಸ್ಥೆ ನಿರ್ದೇಶಕ ಡಾ. ಎಂ.ಆರ್. ಜಯರಾಂ, ಇಪಿಎಸ್‌ಐ ಖಜಾಂಚಿ ಡಾ. ಪ್ರಶಾಂತ್ ಭಲ್ಲಾ ಮತ್ತು ಇಪಿಎಸ್‌ಐ ಉಪಾಧ್ಯಕ್ಷ ಡಾ. ಮಂಗೇಶ್ ಟಿ ಕರಾಡ್ ಉಪಸ್ಥಿತರಿದ್ದಾರೆ.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕ್ರಿಸ್ಮಸ್ ಹಬ್ಬದೂಟಕ್ಕೆ ಮೀನು, ಕೋಳಿ ಖಾದ್ಯದೊಂದಿಗೆ ಸಿಹಿಸವಿಯೂಟದ ರೆಸಿಪಿ ವಿಶೇಷ

ಕರ್ನಾಟಕ 50 — 25 ವರ್ಷಗಳ ಮುನ್ನೋಟ 11
ವೀರಶೈವ ಲಿಂಗಾಯತ ಅಧಿವೇಶನ ಇಂದಿನಿಂದ 8
ಗ್ರಾಮೀಣ ಸೇವೆಗೆ ವೈದ್ಯರ ನಿರಾಸಕ್ತಿ 7

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
71,106 ▲	21,349 ▲	₹64,430 (ಬೆಂಗಳೂರು) ▲	₹76,700 (ಬೆಂಗಳೂರು) ▲	83.16 ▲

ಪದ್ಮಶ್ರೀ ಪ್ರಶಸ್ತಿ ಮರಳಿಸಿದ ಬಜರಂಗ್

ನವದೆಹಲಿ(ಪಿಟಿಐ): ಒಲಿಂಪಿಕ್ಸ್ ಪದಕ ವಿಜೇತ ಕುಸ್ತಿಪಟು ಬಜರಂಗ್ ಪೂನಿಯಾ ಅವರು ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಸ್ಥಾನಕ್ಕೆ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ಆಪ್ತ ಸಂಜಯ್ ಸಿಂಗ್ ಚುನಾಯಿತರಾಗಿರುವುದನ್ನು ವಿರೋಧಿಸಿ ಪದ್ಮಶ್ರೀ ಪ್ರಶಸ್ತಿಯನ್ನು ಸರ್ಕಾರಕ್ಕೆ ಮರಳಿಸಿದ್ದಾರೆ.

ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಎದುರಿಸುತ್ತಿರುವ ಬ್ರಿಜ್ ಭೂಷಣ್ ಅವರ ಬೆಂಬಲಿಗ ಸಂಜಯ್ ಸಿಂಗ್ ಗುರುವಾರ ನಡೆದ ಚುನಾವಣೆಯಲ್ಲಿ ಗೆದ್ದಿದ್ದರು. ಇದರಿಂದ ಹತಾಶೆಗೊಂಡಿದ್ದ ಒಲಿಂಪಿಯನ್ ಕುಸ್ತಿಪಟು ಸಾಕ್ಷಿ ಮಲಿಕ್ ನಿವೃತ್ತಿ ಘೋಷಿಸಿದ್ದರು. ಇದೀಗ ಟೋಕಿಯೊ ಒಲಿಂಪಿಕ್ ಪದಕವಿಜೇತ ಬಜರಂಗ್ ಅವರು, ‘ನಾನು ಪದ್ಮಶ್ರೀ ಪ್ರಶಸ್ತಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮರಳಿಸುತ್ತೇನೆ. ಇದು ನನ್ನ ಹೇಳಿಕೆ’ ಎಂದು ‘ಎಕ್ಸ್’ನಲ್ಲಿ ಬರೆದಿದ್ದರು. 14

ಉಡುಪು, ಆಹಾರ ಅವರವರ ಇಷ್ಟ: ಮುಖ್ಯಮಂತ್ರಿ ಪ್ರತಿಪಾದನೆ

ಹಿಜಾಬ್ ನಿಷೇಧ ವಾಪಸ್

ಪ್ರಜಾವಾಣಿ ವಾರ್ತೆ

ಕವಲಂದೆ (ಮೈಸೂರು ಜಿಲ್ಲೆ): ‘ಹಿಜಾಬ್ ನಿಷೇಧ ವಾಪಸ್ ಪಡೆಯುವಂತೆ ಸೂಚಿಸಿರುವೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಕ್ರವಾರ ತಿಳಿಸಿದರು.

ರಾಜ್ಯ ಪೊಲೀಸ್ ಇಲಾಖೆಯಿಂದ ನೂತನವಾಗಿ ನಿರ್ಮಿಸಿರುವ ಕವಲಂದೆ, ಅಂತರಸಂತೆ ಹಾಗೂ ಜಯಪುರ ಪೊಲೀಸ್ ಠಾಣೆ ಕಟ್ಟಡಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರ, ಶಾಲಾ–ಕಾಲೇಜು ಮತ್ತು ವಿಶ್ವ-ವಿದ್ಯಾಲಯಗಳಲ್ಲಿ ವಿದ್ಯಾರ್ಥಿನಿಯರು ಹಿಜಾಬ್ ಧರಿಸಿ ತರಗತಿಗೆ ಹಾಜರಾಗು-ವುದನ್ನು ನಿಷೇಧಿಸಿ 2022ರ ಫೆಬ್ರುವರಿ 5ರಂದು ಹೊರಡಿಸಿದ ಆದೇಶ ಉಲ್ಲೇಖಿಸಿದ ಸಿದ್ದರಾಮಯ್ಯ, ‘ನಾವು ಇದನ್ನು (ಆದೇಶ) ಹಿಂಪಡೆಯುತ್ತೇವೆ. ಆ ಆದೇಶ ಹಿಂಪಡೆಯಲು ನಾನು ಸೂಚಿಸಿದ್ದೇನೆ. ಹಿಜಾಬ್ ಧರಿಸಬಹುದು. ಸರಿಯೇ?’ ಎಂದರು.

ಹಿಜಾಬ್ ನಿಷೇಧ ಪ್ರಶ್ನಿಸಿದ ಅರ್ಜಿ ವಿಚಾರಣೆಯು ಸುಪ್ರೀಂ ಕೋರ್ಟ್‌ನಲ್ಲಿ ಇರುವಾಗಲೇ ಸಿದ್ದರಾಮಯ್ಯ ಅವರು ಈ ಘೋಷಣೆ ಮಾಡಿದ್ದಾರೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಹಿಂದುತ್ವದ ಅಸ್ತ್ರದ ವಿರುದ್ಧ ಹೋರಾಡಲು ತಯಾರಿ ನಡೆಸುತ್ತಿರುವ ಕಾಂಗ್ರೆಸ್ ಸೈದ್ಧಾಂತಿಕ ಪ್ರತ್ಯಸ್ತ್ರದ ಮೊರೆ ಹೋಗಿರುವುದನ್ನು ಇದು ತೋರಿಸುತ್ತದೆ ಎಂದು ವಿಶ್ಲೇಷಿಸಲಾಗುತ್ತಿದೆ.

‘ಉಡುಪು, ಆಹಾರ ಪದ್ಧತಿ... ಅವು ನಿಮ್ಮ ಆಯ್ಕೆ. ನಾನೇಕೆ ಇವುಗಳಿಗೆ ಅಡ್ಡಿಯಾಗಲಿ? ನೀವು ಬಯಸಿದ ಉಡುಪನ್ನು ಧರಿಸಿ, ನಿಮಗೆ ಬೇಕಾದದ್ದನ್ನು ತಿನ್ನಿ. ನನಗೆ ಬೇಕೆನಿಸಿದ್ದನ್ನು ನಾನು ತಿನ್ನುವೆ. ಉಡುಪು, ಆಹಾರ ಅವರವರ ಇಷ್ಟ ಮತ್ತು ಹಕ್ಕು. ಇದು ತುಂಬಾ ಸರಳ’ ಎಂದು ಸಿದ್ದರಾಮಯ್ಯ ಹೇಳಿದರು.

‘ಓಟಿಗಾಗಿ ರಾಜಕಾರಣ ಮಾಡಬಾರದು. ನಾವು ಅಂತಹ ರಾಜಕಾರಣ ಮಾಡುವುದಿಲ್ಲ’ ಎಂದರು.

‘ನಾವು (ಕಾಂಗ್ರೆಸ್) ಜಾತಿ ಅಥವಾ ಧರ್ಮದ ಮೇಲೆ ತಾರತಮ್ಯ ಮಾಡುವುದಿಲ್ಲ. ಬಿಜೆಪಿಯವರು ‘ಸಬ್ ಕಾ ಸಾಥ್, ಸಬ್ ಕಾ ವಿಕಾಸ್’ ಎನ್ನುತ್ತಾರೆ. ಆದರೆ, ಅವರು ಅದನ್ನು ಎಲ್ಲಿ ಮಾಡುತ್ತಿದ್ದಾರೆ?. ಗಡ್ಡಧಾರಿ-ಗಳನ್ನು, ಟೋಪಿ ಧರಿಸಿದವರನ್ನು, ಬುರ್ಖಾಧಾರಿಗಳನ್ನು ಒಳಗೆ ಬರಬೇಡಿ ಎನ್ನುತ್ತಾರೆ. ಅವರು ಸುಳ್ಳು ಹೇಳುತ್ತಲೇ ಇರುತ್ತಾರೆ. ನಾವು ಆ ರೀತಿ ಅಲ್ಲ’ ಎಂದು ಸಿದ್ದರಾಮಯ್ಯ ಅವರು ಕಾರ್ಯಕ್ರಮದ ಆರಂಭದಲ್ಲಿ ತಿಳಿಸಿದರು.

‘ಎಲ್ಲಾ ಜಾತಿ ಮತ್ತು ಧರ್ಮ ಹಾಗೂ ಪಕ್ಷದ ಬಡವರಿಗೂ ಅನುಕೂಲವಾಗುವ ಕಾರ್ಯಕ್ರಮ ರೂಪಿಸಿದ್ದೇವೆ. ಕಾಂಗ್ರೆಸ್ ವಿರೋಧಿಸುವವರೂ ಇವುಗಳ ಲಾಭ ಪಡೆಯುತ್ತಿದ್ದಾರೆ’ ಎಂದರು.

ಶಾಲೆ, ಕಾಲೇಜುಗಳಿಗೆ ಹಿಜಾಬ್ ಧರಿಸಿ ಬರದಂತೆ ಉಡುಪಿಯ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಮೊದಲು ನಿಷೇಧ ಹೇರಲಾಗಿತ್ತು. ಹಿಜಾಬ್‌ಗೆ ಅವಕಾಶ ನೀಡಿದರೆ ಕೇಸರಿ ಶಾಲು ಧರಿಸಲೂ ಅವಕಾಶ ನೀಡಬೇಕೆಂಬ ಬೇಡಿಕೆ ಹಿಂದುತ್ವ ಸಂಘಟನೆಗಳ ಕಾರ್ಯಕರ್ತ-ರಿಂದ ಬಂದಿತ್ತು. ಕೆಲವೇ ದಿನಗಳಲ್ಲಿ ರಾಜ್ಯದ ಉದ್ದಗಲಕ್ಕೆ ಈ ವಿವಾದ ವ್ಯಾಪಿಸಿತು.

ಸದ್ದು ಮಾಡಿದ್ದ ವಿವಾದ

- 2022ರ ಆರಂಭದಲ್ಲಿ, ಸಮವಸ್ತ್ರದ ಜತೆಗೆ ಹಿಜಾಬ್ ಧರಿಸದಂತೆ ನಿರ್ಬಂಧ ಹೇರಿದ್ದಕ್ಕೆ ಕೆಲವು ಮುಸ್ಲಿಂ ವಿದ್ಯಾರ್ಥಿನಿಯರು ತರಗತಿಗಳಿಗೆ ಗೈರಾದರು
- 2022ರ ಫೆಬ್ರುವರಿ 5ರಂದು ಬಿಜೆಪಿ ಸರ್ಕಾರವು ವಿದ್ಯಾರ್ಥಿಗಳು ಸಮವಸ್ತ್ರ ಬಿಟ್ಟು ಬೇರೇನು ಧರಿಸಬಾರದೆಂದು ಆದೇಶ ಹೊರಡಿಸಿತು
- 2022ರ ಮಾರ್ಚ್‌ನಲ್ಲಿ ರಾಜ್ಯ ಸರ್ಕಾರದ ಈ ಆದೇಶವನ್ನು ಹೈಕೋರ್ಟ್ ಎತ್ತಿಹಿಡಿಯಿತು. ಹಿಜಾಬ್ ಇಸ್ಲಾಂ ಧರ್ಮದಲ್ಲಿ ಅತ್ಯಗತ್ಯ ಧಾರ್ಮಿಕ ಆಚರಣೆಯಲ್ಲ ಎಂದೂ ಹೇಳಿತು
- 2022ರ ಅಕ್ಟೋಬರ್‌ನಲ್ಲಿ ಸುಪ್ರೀಂ ಕೋರ್ಟ್ ಹಿಜಾಬ್ ನಿಷೇಧದ ಸಿಂಧುತ್ವದ ಬಗ್ಗೆ ಭಿನ್ನ ತೀರ್ಪು ನೀಡಿ, ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಿತು

ವಿಡಿಯೊ ಹಂಚಿಕೊಂಡ ಜಮೀರ್: ಮುಗಿಬಿದ್ದ ಬಿಜೆಪಿ

ಸಿ.ಎಂ.ಗೆ ಐಷಾರಾಮಿ ವಿಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ, ವಸತಿ ಸಚಿವ ಜಮೀರ್‌ಅಹಮದ್‌ಖಾನ್, ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಐಷಾರಾಮಿ ವಿಶೇಷ ವಿಮಾನದಲ್ಲಿ ಪ್ರಯಾಣಿಸಿರುವ ವಿಷಯ ರಾಜಕೀಯ ಜಟಾಪಟಿಗೆ ಕಾರಣವಾಗಿದೆ.

ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಭೇಟಿಗಾಗಿ ಸಿದ್ದರಾಮಯ್ಯ ನೇತೃತ್ವದ ನಿಯೋಗ ದೆಹಲಿಗೆ ತೆರಳಿತ್ತು. ಈ ವೇಳೆ, ವಸತಿ ಸಚಿವ ಜಮೀರ್ ಅಹಮದ್ ಕೂಡ ವಸತಿ, ಅಲ್ಪಸಂಖ್ಯಾತರ ಇಲಾಖೆಗೆ ಸಂಬಂಧಿಸಿದ ಬೇಡಿಕೆ ಹೊತ್ತು ಕೇಂದ್ರ ಸಚಿವರ ಭೇಟಿಗಾಗಿ ದೆಹಲಿಗೆ ಹೋಗಿದ್ದರು. ಸಿದ್ದರಾಮಯ್ಯನವರ ಜತೆಯಲ್ಲಿ ಅವರ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು ಮತ್ತು ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಇದ್ದರು.

ಐಷಾರಾಮಿ ವಿಮಾನದಲ್ಲಿ ಓಡಾಡಿದ, ಕುಳಿತ ದೃಶ್ಯಗಳನ್ನು ಚಿತ್ರೀಕರಣ ಮಾಡಲಾಗಿತ್ತು. ಅದನ್ನು ತಮ್ಮ ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿದ್ದ ಜಮೀರ್ ಅಹಮದ್, ‘ದೆಹಲಿಯಿಂದ ಬೆಂಗಳೂರಿಗೆ ನಮ್ಮ ಹೆಮ್ಮೆಯ ನಾಯಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ವಿಮಾನದಲ್ಲಿ ಪ್ರಯಾಣ ಬೆಳೆಸಿದ ಸಂತಸದ ಕ್ಷಣ’ ಎಂದು ಬರೆದುಕೊಂಡಿದ್ದರು. ಜಮೀರ್ ಅವರು ಸಿನಿಮಾ ಹೀರೊ ಮಾದರಿಯಲ್ಲಿ ಓಡಾಡುವ ದೃಶ್ಯವೂ ವಿಡಿಯೊದಲ್ಲಿದೆ.

8ನೇ ಪುಟ ನೋಡಿ

ವಿಶೇಷ ವಿಮಾನದಲ್ಲಿ ಸಚಿವ ಜಮೀರ್ ಅಹಮದ್ ಖಾನ್

ಪ್ರಧಾನಿ ಮೋದಿ ಪ್ರತೀ ಪ್ರವಾಸಕ್ಕೆ ₹8.9 ಕೋಟಿ ವೆಚ್ಚ: ಸಿದ್ದರಾಮಯ್ಯ

‘ಪ್ರಧಾನಿ ನರೇಂದ್ರ ಮೋದಿ ಅವರ ಪ್ರತೀ ಪ್ರವಾಸಕ್ಕೆ ₹8.9 ಕೋಟಿ ವೆಚ್ಚವಾಗುತ್ತಿದೆ. ಇದಕ್ಕೆ ಬಿಜೆಪಿಯವರು ಏನು ಹೇಳುತ್ತಾರೆ. ಆಪರೇಷನ್ ಕಮಲ’ದ ಮೂಲಕ ಸಮ್ಮಿಶ್ರ ಸರ್ಕಾರ ಬೀಳಿಸಿ, ಶಾಸಕರನ್ನು ವಿಶೇಷ ವಿಮಾನದಲ್ಲಿ ಸುತ್ತಾಡಿಸಿ, ಐಷಾರಾಮಿ ಹೋಟೆಲ್‌ಗಳಲ್ಲಿ ವಾರಗಟ್ಟಲೆ ಠಿಕಾಣಿ ಹಾಕಿಸಿ ಮೋಜು–ಮಸ್ತಿಗಾಗಿ ನೂರಾರು ಕೋಟಿ ಖರ್ಚು ಮಾಡಿದ್ದು ಬಡ ಜನರು ಕಷ್ಟಪಟ್ಟು ಕಟ್ಟಿದ ತೆರಿಗೆ ಹಣವಲ್ಲವೇ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ.

8ನೇ ಪುಟ ನೋಡಿ

ಏ.20, 21 ಸಿಇಟಿ ಪರೀಕ್ಷೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ 2024ರ ಏಪ್ರಿಲ್ 20 ಮತ್ತು 21ರಂದು ಸಿಇಟಿ (ಸಾಮಾನ್ಯ ಪ್ರವೇಶ ಪರೀಕ್ಷೆ) ನಡೆಯಲಿದೆ. ಈ ಕುರಿತು ಮಾಹಿತಿ ನೀಡಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ, ಆಸಕ್ತರು ಜನವರಿ 10ರಿಂದ ನಿಗದಿತ ಶುಲ್ಕದೊಂದಿಗೆ ಆನ್‌ಲೈನ್ ಅರ್ಜಿ ಸಲ್ಲಿಸಬಹುದು ಎಂದಿದ್ದಾರೆ. 7

ಮಕ್ಕಳಿಂದ ಮತ್ತೆ ಶೌಚಾಲಯ ಸ್ವಚ್ಛತೆ

ಬೆಂಗಳೂರು: ಅಂದ್ರಹಳ್ಳಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶೌಚಾಲಯವನ್ನು ಇಬ್ಬರು ಮಕ್ಕಳಿಂದ ಸ್ವಚ್ಛಗೊಳಿಸಿ-ರುವ ಆರೋಪದ ಮೇಲೆ ಶಾಲೆಯ ಮುಖ್ಯ ಶಿಕ್ಷಕಿ ಟಿ. ಲಕ್ಷ್ಮಿದೇವಮ್ಮ ಅವರನ್ನು ಅಮಾನತು ಮಾಡಲಾಗಿದೆ. 8

ಪಿಡಿಒಗಳ ವರ್ಗದಲ್ಲಿ ದಾಖಲೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಥಳ ತೋರಿಸದೇ ನೂರಾರು ಮಂದಿಯ ವರ್ಗಾವಣೆ, ಮುಖ್ಯಮಂತ್ರಿಯವರ ಅನುಮೋದನೆಗೂ ಮುನ್ನ ಪಟ್ಟಿ ಸೋರಿಕೆಯಂತಹ ಕಾರಣಗಳಿಂದ ವಿವಾದದ ಕೇಂದ್ರವಾಗಿದ್ದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ವರ್ಗಾವಣೆ ಪ್ರಕ್ರಿಯೆ ಸಂಖ್ಯಾ ದೃಷ್ಟಿಯಲ್ಲೂ ದಾಖಲೆ ಬರೆದಿದೆ.

ಸರ್ಕಾರಿ ನೌಕರರ ಸಾಮಾನ್ಯ ವರ್ಗಾವಣೆ ನಿಯಮಗಳಡಿ ಆಯಾ ವೃಂದಬಲದ ಶೇಕಡ 6ರಷ್ಟು ವರ್ಗಾವಣೆಗೆ ಅವಕಾಶವಿತ್ತು. ಆದರೆ, ಈ ಬಾರಿ ಶೇ 30.07ರಷ್ಟು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು (ಪಿಡಿಒ) ವರ್ಗಾವಣೆ ಮಾಡಲಾಗಿದೆ. ಸಾಮಾನ್ಯ ವರ್ಗಾವಣೆ ನಿಯಮಗಳ ಮಿತಿಗೆ ಹೋಲಿಸಿದರೆ ಐದು ಪಟ್ಟು ಹೆಚ್ಚಿನ ವರ್ಗಾವಣೆಗಳು ಆಗಿವೆ.

ಒಟ್ಟು 6,021 ಪಿಡಿಒ ಹುದ್ದೆಗಳಿಗೆ ಮಂಜೂರಾತಿ ಇದೆ. ಈ ಪೈಕಿ 5,189 ಹುದ್ದೆಗಳು ಭರ್ತಿ ಇದ್ದು, 832 ಹುದ್ದೆಗಳು ಖಾಲಿ ಉಳಿದಿವೆ.

9D ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ

29ರಿಂದ ಅಂಗವಿಕಲರ ಬಸ್‌ಪಾಸ್ ನವೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗವಿಕಲರಿಗೆ 2024ನೇ ಸಾಲಿನ ರಿಯಾಯಿತಿ ಬಸ್ ಪಾಸುಗಳ ವಿತರಿಸುವ, ನವೀಕರಣದ ಪ್ರಕ್ರಿಯೆ ಡಿ.29ರಿಂದ ನಡೆಯಲಿದೆ.

ಈ ಸಂಬಂಧ ಫಲಾನುಭವಿಗಳು ಸೇವಾಸಿಂಧು ತಂತ್ರಾಂಶದಲ್ಲಿ ಅರ್ಜಿ ಸಲ್ಲಿಸಬೇಕು ಎಂದು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

2023ನೇ ಸಾಲಿನಲ್ಲಿ ವಿತರಿಸಿರುವ ಅಂಗವಿಕಲರ ಬಸ್‌ಪಾಸ್‌ಗಳನ್ನು 2024ರ ಫೆಬ್ರುವರಿ ಅಂತ್ಯದ ವರೆಗೆ ಮಾನ್ಯ ಮಾಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಹೊಸ ವರ್ಷಾಚರಣೆ: ವಿವಿಧ ಇಲಾಖೆ ಅಧಿಕಾರಿಗಳ ಜೊತೆ ಗೃಹ ಸಚಿವರ ಸಭೆ

ಮುಂಜಾಗ್ರತೆ: ಅಧಿಕಾರಿಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವರ್ಷ ಆಚರಣೆ ಹಿನ್ನೆಲೆಯಲ್ಲಿ ಬೆಂಗಳೂರು ಸೇರಿ ರಾಜ್ಯದ ಎಲ್ಲ ನಗರಗಳಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಗೃಹ ಸಚಿವ ಜಿ.ಪರಮೇಶ್ವರ ಅವರು ಪೊಲೀಸ್ ಅಧಿಕಾರಿಗಳಿಗೆ ಶುಕ್ರವಾರ ಸೂಚನೆ ನೀಡಿದ್ದಾರೆ.

ಕ್ರಿಸ್ಮಸ್ ಮತ್ತು ಹೊಸ ವರ್ಷ ಆಚರಣೆ ಸಂಬಂಧ ಪೊಲೀಸ್, ಆರೋಗ್ಯ, ಅಬಕಾರಿ ಇಲಾಖೆಗಳು ಹಾಗೂ ಬಿಬಿಎಂಪಿ, ಬಿಎಂಆರ್‌ಸಿಎಲ್, ಬಿಎಂಟಿಸಿ ಹಿರಿಯ ಅಧಿಕಾರಿಗಳ ಸಭೆಯ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿದರು.

ಬೆಂಗಳೂರಿನ ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆ, ಎಲೆಕ್ಟ್ರಾನಿಕ್ ಸಿಟಿ, ಇಂದಿರಾನಗರ ಮತ್ತು ಶಾಪಿಂಗ್ ಮಾಲ್‌ಗಳು ಹಾಗೂ ಪಂಚತಾರಾ ಹೋಟೆಲ್‌ಗಳಲ್ಲಿ ಹೊಸ ವರ್ಷ ಆಚರಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರುವ ಸಾಧ್ಯತೆ ಇದೆ. ಇಲ್ಲಿ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಬೇಕು. ರಾಜ್ಯದ ಪ್ರಮುಖ ನಗರಗಳಲ್ಲಿಯೂ ಸಹ ಮುನ್ನೆಚ್ಚರಿಕೆ ವಹಿಸಬೇಕು ಎಂದು ನಿರ್ದೇಶನ ನೀಡಿದರು.

ಎನ್‌ಐಎ ಅಧಿಕಾರಿಗಳು ಕಳೆದೊಂದು ತಿಂಗಳಿಂದ ಬೆಂಗಳೂರು ನಗರ ಸೇರಿ ರಾಜ್ಯಾದ್ಯಂತ ದಾಳಿ ನಡೆಸಿ, ಶಂಕಿತರನ್ನು ವಿಚಾರಣೆಗಾಗಿ ವಶಕ್ಕೆ ಪಡೆದಿದ್ದಾರೆ. ಅಲ್ಲದೇ, ಹೊರಗಡೆಯಿಂದ ಬರುವವರ ಚಲನವಲನಗಳ ಮೇಲೂ ಸೂಕ್ತ ನಿಗಾವಹಿಸುವಂತೆ ಸೂಚನೆ ನೀಡಲಾಗಿದೆ ಎಂದರು.

ನಗರಗಳಲ್ಲಿ ಹೊಸ ವರ್ಷ ಆಚರಿಸಲು ಜನ ಸೇರುವ ಪ್ರಮುಖ ಸ್ಥಳಗಳನ್ನು ಗುರುತಿಸಿ, ಪೊಲೀಸ್ ಅಧಿಕಾರಿಗಳು ಪರಿಶೀಲಿಸಬೇಕು. ಕಳೆದ ವರ್ಷಕ್ಕಿಂತ ಈ ಬಾರಿ ಹೆಚ್ಚಿನ ಸಂಖ್ಯೆಯ ಪೊಲೀಸರನ್ನು ಬಂದೋಬಸ್ತ್‌ಗೆ ನಿಯೋಜಿಸಬೇಕು. ಎಂ.ಜಿ.ರಸ್ತೆ, ಬ್ರಿಗೇಡ್ ರಸ್ತೆಗಳಲ್ಲಿ ಬಿಬಿಎಂಪಿಯವರು ತಾತ್ಕಾಲಿಕ ಆರೋಗ್ಯ ಕೇಂದ್ರಗಳನ್ನು ತೆರೆಯಬೇಕು. ನಗರದ ಎಲ್ಲ ವಿಭಾಗದ ಡಿಸಿಪಿಗಳು ಸ್ಥಳೀಯ ಆಸ್ಪತ್ರೆಗಳಿಗೆ ಭೇಟಿ ನೀಡಿ, ಡಿ.31 ರ ತಡ ರಾತ್ರಿ ತುರ್ತು ಚಿಕಿತ್ಸೆಗೆ ಸಿದ್ಧರಾಗಿರುವಂತೆಯೂ ಸೂಚನೆ ನೀಡಲಾಗಿದೆ ಎಂದು ಪರಮೇಶ್ವರ ತಿಳಿಸಿದರು.

ಹೊಸ ವರ್ಷಾಚರಣೆ ದೊಡ್ಡ ಪ್ರಮಾಣದಲ್ಲಿ ಆಯೋಜಿಸುವ ಕಡೆಗಳಲ್ಲಿ ವಿದ್ಯುತ್ ದೀಪ ಅಲಂಕಾರ ಮಾಡಲಾಗುತ್ತದೆ. ಒಂದು ವೇಳೆ ಇಲ್ಲಿ ಬೆಂಕಿ ಅವಘಡ ಸಂಭವಿಸಿದರೆ ತಕ್ಷಣವೇ ಕ್ರಮ ತೆಗೆದುಕೊಳ್ಳುವ ಉದ್ದೇಶದಿಂದ ಅಗ್ನಿಶಾಮಕ ದಳದ ಸಿಬ್ಬಂದಿ ಸನ್ನದ್ಧತೆಯಿಂದ ಇರಬೇಕು. ಅಲ್ಲದೇ, ಪಬ್ ಮತ್ತು ಬಾರ್‌ಗಳಲ್ಲಿ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೇ ಎಂಬುದನ್ನು ಮುಂಚಿತವಾಗಿಯೇ ಪರಿಶೀಲಿಸಬೇಕು. ಮೇಲ್ಛಾವಣಿಗಳಲ್ಲಿ ಕಿಚನ್ ತೆರೆಯಲು ಅವಕಾಶ ನೀಡಬಾರದು. ಮದ್ಯದಂಗಡಿಗಳು ಎಂದಿನಂತೆಯೇ ತೆರೆದಿರಬೇಕು. ಹೆಚ್ಚಿನ ಸಮಯಾವಕಾಶ ನೀಡುವ ಅಗತ್ಯವಿಲ್ಲ ಎಂದು ಅವರು ಹೇಳಿದರು.

ಹೊಸ ವರ್ಷ ಆಚರಣೆಗೆ ಹೆಚ್ಚು ಜನ ಸೇರುವ ಸ್ಥಳಗಳಲ್ಲಿ ತಾತ್ಕಾಲಿಕವಾಗಿ ಪೊಲೀಸ್ ಹೆಲ್ಪ್ ಡೆಸ್ಕ್ ತೆರೆಯಬೇಕು. ಈ ಬಗ್ಗೆ ಜನರಿಗೆ ಮಾಹಿತಿ ನೀಡಬೇಕು. ಮೆಟ್ರೊ ರೈಲುಗಳು ಹೆಚ್ಚಿನ ಅವಧಿಯವರೆಗೆ ಸಂಚರಿಸಲು ವ್ಯವಸ್ಥೆ ಮಾಡಬೇಕು. ಬಿಎಂಟಿಸಿಯಿಂದ ರಾತ್ರಿ ವೇಳೆ ಜನರ ಓಡಾಟಕ್ಕೆ ಪ್ರತ್ಯೇಕ ಬಸ್ ವ್ಯವಸ್ಥೆ ಮಾಡಬೇಕು. ಖಾಸಗಿ ವಾಹನಗಳ ಪಾರ್ಕಿಂಗ್ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವಂತೆಯೂ ಸೂಚನೆ ನೀಡಿದರು.

ಸಭೆಯಲ್ಲಿ ಗೃಹ ಇಲಾಖೆ ಹೆಚ್ಚುವರಿ ಮುಖ್ಯಕಾರ್ಯದರ್ಶಿ ಎಸ್.ಆರ್. ಉಮಾಶಂಕರ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ನಗರ ಪೊಲೀಸ್ ಆಯುಕ್ತ ದಯಾನಂದ್, ಅಗ್ನಿಶಾಮಕ ದಳದ ಡಿಜಿಪಿ ಕಮಲ್ ಪಂತ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಇದ್ದರು.

ಮುಖ್ಯಾಂಶಗಳು

- ಚಾವಣಿಯಲ್ಲಿ ಕಿಚನ್‌ಗೆ ಅವಕಾಶ ಇಲ್ಲ
- ತುರ್ತುಚಿಕಿತ್ಸೆಗಾಗಿ ಡಿ.31ರ ರಾತ್ರಿ ಆರೋಗ್ಯ ಕೇಂದ್ರಗಳು ತೆರೆದಿರಬೇಕು
- ಬಿಎಂಟಿಸಿಯಿಂದ ರಾತ್ರಿ ಓಡಾಟಕ್ಕೆ ಪ್ರತ್ಯೇಕ ವ್ಯವಸ್ಥೆ

ಡಾ. ಶಿವರಾಮ ಕಾರಂತ ಬಡಾವಣೆ: ಸುಮಾರು 25 ಸಾವಿರ ನಿವೇಶನಗಳ ಅಭಿವೃದ್ಧಿ

ನಿವೇಶನ ದರ ಜಾರಿ: ಬಿಡಿಎ ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ. ಶಿವರಾಮ ಕಾರಂತ ಬಡಾವಣೆಯಲ್ಲಿನ ನಿವೇಶನಗಳ ದರ ನಿಗದಿಪಡಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಅದರ ಅನುಷ್ಠಾನಕ್ಕೆ ಸರ್ಕಾರದ ಅನುಮೋದನೆಗಾಗಿ ಕಾಯುತ್ತಿದೆ.

ಶಿವರಾಮ ಕಾರಂತ ಬಡಾವಣೆಯಲ್ಲಿನ 30x40 ಅಡಿ ಹಾಗೂ ನಂತರದ ಎಲ್ಲ ಅಳತೆಯ ನಿವೇಶನಗಳಿಗೆ ಪ್ರತಿ ಚದರ ಅಡಿಗೆ ₹4,900 ನಿಗದಿಪಡಿಸಬೇಕು ಎಂದು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಆರ್ಥಿಕವಾಗಿ ಹಿಂದುಳಿದವರಿಗೆ ಅನುಕೂಲವಾಗುವಂತೆ 20x30 ಅಡಿ ಅಳತೆಯ ನಿವೇಶನಗಳಿಗೆ ₹3,850 ದರ ನಿಗದಿಪಡಿಸಲು ಉದ್ದೇಶಿಸಲಾಗಿದೆ.

'ಬಡಾವಣೆಯಲ್ಲಿ 34 ಸಾವಿರ ನಿವೇಶನಗಳಿದ್ದು, ಇದರಲ್ಲಿ ಸುಮಾರು ಅರ್ಧದಷ್ಟು ನಿವೇಶನಗಳನ್ನು ರೈತರಿಗೆ ಮೀಸಲಿಡಬೇಕಿದೆ. ಹೀಗಾಗಿ, ಅಭಿವೃದ್ಧಿ ವೆಚ್ಚವನ್ನು ಸರಿದೂಗಿಸುವ ನಿಟ್ಟಿನಲ್ಲಿ ಹಿಂದಿನ ಬಡಾವಣೆಗಳಿಗಿಂತ ಹೆಚ್ಚು ದರವನ್ನು ಶಿವರಾಮ ಕಾರಂತ ಬಡಾವಣೆಯ ನಿವೇಶನ ಗಳಿಗೆ ನಿಗದಿಪಡಿಸಲು ಬಿಡಿಎ ನಿರ್ಧರಿಸಿ, ಸರ್ಕಾರದ ಅನುಮೋದನೆ ಕೇಳಿದೆ. ಬಡಾವಣೆಯ ಸುತ್ತಮುತ್ತಲಿನ ಮಾರುಕಟ್ಟೆ ದರಕ್ಕಿಂತ ಕಡಿಮೆ ದರವನ್ನೇ ಪ್ರಸ್ತಾಪಿಸಲಾಗಿದೆ' ಎಂದು ಬಿಡಿಎ ಹಿರಿಯ ಅಧಿಕಾರಿಗಳು ತಿಳಿಸಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ 2016ರಿಂದ ನಿವೇಶನ ಗಳನ್ನು ಹಂಚಿಕೆ ಮಾಡಲಾಗುತ್ತಿದ್ದು, ಚದರ ಅಡಿಗೆ ₹2,200ರಿಂದ ₹2,400 ನಿಗದಿಪಡಿಸಲಾಗಿತ್ತು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಉದ್ದೇಶಿತ ಪೆರಿಫೆರಲ್ ವರ್ತುಲ ರಸ್ತೆ (ಪಿಆರ್‌ಆರ್) ಸಮೀಪವಿರುವ ಶಿವರಾಮ ಕಾರಂತ ಬಡಾವಣೆಗೆ ಬೇಡಿಕೆ ಹೆಚ್ಚಾಗಿದ್ದು, ಮಾರುಕಟ್ಟೆಯ ಲಾಭ ಗಳಿಸಲು ಬಿಡಿಎ ನಿರ್ಧರಿಸಿದೆ.

ಸುಪ್ರೀಂಕೋರ್ಟ್ ಸಮಿತಿಯ ನೇತೃತ್ವದಲ್ಲಿ ಶಿವರಾಮ ಕಾರಂತ ಬಡಾವಣೆ ಅಭಿವೃದ್ಧಿಯಾಗುತ್ತಿದ್ದು, 17 ಹಳ್ಳಿಗಳಲ್ಲಿ ವಿಸ್ತರಿಸಿಕೊಂಡಿದೆ. ಈವರೆಗೆ ಸುಮಾರು 30 ಸಾವಿರ ನಿವೇಶನಗಳನ್ನು ಅಭಿವೃದ್ಧಿಪಡಿಸಿದ್ದು, ಸುಮಾರು 25 ಸಾವಿರ ನಿವೇಶನಗಳಿಗೆ ಸಂಖ್ಯೆ ನಿಗದಿಪಡಿಸಲಾಗಿದೆ. ಸೆಪ್ಟೆಂಬರ್‌ನಲ್ಲಿಯೇ ನಿವೇಶನಗಳ ಹಂಚಿಕೆ ಪ್ರಕ್ರಿಯೆ ಆರಂಭ ವಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಸಮಿತಿ ಸದಸ್ಯರು, ಉಪಮುಖ್ಯಮಂತ್ರಿ ಹೇಳಿದ್ದರು. ಆದರೆ, ಈವರೆಗೆ ಆ ಪ್ರಕ್ರಿಯೆಗೆ ಚಾಲನೆ ಸಿಕ್ಕಿಲ್ಲ.

ಅಂಕಿಅಂಶ

34,000
ಶಿವರಾಮ ಕಾರಂತ ಬಡಾವಣೆಯಲ್ಲಿರುವ ಒಟ್ಟು ನಿವೇಶನಗಳು

₹4,900
ಚದರ ಅಡಿಗೆ ಪ್ರಸ್ತಾವಿತ ದರ

₹58.9 ಲಕ್ಷ
30X40 ಅಡಿ ನಿವೇಶನದ ದರ

ಫ್ಲ್ಯಾಟ್‌ಗಳ ದರ ಶೇ 3ರಿಂದ ಶೇ 8ರಷ್ಟು ಹೆಚ್ಚಳ

ಬಿಡಿಎ ನಿರ್ಮಿಸಿರುವ, ಮಾರಾಟಕ್ಕೆ ಲಭ್ಯವಿರುವ ಏಳು ಯೋಜನೆಗಳ ಫ್ಲ್ಯಾಟ್ ದರ ಸದ್ಯದಲ್ಲಿಯೇ ಶೇ 3ರಿಂದ ಶೇ 8ರಷ್ಟು ಹೆಚ್ಚಳವಾಗಲಿವೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ನಡೆದ ಸಭೆಯಲ್ಲಿ ಮಾರ್ಗಸೂಚಿ ದರ ಹೆಚ್ಚಳವಾದ ಹಿನ್ನೆಲೆಯಲ್ಲಿ ಫ್ಲ್ಯಾಟ್‌ಗಳ ಅಧಿಸೂಚಿತ ದರವನ್ನು ಹೆಚ್ಚಿಸುವ ಬಗ್ಗೆ ಮಾತುಕತೆ ನಡೆದಿದೆ. ಈ ಬಗ್ಗೆ ಸ್ಪಷ್ಟ ನಿರ್ಧಾರ ಕೈಗೊಳ್ಳಲೂ ಡಿಸಿಎಂ ಸೂಚಿಸಿದ್ದಾರೆ.

ಬಿಡಿಎ ವಸತಿ ವಿಭಾಗ ಎಂಜಿನಿಯರ್‌ಗಳು ಫ್ಲ್ಯಾಟ್‌ಗಳ ದರವನ್ನು ಹೆಚ್ಚಿಸುವ ಪ್ರಸ್ತಾವನೆಯನ್ನು ಸಿದ್ಧಪಡಿಸಿದ್ದು, ಇದಕ್ಕೆ ಬಿಡಿಎ ಆಯುಕ್ತರ ಸಮ್ಮತಿ ಪಡೆದು ಪ್ರಾಧಿಕಾರದ ಮಂಡಳಿ ಸಭೆಯಲ್ಲಿರಿಸಲಾಗುವುದು. ಅಲ್ಲಿ ಸಮ್ಮತಿ ದೊರೆತ ಮೇಲೆ ಅಧಿಸೂಚಿತ ದರ ಜಾರಿಗೆ ಬರಲಿದೆ. ಮಾರ್ಗಸೂಚಿ ದರದಂತೆ ಫ್ಲ್ಯಾಟ್‌ಗಳ ದರ ಮರುನಿಗದಿಯಾಗಲಿದ್ದು, ನಾಗರಬಾವಿಯಲ್ಲಿರುವ ಫ್ಲ್ಯಾಟ್‌ಗಳ ದರ ಶೇ 8ರಷ್ಟು ಹೆಚ್ಚಾಗಲಿದೆ. ಕಣ್ಮಿಣಿಕೆಯಲ್ಲಿ ಫ್ಲ್ಯಾಟ್‌ಗಳ ದರ ಕನಿಷ್ಠ ಶೇ 3ರಷ್ಟು ಅಧಿಕವಾಗಲಿದೆ. ಉಳಿದ ಯೋಜನೆಗಳ ಫ್ಲ್ಯಾಟ್ ಶೇ 3ರಿಂದ ಶೇ 8ರಷ್ಟು ಹೆಚ್ಚಾಗಲಿದೆ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ಮಾರಾಟಕ್ಕೆ ಲಭ್ಯವಿರುವ ಅಪಾರ್ಟ್‌ಮೆಂಟ್‌ಗಳು

ಯೋಜನೆ	ವರ್ಗ	ಒಟ್ಟು ಫ್ಲ್ಯಾಟ್	ಲಭ್ಯವಿರುವ ಫ್ಲ್ಯಾಟ್	ಕಾರ್ಪೆಟ್ ಏರಿಯಾ (ಚದರ ಅಡಿಗಳಲ್ಲಿ)	ಅಧಿಸೂಚಿತ ಪ್ರಸ್ತುತ ದರ
ಕಣ್ಮಿಣಿಕೆ ಹಂತ-2	2 ಬಿಎಚ್‌ಕೆ	672	503	625	₹25 ಲಕ್ಷ
ಕಣ್ಮಿಣಿಕೆ ಹಂತ-3	2 ಬಿಎಚ್‌ಕೆ	288	267	800	₹30 ಲಕ್ಷ
ಕಣ್ಮಿಣಿಕೆ ಹಂತ-4	3 ಬಿಎಚ್‌ಕೆ	108	93	1150	₹40 ಲಕ್ಷ
ಕೊಮ್ಮಘಟ್ಟ ಹಂತ-1	2 ಬಿಎಚ್‌ಕೆ	216	117	600	₹25 ಲಕ್ಷ
ಕೊಮ್ಮಘಟ್ಟ ಹಂತ-2	2 ಬಿಎಚ್‌ಕೆ	320	270	800	₹30 ಲಕ್ಷ
ಕೋನದಾಸಪುರ ಹಂತ-2	2 ಬಿಎಚ್‌ಕೆ	672	513	600	₹48 ಲಕ್ಷ
ನಾಗರಬಾವಿ	3 ಬಿಎಚ್‌ಕೆ	120	42	1200	₹104 ಲಕ್ಷ

ಬೀದಿ ನಾಟಕ

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಜನವರಿ 5ರಿಂದ 8ರವರೆಗೆ ನಡೆಯಲಿರುವ 13ನೇ ಅಂಚೆ ಚೀಟಿಗಳ ಪ್ರದರ್ಶನದ ಹಬ್ಬ 'ಕರ್ನಾಪೆಕ್ಸ್ 2024' ಅಂಗವಾಗಿ ಭಾರತೀಯ ಅಂಚೆ ಇಲಾಖೆಯ ಕಲಾವಿದರು ಶುಕ್ರವಾರ 'ಬನ್ನಿರಣ್ಣ ಬನ್ನಿರಿ ಅಂಚೆ ಚೀಟಿ ಪ್ರದರ್ಶನಕ್ಕೆ' ಎಂಬ ಬೀದಿ ನಾಟಕವನ್ನು ಪ್ರದರ್ಶಿಸಿ, ಕರಪತ್ರಗಳನ್ನು ವಿತರಿಸಿದರು. ಹೊಂಗಿರಣ ಚಂದ್ರು, ಮಂಜುನಾಥ್ ರಾವ್ ನಿಶಾಲ್, ಸುರೇಂದ್ರ ಕೆ.ಎನ್., ರವಿ. ಸಿ, ಭಾಸ್ಕರ್ ಕೆ., ಜಿಪಿಒ ಚಂದ್ರು, ರವೀಶ್ ಬಿ.ಆರ್., ಕೆ.ಎಂ. ರಾಮಮೂರ್ತಿ ಬೀದಿ ನಾಟಕ ನಡೆಸಿಕೊಟ್ಟರು

ಜ.6ಕ್ಕೆ ಎಂಎಸ್‌ಎಂಇ ನವೋದ್ಯಮ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಲೆಕ್ಕ ಪರಿಶೋಧಕರ ಸಂಸ್ಥೆಯ ದಕ್ಷಿಣ ಪ್ರಾಂತೀಯ ಮಂಡಳಿಯು 2024ರ ಜ.6ರಂದು ಕೆ.ಜಿ. ರಸ್ತೆಯಲ್ಲಿರುವ ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯಲ್ಲಿ (ಎಫ್‌ಕೆಸಿಸಿಐ) ಸೂಕ್ಷ್ಮ, ಸಣ್ಣ ಹಾಗೂ ಮಧ್ಯಮ ಕೈಗಾರಿಕೆ (ಎಂಎಸ್‌ಎಂಇ) ಮತ್ತು ನವೋದ್ಯಮ ಸಮಾವೇಶ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಂಡಳಿ ಅಧ್ಯಕ್ಷ ಪನ್ನಾರಾಜ್ ಎಸ್., 'ಭಾರತೀಯ ನವೋದ್ಯಮಗಳಿಗೆ ಜಾಗತಿಕ ಅವಕಾಶ, ಆಹಾರ ಸಂರಕ್ಷಣೆ ಮತ್ತು ಕೃಷಿ ಉದ್ಯಮಗಳಿಗೆ ಅವಕಾಶ ಸೇರಿ ವಿವಿಧ ವಿಷಯಗಳ ಬಗ್ಗೆ ತಜ್ಞರು ಉಪನ್ಯಾಸ ನೀಡಲಿದ್ದಾರೆ' ಎಂದು ತಿಳಿಸಿದರು.

'ಲೆಕ್ಕ ಪರಿಶೋಧಕರು, ಶಿಕ್ಷಣ ತಜ್ಞರು, ಉದ್ಯಮಿಗಳು, ವ್ಯಾಪಾರಿಗಳು ಸೇರಿ ವಿವಿಧ ಕ್ಷೇತ್ರದ ಪ್ರಮುಖರು ಭಾಗವಹಿಸಲಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದ ವಿವಿಧ ಯೋಜನೆಗಳಡಿ ಬ್ಯಾಂಕ್‌ಗಳಿಂದ ಸಾಲ ಸೌಲಭ್ಯ ಪಡೆಯುವ ಅವಕಾಶವೂ ಇರಲಿದೆ. ಎಂಎಸ್‌ಎಂಇ ಮತ್ತು ನವೋದ್ಯಮದ 22 ವಲಯಗಳಲ್ಲಿ ಪ್ರಶಸ್ತಿ ನೀಡಲಾಗುತ್ತದೆ' ಎಂದು ಹೇಳಿದರು.

'ಬಿಬಿಎಂಪಿ ಶಾಲೆಗಳಿಗೆ ಶಿಕ್ಷಣ ಇಲಾಖೆಯಿಂದ ಶಿಕ್ಷಕರು'

ಪಾಲಿಕೆಯಿಂದ ಮೂಲಸೌಕರ್ಯ ನಿರ್ವಹಣೆ: ಡಿಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಶಾಲೆಗಳಲ್ಲಿ ಶಿಕ್ಷಣ ನೀಡುವ ಜವಾಬ್ದಾರಿಯನ್ನು ಶಿಕ್ಷಣ ಇಲಾಖೆಗೆ ನೀಡಲಾಗುತ್ತಿದ್ದು, ಇಲಾಖೆಯಿಂದಲೇ ಶಿಕ್ಷಕರನ್ನು ಪೂರೈಸಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಬಿಎಂಪಿ ಶಾಲೆಗಳನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಗೆ ಹಸ್ತಾಂತರ ಹಾಗೂ ಹೊಸದಾಗಿ ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸುವ ಸಂಬಂಧ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರೊಂದಿಗೆ ಸಮಾಲೋಚನೆ ನಡೆಸಿದ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದರು.

'ಬಿಬಿಎಂಪಿ ಶಾಲೆಗಳಲ್ಲಿ ಪ್ರತಿ ವರ್ಷ ಫಲಿತಾಂಶದಲ್ಲಿ ಕುಸಿತ ಕಾಣಲಾಗುತ್ತಿದೆ. ಇದಕ್ಕೆ ಅವಕಾಶ ನೀಡದಂತೆ, ಗುಣಮಟ್ಟದ ಶಿಕ್ಷಣ ನೀಡುವ ಜವಾಬ್ದಾರಿಯನ್ನು ಇಲಾಖೆಗೆ ವಹಿಸಲಾಗಿದೆ' ಎಂದು ಹೇಳಿದರು.

ಶಾಲೆಗಳ ಉನ್ನತೀಕರಣ, ಜಾಗ, ಕಟ್ಟಡ ನಿರ್ಮಾಣ ಸೇರಿದಂತೆ ಎಲ್ಲಾ ಮೂಲಸೌಕರ್ಯವನ್ನು ಪಾಲಿಕೆ ಯಿಂದಲೇ ನಿರ್ವಹಿಸಲಾಗುವುದು ಎಂದರು.

ಬಿಬಿಎಂಪಿ ಶಾಲೆಗಳಿಗೆ ಶಿಕ್ಷಕರ ನೇಮಕ ಕುರಿತಂತೆ ಪ್ರಾಥಮಿಕ ಶಿಕ್ಷಣ ಇಲಾಖೆ ಸಚಿವ ಮಧು ಬಂಗಾರಪ್ಪ ಹಾಗೂ ಅಧಿಕಾರಿಗಳೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಶುಕ್ರವಾರ ಸಮಾಲೋಚನೆ ನಡೆಸಿದರು

500 ಕೆಪಿಎಸ್ ಶಾಲೆ ನಿರ್ಮಾಣ: 'ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯ ಮೂಲಕ ಪಂಚಾಯಿತಿ ಮಟ್ಟದಲ್ಲಿ 2 ಸಾವಿರ ಕರ್ನಾಟಕ ಪಬ್ಲಿಕ್ ಶಾಲೆಗಳ ನಿರ್ಮಾಣ ಮಾಡಲಾಗುತ್ತದೆ. ಮೊದಲ ವರ್ಷ 500 ಶಾಲೆಗಳ ನಿರ್ಮಾಣಕ್ಕೆ ಜಾಗ ಗುರುತಿಸಲಾಗಿದೆ. ಮುಂದಿನ ತಿಂಗಳು ಮೊದಲ ಅಥವಾ ಎರಡನೇ ವಾರದಲ್ಲಿ ಶಾಲೆಗಳ ನಿರ್ಮಾಣ ಆರಂಭವಾಗಲಿದೆ' ಎಂದರು.

ಕಂಪನಿ ಅಥವಾ ಸಂಸ್ಥೆಗಳು ಸರ್ಕಾರಕ್ಕೆ ಸಿಎಸ್‌ಆರ್ ಹಣ ನೀಡುವ ಅಗತ್ಯವಿಲ್ಲ. ಶಾಲೆ ನಿರ್ಮಾಣಕ್ಕೆ ಅಗತ್ಯ ಜಾಗವನ್ನು ಸರ್ಕಾರ ನೀಡಲಿದ್ದು, ಅಲ್ಲಿ ಈ ಕಂಪನಿ/ಸಂಸ್ಥೆಗಳು ಶಾಲೆ ನಿರ್ಮಿಸಲಿವೆ. ಶಾಲೆ ಜೊತೆಗೆ, ಗ್ರಂಥಾಲಯ, ಪ್ರಯೋಗಾಲಯ, ಶೌಚಾಲಯ ಸೇರಿದಂತೆ ಎಲ್ಲ ಸೌಕರ್ಯವನ್ನೂ ನೀಡಬೇಕು ಎಂದು ಹೇಳಿದರು.

ಸದಾಶಿವ ಆಯೋಗದ ವರದಿ ಜಾರಿಗೆ ಆಗ್ರಹ

ಬೆಂಗಳೂರು: ಒಳಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗ ನೀಡಿರುವ ವರದಿ ಅನುಷ್ಠಾನಕ್ಕೆ ರಾಜ್ಯ ಸರ್ಕಾರ ಕ್ರಮವಹಿಸಬೇಕು ಎಂದು ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಜನಜಾಗೃತಿ ಸಮಿತಿ ಆಗ್ರಹಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿ ರಾಜ್ಯಾಧ್ಯಕ್ಷ ಎಂ.ಸಿ. ಶ್ರೀನಿವಾಸ, 'ವರದಿ ಜಾರಿಗೆ ಆಗ್ರಹಿಸಿ ಹಲವು ವರ್ಷಗಳಿಂದ ಹೋರಾಟ ಮಾಡಲಾಗುತ್ತಿದೆ. ಆದರೆ, ಸರ್ಕಾರಗಳು ವಿಳಂಬ ಧೋರಣೆ ಅನುಸರಿಸುತ್ತಾ ಬಂದಿವೆ' ಎಂದು ಟೀಕಿಸಿದರು.

'ಕಳೆದ ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬಂದಲ್ಲಿ ಈ ವರದಿಯ ಅನುಷ್ಠಾನಕ್ಕೆ ಕ್ರಮವಹಿಸುವುದಾಗಿ ಪ್ರಣಾಳಿಕೆ ಯಲ್ಲಿ ಭರವಸೆ ನೀಡಿತ್ತು. ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುವುದಾಗಿಯೂ ಹೇಳಿತ್ತು. ಆದರೆ, ಈ ಬಗ್ಗೆ ಕ್ರಮವಹಿಸಲಿಲ್ಲ. ಆದ್ದರಿಂದ 2024ರ ಜ.11ರಂದು ಸಮುದಾಯದ ಮುಖಂಡರೊಂದಿಗೆ ಸಭೆ ನಡೆಸಿ, ಮುಂದಿನ ಹೋರಾಟದ ರೂಪುರೇಷೆ ಸಿದ್ಧಪಡಿಸಲಾಗುತ್ತದೆ' ಎಂದು ಹೇಳಿದರು.

ಬೀದಿ ಬದಿ ವ್ಯಾಪಾರಿಗಳಿಗೆ ನಿರ್ದಿಷ್ಟ ಸ್ಥಳ: ಡಿಸಿಎಂಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದಿ ಬದಿ ವ್ಯಾಪಾರಿಗಳ ವಹಿವಾಟಿಗೆ ಅನುಕೂಲ ಕಲ್ಪಿಸಲು ಸಂಬಂಧಿಸಿದ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ತೊಂದರೆ ನಿವಾರಿಸಬೇಕು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮನವಿ ಮಾಡಿದ್ದಾರೆ.

'ಪ್ರಜಾವಾಣಿ'ಯಲ್ಲಿ ಡಿ.20ರಂದು ಪ್ರಕಟಗೊಂಡ ಬೀದಿಬದಿ ವ್ಯಾಪಾರಕ್ಕೆ ಅವಕಾಶ ಮಾಡಿಕೊಡುವ ಕುರಿತು ವ್ಯಾಪಾರಿಗಳು ಪ್ರತಿಭಟನೆ ನಡೆಸಿದ ವರದಿಯನ್ನು ಪ್ರಸ್ತಾಪಿಸಿ, ದೈನಂದಿನ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಬೇಕು' ಎಂದು ಪತ್ರ ಬರೆದಿದ್ದಾರೆ.

'ಸಾರ್ವಜನಿಕರುಮತ್ತು ಪಾದಚಾರಿ ಗಳಿಗೆತೊಂದರೆಯಾಗದಂತೆ ಸುಗಮ ವ್ಯಾಪಾರಕ್ಕೆ ಅನುಕೂಲವಾಗುವಂತೆ, ಬೀದಿಬದಿ ವ್ಯಾಪಾರಿಗಳಿಗೆ ನಿರ್ದಿಷ್ಟ ಸ್ಥಳ ಗುರುತಿಸಿ ವಹಿವಾಟು ನಡೆಸಲು ಅನುಕೂಲ ಕಲ್ಪಿಸಬೇಕು' ಎಂದು ಕೋರಿದ್ದಾರೆ.

ಸುಸ್ಥಿರ ಜೀವನ ಶೈಲಿಗಾಗಿ ಸಹಾಯವಾಣಿ ಸ್ಥಾಪನೆ

ಬೆಂಗಳೂರು: ಮಿಟಿಗೇಶನ್ ಆ್ಯಕ್ಷನ್ ಫೆಸಿಲಿಟಿ, ಜಿಐಝೆಡ್ ಹಾಗೂ ಬಿಬಿಎಂಪಿ ಸಹಯೋಗದಲ್ಲಿ ಅನುಷ್ಠಾನಗೊಳ್ಳುತ್ತಿರುವ ಸರ್ಕ್ಯುಲರ್ ವೇಸ್ಟ್ ಸಲ್ಯೂಷನ್ ಯೋಜನೆಯ ಅಡಿ ಸಾಹಸ್ ಸಂಸ್ಥೆ ಸುಸ್ಥಿರ ಜೀವನ ಶೈಲಿ ಬಗ್ಗೆ ಮಾಹಿತಿ ನೀಡಲು ಸಹಾಯವಾಣಿಯನ್ನು (9353902092) ಆರಂಭಿಸಿದೆ. ಬೆಳಿಗ್ಗೆ 10ರಿಂದ ಸಂಜೆ 4ರ ವರೆಗೆ ಈ ಸಹಾಯವಾಣಿ ಕಾರ್ಯನಿರ್ವಹಿಸುತ್ತಿದೆ.

ಸಹಾಯವಾಣಿಯಲ್ಲಿ, ಮನೆಯಲ್ಲೇ ಗೊಬ್ಬರ ತಯಾರಿಸುವುದು, ಶೂನ್ಯ ತ್ಯಾಜ್ಯದೊಂದಿಗೆ ಮನೆ, ಕಚೇರಿಯ ಸಮಾರಂಭಗಳನ್ನು ಆಯೋಜಿಸುವ ಕುರಿತು ಮಾಹಿತಿ ದೊರೆಯಲಿದೆ.

ಸಿಹಿ ತಿನಿಸುಗಳ ರಸದೌತಣ

ಕ್ರಿಸ್ಮಸ್ ಹೊಸಿಲಲ್ಲಿರುವಾಗ ಗುಜರಾತಿನ ಸಿಹಿಸವಿತಿನಿಸು ತಯಾರಿಸುವ ಬಗೆಯನ್ನು ಬೆಂಗಳೂರಿನಲ್ಲಿರುವ ಇಂದಿರಾನಗರದ ಕೇಸರಿಯಾ ಹೊಟೆಲ್‌ನ ಶೆಫ್ ಮಾಹಿತಿ ಹಂಚಿಕೊಂಡಿದ್ದಾರೆ. ಬಾಯಿ ಸಿಹಿಯಾಗಿಸುವುದಷ್ಟೆ ಅಲ್ಲ, ಸವಿನೆನಪುಗಳ ಬುತ್ತಿಯನ್ನೂ ಕಟ್ಟಿಕೊಡುತ್ತವೆ, ಈ ಸಿಹಿತಿನಿಸುಗಳು ಎನ್ನುತ್ತಾರೆ **ಶೆಫ್ ವಿಶಾಖ ಗೋಯೆಂಕಾ**. ಅಡುಗೆ ಮನೆಯಲ್ಲಿರುವ ಸಾಮಗ್ರಿಗಳನ್ನೇ ಬಳಸಿಕೊಂಡು ರುಚಿಕರ ಸಿಹಿತಿನಿಸುಗಳ ತಯಾರಿ ಕುರಿತು **ಸುಷ್ಮಾ ಸವಸುದ್ದಿ** ಪದಗಳಲ್ಲಿ ಹಿಡಿದಿಟ್ಟಿದ್ದಾರೆ.

ಫೇವರ್

ಬೇಕಾಗುವ ಸಾಮಗ್ರಿಗಳು (6 ಫೇವರ್‌ಗಳನ್ನು ಮಾಡಲು): 300 ಗ್ರಾಂ ಮೈದಾ, 100 ಗ್ರಾಂ ತುಪ್ಪ, 100 ಗ್ರಾಂ ಹಾಲು, 3 ರಿಂದ 4 ಐಸ್ ಕ್ಯೂಬ್, ಹುರಿಯಲು ತುಪ್ಪ

ಪಾನಕ ತಯಾರಿಸಲು ಹಾಗೂ ಅಲಂಕರಿಸಲು ಬೇಕಾಗುವ ಸಾಮಗ್ರಿಗಳು: 300 ಗ್ರಾಂ ಸಕ್ಕರೆ, 1 ಕಪ್ ನೀರು, ಹಾಲಿನ ಕೆನೆ, ಏಲಕ್ಕಿ ಪುಡಿ, ಕೇಸರಿ

ಒಂದು ಪಾತ್ರೆಯಲ್ಲಿ ಅರ್ಧ ಕಪ್ ತುಪ್ಪ ಹಾಕಿ ಅದಕ್ಕೆ 3ರಿಂದ 4 ಐಸ್ ಕ್ಯೂಬ್ ಹಾಕಿ 3ರಿಂದ 5 ನಿಮಿಷ ಚೆನ್ನಾಗಿ ಕಲಕಬೇಕು. ನಂತರ ಅದಕ್ಕೆ ಮೈದಾ ಹಿಟ್ಟನ್ನು ಮಿಶ್ರಣ ಮಾಡಬೇಕು. ಕ್ರಮೇಣ ಹಿಟ್ಟಿಗೆ ಹಾಲು, ನೀರು ಹಾಕುತ್ತಾ ಕಲಿಸಬೇಕು. ಯಾವುದೇ ಗಂಟು ಉಂಡೆಗಳು ಉಳಿಯದಂತೆ, ಪೂರ್ಣ ದ್ರಾವಣ ರೂಪಕ್ಕೆ ಬರುವಂತೆ ಮಾಡಿಕೊಳ್ಳಬೇಕು. ಮಿಕ್ಸರ್ ಸಹಾಯದಿಂದಲೂ ಮಿಶ್ರಣ ಮಾಡಬಹುದು.

ಬಳಿಕ ಒಂದು ವೃತ್ತಾಕಾರದ ಪಾತ್ರೆಯಲ್ಲಿ ತುಪ್ಪವನ್ನು ಬಿಸಿ ಮಾಡಿಕೊಂಡು ಅದರಲ್ಲಿ ಈಗಾಗಲೇ ಮಾಡಿಟ್ಟುಕೊಂಡ ಹಿಟ್ಟಿನ ಮಿಶ್ರಣವನ್ನು ಪಾತ್ರೆಯ ಮಧ್ಯ ಭಾಗದಲ್ಲಿ ಹಾಕುತ್ತ ಹೋಗಬೇಕು. ಹಿಟ್ಟು ಹಾಕಿದಂತೆ ಅದು ಕುದಿಯುತ್ತಾ ಪಾತ್ರೆಯ ಆಕಾರಕ್ಕೆ ಹರಡುತ್ತದೆ. ಮಧ್ಯ ಭಾಗ ಕುಡದಂತೆ ಚಮಚದ ಸಹಾಯದಿಂದ ಮಧ್ಯ ಭಾಗವನ್ನು ಬಿಡಿಸುತ್ತಿದ್ದರೆ, ಉಂಗುರ ಆಕೃತಿಯ ಫೇಹರ್ ಲಭ್ಯವಾಗುತ್ತದೆ. ಕಂದು ಬಣ್ಣಕ್ಕೆ ತಿರುಗಿದ ನಂತರ ತೆಗೆಯಬೇಕು.

ಸಕ್ಕರೆ ಪಾಕ ತಯಾರಿಸುವ ವಿಧಾನ: ಒಂದು ಬಾಣಲೆಯಲ್ಲಿ ಸಕ್ಕರೆ ಮತ್ತು ನೀರನ್ನು ಸೇರಿಸಿ ಚೆನ್ನಾಗಿ ಕುದಿಸಬೇಕು. ರುಚಿ ಹೆಚ್ಚಿಸಲು ಅದಕ್ಕೆ ಏಲಕ್ಕಿ ಪುಡಿ, ಕೇಸರಿ ಎಳೆಗಳನ್ನು ಸೇರಿಸಬೇಕು.

ಕೆನೆ ತಯಾರಿ: ಒಂದು ಬಾಣಲೆಯಲ್ಲಿ ಒಂದು ಲೀಟರ್ ಹಾಲನ್ನು, ಕಡಿಮೆ ಉರಿಯಲ್ಲಿ ಕುದಿಸಿ ಕೆನೆಯನ್ನು ತೆಗೆಯಬೇಕು. ಕೆನೆಯಾಗುವ ಹೊತ್ತಿಗೆ ಒಂದೆರಡು ಚಮಚ ಸಕ್ಕರೆ ಹಾಕಿ ಕುದಿಸಬೇಕು. ಹಾಲು ಕ್ರಮೇಣ ಕೆನೆಯಾಗಿ ಪರಿವರ್ತನೆ ಹೊಂದಿದಂತೆ ಅದನ್ನು ಪ್ರತ್ಯೇಕಗೊಳಿಸಿ, ಆರಲು ಬಿಡಬೇಕು.

ಈಗಾಗಲೇ ತಯಾರಾದ ಫೇವರ್‌ನ ಮೇಲ್ಭಾಗಕ್ಕೆ ಪಾನಕ ಸವರಬೇಕು. ಅದರ ಮೇಲೆ ಕೆನೆ ಹಾಕಿ, ಅದರ ಮೇಲೊಂದಿಷ್ಟು ಕತ್ತರಿಸಿದ ಬಾದಾಮಿ, ಕೇಸರಿಯನ್ನು ಸೇರಿಸಿದರೆ ಕಣ್ಮನದ ಜೊತೆಗೆ ನಾಲಿಗೆಯನ್ನು ಸೆಳೆಯುವ ಅಲಂಕೃತಗೊಂಡ ಫೇವರ್ ರೆಡಿ.

ಬಾಟಿ

ಬೇಕಾಗುವ ಪದಾರ್ಥಗಳು: 2 ಕಪ್ ಗೋಧಿ ಹಿಟ್ಟು, ಕಾಲು ಕಪ್ ರವೆ, ಅರ್ಧ ಕಪ್ ತುಪ್ಪ, ಅರ್ಧ ಕಪ್ ಹಾಲು, ಸ್ವಲ್ಪ ಅಜ್ವಾನ, ರುಚಿಗೆ ತಕ್ಕಷ್ಟು ಉಪ್ಪು, ನೀರು

ತಯಾರಿಸುವ ವಿಧಾನ: ಎಲ್ಲ ಸಾಮಗ್ರಿಗಳನ್ನು ಒಂದು ಪಾತ್ರೆಯಲ್ಲಿ ಹಾಕಿ, ಬೇಕಾದಷ್ಟು ನೀರು ಸೇರಿಸುತ್ತ ಚೆನ್ನಾಗಿ ನಾದಬೇಕು. ಹಿಟ್ಟು ಪೂರ್ಣ ಗಟ್ಟಿಯಾಗಿಯೂ, ಮೆದುವಾಗಿಯು ಆಗದಂತೆ ನಾದಬೇಕು. ನಾದಿದ ಸ್ವಲ್ಪ ಹೊತ್ತು ಬಿಟ್ಟು, ವೃತ್ತಾಕಾರದ ಉಂಡೆಗಳನ್ನು ಮಾಡಿಕೊಳ್ಳಬೇಕು. ನಂತರ ಅವುಗಳನ್ನು ಕಡಿಮೆ ಉರಿಯಲ್ಲಿ ರೋಸ್ಟ್ ಮಾಡಬೇಕು. ರೋಸ್ಟ್ ಮಾಡಲು ಪಡ್ಡು ಮಾಡುವ ತವೆಯನ್ನು ಬಳಸಬಹುದು. ತವೆಗೆ ತುಪ್ಪ ಸವರಿ ಅದರಲ್ಲಿ ಉಂಡೆಗಳನ್ನು ಹಾಕಿ ಮುಚ್ಚಿಡಬೇಕು. ಆಗಾಗ ತುಪ್ಪ ಸವರುತ್ತ, ತಿರುವಿ ಹಾಕುತ್ತಿರಬೇಕು. ಪೂರ್ಣ ಕಂದು ಬಣ್ಣಕ್ಕೆ ತಿರುಗಿದ ನಂತರ ತಯಾರಾದ ಬಿಸಿ ಬಿಸಿ ಬಾಟಿಗಳನ್ನು ತುಪ್ಪದಲ್ಲಿ ಎದ್ದಿ ತೆಗೆದಿಟ್ಟರೆ, ರುಚಿ ರುಚಿ ಬಾಟಿ ರೆಡಿ.

ಜಿಲೇಬಿ ರಸಮಲಾಯಿ ಸ್ಯಾಂಡ್‌ವಿಚ್

ಜಿಲೇಬಿ

ಬೇಕಾಗುವ ಪದಾರ್ಥಗಳು: 1 ಕಪ್ ಮೈದಾ, ಸ್ವಲ್ಪ ಏಲಕ್ಕಿ ಪುಡಿ, 3ರಿಂದ 4 ಚಮಚ ಮೊಸರು, ಕೇಸರಿ, ತುಪ್ಪ, ಎಣ್ಣೆ

ತಯಾರಿಸುವ ವಿಧಾನ: ಒಂದು ಪಾತ್ರೆಯಲ್ಲಿ ಎಲ್ಲ ಪದಾರ್ಥಗಳನ್ನು ಸೇರಿಸಿ ಮಿಶ್ರಣ ಮಾಡಿಕೊಳ್ಳಬೇಕು. ನೀರು ಸೇರಿಸುತ್ತ, ಹಿಟ್ಟು ಗಟ್ಟಿಯಾಗದಂತೆ, ಪೂರ್ಣ ದ್ರಾವಣ ರೂಪವೂ ಆಗದಂತೆ ಮಿಶ್ರಣ ಮಾಡಿಕೊಂಡು, 10ರಿಂದ 12 ಗಂಟೆ ಹಾಗೆ ಇಡಬೇಕು. 10ರಿಂದ 12 ಗಂಟೆ ನಂತರ ಹಿಟ್ಟನ್ನು ಸಣ್ಣ ರಂಧ್ರವಿರುವ ಬಾಟಲಿಗೆ ಹಾಕಿ, ಕಾಯಿಸಿದ ಎಣ್ಣೆಯಲ್ಲಿ ವೃತ್ತದಾಕಾರದಲ್ಲಿ ಬಿಡಬೇಕು. ಎಣ್ಣೆಯಲ್ಲಿ ಚೆನ್ನಾಗಿ ಕರಿದ ನಂತರ ಸಕ್ಕರೆ ಪಾನಕದಲ್ಲಿ ಅದ್ದಿ ತೆಗೆದರೆ ಗರಿ ಗರಿ ಜಿಲೇಬಿ ತಯಾರಾಗುವುದು.

ರಸಮಲಾಯಿ

ಬೇಕಾಗುವ ಪದಾರ್ಥಗಳು: 1 ಲೀಟರ್ ಹಾಲು, 4 ಚಮಚ ನಿಂಬೆ ರಸ, ನೀರು, 1 ಕಪ್ ಸಕ್ಕರೆ, ಎಲಕ್ಕಿ ಕಾಳು ಸಿಪ್ಪೆ, ಕೇಸರಿ, ಸಣ್ಣದಾಗಿ ಹೆಂಚಿದ ಪಿಸ್ತಾ

ತಯಾರಿಸುವ ವಿಧಾನ: ಒಂದು ಪಾತ್ರಗೆ ಹಾಲು ಹಾಕಿ ಕುದಿಸಬೇಕು. ಹಾಲು ಸ್ವಲ್ಪ ಬಿಸಿಯಾದ ನಂತರ ಅದಕ್ಕೆ ನಿಂಬೆ ರಸ ಹಿಂಡಬೇಕು. ಹಾಲಿಗೆ ನಿಂಬೆ ಸೇರಿದ ಬಳಿಕ ಹಾಲು ಒಡೆದು ಮೊಸರಾಗಿ ಪರಿವರ್ತನೆಯಾಗುತ್ತದೆ. ಪೂರ್ಣ ಹಾಲು ಒಡೆದು ಮೊಸರಾಗುವವರೆಗೂ ಹಾಲನ್ನು ಕುದಿಸುತ್ತ, ಚಮಚದ ಸಹಾಯದಿಂದ ಕಲಕುತ್ತ ಹಾಲನ್ನು ಕುದಿಸಬೇಕು. ಮೊಸರಿನ ರೂಪಕ್ಕೆ ತಿರುಗಿದ ಮೇಲೆ ಅದನ್ನು ಒಂದು ಬಟ್ಟೆಯಲ್ಲಿ ಹಾಕಿ, ಮೆದುವಾಗಿ ಹಿಂಡಿ ಅದರಲ್ಲಿರುವ ನೀರಿನ ಪ್ರಮಾಣವನ್ನೆಲ್ಲ ಹೊರ ತೆಗೆಯಬೇಕು. ನಂತರ ಅರ್ಧ ಗಂಟೆ ಅದೇ ಬಟ್ಟೆಯಲ್ಲಿಡಬೇಕು. ಬಳಿಕ ಪದಾರ್ಥ ಕೊಂಚ ಗಟ್ಟಿಯಾದ ಬಳಿಕ ಅದನ್ನು ಹಿಟ್ಟಿನಂತೆ ನಾದಿಕೊಂಡು, ವೃತ್ತಾಕಾರದ ಉಂಡೆಗಳನ್ನು ಮಾಡಬೇಕು.

ಸಕ್ಕರೆ ಪಾನಕ ಮಾಡಿಕೊಂಡು ಅದರಲ್ಲಿ ಈಗಾಗಲೇ ಮಾಡಿಟ್ಟ ಉಂಡೆಗಳನ್ನು ಹಾಕಿ 15 ನಿಮಿಷ ಕುದಿಸಬೇಕು.

ಇನ್ನೊಂದು ಪಾತ್ರೆಯಲ್ಲಿ ಹಾಲು ಹಾಕಿ ಕಡಿಮೆ ಉರಿಯಲ್ಲಿ ಕುದಿಸುತ್ತ ತಯಾರಾಗುವ ಕೆನೆಯನ್ನು ಪಾತ್ರೆಯ ಅಂಚಿಗೆ ಸರಿಸುತ್ತ ಹೋಗಬೇಕು. ಕುದಿಯುವ ಹಾಲಿಗೆ ಸಕ್ಕರೆ, ಕೇಸರಿ, ಎಲಕ್ಕಿ ಕಾಳು ಸಿಪ್ಪೆ ಹಾಕಬೇಕು. ಹಾಲಿನ ಅರ್ಧಕ್ಕೂ ಜಾಸ್ತಿ ಭಾಗ ಕೆನೆಯಾಗಿ ಪರಿವರ್ತನೆಗೊಂಡ ನಂತರ ಅದನ್ನು ಒಂದು ಪಾತ್ರೆಗೆ ಹಾಕಬೇಕು.

ಪಾನಕದಲ್ಲಿ ಕುದಿಸಿದ ಉಂಡೆಗಳನ್ನು ಕುದಿಸಿಟ್ಟ ಕೆನೆಯ ಹಾಲಿಗೆ ಹಾಕಿ, ಅದರ ಮೇಲೆ ಅಲಂಕಾರಕ್ಕೆ ಹೆಂಚಿಟ್ಟ ಪಿಸ್ತಾ, ಕೇಸರಿ ಹಾಕಿದರೆ ರುಚಿ ರುಚಿಯಾದ ರಸಮಲಾಯಿ ರೆಡಿ.

ತಯಾರಾದ ಎರಡು ಜಿಲೇಬಿ ಮಧ್ಯೆ ಒಂದು ರಸಮಲಾಯಿ ಇಟ್ಟು ಸವಿದರೆ, ಅದೇ ಜಿಲೇಬಿ ರಸಮಲಾಯಿ ಸ್ಯಾಂಡವಿಚ್.

ಹಂಚಿಕೊಳ್ಳುವುದೇ ಕ್ರಿಸ್ಮಸ್ ಸಂಭ್ರಮ ಆಗಿದೆ. ಹಬ್ಬದೂಟಕ್ಕೆ ಈ ಸಲ ವೈವಿಧ್ಯಮಯ ಖಾದ್ಯಗಳಿವೆ. ರುಚಿಮೊಗ್ಗು ಅರಳಿಸುವ ಮಾಂಸದ ಖಾದ್ಯ ಜೊತೆಗೆ ರಸಭರಿತ ಸಿಹಿಗಳ ಸರಳ ರೆಸಿಪಿ ನಿಮಗಾಗಿ.

ಬಾಯಲ್ಲಿ ನೀರೂರಿಸುವ ಫಿಶ್ ಫ್ರೈ

ಗೌರಮ್ಮ ಕಟ್ಟಿಮನಿ

ಕ್ರಿಸ್ಮಸ್‌ಗೆ ಎರಡೇ ದಿನ ಬಾಕಿ ಇದ್ದು, ಕ್ರೈಸ್ತರಲ್ಲಿ ಸಂಭ್ರಮ ಮನೆ ಮಾಡಿದೆ. ಹಬ್ಬಕ್ಕೆ ಬೇಕಾದ ಖಾದ್ಯಗಳ ತಯಾರಿ ನಡೆಸುತ್ತಿದ್ದಾರೆ. ಚಿಕನ್ ಬಿರಿಯಾನಿ, ಮೀನಿನ ಖಾದ್ಯಗಳನ್ನು ಮಾಡಿ ಮನೆಗೆ ಬರುವ ಸಂಬಂಧಿಕರಿಗೆ, ಸ್ನೇಹಿತರಿಗೆ ಔತಣಕ್ಕೆ ಕರೆಯುತ್ತಾರೆ. ಮನೆಯಲ್ಲೆ ಸುಲಭವಾಗಿ, ರುಚಿಕರವಾಗಿ ಚಿಕನ್ ಬಿರಿಯಾನಿ, ಫಿಶ್ ಫ್ರೈ ಹಾಗೂ ಫಿಶ್ ಕರಿ ಮಾಡುವ ವಿಧಾನ ಇಲ್ಲಿದೆ.

ಫಿಶ್ ಫ್ರೈ

ಬೇಕಾಗುವ ಸಾಮಗ್ರಿಗಳು:
ಅರ್ಧ ಕೆಜಿ ಸುರ್ಮಾ, ವಿನೇಗರ್, 1 ಲಿಂಬೆಹಣ್ಣು, 1 ಚಮಚ ಕೆಂಪು ಮೆಣಸಿನಕಾಯಿ ಖಾರದ ಪುಡಿ, ಕಾಲು ಚಮಚ ಧನಿಯಾ ಪುಡಿ, ಅರಿಸಿನ ಪುಡಿ.

ಮಾಡುವ ವಿಧಾನ:
ಮೊದಲಿಗೆ ಮೀನುಗಳನ್ನು ಸ್ವಚ್ಛವಾಗಿ ತೊಳೆದು ಅದಕ್ಕೆ ಉಪ್ಪು ಹಾಕಿ ಅರ್ಧ ಗಂಟೆವರೆಗೆ ಫ್ರಿಡ್ಜ್‌ನಲ್ಲಿ ಇಡಬೇಕು. ನಂತರ ಲಿಂಬೆಹಣ್ಣು, ಖಾರದಪುಡಿ, ಅರಿಸಿನ ಪುಡಿ ಎಲ್ಲವನ್ನು ಒಂದು ಬಟ್ಟಲಿಗೆ ಹಾಕಿ ಅದಕ್ಕೆ ವಿನೆಗರ್ ಹಾಕಿ ತೀರಾ ನೀರು ಅಲ್ಲದೇ, ಗಟ್ಟಿಯೂ ಅಲ್ಲದೇ ಮಧ್ಯಮ ಹಂತದಲ್ಲಿ ಕಲಿಸಬೇಕು. ಫ್ರಿಡ್ಜ್‌ನಲ್ಲಿಟ್ಟಿರುವ ಮೀನುಗಳನ್ನು ತೆಗೆದು ಈ ಮುಂಚೆ ಕಲಿಸಿಟ್ಟಿರುವ ಮಸಾಲೆಯನ್ನು ಅದರಲ್ಲಿ ತುಂಬಬೇಕು. ನಂತರ ನಾನ್‌ಸ್ಟಿಕ್ ಹಂಚನ್ನು ಗ್ಯಾಸ್ ಮೇಲಿಟ್ಟು ಅದು ಬಿಸಿಯಾದ ನಂತರ ಸ್ವಲ್ಪ ಎಣ್ಣೆ ಹಾಕಿ ಮೀನಿನ ಎರಡು ಬದಿಗೆ ಚೆನ್ನಾಗಿ ಬೇಯಿಸಿದರೆ ರುಚಿಕರವಾದ ಫಿಶ್ ಫ್ರೈ ತಿನ್ನಲು ರೆಡಿ.

ರವೆ ಮೀನಿನ ಫ್ರೈ ಬೇಕಾದಲ್ಲಿ ಬಾಂಬೆ ರವಾ ಮತ್ತು ಸ್ವಲ್ಪ ಅಕ್ಕಿ ಹಿಟ್ಟನ್ನು ಕಲಿಸಿ ಅದರಲ್ಲಿ ಮೀನನ್ನು ಹೊರಳಾಡಿಸಿ ಬಾಣಲೆಯಲ್ಲಿ ಕಾದ ಎಣ್ಣೆಯಲ್ಲಿ ಹಾಕಿ ಚೆನ್ನಾಗಿ ಬೇಯಿಸಿ ತೆಗೆದರೆ ರವಾ ಫಿಶ್ ಫ್ರೈ ಸವಿಯಲು ರೆಡಿ.

ಫಿಶ್ ಕರಿ

ಬೇಕಾಗುವ ಸಾಮಾಗ್ರಿಗಳು:
ಅರ್ಧ ಕೆಜಿ ಮೀನು, 4 ಒಣ ಮೆಣಸಿನಕಾಯಿ, 1 ಚಮಚ ಹವೇಜ್, ಕಾಲು ಚಮಚ ಸಾಸಿವೆ, ಸ್ವಲ್ಪ ಜೀರಿಗೆ, 2 ಜುಮ್ಮನ್ ಕಾಯಿ, ಒಂದು ಬಟ್ಟಲು ಕೊಬ್ಬರಿ ತುರಿ, ಎರಡು ಟೊಮ್ಯಾಟೊ, ಸ್ವಲ್ಪ ಹುಣಸೆ ಹಣ್ಣು, 1 ಈರುಳ್ಳಿ, ಸ್ವಲ್ಪ ಹಸಿಶುಂಠಿ, ಒಂದು ಬೆಳ್ಳುಳ್ಳಿ

ಮಾಡುವ ವಿಧಾನ:
ಮೀನನ್ನು ಚೆನ್ನಾಗಿ ತೊಳೆದು ಉಪ್ಪು, ಸ್ವಲ್ಪ ವಿನೇಗರ್ ಹಾಕಿ ಇಡಬೇಕು. ಒಣ ಮೆಣಸಿನಕಾಯಿ, ಹವೇಜ್, ಸಾಸಿವೆ, ಜೀರಿಗೆ, ಜುಮ್ಮನ್ ಕಾಯಿ, ಕೊಬ್ಬರಿ ತುರಿ, ಟೊಮ್ಯಾಟೊ, ಹುಣಸೆ ಹಣ್ಣು, ಈರುಳ್ಳಿ ಎಲ್ಲವನ್ನು ಮಿಕ್ಸರ್‌ನಲ್ಲಿ ಸಣ್ಣಗೆ ರುಬ್ಬಿಕೊಳ್ಳಬೇಕು. ನಂತರ ನಿಮಗೆ ಬೇಕಾದಷ್ಟು ನೀರು ಹಾಕಿ ಚೆನ್ನಾಗಿ ಕುದಿಸಬೇಕು. ನಂತರ ಅದಕ್ಕೆ ಮೀನುಗಳನ್ನು ಹಾಕಿ 5 ನಿಮಿಷ ಕುದಿಸಬೇಕು.

ನಂತರ ಗ್ಯಾಸ್ ಮೇಲೆ ಒಂದು ಬಾಣಲಿಯಲ್ಲಿ ಎಣ್ಣೆ ಕಾಯಿಸಿ ಅದಕ್ಕೆ ನಾಲ್ಕು ಹಸಿಮೆಣಸಿನಕಾಯಿ ಉದ್ದಕ್ಕೆ ಕತ್ತರಿಸಿರುವುದು, ಸಾಸಿವೆ, ಜೀರಿಗೆ ಹಾಗೂ ಕರಿಬೇವನ್ನು ಒಗ್ಗರಣೆ ಹಾಕಿ ಅದನ್ನು ಈ ಮುಂಚೆ ಕುದಿಸಿದ ಮಸಾಲೆ ಹಾಕಬೇಕು. ಒಗ್ಗರಣೆಯ ನಂತರ ಮತ್ತೆ ಕುದಿಸಬಾರದು. ಈಗ ಫಿಶ್ ಕರಿ ತಿನ್ನಲು ರೆಡಿ.

ನಾಟಿ ಚಿಕನ್ ಬಿರಿಯಾನಿ

ಇದು ಸಹ ಬಾಯ್ಲರ್ ಚಿಕನ್ ಬಿರಿಯಾನಿ ಮಾಡಿದಂತೆ ಮಾಡುವುದು. ಇಲ್ಲಿ ಒಂದು ಕೆಜಿ ನಾಟಿ ಚಿಕನ್ ಅನ್ನು ತೆಗೆದುಕೊಳ್ಳಬೇಕು. ನಾಟಿ ಚಿಕನ್ ಬೇಯಲು ಹೆಚ್ಚು ಸಮಯ ತೆಗೆದುಕೊಳ್ಳುವುದರಿಂದ ಮೊದಲಿಗೆ ತೊಳೆದಿರುವ ಚಿಕನ್ ಅನ್ನು ಶೇ 50ರಷ್ಟು ಕುದಿಸಬೇಕು. ಬೇಗ ಕುದಿಯಲು ತೊಳೆದಿರುವ ಚಿಕನ್‌ನಲ್ಲಿನ ನೀರು ಹೋದ ನಂತರ ಅದಕೆ ಸ್ವಲ್ಪ ಮೊಸರು ಹಾಕಿ ಕಲಿಸಿಟ್ಟು ಬರೀ ನೀರಲ್ಲಿ ಕುದಿಯಲು ಬಿಡಬೇಕು. ನಂತರ ಮಸಾಲೆಯೊಟ್ಟಿಗೆ ಚಿಕನ್ ಕುದಿಸಬೇಕು. ನಂತರ ಬಾಯ್ಲರ್ ಚಿಕನ್ ಬಿರಿಯಾನಿ ಮಾಡುವ ವಿಧಾನದಲ್ಲೆ ನಾಟಿ ಚಿಕನ್ ಬಿರಿಯಾನಿ ಸಹ ಮಾಡಬೇಕು.

ಬಾಯ್ಲರ್ ಚಿಕನ್ ಬಿರಿಯಾನಿ

ಬೇಕಾಗುವ ಸಾಮಗ್ರಿಗಳು:
1 ಕೆಜಿ ಬಾಯ್ಲರ್ ಚಿಕನ್, 1 ಕೆ.ಜಿ ಅಕ್ಕಿ(ಬಾಸ್ಮತಿ/ ಜೀರಾ ರೈಸ್), 100 ಗ್ರಾಂ ಹಸಿಶುಂಠಿ, 100 ಗ್ರಾಂ ಬೆಳ್ಳುಳ್ಳಿ, 1 ಕಟ್ ಪುದೀನಾ, 1 ಕಟ್ ಕೊತ್ತಂಬರಿ, 50 ಗ್ರಾಂ ಹಸಿಮೆಣಸಿನಕಾಯಿ, ಈರುಳ್ಳಿ, ಟೊಮ್ಯಾಟೊ

ಮಾಡುವ ವಿಧಾನ:
ಮೊದಲಿಗೆ ಬೆಳ್ಳುಳ್ಳಿ, ಹಸಿಶುಂಠಿ, ಕೊತ್ತಂಬರಿ ಹಾಗೂ ಹಸಿಮೆಣಸಿನಕಾಯಿಯನ್ನು ನೀರು ಮುಟ್ಟಿಸದೇ ಪೇಸ್ಟ್ ಮಾಡಿಟ್ಟುಕೊಳ್ಳಬೇಕು. ನಂತರ ಪುದೀನಾವನ್ನು ಸಣ್ಣಗೆ ಹಾಗೂ ಈರುಳ್ಳಿ, ಟೊಮ್ಯಾಟೊ ಅನ್ನು ಕತ್ತರಿಸಿಟ್ಟುಕೊಳ್ಳಬೇಕು. ಒಂದೆಡೆ ಅಕ್ಕಿಯನ್ನು ನೆನೆಯಲು ಇಡಬೇಕು. ನಂತರ ದೊಡ್ಡ ಬಾಣಲಿಯನ್ನು ಗ್ಯಾಸ್ ಮೇಲಿಟ್ಟು 250 ಗ್ರಾಂ ಎಣ್ಣೆ ಹಾಕಿ ಅದು ಕಾದ ಮೇಲೆ ಏಲಕ್ಕಿ, ದಾಲ್ಚಿನ್ನಿ, ಲವಂಗ ಹಾಕಬೇಕು. ನಂತರ ಬಿರಿಯಾನಿ ಎಲೆ, ಕತ್ತರಿಸಿಟ್ಟುಕೊಂಡಿರುವ ಪುದೀನಾ, ಈರುಳ್ಳಿ ಹಾಕಿ ನಂತರ ಈ ಮುಂಚೆ ಮಾಡಿಟ್ಟುಕೊಂಡ ಪೇಸ್ಟ್ ಹಾಕಿ ಚೆನ್ನಾಗಿ ಕಲಿಸಿ . ಧನಿಯಾ ಪುಡಿ, ಒಂದು ಚಮಚ ಬಿರಿಯಾನಿ ಮಸಾಲ ಪುಡಿ, ಟೊಮ್ಯಾಟೊ ಹಾಕಿ ಅದಕ್ಕೆ ತೊಳೆದಿಟ್ಟ ಚಿಕನ್ ಹಾಕಿ ಬೇಯಿಸಲು ಬಿಡಬೇಕು.

ಮತ್ತೊಂದು ಪಾತ್ರೆಯಲ್ಲಿ ನೀರು ಕುದಿಯಲು ಇಟ್ಟು, ನೆನೆಸಿಟ್ಟ ಅಕ್ಕಿ ಹಾಕಿ ರುಚಿಗೆ ತಕ್ಕಷ್ಟು ಉಪ್ಪು ಹಾಕಿ ಕುದಿಯಲು ಬಿಡಬೇಕು. ಶೇ 80ರಷ್ಟು ಅನ್ನ ಆದಾಗ, ನೀರು ಬಸಿದು ಚಿಕನ್ ಪಾತ್ರೆಗೆ ಹಾಕಿ ಚೆನ್ನಾಗಿ ಕಲಿಸಿ, ಮೇಲೆ ಕೊತ್ತಂಬರಿ, ಪುದೀನಾ ಸೊಪ್ಪು ಹಾಕಿ 20 ರಿಂದ 25 ನಿಮಿಷ ಬೇಯಿಸಬೇಕು. ನಂತರ ಬಿರಿಯಾನಿ ಮೇಲೆ ಸ್ವಲ್ಪ ತುಪ್ಪ ಹಾಕಿ ಚೆನ್ನಾಗಿ ಕಲಿಸಿದರೆ ರುಚಿಕರವಾದ ಬಿರಿಯಾನಿ ಸವಿಯಲು ರೆಡಿ. ಇದನ್ನು ಮೊಸರು ಚಟ್ನಿಯೊಂದಿಗೆ ತಿಂದರೆ ರುಚಿ ಹೆಚ್ಚು.

ಮಾಹಿತಿ: ಫ್ರಾಂಜಲಾ ನವೀನ

ಮೋಹಕ ಸೀರೆ ಪುರಾಣ

ಸ್ಮಿತಾ ಶಿರೂರ

ಡಿ. 21ರಂದು ವಿಶ್ವ ಸೀರೆ ದಿನ

ಸಿನಿಮಾ ನಟಿಯರು ಒಮ್ಮೆ ಉಟ್ಟ ಸೀರೆಯನ್ನು ಮತ್ತೊಂದು ಸಮಾರಂಭಕ್ಕೆ ಬಹುತೇಕ ಉಡುವುದಿಲ್ಲ. ಆದರೆ ಬಾಲಿವುಡ್ ನಟಿ ಆಲಿಯಾ ಭಟ್ ಈಚೆಗೆ ರಾಷ್ಟ್ರ ಪ್ರಶಸ್ತಿ ಪ್ರದಾನ ಸಮಾರಂಭಕ್ಕೆ ತಮ್ಮ ಮದುವೆಯ ಸೀರೆ ಉಟ್ಟಿದ್ದು ದೊಡ್ಡ ಸುದ್ದಿ ಆಯಿತು.

ಮದುವೆಯ ಸೀರೆ ಅಥವಾ ಧಾರೆಯ ಸೀರೆ ಎಂದರೆ ಮಹಿಳೆಯರಿಗೆ ಹೆಚ್ಚೇ ಮಮಕಾರ. ಮದುವೆ ಜೀವನದ ಪ್ರಮುಖ ಘಟ್ಟವಾದ ಕಾರಣ ಇರಬಹುದು, ಅದಕ್ಕೆಂದು ಕೊಂಡ ಸೀರೆ ಹೆಚ್ಚಿನ ಬೆಲೆಯದ್ದು, ವಿಶೇಷವಾದದ್ದು ಹಾಗೂ ಗುಣಮಟ್ಟ, ವಿನ್ಯಾಸದ ಕಾರಣವೂ ಇರಬಹುದು.

ಏನೇ ಇರಲಿ 6 ಮೀಟರ್‌ನ ಈ ಸೀರೆಯ ಬಗ್ಗೆ ನೀರೆಗೆ ಬಾಲ್ಯದಿಂದ ಮುಪ್ಪಿನವರೆಗೂ ಅಕ್ಕರೆ ಕಮ್ಮಿಯಾಗುವುದಿಲ್ಲ. ಅದರಲ್ಲೂ ಮೊದಲ ಬಾರಿ ಸೀರೆ ಧರಿಸುವಾಗಿನ ಖುಷಿ, ಸಡಗರ ಹಲವರಿಗೆ ಸದಾ ನೆನಪಿನ ಬುತ್ತಿಯಲ್ಲಿ ಭದ್ರ. ಮೊದಲ ಬಾರಿಗೆ ಸೀರೆ ಉಟ್ಟಿದ್ದು ಯಾವಾಗ ಎಂದು ಸರಿಯಾಗಿ ನೆನಪಿಲ್ಲ. ಬಾಲವಾಡಿಯಿಂದಲೇ ನೃತ್ಯ, ಛದ್ಮವೇಷಕ್ಕೆಂದು ಸೀರೆ ಸುತ್ತಿ ಕೊಂಡಿದ್ದಿದೆ. ಒಮ್ಮೆ ಫ್ಯಾನ್ಸಿ ಡ್ರೆಸ್‌ಗಾಗಿ 'ಮೀನು ಮಾರುವ ಮಹಿಳೆ'ಯಾಗಿದ್ದೆ. ಅದೇ ಮೊದಲಿರಬೇಕು. ಮತ್ತೊಮ್ಮೆ ಲಕ್ಷ್ಮಿದೇವಿಯ ಪಾತ್ರಕ್ಕಾಗಿ ಅಮ್ಮ ತಮ್ಮ ಮದುವೆಯ ಧಾರೆ ಸೀರೆ ಉಡಿಸಿದ್ದರು. ಗುಲಾಬಿ ಬಣ್ಣದ ಬೆಳ್ಳಿ ಝರಿ ಹಾಗೂ ಹಸಿರು ಬಣ್ಣದ ಅಂಚುಳ್ಳ ಈ ಸೀರೆಯಲ್ಲಿ ಲಕ್ಷ್ಮಿಯಾಗಿ ತೆಗೆಸಿಕೊಂಡ ಫೋಟೊ ನೋಡಿದರೆ ಈಗಲೂ ನಗು ಬರುವುದುಂಟು. ಆದರೆ ಅಮ್ಮನ ಮದುವೆಯ ಆ ಸೀರೆ ಮಾತ್ರ ಎಲ್ಲ ಸೀರೆಗಳಿಗಿಂತ ಮೋಹಕ. ಸೀರೆ ಅಂಗಡಿಗಳನ್ನು ಹೊಕ್ಕಾಗಲೆಲ್ಲ ಅಂಥದ್ದೇ ಬಣ್ಣದ ಸೀರೆಗಾಗಿ ಹುಡುಕಿದ್ದೂ ಇದೆ.

ವೈವಿಧ್ಯಮಯ ಸೀರೆ ನೌವಾರಿ, ಸಾಹ್ ವಾರಿ ಎಂದು ಒಂಬತ್ತು ಮೊಳಗಳಿಂದ ಇದೀಗ ರೆಡಿಮೇಡ್ ಸೀರೆಗಳವರೆಗೂ ಸೀರೆಗಳ ಉದ್ದಗಲ ಬದಲಾಗಿದೆ. ಹೆಂಗಳೆಯರನ್ನು ಸುತ್ತುವರಿದು, ಲಾವಣ್ಯವತಿಯಾಗಿ ಕಾಣುವಂತೆ ಮಾಡುವ ಸೀರೆಗಳೀಗ ವೈವಿಧ್ಯಮಯ ಸ್ವರೂಪದಲ್ಲಿ ಲಭ್ಯ ಇವೆ. ಡಿ. 21ರಂದು ವಿಶ್ವ ಸೀರೆ ದಿನ ಎಂಬ ಸಂಗತಿ ತಿಳಿದಾಗ ಸೀರೆಯ ಈ ಪುರಾಣ ನೆನಪಾಯಿತು. ಪ್ರತಿ ಸೀರೆಗೂ ಒಂದು ಕತೆ ಇರುತ್ತದೆ. ಪ್ರತಿ ಸೀರೆಯಲ್ಲಿಯೂ ಕಾವ್ಯಕನ್ನಿಕೆಯಂತೆ ಕಂಗೊಳಿಸುವುದೂ ಸಹಜವಾಗಿದೆ.

ಮನೆಯಲ್ಲಿ ಅಮ್ಮನ ಸೀರೆಯನ್ನುಟ್ಟು ಹಾಡು ಹಾಕಿಕೊಂಡು ಕುಣಿದ ಸವಿಸವಿ ನೆನಪು ಯಾರು ಮರೆಯಲು ಸಾಧ್ಯ? ಶಾಲೆ-ಪ್ರೌಢಶಾಲೆ-ಕಾಲೇಜುಗಳಲ್ಲಿ ಬೀಳ್ಕೊಡುಗೆ ಸಮಾರಂಭ ಅಥವಾ 'ಎಥ್ನಿಕ್-ಡೇ'ಗಾಗಿ ಸೀರೆ ಉಡುವುದು ಈಗಿನ ಟ್ರೆಂಡ್. ಬಹುತೇಕ ಯುವತಿಯರು ಮೊದಲ ಬಾರಿಗೆ ಈ ಸಮಾರಂಭಕ್ಕೆಂದೇ ಸೀರೆ ಉಡುವುದು. ಕಾಟನ್ ಸೀರೆ, ರೇಷ್ಮೆಯದ್ದಾ, ಚಿಫಾನ್, ಕ್ರೇಪ್, ಕೇರಳ ಖ್ಯಾತಿಯ ಪಟ್ಟೆ ಸೀರೆ ತರಲಾ, ಕಾಂಜೀವರಂ ಉಡಲಾ, ಬನಾರಸಿ ಅಥವಾ ಧಾರವಾಡದ ಕಸೂತಿ ಸೀರೆ ಚೆನ್ನಾಗಿ ಕಾಣುತ್ತಾ ಎಂಬ ನೂರೆಂಟು ಆಯ್ಕೆಗಳು. ಅಮ್ಮನ, ಅಕ್ಕನ, ಅತ್ತಿಗೆಯ, ಅತ್ತೆಯ, ಪಕ್ಕದ ಮನೆಯ ಆಂಟಿಯ ಸುಂದರ ಸೀರೆಗಾಗಿ ಹುಡುಕಾಟ ಶುರು. ಅವರನ್ನು ಕಾಡಿಬೇಡಿ ತಂದು ಅದಕ್ಕೆ ತಕ್ಕ ಬ್ಲೌಸ್ ಹೊಂದಿಸಿಕೊಂಡಾಗಲೇ ಗಮ್ಮತ್ತು. ಮುಂದೆ ಒಪ್ಪ-ಓರಣವಾಗಿ ಸೀರೆ ಉಡಿಸಲು ಯಾರದ್ದು ಎತ್ತಿದ ಕೈ ಎಂದು ಹುಡುಕುವುದು. ಅವರನ್ನು ದುಂಬಾಲು ಬಿದ್ದು ಸೀರೆ ಉಡಿಸಿಕೊಂಡು ಸ್ನೇಹಿತೆಯರೊಂದಿಗೆ ಮನೆ-ಕಾಲೇಜಿನಲ್ಲಿ ಸರಭರ ಓಡಾಡುವ ಸಂಭ್ರಮಕ್ಕೆ ಸಾಟಿಯಿಲ್ಲ.

ಒಮ್ಮೆ ಶಾಲೆಯ ಡಾನ್ಸ್‌ಗಾಗಿ ಹಸಿರು ಝರಿ ಸೀರೆ ಬೇಕಿತ್ತು. ಅಮ್ಮನ ಬಳಿಯ ಹಸಿರು ಸೀರೆಗಳಲ್ಲಿ ಗ್ರ್ಯಾಂಡ್ ಲುಕ್ ನೀಡುವಂಥದ್ದು ಇರದ ಕಾರಣ ಪಕ್ಕದ ಮನೆಯ ಅಕ್ಕನ ಬಳಿ ಬೇಡಿಕೆ ಇಟ್ಟೆ. ಅವರು ತಮ್ಮ ಬನಾರಸಿ ರೇಷ್ಮೆಯ ಸೀರೆಯನ್ನು ಕೊಟ್ಟು, ಹುಷಾರು ಇದರ ಮೇಲೆ ಏನೂ ಬೀಳಿಸಬೇಡ ಎಂದರು. ಆ ಸೀರೆ ನನಗೆ ಭಾರಿಯಾದರೂ ಅದರ ಸ್ಪರ್ಶ ಮಾತ್ರದಿಂದಲೇ ಖುಷಿಯ ಮೇರೆ ಮೀರಿತ್ತು.

ಹೈಸ್ಕೂಲ್‌ನಲ್ಲಿ ಒಮ್ಮೆ ಕ್ರೀಡಾಕೂಟ ನಡೆದಿತ್ತು. ಮೆಡಲ್ ಪ್ರದಾನ ಸಮಾರಂಭಕ್ಕೆ ಸೀರೆ ಉಡಲು ತಿಳಿಸಿದ್ದರು. ಮನೆಯ ಹೊರಗೆ ಯಾವ ಸಮಾರಂಭಕ್ಕೆ ಸೀರೆ ಉಟ್ಟು ಹೋಗದ ಕಾರಣ ನಾಚಿಕೆ-ಗಾಬರಿ. ಅಮ್ಮನ ಗುಲಾಬಿ ಧಾರೆ ಸೀರೆ ಮತ್ತೆ ಹೊರಗೆ ಬಂತು. ಒಂದು ಅರ್ಧ ಡಜನ್ ಸೇಫ್ಟಿ ಪಿನ್‌ಗಳನ್ನು ಹಾಕಿ ಅಮ್ಮ ಸೀರೆ ಉಡಿಸಿದರು. ಕಾಲಿಗೆ ಸಿಕ್ಕಿಕೊಳ್ಳುತ್ತಿದ್ದ ಸೀರೆಯ ನೆರಿಗೆಗಳು, ಸೆರಗನ್ನೂ ಸಂಭಾಳಿಸಲು ಕಿರಿಕಿರಿಯಾಗಿತ್ತು. ಹತ್ತಿರದ ಶಾಲೆಗೂ ಆಟೊ ಮಾಡಿಕೊಂಡು ಹೋದದ್ದೂ ಆಯಿತು. ಬೆಳಿಗ್ಗೆಯಿಂದ ಸಂಜೆಯವರೆಗೂ ಸೀರೆ ಉಟ್ಟು ಸಾಕುಬೇಕಾಯಿತು. ಇನ್ನು ಮುಂದೆ ಸೀರೆ ಉಡುವುದು ಬೇಡ ಎನಿಸಿಬಿಟ್ಟಿತು. ಆದರೆ ಸೀರೆ ಮೋಹ ಅಷ್ಟು ಸುಲಭವಾಗಿ ಬಿಡುವುದುಂಟೇ? ಮುಂದೆ ಸ್ವಂತ ಸೀರೆಯ ಸಂಗ್ರಹವಂತೂ ಶುರುವಾಯ್ತು.

ನಟಿ ಅನು ಪ್ರಭಾಕರ್ 'ಭೂಮಿಕಾ ಕ್ಲಬ್'ಗೆ ಬಂದಾಗ, 'ವಾರ್ಡ್‌ರೋಬ್ ತುಂಬ ಚಂದಕ್ಕಿಂತ ಚಂದನೆಯ ಸೀರೆಗಳು. ಆದರೆ ಎಲ್ಲಾದರೂ ಹೋಗಬೇಕಾದಾಗ ಯಾವುದು ಉಡಲಿ ಎಂದೇ ಹೊಳೆಯುವುದಿಲ್ಲ. ಈ ಫಂಕ್ಷನ್‌ಗೆ ಬರುವಾಗಲೂ ರಾಮಾ ಗ್ರೀನ್ ಬಣ್ಣದ ಈ ಧಾರವಾಡ ಸೀರೆಯನ್ನು ಮಗಳು ಆರಿಸಿಕೊಟ್ಟಳು' ಎಂದು ಹೆಮ್ಮೆಯಿಂದ ಅಂದಿದ್ದರು. ಬಹುತೇಕ ಎಲ್ಲ ಮಹಿಳೆಯರದ್ದೂ ಇದೇ ಕಥೆ. ಎಷ್ಟು ಸೀರೆಗಳಿದ್ದರೂ ಹೊಸ ವಿನ್ಯಾಸದವು ಕಂಡಾಗ ಕೊಳ್ಳದೇ ಇರಲು ಮನಸ್ಸು ಒಪ್ಪುವುದಿಲ್ಲ.

ಗಳಿಗೆ ಮುರಿಯುವುದು: ಅಜ್ಜಿಗೆ ಒಂದು ವಿಶಿಷ್ಟ ಅಭ್ಯಾಸವಿತ್ತು. ಹೆಚ್ಚಾಗಿ ಹತ್ತಿಯ ಸೀರೆಗಳನ್ನೇ ಉಡುತ್ತಿದ್ದ ಅವರು ಹೊಸ ಸೀರೆಯನ್ನು ಮೊದಲು ತಾವು ಉಡುತ್ತಿರಲಿಲ್ಲ. ತಮ್ಮ ಮಗಳು ಅಥವಾ ಮೊಮ್ಮಕ್ಕಳಿಗೆ ಕೊಟ್ಟು 'ಗಳಿಗೆ ಮುರಿದು ಕೊಡ' ಎನ್ನುವರು. ಎಂದರೆ ಒಮ್ಮೆ ಉಟ್ಟು ಕೊಡು ಎಂದು. ಅಜ್ಜಿಯ ಮನೆಗೆ ಹೋದರೆ ಅಜ್ಜಿಯ ಹೊಸ ಸೀರೆಯುಟ್ಟು ಅಡುಗೆ ಆಟ ಆಡುವುದೂ ಕಾಯಂ ಆಗಿತ್ತು.

ಸೀರೆ ತಲೆತಲಾಂತರಗಳಿಂದ ನವನವ ವಿನ್ಯಾಸಗಳಲ್ಲಿ ಹೊರಬರುತ್ತಿದೆ. ಉಡುವ ಪದ್ಧತಿಗಳು ದಿನದಿನಕ್ಕೂ ಬದಲಾಗುತ್ತಿವೆ. ಪ್ರಾಚೀನ ಹಾಗೂ ನಾವಿನ್ಯ ಎರಡರ ಸೊಬಗನ್ನೂ ತರುವ ಈ ಉಡುಪು ನಾರಿಯ ಕಾಯಂ ಸಖಿ.

ಸ್ಪಂದನ

ಡಾ. ವೀಣಾ ಎಸ್. ಭಟ್

ಶೀಘ್ರಸ್ಖಲನಕ್ಕೆ ಪರಿಹಾರವೇನು?

ನನಗೆ 35ವರ್ಷ, ನನ್ನ ಮಡದಿಗೆ 30ವರ್ಷ. 3 ತಿಂಗಳ ಹಿಂದೆ ಮದುವೆಯಾಗಿದ್ದು ನನ್ನ ಹೆಂಡತಿ ದಪ್ಪಗಿದ್ದಾಳೆ. ಲೈಂಗಿಕ ಕ್ರಿಯೆಯ ನಂತರ ಬೇಗನೆ ವೀರ್ಯಸ್ಖಲನವಾಗುತ್ತದೆ. ಏನು ಮಾಡಲಿ?

ನಿಮಗಾಗುತ್ತಿರುವುದು ಶ್ರೀಘ್ರಸ್ಖಲನ. ಇದು ಅತಿ ಸಾಮಾನ್ಯ. ನಿಮ್ಮ ಹೆಂಡತಿ ದಪ್ಪಗಾಗಿರುವುದಕ್ಕೆ ಇದಕ್ಕೂ ಸಂಬಂಧವಿಲ್ಲ. ಯೋನಿ ಪ್ರವೇಶಕ್ಕೂ ಮೊದಲೇ ಅಥವಾ ಯೋನಿ ಪ್ರವೇಶಿಸುತ್ತಲೇ ಸ್ಖಲನವಾಗುವುದು. ಇದಕ್ಕೆ ಮುಖ್ಯವಾಗಿ ನಿಮ್ಮಲ್ಲಿರುವ ಮಾನಸಿಕ ಆತಂಕ ಕಾರಣವಾಗಿರಬಹುದು. ನಿಮಗೆ ಹೊಸದಾಗಿ ಮದುವೆಯಾಗಿರುವುದರಿಂದ ಹೊಸ ಅನುಭವ, ಹೊಸಹುರುಪು, ಉದ್ರೇಕ, ಸಂಗಾತಿಯನ್ನು ಸಂತೋಷಪಡಿಸುವ ಹಂಬಲ ಹಾಗೂ ಆತಂಕಗಳು ಶ್ರೀಘ್ರಸ್ಖಲನಕ್ಕೆ ಎಡೆಮಾಡಬಹುದು. ನೀವು ಯಾವುದೇ ದುಗುಡ, ಆತಂಕ ನಿರಾಸೆ ಇಲ್ಲದ ಹಾಗೆ ನೋಡಿಕೊಳ್ಳಿ. ಸತಿ-ಪತಿಯರಾದ ನಿಮ್ಮಿಬ್ಬರಲ್ಲೂ ಪರಸ್ಪರ ಪ್ರೀತಿ, ಸಹಕರಿಸುವ ಭಾವನೆ ಇರಬೇಕು. ನಿಮ್ಮಿಬ್ಬರಲ್ಲೂ ತೂಕ ಅತಿಯಾಗಿದ್ದರೆ ತೂಕನಿಯಂತ್ರಣ ಮಾಡಿಕೊಳ್ಳಬೇಕು. ಉಸಿರಾಟ ನಿಯಂತ್ರಣದ ಅಭ್ಯಾಸ, ದೇಹ ಸಡಿಲಿಕೆಯ ವ್ಯಾಯಾಮಗಳನ್ನ, ಯೋಗಾಭ್ಯಾಸಗಳನ್ನ ಅಳವಡಿಸಿಕೊಳ್ಳಬೇಕು. ನಿಮಗೆ ಮಧುಮೇಹ ಹಾಗೂ ಇನ್ನಿತರ ದೈಹಿಕ ಸಮಸ್ಯೆಗಳಿದ್ದಲ್ಲಿ ಆ ಬಗ್ಗೆ ಸೂಕ್ತ ತಪಾಸಣೆಗೊಳಗಾಗಿ. ಕೆಗಲ್ಸ್ ವ್ಯಾಯಾಮ ಮಾಡುವುದರಿಂದಲೂ ಪುರುಷರು ತಮ್ಮ ಸ್ನಾಯುಗಳನ್ನು ಬಲಪಡಿಸಿಕೊಳ್ಳಬಹುದು. ನಿಮ್ಮಿಬ್ಬರಲ್ಲಿಯೂ ಏಕಾಂತ ವಾತಾವರಣ, ಪರಸ್ಪರ ನಿರೀಕ್ಷೆ, ಕಾತರ ಪರಸ್ಪರ ಗೌರವ ಭರವಸೆಗಳು, ಪ್ರೀತಿ-ಪ್ರೇಮ ವ್ಯಕ್ತಪಡಿಸುತ್ತಿರುವುದು ಇವೆಲ್ಲವೂ ಉತ್ತಮ ಲೈಂಗಿಕಕ್ರಿಯೆಗೆ ಪೂರಕ ವಾತಾವರಣ ಸೃಷ್ಟಿಸುತ್ತವೆ.

ಎಲ್ಲಕ್ಕಿಂತ ಮೊದಲು ನೀವು ಹೀಗೆಯೇ ಲೈಂಗಿಕ ಕ್ರಿಯೆ ಆಗಬೇಕು ಎಂಬ ಧೋರಣೆ, ಆತಂಕ ಬಿಡಿ. ಸೂಕ್ತ ತಪಾಸಣೆ ಹಾಗೂ ಆಪ್ತಸಮಾಲೋಚನೆಗೆ ಒಳಗಾಗಲು ಹಿಂಜರಿಯಬೇಡಿ. ತಜ್ಞರ ಸಲಹೆ ಪಡೆಯಿರಿ. ಹಸ್ತಮೈಥುನ ಮಾಡಿಕೊಳ್ಳುವುದು ಶ್ರೀಘ್ರಸ್ಖಲನ ತಡೆಗೆ ಸಹಕಾರಿಯಾಗಬಹುದು. ಸ್ತ್ರೀ ಮೇಲಿರುವ ಭಂಗಿಯನ್ನು ಅನುಸರಿಸಿದರೆ ಸಹಾಯವಾಗಬಹುದು. ಶೀಘ್ರಸ್ಖಲನ ಚಿಕಿತ್ಸೆಗಾಗಿ ತಜ್ಞರ ಸಲಹೆಯ ಮೇರೆಗೆ ಅನುಸರಿಸಿದಾಗ ಸಮಸ್ಯೆ ಪರಿಹಾರವಾಗಬಲ್ಲದು.

ಹೆಚ್ಚಿನ ಪ್ರಶ್ನೆಗಳಿಗೆ https://www.prajavani.net/women ನೋಡಿ

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಗಿರಿಯಾಸ್®
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ
NEW YEAR SALE
MEGA DISCOUNT SALE
ASSURED LOWEST PRICES
EXCHANGE BONANZA
UPTO ₹25,000
ವರೆಗೂ ಕಡಿತ ಹಳೆಯ ಎಲೆಕ್ಟ್ರಾನಿಕ್ಸ್
ಮತ್ತು ಗೃಹೋಪಯೋಗಿ ವಸ್ತುಗಳ
ಎಕ್ಸ್‌ಚೇಂಜ್ ಮೇಲೆ*
WELCOME 2024 WITH SAVINGS
UPTO 70% OFF
CASH BACK BONANZA
UPTO 20%
ಕ್ಯಾಶ್ ಬ್ಯಾಕ್*
AXIS BANK citi HDFC BANK HSBC ICICI Bank IndusInd Bank kotak RBL BANK Union Bank YES BANK Standard Chartered Bank of Baroda FEDERAL BANK SBI card
ಉಚಿತ FIRE-BOLTT SMART CALLING WATCH WORTH ₹20000
FINANCE BONANZA
1 ಇ.ಎಮ್.ಐ ಉಚಿತ*
FINANCE POWERED BY Groww
0% EMI 2,000 Cash Back
MIN PRODUCT VALUE ₹10,000
MobiKwik 5% CASH BACK* on UPI
MINIMUM TRANSACTION ₹5000
MAXIMUM CASHBACK UPTO ₹1000
ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*
INSTANT LOAN APPROVAL
UPTO ₹4,00,000*
ASSURED GIFTS ON ALL LG PRODUCTS*
BT SPEAKER INDUCTION COOKER STEAM IRON KETTLE DRY IRON
24 HOURS EXPRESS DELIVERY*
ಮಹೋನ್ನತ ಪ್ರಾರಂಭೋತ್ಸವ ಶಿರಾದಲ್ಲಿ (ದೂ: 9035023188) ಶನಿವಾರ, 30ನೇ ಡಿಸೆಂಬರ್ 2023
LG 77 4K SMART OLED OLED77B3PSA ಇ.ಎಮ್.ಐ ₹4,999
SAMSUNG 77 OLED 4K SMART TV 77S90C ಇ.ಎಮ್.ಐ ₹6,990
Haier 65 QLED SMART GOOGLE TV ಇ.ಎಮ್.ಐ ₹7,928
SONY 65 4K ULTRA HD SMART OLED 65A80L ಇ.ಎಮ್.ಐ ₹6,500
Panasonic 55 OLED 4K SMART TV ಇ.ಎಮ್.ಐ ₹6,095
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
vivo Y56 (5G*) ₹14,990* ONWARDS ಇ.ಎಮ್.ಐ ₹1,249
ಉಚಿತ: ₹1,599 ಮೌಲ್ಯದ POWER BANK
Redmi 12 5G 6/128 OFFER PRICE ₹14,999* ಇ.ಎಮ್.ಐ ₹1,250
ONEPLUS NORD CE 3 -8/128 OFFER PRICE ₹24,990* ಇ.ಎಮ್.ಐ ₹2,083*
OPPO RENO 10 – 8/256 GB OFFER PRICE ₹32,999* ಇ.ಎಮ್.ಐ ₹2,750 UPTO 10% CASH BACK*
ಉಚಿತ: ₹3999 ಮೌಲ್ಯದ SMART WATCH+
SAMSUNG Galaxy S23FE/S23/S23 Ultr STARTS FROM ₹49,999* ಇ.ಎಮ್.ಐ ₹4,166
PAY 99 AND GET BT CALLING SMART WATCH WORTH ₹7999+
iPhone 15\15 PRO\ PRO MAX STARTS FROM ₹74,990* ಇ.ಎಮ್.ಐ ₹6,249
70% OFF ON DAMAGE PROTECTION
hp 15s HOT DEAL N4500 8GB,512GB SSD, 15.6" HD WIN 11 MSO 2021 ಇ.ಎಮ್.ಐ ₹2,499 OFFER PRICE ₹29,990*
PAY RS. 2499 AND GET GOODIES WORTH ₹10999
Lenovo SLIM 3i RYZEN 7 5700U 16GB, 512GB SSD 15.6 FHD INT AMD RADEON GFX WIN 11 MSO 21 ಇ.ಎಮ್.ಐ ₹4,166 OFFER PRICE ₹49,990*
FREE: METAL BT SMART WATCH WORTH ₹7999 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
DELL INS 3520 12TH GEN I5-1235U 16GB DDR4 512GB SSD/15.6 FHD WIN 11 MSO 2021 ಇ.ಎಮ್.ಐ ₹4,790 OFFER PRICE ₹57,490*
FREE: METAL BT SMART WATCH WORTH ₹7999+ PAY ₹2499 AND GET GOODIES WORTH ₹12199
Lenovo GAMING 3 RYZEN 5 6600 8GB, 512GB SSD NVIDIA RTX 3050 4GB GFX 15.6 FHD WIN 11 MSO 21 ಇ.ಎಮ್.ಐ ₹5,166 OFFER PRICE ₹61,990*
FREE: METAL BT SMART WATCH WORTH ₹7999 + PAY ₹1499 AND GET 1 YRS ADDITIONAL WARRANTY + DAMAGE PROTECTION WORTH ₹7999
DELL INS 3530 13TH GEN I7/1355U 16GB DDR4 / 512GB SSD/15.6 FHD WVA BACKLIT FP READER WIN 11+MSO H&S 2021 ಇ.ಎಮ್.ಐ ₹6,166 OFFER PRICE ₹73,990*
FREE: METAL BT SMART WATCH WORTH ₹7999+ PAY ₹2499 AND GET GOODIES WORTH ₹12199
LG 650 Ltr, CONVERTIBLE SIDE-BY-SIDE REFRIGERATOR B257EPZ3 ಇ.ಎಮ್.ಐ ₹4,999
SAMSUNG 653 Ltrs WI-FI ENABLED SMARTTHINGS SIDE BY SIDE INVERTER RS76CG8113SLHL ಇ.ಎಮ್.ಐ ₹6,033
Haier 531 LTRS SIDE BY SIDE ಇ.ಎಮ್.ಐ ₹2,994
IFB 8 ಕೆಜಿ ಫ್ರಂಟ್ ಲೋಡಿಂಗ್ ಇ.ಎಮ್.ಐ ₹3,314
Godrej 7 ಕೆಜಿ ಟಾಪ್ ಲೋಡಿಂಗ್ ಇ.ಎಮ್.ಐ ₹1,433
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
LG SOUND BAR OK55 500W for Karaoke Playback, Recording, Echo Effects and Vocal Effects, DJ Effects, DJ Wheel, DJ Loop, Party Thruster, DJ Pad and Multi-Color Lighting, Bass Blast, XBOOM App (Black) ಇ.ಎಮ್.ಐ ₹1,833 OFFER PRICE ₹21,990*
LG SOUND BAR SC9S 3.1.3 Ch, 400W, DOLBY ATMOS & IMAX ENHANCED. ಇ.ಎಮ್.ಐ ₹2,666 OFFER PRICE ₹31,990*
BOSCH 13 PLACE SETTINGS DISHWASHER ಇ.ಎಮ್.ಐ ₹4,205
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Whirlpool 29ಲೀ ಕನ್‌ವೆಕ್ಷನ್ ಮೈಕ್ರೋವೇವ್ ಇ.ಎಮ್.ಐ ₹1,388
WATER PURIFIERS UPTO 45% OFF
CHIMNEY UPTO 55% OFF
MIXER GRINDER UPTO 50% OFF
WATER HEATER UPTO 43% OFF
ಬಾಗೇಪಲ್ಲಿ 9036289562 | ಚನ್ನಪಟ್ಟಣ 9035023186 | ಹಿರಿಯೂರು 9035023185 | ತಿಪಟೂರು 90362 89548 | ಉತ್ತರಹಳ್ಳಿ 90362 89563 | ಹೊಸಕೋಟೆ 90362 89545 | ಕುಣಿಗಲ್ 90362 89546 | ಮಾದನಾಯಕನಹಳ್ಳಿ 90362 89550 | ಗೌರಿಬಿದನೂರು 90354 99244 | ಮಾಗಡಿರಸ್ತೆ 90362 89557 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಕೆಆರ್ ಪುರಂ 9019929881 | ಅಂದ್ರಹಳ್ಳಿ 95918 35070 | ಚಿಕ್ಕಜಾಲ 95918 32080 | ಅತ್ತಿಬೆಲೆ 99009 77747 | ಹೆಬ್ಬಗೋಡಿ 90350 50023 | ಭಾರ್ತಿಯಾ ಮಾಲ್ 70900 00981 | ಮಂತ್ರಿ ಮಾಲ್ 95919 25353 | ಕೆಂಗೇರಿ 99009 77712 | ಸಹಕಾರನಗರ 90199 29882 | ದೊಡ್ಡಬಳ್ಳಾಪುರ 77602 12888 | ಎಲೆಕ್ಟ್ರಾನಿಕ್‌ಸಿಟಿ 9591103536 | ಕನಕಪುರ ಮುಖ್ಯ ರಸ್ತೆ 90082 20739 | ಜಾಲಹಳ್ಳಿ ಕ್ರಾಸ್ 9008220804 | ಆರ್.ಟಿ.ನಗರ 91080 65665 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಗಾಂಧಿನಗರ 9035499311 | ಹೊಸೂರು ರಸ್ತೆ 9035499022 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಇಂದಿರಾನಗರ 9035499255 | ಜಯನಗರ 90354 99077 | ಜೆ.ಪಿ.ನಗರ 9606922698 | ಕತ್ರಿಗುಪ್ಪೆ 9035499288 | ಕೋರಮಂಗಲ 90354 11200 | ಮಲ್ಲೇಶ್ವರಂ 41411663 | ಮತ್ತಿಕೆರೆ 90352 22377 | ಮಾರತ್‌ಹಳ್ಳಿ 90354 99011 | ಮೈಸೂರು ರಸ್ತೆ 90354 99188 | ನಾಗರಭಾವಿ 90354 99191 | ನೆಲಮಂಗಲ 9606922798 | ರಾಜಾಜಿನಗರ 9035499144 | ಸದಾಶಿವನಗರ 9035499088 | ವಿಜಯನಗರ 96069 22795 | ಯಲಹಂಕ 9036001315 | ರಾಮನಗರ 9606922697 | ತುಮಕೂರು 90082 18009 | ಕೋಲಾರ 90082 20791 | ಚಿಕ್ಕಬಳ್ಳಾಪುರ 9591561669 | ಹೊಸೂರು 04344 243633
GIRIAS THE CONSUMER DURABLE PEOPLE Since 1971
STORE LOCATOR
*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. EMI offers the above products based on 9,12,18,24 & fixed emi schemes.*Exchange offer valid on MRP and Product as to be in good working condition. Free smart watch valid on 20000 & above Purchase on select models & brands.
150+ ಮೆಗಾ ಸ್ಟೋರ್ಸ್, ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ: ಅಪರಾಧಿಗೆ 20 ವರ್ಷ ಜೈಲು

ಹಾವೇರಿ: ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಅಪರಾಧಿ ಅರ್ಜುನ ಹನುಮಂತಪ್ಪ ಎಂಬವರಿಗೆ 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಮತ್ತು ₹1.05 ಲಕ್ಷ ದಂಡ ವಿಧಿಸಿ ಹಾವೇರಿ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಎಫ್.ಟಿ.ಎಸ್.ಸಿ-1 ನ್ಯಾಯಾಧೀಶ ನಿಂಗೌಡ ಪಾಟೀಲ ಆದೇಶ ನೀಡಿದ್ದಾರೆ.

ಈ ದಂಡದ ಹಣದಲ್ಲಿ ನೊಂದ ಬಾಲಕಿಗೆ ₹80 ಸಾವಿರ ಪರಿಹಾರ ಹಾಗೂ ಕರ್ನಾಟಕ ಸರ್ಕಾರದ ನೊಂದವರ ಪರಿಹಾರ ನಿಧಿಯಿಂದ ₹4 ಲಕ್ಷ ಪರಿಹಾರ ನೀಡಬೇಕೆಂದು ಆದೇಶಿಸಿದ್ದಾರೆ. ದಾವಣಗೆರೆ ಜಿಲ್ಲೆಯ ಹರಿಹರ ತಾಲ್ಲೂಕಿನ ಷಂಶಿಪುರ ಗ್ರಾಮದ ಅರ್ಜುನ ಹನುಮಂತಪ್ಪ ಎಂಬಾತ 2021ರ ಜೂನ್ 7ರಂದು ಬೈಕ್ ಮೇಲೆ ಬಂದು ಬಾಲಕಿಯನ್ನು ಅಪಹರಣ ಮಾಡಿಕೊಂಡು ಹರಿಹರ ತಾಲ್ಲೂಕಿನ ಗುತ್ತೂರ ಗ್ರಾಮದ ಮನೆಯೊಂದರಲ್ಲಿ 2021 ಜೂನ್ 8ರಿಂದ 15ರವರೆಗೆ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಅಪರಾಧಕ್ಕಾಗಿ ಹಾವೇರಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ಹಾವೇರಿ ಉಪವಿಭಾಗದ ತನಿಖಾಧಿಕಾರಿ ಸಿಪಿಐ ಚಿದಾನಂದ ಸಿ. ಅವರು ಪ್ರಕರಣದ ತನಿಖೆ ನಡೆಸಿ, ದೋಷಾರೋಪಣಾ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ಸರ್ಕಾರಿ ಅಭಿಯೋಜಕ ವಿಜಯಕುಮಾರ ಪಾಟೀಲ ಅವರು ವಾದ ಮಂಡಿಸಿದ್ದರು.

ಬೈದಾಡಿಕೊಂಡ ಎಂಎಲ್‌ಎ, ಎಂಎಲ್‌ಸಿ

ಜೆಜೆಎಂ ಕಾಮಗಾರಿ: ಬ್ಯಾನರ್‌ನಲ್ಲಿ ಭಾವಚಿತ್ರ ಹಾಕದಿರುವ ವಿಚಾರಕ್ಕೆ ಗಲಾಟೆ

ಪ್ರಜಾವಾಣಿ ವಾರ್ತೆ

ಹುಮನಾಬಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ದುಬಲಗುಂಡಿ ಗ್ರಾಮದಲ್ಲಿ ಶುಕ್ರವಾರ ಬ್ಯಾನರ್‌ನಲ್ಲಿ ಭಾವಚಿತ್ರ ಹಾಕದಿರುವ ವಿಚಾರಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಸಿದ್ದಲಿಂಗಪ್ಪ ಪಾಟೀಲ ಹಾಗೂ ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಭೀಮಾರಾವ್ ಪಾಟೀಲ ಅವರು ಅವಾಚ್ಯ ಪದಗಳಿಂದ ಬೈದಾಡಿಕೊಂಡರು. ಇಬ್ಬರೂ ಕೈಕೈ ಮಿಲಾಯಿಸುವ ಹಂತಕ್ಕೆ ತಲುಪಿದಾಗ ಪೊಲೀಸರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಜೆಜೆಎಂ ಕಾಮಗಾರಿಯ ಭೂಮಿಪೂಜೆ ಕಾರ್ಯಕ್ರಮದ ವೇದಿಕೆ ಮೇಲಿನ ಬ್ಯಾನರ್‌ನಲ್ಲಿ ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಮತ್ತು ಗ್ರಾಮ ಪಂಚಾಯಿತಿ ಅಧ್ಯಕ್ಷರ ಭಾವಚಿತ್ರ ಹಾಕಿಲ್ಲ ಎಂಬ ವಿಚಾರಕ್ಕೆ ಕಾರ್ಯಕ್ರಮ ಆರಂಭಕ್ಕೂ ಮುನ್ನ ಪಂಚಾಯಿತಿಯ ಕಾಂಗ್ರೆಸ್ ಮತ್ತು ಬಿಜೆಪಿ ಬೆಂಬಲಿತ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದಿತ್ತು.

ಈ ವಿಷಯಕ್ಕೆ ಸಂಬಂಧಿಸಿದಂತೆ ಶಾಸಕ ಸಿದ್ದಲಿಂಗಪ್ಪ ಪಾಟೀಲ ಅವರು ಅವಾಚ್ಯ ಪದಗಳಿಂದ ಬೈಯುತ್ತ ವೇದಿಕೆ ಕಡೆಗೆ ಬರುತ್ತಿದ್ದರು. ಅದಾಗಲೇ ವೇದಿಕೆ ಮೇಲಿದ್ದ ಭೀಮಾರಾವ್ ಪಾಟೀಲ ಸಹ ಬೈಯುತ್ತ ಕೆಳಗೆ ಬಂದರು. ಈ ವೇಳೆ ಇಬ್ಬರ ನಡುವಿನ ವಾಗ್ವಾದ ವಿಕೋಪಕ್ಕೆ ಹೋಗಿ ಕೈಕೈ ಮಿಲಾಯಿಸುವ ಹಂತ ತಲುಪಿತು. ತಕ್ಷಣವೇ ಸಿಪಿಐ ಗುರು ಪಾಟೀಲ ಸೇರಿದಂತೆ ಪೊಲೀಸ್ ಸಿಬ್ಬಂದಿ ಮಧ್ಯ ಪ್ರವೇಶಿಸಿ ಇಬ್ಬರನ್ನೂ ತಡೆದರು. ಅಷ್ಟರಲ್ಲೇ ವಿಧಾನ ಪರಿಷತ್‌ನ ಕಾಂಗ್ರೆಸ್ ಸದಸ್ಯ ಚಂದ್ರಶೇಖರ ಪಾಟೀಲ ಹಾಗೂ ಕಾಂಗ್ರೆಸ್–ಬಿಜೆಪಿ ಕಾರ್ಯಕರ್ತರು ಜಮಾವಣೆಗೊಂಡರು. ನಂತರ ಶಾಸಕ ಸಿದ್ದಲಿಂಗಪ್ಪ ಪಾಟೀಲ ಹಾಗೂ ಭೀಮರಾವ್ ಪಾಟೀಲ ಜಂಟಿಯಾಗಿ ಭೂಮಿಪೂಜೆ ನೆರವೇರಿಸಿ ವೇದಿಕೆಗೆ ಬಂದರು.

‘ಜೆಜೆಎಂ ಕಾಮಗಾರಿಯ ಭೂಮಿ ಪೂಜೆ ಕಾರ್ಯಕ್ರಮದ ಬ್ಯಾನರ್‌ನಲ್ಲಿ ಶಿಷ್ಟಾಚಾರ ಉಲ್ಲಂಘನೆಯಾಗಿದೆ. ನಮ್ಮ ಭಾವಚಿತ್ರವನ್ನು ಏಕೆ ಹಾಕಿಲ್ಲ’ ಎಂದು ಭೀಮಾರಾವ್ ಪಾಟೀಲ ಅವರು ಎಇಇ ಶಾಮಸುಂದರ್ ಕಾಳೇಕರ್ ಅವರನ್ನು ಪ್ರಶ್ನಿಸಿದರು. ‘ಶಿಷ್ಟಾಚಾರ ಉಲ್ಲಂಘನೆ ಆಗಿದೆ. ಕಾರ್ಯಕ್ರಮ ನಡೆಸಲು ಬಿಡುವುದಿಲ್ಲ’ ಎಂದು ಹೇಳಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಿದ್ದಲಿಂಗಪ್ಪ ಪಾಟೀಲ, ‘ಶಿಷ್ಟಾಚಾರ ಉಲ್ಲಂಘನೆ ಆಗಿಲ್ಲ. ವಿಧಾನ ಪರಿಷತ್ ಸದಸ್ಯರ ಭಾವಚಿತ್ರ ಅಳವಡಿಸಬೇಕು ಎಂದು ಎಲ್ಲೂ ಶಿಷ್ಟಾಚಾರ ಇಲ್ಲ. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಅಧಿಕಾರಿಗಳನ್ನು ಕೇಳಿ’ ಎಂದು ಸಮರ್ಥಿಸಿಕೊಂಡರು. ‘ಕಾರ್ಯಕ್ರಮವನ್ನು ಬಹಿಷ್ಕರಿಸುತ್ತೇವೆ’ ಎಂದು ಹೇಳಿ ಭೀಮಾರಾವ್ ಪಾಟೀಲ ವೇದಿಕೆಯಿಂದ ಹೊರಟರು. ನಂತರ ಸಿದ್ದಲಿಂಗಪ್ಪ ಪಾಟೀಲ ನೇತೃತ್ವದಲ್ಲಿ ವೇದಿಕೆ ಕಾರ್ಯಕ್ರಮ ಜರುಗಿತು.

ಮೂಲತ್ವ ಪ್ರಶಸ್ತಿಗೆ ಫೂಲ್ಬಸನ್ ಬಾಯಿ ಆಯ್ಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಮಂಗಳೂರಿನ ಮೂಲತ್ವ ಫೌಂಡೇಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ ನೀಡುವ ‘ಮೂಲತ್ವ ವಿಶ್ವ ಪ್ರಶಸ್ತಿ’ಗೆ ಈ ಬಾರಿ ಛತ್ತೀಸಘಡದ ಸಮಾಜ ಸೇವಕಿ ಫೂಲ್ಬಸನ್ ಬಾಯಿ ಯಾದವ್ ಅವರನ್ನು ಆಯ್ಕೆ ಮಾಡಲಾಗಿದೆ.

ಪ್ರಶಸ್ತಿಯು ₹1.01 ಲಕ್ಷ ನಗದು, ಫಲಕ ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ. ಡಿ. 24ರಂದು ಬೆಳಿಗ್ಗೆ 10 ಗಂಟೆಗೆ ಕೊಡಿಯಾಲ್‌ಬೈಲ್ ಶಾರದಾ ವಿದ್ಯಾಲಯದ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಟ್ರಸ್ಟ್ ಸಂಸ್ಥಾಪಕ ಪ್ರಕಾಶ್ ಮೂಲತ್ವ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಮೂಲತ್ವ ಸಂಸ್ಥೆಯು ಕಳೆದ ಎಂಟು ವರ್ಷಗಳಿಂದ ಪ್ರತಿ ವರ್ಷ ವಿವಿಧ ಕ್ಷೇತ್ರಗಳ ಸಾಧಕರನ್ನು ಗುರುತಿಸಿ ಮೂಲತ್ವ ಪ್ರಶಸ್ತಿ ನೀಡುತ್ತಿದೆ.

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಆಲೂರು–573213, ಹಾಸನ ಜಿಲ್ಲೆ

ದೂ.ಸಂಖ್ಯೆ: 08170–218246, Website: http://www.alurtown.mrc.gov.in/ email: townpanchayath.alur@gmail.com

ನಂ:ಆಪಪಂಆಲೂರು/ಜೆಇ/ಕಾಮಗಾರಿ/01/2023–24. ದಿನಾಂಕ:22/12/2023

ಟೆಂಡರ್ ಪ್ರಕಟಣೆ

ಆಲೂರು ಪಟ್ಟಣ ಪಂಚಾಯಿತಿಯ ವ್ಯಾಪ್ತಿಯಲ್ಲಿ 15ನೇ ಹಣಕಾಸು, ಎಸ್.ಎಫ್.ಸಿ. ಮತ್ತು ಪಟ್ಟಣ ಪಂಚಾಯಿತಿ ನಿಧಿಯಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದ್ದು, https://kppp.karnataka.gov.in/ ಪೋರ್ಟಲ್ ಮೂಲಕ ಆನ್‌ಲೈನ್ ನಲ್ಲಿ ಸಲ್ಲಿಸಬಹುದಾಗಿರುತ್ತದೆ. ವಿವರಗಳು ಈ ಕೆಳಕಂಡಂತಿರುತ್ತದೆ. ಕ್ರ.ಸಂ:1)ಕಾಮಗಾರಿಗಳ ವಿವರ: ವಾರ್ಡ್ ನಂ. 6 ರಲ್ಲಿ ಚರಂಡಿ ನಿರ್ಮಾಣ ಕಾಮಗಾರಿ. ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT/10400 ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ): 0.93 2)ವಾರ್ಡ್ ನಂ. 2 ರಲ್ಲಿ ಚರಂಡಿ ನಿರ್ಮಾಣ ಕಾಮಗಾರಿ. ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT/10416 ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ): 1.21 3)ವಾರ್ಡ್ ನಂ. 1, 2, 3, 4, 5 ಮತ್ತು 7 ರಲ್ಲಿ ಚರಂಡಿ ನಿರ್ಮಾಣ ಕಾಮಗಾರಿ. (SC Reserved) ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT/10425 ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ): 12.60 4)ವಾರ್ಡ್ ನಂ. 8, 9, 10 ಮತ್ತು 11 ರಲ್ಲಿ ಚರಂಡಿ ನಿರ್ಮಾಣ ಕಾಮಗಾರಿ. ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT/10434 ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ): 5.88 5)ವಾರ್ಡ್ ನಂ. 6 ರಲ್ಲಿ ಪೈಪ್ ಲೈನ್ ಕಾಮಗಾರಿ. (ST Reserved) ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT/10445 ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ): 1.00 6)ಘನತ್ಯಾಜ್ಯ ವಿಲೇವಾರಿ ಕೇಂದ್ರಕ್ಕೆ ವಿದ್ಯುತ್ ಸಂಪರ್ಕ ಕಲ್ಪಿಸುವುದು. ಇಂಡೆಂಟ್ ಸಂಖ್ಯೆ: DMA/2023-24/EL/WORK_INDENT/10484 ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ): 10.36 7)ಆಲೂರು ಪಟ್ಟಣ ಪಂಚಾಯಿತಿಯಲ್ಲಿ ಹಾಳಾಗಿರುವ ವಾಲ್ವ್‌ಗಳನ್ನು ಬದಲಾಯಿಸುವ ಕಾಮಗಾರಿ. ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT/10477 ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ): 1.25 8)ಜಾಕ್‌ವೆಲ್ ಪಂಪ್ ಹೌಸ್ ನಲ್ಲಿ ಮೇಲ್ಛಾವಣಿ ಅಳವಡಿಸುವ ಕಾಮಗಾರಿ. (SC Reserved) ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT/10473 ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ): 4.00 9)ಡಾ// ಬಿ.ಆರ್ ಅಂಬೇಡ್ಕರ್ ಸಮುದಾಯ ಭವನ ಅಭಿವೃದ್ಧಿ ಕಾಮಗಾರಿ. ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT/10461 ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ): 2.57 10)ವಾರ್ಡ್ ನಂ. 1, 2 ಮತ್ತು 6 ರಲ್ಲಿ ಪೈಪ್ ಲೈನ್ ಕಾಮಗಾರಿ. (SC Reserved) ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT/10459 ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ): 2.50 11)ಆಲೂರು ಪಟ್ಟಣ ಪಂಚಾಯಿತಿಯಲ್ಲಿ ಹಾಳಾಗಿರುವ ವಾಲ್ವ್‌ಗಳನ್ನು ಬದಲಾಯಿಸುವ ಕಾಮಗಾರಿ. ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT/10479 ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ): 1.00 12)ವಾರ್ಡ್ ನಂ. 3 ರಲ್ಲಿ ಪೈಪ್ ಲೈನ್ ಕಾಮಗಾರಿ. ಇಂಡೆಂಟ್ ಸಂಖ್ಯೆ: DMA/2023-24/OW/WORK_INDENT/10458 ಅಂದಾಜು ಮೊತ್ತ ರೂ. (ಲಕ್ಷಗಳಲ್ಲಿ): 2.00 ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ:09/01/2024 ಸಂಜೆ 5.30 ಗಂಟೆ.

ಸಹಿ/– ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ, ಆಲೂರು.

ವಾಸಾಸಂಇ/ಹಿಸನಿ/ಹಾಸನ/584/ಕೆಎಸ್‌ಎಂಸಿಎ/589/2023–24

ಕರ್ನಾಟಕ ಸರ್ಕಾರ ಜಿಲ್ಲಾ ಪಂಚಾಯತ್, ದಾವಣಗೆರೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ದಾವಣಗೆರೆ ಜಿಲ್ಲೆ

ಎಸ್.ಎಸ್. ಹೈಟೆಕ್ ಆಸ್ಪತ್ರೆ ಹತ್ತಿರ, ಶ್ರೀರಾಮ ನಗರರಸ್ತೆ, ಎನ್.ಸಿ.ಸಿ. ಕ್ಯಾಂಪ್ ಪಕ್ಕ, ದಾವಣಗೆರೆ–577 005

ದೂರವಾಣಿ : 08192–237833 E-mail : dhodavangere@gmail.com

ಸಂಖ್ಯೆ :ಜಿಸಫ/ದಾ/ಎನ್‌ಹೆಚ್‌ಎಂ/ನೇಮಕಾತಿ/01/2023–24 ದಿನಾಂಕ : 18.12.2023

ಪ್ರಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನದ ವಿವಿಧ ಉಪ ಕಾರ್ಯಕ್ರಮಗಳ ಅಡಿ ಈ ಕೆಳಕಂಡ ತಾತ್ಕಾಲಿಕವಾಗಿ ಗುತ್ತಿಗೆ ಆಧಾರದಲ್ಲಿ 31.03.2024 ರವರೆಗೆ ಹಾಗೂ 2024–25ನೇ ಸಾಲಿನ ಪಿ.ಐ.ಪಿ. ಅನುಮೋದನೆ ನಿರೀಕ್ಷಿಸಿ ಹುದ್ದೆ ಮುಂದುವರೆಸುವ ಎನ್.ಹೆಚ್.ಎಂ. ಷರತ್ತಿಗೆ ಒಳಪಟ್ಟು ನಿಯಮಾನುಸಾರ ರೋಸ್ಟರ್ ಕಂ.ಮೆರಿಟ್ ಆಧಾರದಲ್ಲಿ ನೇಮಕ ಮಾಡಲು ಆಸಕ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ ಸಂ.	ಹುದ್ದೆಗಳ ವಿವರ	ವಿದ್ಯಾರ್ಹತೆ ಹಾಗೂ ವಯೋಮಿತಿ	ಮಾಸಿಕ ಸಂಚಿತ ಸಂಭಾವನೆ	ಒಟ್ಟು ಹುದ್ದೆಗಳ ಸಂಖ್ಯೆ	ಮೀಸಲಾತಿ
1	District Epidemiologist (IDSP)	Medical graduate with Post Graduate Degree / Diploma in Preventive and social Medicine / Public Health or Epidemilogy (such as MD, MPH, DPH, MAE etc., Or Any Medical Graduate with 2 years in Public Health (Desirable) Or M.Sc., in life science with 2 years Masters in Public Health Or M.Sc (Epidemiology) with 2 years experience in public health (Desirable) With computer knowledge Age limit 40 years	30,000/-	01 + 03 = 04	ಪ.ಜಾ–ಇತರೆ–01, ಸಾಮಾನ್ಯ (ಮಹಿಳೆ) –01, ಪ.ಪಂ (ಗ್ರಾಮೀಣ) –01, ಸಾಮಾನ್ಯ (ಅಂಗವಿಕಲ)–01.
2	Block Epidemiologist (IDSP) Channagiri, Honnali Jagaluru (01 post each)				
3	Physician NPPC Programme	MBBS (Preference Medicine / Anasthesia (Diploma / Post Graduate), Radio Theraphy (Diploma / Post Graduate) 1 year experience with Computer knowledge	1,10,000/- MBBS Post 46,200/-	02	ಪ.ಜಾ–ಇತರೆ–01, ಸಾಮಾನ್ಯ (ಮಹಿಳೆ) –01.

ಆಸಕ್ತರು ಅರ್ಜಿಗಳನ್ನು ದಿನಾಂಕ 27.12.2023 ರಂದು ಬೆಳಗ್ಗೆ 10.30 ರಿಂದ 2.00 ಗಂಟೆವರೆಗೆ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಚೇರಿ, ಚಿಗಟೇರಿ ಜಿಲ್ಲಾ ಆಸ್ಪತ್ರೆ ಆವರಣ, ದಾವಣಗೆರೆ ಇಲ್ಲಿ ಅರ್ಜಿಗಳನ್ನು ವಿತರಿಸಿ ಪಡೆಯಲಾಗುವುದು. ಅರ್ಜಿದಾರರು ಸೂಕ್ತ ಅರ್ಜಿಗಳನ್ನು ಪಡೆದು ಸರಿಯಾದ ವಿವರಗಳನ್ನು ತುಂಬಿ ವಿದ್ಯಾರ್ಹತೆ, ಮೀಸಲಾತಿ ಮತ್ತು ಅನುಭವಕ್ಕೆ ಸಂಬಂಧಿಸಿದಂತೆ 2 ಭಾವಚಿತ್ರದೊಂದಿಗೆ ಒಂದು ಸೆಟ್ ಸ್ವಯಂ ದೃಢೀಕೃತ ದಾಖಲೆಗಳನ್ನು ಲಗತ್ತಿಸಿ ಅದೇ ದಿನ ಸಂಜೆ 5.00 ಗಂಟೆಯೊಳಗೆ ಭರ್ತಿ ಮಾಡಿದ ಅರ್ಜಿಗಳನ್ನು ಹಿಂದಿರುಗಿಸತಕ್ಕದ್ದು, ನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ. ಸ್ಥಾನಿಕರಿಗೆ ಆದ್ಯತೆ ಹಾಗೂ ಸರ್ಕಾರದ/ ಇಲಾಖೆಯ ನಿಯಮಾವಳಿಗಳಂತೆ ವಯೋಮಿತಿ ಮತ್ತು ಮೀಸಲಾತಿ ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಯನ್ನು ಕಚೇರಿಯ ಪ್ರಕಟಣಾ ಫಲಕದಲ್ಲಿ ಪ್ರಕಟಿಸಲಾಗಿದೆ.

ವಾಸಾಇ/ಡಿವಿಜಿ/428/ಕೆಎಸ್‌ಎಂಸಿಎ/2023–24 ಸಹಿ/– ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳು, ದಾವಣಗೆರೆ.

ಕರ್ನಾಟಕ ಸರ್ಕಾರ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಲಿಂಗಸಗೂರು

ಜಿಲ್ಲೆ : ರಾಯಚೂರು, ರಾಜ್ಯ : ಕರ್ನಾಟಕ

Agricultural Produce Market Committee, LINGASAGUR-PIN: 584 122

E-Mail: apmclingasugur@gmail.com, ph.no (08537) 257382

ಕ್ರ.ಸಂ: ಕೃಉಮಾಸ/ಲಿಂ/RIDF-29//2023–24 ದಿನಾಂಕ :21–12–2023

–: ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ :–

ಲಿಂಗಸಗೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1 ನೇ ದರ್ಜೆ ಸಿವಿಲ್ ಗುತ್ತಿಗೆದಾರರಿಂದ 2023–24 ನೇ ಸಾಲಿನಲ್ಲಿ RIDF-29 ರ ಯೋಜನೆಯಡಿ ಅನುಮೋದನೆಗೊಂಡ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಿ.ಸಿ.ರಸ್ತೆ ಆರ್.ಸಿ.ಸಿ.ಚರಂಡಿ ಮತ್ತು ಮಸ್ಕಿ ಉಪಮಾರುಕಟ್ಟೆ ಪ್ರಾಂಗಣದಲ್ಲಿ ಸಿಸಿ ರಸ್ತೆ, ಆರ್.ಸಿ.ಸಿ ಚರಂಡಿ ಹಾಗೂ ಕಾಂಪೌಂಡ ಗೋಡೆ ನಿರ್ಮಿಸುವ ಕಾಮಗಾರಿಯನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ ಹಾಗೂ ನಿಯಮಗಳು 1999–2000 ರನ್ವಯ ಇ–ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ (APMC/2023-24/RD/WORK_INDENT157) http://kppp.karnataka.gov.in ನಲ್ಲಿ ಸ್ಪರ್ಧಾತ್ಮಕ ದರವಾರು ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತೆ ಇರುತ್ತದೆ.

01) ಬಿಡ್ ಪ್ರಕಟವಾಗುವ ದಿನಾಂಕ: 21–12–2023 **02) ಬಿಡ್ ಪೂರ್ವ ಭಾವಿ ಸಭೆ ದಿನಾಂಕ:** 28–12–2023 ರ ಮಧ್ಯಾಹ್ನ 12.00 ಗಂಟೆಗೆ **03) ಭರ್ತಿ ಮಾಡಿದ ಟೆಂಡರ್ ಸ್ವೀಕರಿಸುವ ದಿನಾಂಕ:** 08–01–2024 ರ ಸಾಯಂಕಾಲ 4:00 ಗಂಟೆವರೆಗೆ **04) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:** 10–01–2024 ರ ಸಾಯಂಕಾಲ 04:30 ಗಂಟೆಗೆ **05) ಆರ್ಥಿಕ ಬಿಡ್ ತೆರೆಯುವ ದಿನಾಂಕ (ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರು):** 18–01–2024 ರ ಮಧ್ಯಾಹ್ನ 12.00 ಗಂಟೆಗೆ

ಕಾಮಗಾರಿಯ ಹೆಸರು: RIDF-29 ರ ಯೋಜನೆಯಡಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಿ.ಸಿ.ರಸ್ತೆ ಆರ್.ಸಿ.ಸಿ.ಚರಂಡಿ ಮತ್ತು ಮಸ್ಕಿ ಉಪಮಾರುಕಟ್ಟೆ ಪ್ರಾಂಗಣದಲ್ಲಿ ಸಿಸಿ ರಸ್ತೆ, ಆರ್.ಸಿ.ಸಿ ಚರಂಡಿ ಹಾಗೂ ಕಾಂಪೌಂಡ ಗೋಡೆ ನಿರ್ಮಿಸುವ ಕಾಮಗಾರಿ, **ಟೆಂಡರಗಿಟ್ಟ ಮೊತ್ತ (ರೂ ಲಕ್ಷಗಳಲ್ಲಿ):** 2,08,37,632.00, **ಇ.ಎಂ.ಡಿ ಡಿ.ಡಿ. ರೂಪದಲ್ಲಿ ಮಾತ್ರ (ರೂ ಲಕ್ಷಗಳಲ್ಲಿ):** Rs.3,12,600.00, **ಗುತ್ತಿಗೆದಾರರ ದರ್ಜೆ:** ಪಿ.ಡಬ್ಲ್ಯೂ.ಡಿ 1ನೇ ದರ್ಜೆ ಸಿವಿಲ್ ಗುತ್ತಿಗೆದಾರರು, **ಕಾಮಗಾರಿಯ ಕಾಲಾವಧಿ:** 175 ದಿನಗಳು (excluding mansoon)

ಇ.ಎಂ.ಡಿ ಹಣವನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬ್ಯಾಂಕಿನಲ್ಲಿ ಹೊಂದಿರುವ ಕರ್ನಾಟಕ ಸರಕಾರ ಸೆಂಟ್ರಲ್ ಪೂಲಿಂಗ್ ಅಕೌಂಟಿನಲ್ಲಿ ಟೆಂಡರ ಡಾಕ್ಯೂಮೆಂಟ್‌ನಲ್ಲಿ ತಿಳಿಸಿರುವ ಯಾವುದಾದರೊಂದು ಮಾದರಿಯಲ್ಲಿ ಸಂದಾಯ ಮಾಡುವುದು. ಟೆಂಡರ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಸಮಿತಿ ಕಛೇರಿ ವೇಳೆಯಲ್ಲಿ ಅಥವಾ ಮೇಲೆ ಸೂಚಿಸಿರುವ ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿದೆ. http://kppp.karnataka.gov.in ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರಕಾರ ಇ–ಪ್ರೊಕ್ಯೂರಮೆಂಟ್ ಸಹಾಯವಾಣಿ 080–22485867 ಮತ್ತು ಕಾರ್ಯದರ್ಶಿ, ಕೃ.ಉ.ಮಾ.ಸ, ಲಿಂಗಸಗೂರು ಸಹಾಯವಾಣಿ 08537–257382 ರವರಿಂದ ಪಡೆಯಬಹುದಾಗಿದೆ. ಟೆಂಡರ್ ನಿಯಮಾವಳಿಗಳಿಗಾಗಿ ಇ–ಪ್ರೊಕ್ಯೂರಮೆಂಟ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ ಬಿಡ್ ಡಾಕ್ಯೂಮೆಂಟ್‌ಗಳನ್ನು ನೋಡುವುದು. ಟೆಂಡರ್ ತಿರಸ್ಕರಿಸುವ ಅಥವಾ ಒಪ್ಪು ಅಧಿಕಾರ ಸಮಿತಿ ಹೊಂದಿರುತ್ತದೆ. ಯಾವುದೇ ತಿದ್ದುಪಡಿ ಇದ್ದಲ್ಲಿ ಮೇಲಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು

ಸಹಿ/– ಕಾರ್ಯದರ್ಶಿ ಕೃಉಮಾಸ ಲಿಂಗಸಗೂರು DIP/RCR/361/KSMC&A/358/2023-24 ಸಹಿ/– ಆಡಳಿತಾಧಿಕಾರಿಗಳು ಕೃಉಮಾಸ ಲಿಂಗಸಗೂರು

ಕರ್ನಾಟಕ ಸರ್ಕಾರ

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ

"ಅಭಿವೃದ್ಧಿ ಭವನ" ಐವಾನ–ಎ–ಶಾಹಿ, ಕಲಬುರಗಿ–585102, ದೂರವಾಣಿ : (08472)–256767, 239556, 255564, ಫ್ಯಾಕ್ಸ್ : (08472) 227527, E-mail: hkadbgulb@gmail.com, Website : hkrdb.kar.nic.in

ಸಂಖ್ಯೆ: KKRDB/TECH/286/2023-24/Call-3 ದಿನಾಂಕ:22–12–2023

:: ಅಲ್ಪಾವಧಿ ಟೆಂಡರ ಪ್ರಕಟಣೆ ::

1) ಕಾಮಗಾರಿಯ ಹೆಸರು : “Supply of Printed Practice Papers for improvements towards 10th Standard Results for the Students”, 2) ಲೆಕ್ಕ ಶೀರ್ಷಿಕೆ : KKRDB ನಿಧಿ, 3) ಗುತ್ತಿಗೆದಾರರ ಅರ್ಹತೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನ ದಸ್ತಾವೇಜಿನಲ್ಲಿ, 4) ಟೆಂಡರ್ ದಸ್ತಾವೇಜನ್ನು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಡೌನ್‌ಲೋಡ್ ಮಾಡಿಕೋಳ್ಳುವ ಪ್ರಾರಂಭ ದಿನಾಂಕ : **22.12.2023,** 5) ಕ್ಯಾರೀಸ್ ಸಲ್ಲಿಸುವ ದಿನಾಂಕ : **26.12.2023 ಸಾಯಂಕಾಲ 5.00 ವರೆಗೆ,** 6) ಪ್ರಿ–ಬಿಡ್ ಸಭೆ ದಿನಾಂಕ (online): **27–12–2023 ಬೆಳಿಗ್ಗೆ 11.30ಕ್ಕೆ,** 7) ಟೆಂಡರ್ ಫಾರಂ ಸಲ್ಲಿಸುವ ಅಂತಿಮ ದಿನಾಂಕ: **30–12–2023 ಮಧ್ಯಾಹ್ನ 4.00ರ ವರೆಗೆ,** 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **01–01–2024 ಬೆಳಿಗ್ಗೆ 11.30ಕ್ಕೆ,** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ: **02–01–2024 ಸಾಯಂಕಾಲ 4.30ಕ್ಕೆ,** 10) ಟೆಂಡರ್ ಅರ್ಜಿ ಬೆಲೆ: ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಇದ್ದಂತೆ, 11) ಇ.ಎಂ.ಡಿ. ಮೊತ್ತ: ರೂ. 3,85,000/–, 12) ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ: https://kppp.karnataka.gov.in ಅಥವಾ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಐವಾನ್–ಇ–ಶಾಹಿ, ಕಲಬರಗಿ ರಲ್ಲಿ ಸಂಪರ್ಕಿಸಬಹುದು, 13) ಅಂತರ್‌ಜಾಲ ತಾಣದ ವಿಳಾಸ: https://kppp.karnataka.gov.in 14) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ: ಯಾವುದೇ ಬದಲಾವಣೆ ಹಾಗು ಮಾರ್ಪಾಡುಗಳಿಗಾಗಿ https://kppp.karnataka.gov.in ಕ್ಕೆ ಸಂಪರ್ಕಿಸಬಹುದು.

ಸಹಿ/– ಉಪ ಕಾರ್ಯದರ್ಶಿಗಳು ಕ.ಕ.ಪ್ರ.ಅ.ಮಂಡಳಿ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/609/ಕೆ.ಎಸ್.ಎಂ.ಸಿ.&ಎ/2023–24

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು–1, ಫ್ಯಾಕ್ಸ್: 080 22210117

ಫೋನ್: 080-22211086 / 22212137/ WEB SITE: (http://www.schooleducation.kar.nic.in)

No: CPE(2)/UF SUPPLY-01/2023-24 Date:21.12.2023

ಟೆಂಡರ್ ಪ್ರಕಟಣೆ

ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ರವರು 2024–25ನೇ ಸಾಲಿಗೆ ರಾಜ್ಯದಲ್ಲಿನ 1 ರಿಂದ 10 ನೇ ತರಗತಿಯ ಶಾಲಾ ಮಕ್ಕಳಿಗೆ ಸಮವಸ್ತ್ರ ಬಟ್ಟೆ ಸರಬರಾಜಿಗೆ ಅಲ್ಪಾವಧಿ ಇ–ಟೆಂಡರ್ ಮೂಲಕ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಈ ಸಂಬಂಧ ಟೆಂಡರ್ ದಸ್ತಾವೇಜು https://kppp.karnataka.gov.in ರಲ್ಲಿ ಲಭ್ಯವಿದೆ.

1.	ಟೆಂಡರ್ ಸಂಖ್ಯೆ	**DPI/2023-24/IND0172**
2.	ಟೆಂಡರ್ ಪ್ರಾರಂಭ ದಿನಾಂಕ	**22.12.2023**
3.	ಪೂರ್ವ ಭಾವಿ ಸಭೆ	**05.01.2024 ರ ಪೂರ್ವಾಹ್ನ 11.30 ಗಂಟೆಗೆ**
4.	ಟೆಂಡರ್ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	**22.01.2024 ರ ಸಂಜೆ 5.30 ಗಂಟೆಗೆ**
5.	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ	**24.01.2024 ಪೂರ್ವಾಹ್ನ 11.30 ಗಂಟೆಗೆ**
6.	ಆರ್ಥಿಕ ಬಿಡ್ ತೆರೆಯುವ ದಿನಾಂಕ	**29.01.2024 ರ ನಂತರ**
7.	ಬಿಡ್ ತೆರೆಯುವ ಸ್ಥಳ ಹಾಗೂ ಸಂಪರ್ಕದ ಕಛೇರಿ ವಿಳಾಸ	**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 560 001.**

ಸಹಿ/– ನಿರ್ದೇಶಕರು(ಪ್ರಾಥಮಿಕ ಶಿಕ್ಷಣ)

ವಾಸಾಸಂಇ/ವಾಪ್ರ/ಜೆಎ/2666/2023–24

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಬೀದರ

ದೂರವಾಣಿ: 08482–233126/27 ಫಾಕ್ಸ್ :08482–233127 ಇ–ಮೇಲ್: dhobidar@gmail.com

ಸಂಖ್ಯೆ: ಸರಬರಾಜು/ಕೆಕೆಆರ್‌ಡಿಬಿ/ಸಿಆರ್–01/2023–24. ದಿನಾಂಕ:22.12.2023.

–: ಟೆಂಡರು ಪ್ರಕಟಣೆ :–

2023–24 ನೇ ಸಾಲಿನ ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಮೈಕ್ರೋ ಯೋಜನೆಯಡಿಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೀದರ, ಅಧೀನದಲ್ಲಿ ಈ ಕೇಳಕಂಡ ಕಾಮಗಾರಿಗಳಲ್ಲಿ ಉಪಕರಣಗಳು ಹಾಗೂ ಪಿಠೋಪಕರಣಗಳು ಖರೀದಿಗಾಗಿ ಟೆಂಡರ ದ್ವಿಲಕೋಟೆ ಪದ್ಧತಿ ಅಡಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆಯ ಮೂಲಕ ಟೆಂಡರ ಅಹ್ವಾನಿಸಲಾಗಿದೆ. ಇಚ್ಛೆ ಉಳ್ಳುವ ಗುತ್ತಿಗೆಗಾರರು ದಿನಾಂಕ:22.12.2023 ರಿಂದ 04.01.2024 ಸಾಯಂಕಾಲ 5:00 ಗಂಟೆಯವರಗೆ ಟೆಂಡರ ಭರಿಸಲು ಅವಕಾಶ ನೀಡಲಾಗಿರುತ್ತದೆ, ದಿನಾಂಕ:05.01.2024 ಸಾಯಂಕಾಲ 5:30 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಬೀದರ ತಾಂತ್ರಿಕ ಲಕೋಟೆಯನ್ನು ತೆರೆಯಲಾಗುತ್ತದೆ, ಪ್ರತಿ ಟೆಂಡರಿನ ಅನುಗೂಣವಾಗಿ ಇ.ಎಂ.ಡಿ. ಮೊತ್ತ 2.5%. ಟೆಂಡರಿನ ಸಂಪೂರ್ಣ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ವೆಬ್‌ಸೈಟಿನ ವಿಳಾಸ: KPPP Portal (karnataka.gov.in) ನಲ್ಲಿ ದಿನಾಂಕ:22.12.2023. ರಿಂದ ಪಡೆಯಬಹುದು.

ಕ್ರ. ಸಂ.	ಸಂಸ್ಥೆಯ ಹೆಸರು	ಕಡತ ಸಂಖ್ಯೆ	ಮೊತ್ತ (ಲಕ್ಷಗಳಲ್ಲಿ)	ಷರಾ
1	Supply Installation of Emergency Equipment to CHC Chittaguppa TALUKA Humnabad	DHO/KKRDB/SUP/04/2023-24/CALL-2	51.43	

ಟೆಂಡರ್ ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಅಧಿಕಾರಿಗಳು ಬೀದರ ಅವರಿಗೆ ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿರುತ್ತದೆ.

ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೀದರ

ವಾ.ಸಾ.ಸಂ.ಇ/ಬೀದರ/199/ಕೆಎಸ್‌ಎಂಸಿ&ಎ/2023–24

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)

ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಐಬಿಸಿ ವಿಭಾಗ ಸಂಖ್ಯೆ–2

ಆಲಮೇಲ–586202.ದೂರವಾಣಿ ಸಂ:08488–232298. ಇ–ಮೇಲ್:kbjnleealmel@gmail.com

ಸಂ:ಕೃಭಾಜನಿನಿ/ಐಬಿಸಿವಿ–2/ಪಿಬಿ/ಸಂಖ್ ಸ್ಟೇರ್ ಕೋಟೇಶನ್/2023–24/564 ದಿನಾಂಕ:21.12.2023

ಟೆಂಡರನ ಕೋಟೇಶನ್ ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನೀಯರರು, ಕೃಭಾಜನಿನಿ, ಐಬಿಸಿ ವಿಭಾಗ ನಂ–2 ಆಲಮೇಲ ತಾ: ಆಲಮೇಲ ಜಿ: ವಿಜಯಪುರ ಇವರು ಕರ್ನಾಟಕ ಸರಕಾರದ ಇ–ಪ್ರಾಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಕೃಷ್ಣಾ ಭಾಗ್ಯ ಜಲ ನಿಗಮದ ನಿಯಮಾವಳಿಗಳಿಗೆ ಒಳಪಟ್ಟ Equipment Manufacturer/Supplier or from Experienced Electro Mechanical work Service Contractors/Agencies/Electrical Supergrade Licensed Contractors/Registered consultant ಏಜೆನ್ಸಿಗಳಿಂದ Operation and Mentainance of sankh tank filling headworks and raising main/distribution system/ including Electrical system substation & pump house system with all men and material on turn key basis ಕಾಮಗಾರಿಗೆ ಐಟಂದರ ಕೋಟೇಶನ ಆಹ್ವಾನಿಸಲಾಗಿರುತ್ತದೆ. ಕೆಟಿಪಿಪಿ ಕಾಯ್ದೆ ನಿಯಮ–28 ರನ್ವಯ ಕೋಟೇಶನನ್ನು ಒಂದು ಲಕೋಟೆ ಪದ್ಧತಿಯಲ್ಲಿ ಸಲ್ಲಿಸುವುದು.ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್ ಸೈಟ್ http://kppp.karnataka.gov.in ನಲ್ಲಿ ಮಾಹಿತಿ ಖಚಿತಪಡಿಸಿಕೊಂಡು ಕೋಟೇಶನಲ್ಲಿ ಭಾಗವಹಿಸಬಹುದು.

ಟಿಪ್ಪಣಿ : 1] ಇ–ಪ್ರಾಕ್ಯೂರಮೆಂಟ್ http://kppp.karnataka.gov.in ವೆಬಸೈಟನಲ್ಲಿರುವ ಕಾಮಗಾರಿಯ ಐಟಂಗಳಿಗೆ ಕೋಟೇಶನ ಸಲ್ಲಿಸುವ **ದಿನಾಂಕ: 27.12.2023 ರಿಂದ 02.01.2024 ರ ಸಾಯಂಕಾಲ 5.30 ಗಂಟೆ** ಯವರೆಗೆ ಸಲ್ಲಿಸುವದು. 2] ಭರ್ತಿಗೊಳಿಸಿದ ಕೋಟೇಶನ ಸಲ್ಲಿಸಲು ಕೊನೆಯ **ದಿನಾಂಕ: 02.01.2024 ರ ಸಾಯಂಕಾಲ 5.30 ಘಂಟೆಯವರೆಗೆ** ಸಲ್ಲಿಸುವದು. 3] The rates shall be exclusive of GST and all taxes, including transportation and delivery at site etc. 4] ಕೋಟೇಶನ ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಾಗ ನಂ–2 ಆಲಮೇಲ ಕಛೇರಿಯಲ್ಲಿ **ದಿನಾಂಕ: 04.01.2024 ರ ಬೆಳಿಗ್ಗೆ 11.00 ಘಂಟೆಗೆ** ತೆರೆಯಲಾಗುವದು. 5] ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ವಿಭಗ ನಂ–2 ಆಲಮೇಲ ಕಛೇರಿ ವೇಳೆಯಲ್ಲಿ ಪಡೆಯಬಹುದು ಅಥವಾ http://kppp.karnataka.gov.in ವೆಬ್‌ಸೈಟ್ ನಿಂದ ಪಡೆಯಬಹುದು. 6] ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ವಿಭಾಗ–2, ಆಲಮೇಲ.

ವಾಸಾಸಂಇ/ವಿಜಯಪುರ/346/ಕೆಎಸ್‌ಎಂಸಿಎ/2023–24

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕರ್ನಾಟಕ

4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು – 560 041

ದೂ: 080–26961928 ಫ್ಯಾಕ್ಸ್–080–26961929

ಸಂಖ್ಯೆ: ರಾಗಾವಿ/ಪ್ರೊಕ್/ಚಿನ್ನದ ಪದಕಗಳು/90/2023–24 ದಿನಾಂಕ: 22.12.2023

ಇ–ಟೆಂಡರ್ ಪ್ರಕಟಣೆ (ಆರ್‌ಎಫ್‌ಪಿ)

ಕುಲಸಚಿವರು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಇವರು 26ನೇ ಕನ್ವೊಕೇಷನ್‌ಗೆ ಚಿನ್ನದ ಪದಕಗಳನ್ನು ಪ್ರೊಕ್ಯೂರ್‌ಮೆಂಟ್ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. ಹೆಚ್ಚಿನ ಮಾಹಿತಿಗಳನ್ನು ಲಗತ್ತಿಸಿರುವ ಷರತ್ತುಗಳ ಉಲ್ಲೇಖದಲ್ಲಿ ನೀಡಲಾಗಿದೆ. (Tend No: RGUHSK/2023-24/IND0010)

ಟೆಂಡರ್ ದಾಖಲೆಗಳು ಡೌನ್‌ಲೋಡ್ ಮಾಡಲು ಲಭ್ಯತೆ	22/12/2023
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ	06/01/2024 ಸಂಜೆ 5:30 ಗಂಟೆಗೆ
ಮಾದರಿ ಸಲ್ಲಿಸುವ ದಿನಾಂಕ	06/01/2024 ಸಂಜೆ 5:30 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	08/01/2024 ಬೆಳಿಗ್ಗೆ 11:00 ಗಂಟೆಗೆ
ಟೆಂಡರ್ ತೆರೆಯುವ ಸ್ಥಳ	ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಬೆಂಗಳೂರು

ಹೆಚ್ಚಿನ ಮಾಹಿತಿಗಳನ್ನು **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕುಲಸಚಿವರು

ವಾ.ಸಾ.ಸಂ.ಇ/2679/2023–24

ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಛೇರಿ, ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂಧಿನಗರ, ಬೆಂಗಳೂರು–560009, ದೂರವಾಣಿ ಸಂಖ್ಯೆ: 080–22208402

ಸಂಖ್ಯೆ: ಎಸಿ/ಇಜಿ–4/ಸಿಆರ್–20/2023–24 ದಿನಾಂಕ: 22.12.2023

Tender reference no.CTD/2023-24/SE0024

ಇ–ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆಗಳ ಇಲಾಖೆಯು 8 Dell PowerEdge Server R740 ಸರ್ವರ್‌ಗಳನ್ನು ಖರೀದಿಸಿ NIC Data centre ಕೋರಮಂಗಲ ಇಲ್ಲಿ ಅಳವಡಿಸಲಾಗಿದ್ದು, ಸದರಿ ಸರ್ವರ್‌ಗಳ 5 ವರ್ಷಗಳ ವಾರೆಂಟಿ (Warranty) ಅವಧಿಯು ಮುಗಿದಿರುವುದರಿಂದ ಅವುಗಳ ವಾರ್ಷಿಕ ನಿರ್ವಹಣೆ ಸೇವೆಯನ್ನು (AMC) ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ದ್ವಿಲಕೋಟೆ/ ದ್ವಿಭಾಗಗಳ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ–ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಕರೆಯಲಾಗಿದೆ. ಟೆಂಡರ್ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಇತರೆ ವಿವರಗಳನ್ನು ಜಾಲತಾಣ ವಿಳಾಸ http://kppp.karnataka.gov.in ದಿಂದ ಅಥವಾ ಜಾಲತಾಣ https://gst.kar.nic.in ದಿಂದ ಪಡೆದುಕೊಳ್ಳಬಹುದು. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **30.12.2023 ಸಂಜೆ 4.00 ಘಂಟೆ**. ಹೆಚ್ಚಿನ ವಿವರಗಳಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: **080–22208402** ಅಥವಾ ಇ–ಮೇಲ್ ವಿಳಾಸ: **addlcom.gst@ctd.ka.gov.in** ಅನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಮತ್ತು ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು, (ಇ–ಆಡಳಿತ), ಬೆಂಗಳೂರು.

ಮೈಸೂರು ವಿಶ್ವವಿದ್ಯಾನಿಲಯ

Estd 1916

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)

(ಎನ್‌ಐಆರ್‌ಎಫ್–2022: ವಿಶ್ವವಿದ್ಯಾನಿಲಯ ವರ್ಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 54ನೇ ಸ್ಥಾನ)

ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ, ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು–570 005

ಸಂಖ್ಯೆ: ಪವಿ.6.7/180/2021–22 ದಿನಾಂಕ: 20–12–2023

ಟೆಂಡರ್ ಪ್ರಕಟಣೆ E-Procurement Portal ಮುಖಾಂತರ ಮಾತ್ರ

ಮಾನ್ಯ ಕುಲಪತಿಯವರ ಆದೇಶದ ಮೇರೆಗೆ, ಕುಲಸಚಿವ(ಪರೀಕ್ಷಾಂಗ)ರವರು ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದಲ್ಲಿ ಮೌಲ್ಯಮಾಪನ ಕಾರ್ಯ ಪೂರ್ಣಗೊಂಡಿರುವ ಉಪಯೋಗಿಸಲಾದ ಹಳೆಯ ಉತ್ತರಪತ್ರಿಕೆಗಳನ್ನು ಯಾವ ಸ್ಥಿತಿಯಲ್ಲಿ ಇದೆಯೋ ಅದೇ ಸ್ಥಿತಿಯಲ್ಲಿಯೇ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ವಿಲೇವಾರಿ ಮಾಡಲು ಪೇಪರ್ ಮಿಲ್ಸ್ ಉದ್ದಿಮೆದಾರರು ಹಾಗೂ ಹಳೆಯ ಪೇಪರ್ ವ್ಯಾಪರಿಗಳಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಮಾಡಲಾದ ಟೆಂಡರ್‌ನ್ನು **ದಿನಾಂಕ: 05–01–2024 ಸಾಯಂಕಾಲ 5.30ಗಂಟೆಯವರೆಗೆ, ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.** ಇವರಿಗೆ ಸಲ್ಲಿಸತಕ್ಕದ್ದು ಮತ್ತು ಸ್ವೀಕರಿಸಲಾದ ಟೆಂಡರ್‌ಗಳನ್ನು **ದಿನಾಂಕ:08–01–2024 ರಂದು ಬೆಳಿಗ್ಗೆ 11.00ಗಂಟೆಗೆ (ರಜಾ ದಿನಗಳನ್ನು ಹೊರತುಪಡಿಸಿ) ವಿಶ್ವವಿದ್ಯಾನಿಲಯದ ಕುಲಸಚಿವ(ಪರೀಕ್ಷಾಂಗ), ಪರೀಕ್ಷಾ ವಿಭಾಗದ ಕ್ರಾಫರ್ಡ್‌ಭವನ ಇವರ ಸಮಕ್ಷಮದಲ್ಲಿ ಟೆಂಡರ್‌ನ್ನು ತೆರೆಯಲಾಗುವುದು. ಟೆಂಡರ್ ಇಂಡೆಂಟ್ ನಂ. UOM/2023-24/SE009**

ಹೆಚ್ಚಿನ ವಿವರಗಳಿಗೆ **Web Site: https://kppp.karnataka.gov.in**ನ್ನು ವೀಕ್ಷಿಸುವುದು ಅಥವಾ **ದೂರವಾಣಿ ಸಂಖ್ಯೆ: 0821–2419214, 2419204,** ಅನ್ನು ಸಂಪರ್ಕಿಸುವುದು.

ಸಹಿ/– ಕುಲಸಚಿವರು (ಪರೀಕ್ಷಾಂಗ)

ಕೃಷಿ ಮಾರಾಟ ಇಲಾಖೆ
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೈಲಹೊಂಗಲ.

ಬೆಳಗಾವಿ ರಸ್ತೆ, ಬೈಲಹೊಂಗಲ–591102, ಜಿಲ್ಲೆ:ಬೆಳಗಾವಿ, ರಾಜ್ಯ:ಕರ್ನಾಟಕ.

Email-apmcbailhongal@gmail.com, (ದೂ):08288–233136

ಕ್ರ.ಸಂ. ಕೃಉಮಾಸ(ಬೈ)/ಅಭಿ/ಆರ್‌ಐಡಿಎಫ್–29/745/2023–24 ದಿನಾಂಕ:21/12/2023.

ಅಲ್ಪಾವಧಿ ಟೆಂಡರ್ ಪ್ರಕಟಣೆ

ಸನ್ 2023–24 ನೇ ಸಾಲಿನ ಆರ್‌ಐಡಿಎಫ್–29 ಯೋಜನೆಯಡಿ ಮಂಜೂರಾದ ಬೈಲಹೊಂಗಲ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಬೈಲಹೊಂಗಲ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಸಿಸಿ ರೋಡ ಮತ್ತು ಆರ್‌ಸಿಸಿ ಗಟಾರ ನಿರ್ಮಿಸುವುದು ಮತ್ತು ಸಮಿತಿಯ ಕಿತ್ತೂರು ಉಪ–ಮಾರುಕಟ್ಟೆ ಪ್ರಾಂಗಣದಲ್ಲಿ ಬಿಟಿ ರೋಡ ಮತ್ತು ಆರ್‌ಸಿಸಿ ಗಟಾರ ನಿರ್ಮಾಣ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಕೆಪಿಪಿಪಿ) ಮೂಲಕ Standard Tender Document KW-4 ರನ್ವಯ ಸ್ಪರ್ಧಾತ್ಮಕ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವಿಳಾಸ https://kppp.karnataka.gov.in

ಕ್ರ ಸಂ:01:ಕಾಮಗಾರಿಯ ವಿವರ:Construction of CC Road and RCC Drain at MMY and BT Road and RCC Drain at SMY Kittur of APMC Bailhongal Under RIDF-29 Scheme, ಟೆಂಡರ್‌ಗಿಟ್ಟ ಮೊತ್ತ ಲಕ್ಷಗಳಲ್ಲಿ:210.00 lakhs excluding GST, ಇಎಂಡಿ ಮೊತ್ತ: 3,15,000.00, ಟೆಂಡರ್ ಪ್ರೋಸೆಸಿಂಗ ಫೀ:As per KPPP Portal, ಅವಧಿ:175 days,ಗುತ್ತಿಗೆದಾರರ ದರ್ಜೆ:As per KW-4 Eligible.

ಟೆಂಡರ ಪ್ರಕ್ರಿಯೆ ವೇಳಾ ಪಟ್ಟಿ:1:ಪ್ರೀ ಬಿಡ್ ಮೀಟಿಂಗ್: 02/01/2024 ರಂದು 11.00 ಗಂಟೆಗೆ ಬೈಲಹೊಂಗಲ ಎಪಿಎಂಸಿ ಕಚೇರಿಯಲ್ಲಿ, 2:ಭರ್ತಿಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:08/01/2024 ರ 4.00 ಗಂಟೆಯವರೆಗೆ. 3:ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 10/01/2024 ರ 4.30 ಗಂಟೆಗೆ, 4:ಆರ್ಥಿಕ ಬಿಡ್ ತೆರೆಯುವ ದಿನಾಂಕ:29/01/2024 ರ 4.00 ಗಂಟೆಗೆ.

ಇ–ಟೆಂಡರ್ ಪ್ರೋಸೆಸ್ಸಿಂಗ್ ಶುಲ್ಕ ಹಾಗೂ ಇ.ಎಂ.ಡಿ ಮೊತ್ತವನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಕೆಪಿಪಿಪಿ) ಮೂಲಕ ಸಂದಾಯ ಮಾಡುವುದು ಮತ್ತು ಟೆಂಡರ್ ಷರತ್ತುವ ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಕೆಪಿಪಿಪಿ) ಸಹಾಯವಾಣಿ ಸಂಖ್ಯೆ 080–46010000 & 080–68948777 ಮತ್ತು ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬೈಲಹೊಂಗಲ (08288–233136) ಇವರಿಂದ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–(ಎಸ್.ಎಸ್.ಅರಳೀಕಟ್ಟಿ) ಕಾರ್ಯದರ್ಶಿ ಕೃಉಮಾಸ, ಬೈಲಹೊಂಗಲ ಸಹಿ/–(ಸಚ್ಚಿದಾನಂದ ಕುಚನೂರ) ಆಡಳಿತಾಧಿಕಾರಿಗಳು ಕೃಉಮಾಸ, ಬೈಲಹೊಂಗಲ

DIPR/BGM/RO-NO-822/MCA/2023-24

₹37 ಲಕ್ಷ ಮೌಲ್ಯದ ಮದ್ಯ ವಶ, ಇಬ್ಬರ ಬಂಧನ

ಬೆಳಗಾವಿ: ಗೋವಾದಿಂದ ಉತ್ತರ ಭಾರತದ ವಿವಿಧೆಡೆ ಲಾರಿಯಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ₹37 ಲಕ್ಷ ಮೌಲ್ಯದ ಮದ್ಯವನ್ನು ಅಬಕಾರಿ ಸಿಬ್ಬಂದಿ ಗುರುವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ.

16 ಚಕ್ರದ ಲಾರಿಯಲ್ಲಿ ಮಶ್ರೂಮ್‌ನ ಬೀಜ ಹಾಗೂ ಮಣ್ಣು ಮಿಶ್ರಣ ತುಂಬಿದ ಚೀಲಗಳನ್ನು ಹೇರಿ, ಅದರ ಕೆಳಗಡೆ ಮದ್ಯದ ಬಾಕ್ಸ್‌ಗಳನ್ನು ಇಟ್ಟು ಕಳ್ಳಸಾಗಣೆ ಮಾಡಲಾಗುತಿತ್ತು.

'ಸವದತ್ತಿ ತಾಲ್ಲೂಕಿನ ಕಡಬಿ ಶಿವಾಪುರದ ಅದಮ್ ಕುತುಬುದ್ದಿನ್ ಮುಗುಟಖಾನ್ (28) ಮತ್ತು ಬಾಗಲಕೋಟೆ ಜಿಲ್ಲೆ ಹೊನ್ನಾಕಟ್ಟಿ ಗ್ರಾಮದ ಆಸೀಫ್ ರೆಹಮಾನಸಾಬ್ ಯಲಗಾರ (27) ಬಂಧಿತರು. ₹27 ಲಕ್ಷ ಮೌಲ್ಯದ 600 ಬಾಕ್ಸ್ ಮದ್ಯ, ₹10 ಲಕ್ಷ ಮೌಲ್ಯದ ಬಿಯರ್ ಮತ್ತು ₹30 ಲಕ್ಷ ಮೌಲ್ಯದ ಲಾರಿ ಸೇರಿ ₹67 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಅಬಕಾರಿ ಇಲಾಖೆಯ ಹೆಚ್ಚುವರಿ ಆಯುಕ್ತ ಡಾ.ವೈ.ಮಂಜುನಾಥ ತಿಳಿಸಿದ್ದಾರೆ.

ಆರೋಗ್ಯ ಇಲಾಖೆಯಡಿ 1,500ಕ್ಕೂ ಅಧಿಕ ವೈದ್ಯರ ಹುದ್ದೆಗಳು ಖಾಲಿ

ಗ್ರಾಮೀಣ ಸೇವೆಗೆ ವೈದ್ಯರ ನಿರಾಸಕ್ತಿ

● ವರುಣ ಹೆಗಡೆ

ಬೆಂಗಳೂರು: ವೈದ್ಯಕೀಯ ಸೌಲಭ್ಯ ಕೊರತೆ, ಸೂಕ್ತ ವೇತನ ಸಿಗದಿರುವುದೂ ಸೇರಿ ವಿವಿಧ ಕಾರಣಗಳಿಂದ ಗ್ರಾಮೀಣ ಭಾಗದ ಸರ್ಕಾರಿ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ವೈದ್ಯರು ಆಸಕ್ತಿ ತೋರುತ್ತಿಲ್ಲ. ಇದರಿಂದಾಗಿ ಆರೋಗ್ಯ ಇಲಾಖೆಯಲ್ಲಿ 1,500ಕ್ಕೂ ಅಧಿಕ ಕಾಯಂ ವೈದ್ಯರ ಹುದ್ದೆಗಳು ಖಾಲಿ ಉಳಿದಿವೆ.

ರಾಜ್ಯದ ಆರೂವರೆ ಕೋಟಿ ಜನರಿಗೆ ಆರೋಗ್ಯ ಭದ್ರತೆ ಒದಗಿಸುವ ಭರವಸೆಯೊಂದಿಗೆ ಪ್ರಾರಂಭಿಸಲಾಗಿದ್ದ 'ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ' ಯೋಜನೆಯಡಿ ಚಿಕಿತ್ಸೆಗೆ 3 ಸಾವಿರಕ್ಕೂ ಅಧಿಕ ಆಸ್ಪತ್ರೆಗಳನ್ನು ಗುರುತಿಸಲಾಗಿದೆ. ಇವುಗಳಲ್ಲಿ 2 ಸಾವಿರಕ್ಕೂ ಅಧಿಕ ಸರ್ಕಾರಿ ಆಸ್ಪತ್ರೆಗಳೇ ಆಗಿವೆ. ವೈದ್ಯರ ಕೊರತೆಯಿಂದ ಈ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ವ್ಯತ್ಯಯವಾಗುತ್ತಿದೆ.

ಆರೋಗ್ಯ ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿ 477 ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು, 237 ಶಸ್ತ್ರಚಿಕಿತ್ಸಕರು, 375 ಮಕ್ಕಳ ತಜ್ಞರು, 289 ದಂತ ತಜ್ಞರು ಹಾಗೂ 1,127 ತಜ್ಞ ವೈದ್ಯರು ಇಲಾಖೆ ವ್ಯಾಪ್ತಿಯ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಹೆಚ್ಚಿನ ವೈದ್ಯರು ನಗರ ಕೇಂದ್ರಿತ ಆಸ್ಪತ್ರೆಗಳಲ್ಲೇ ಇದ್ದಾರೆ. ಗ್ರಾಮೀಣ ಭಾಗಕ್ಕೆ ಹೋಗಲು ನಿರಾಸಕ್ತಿ ತೋರುತ್ತಿರುವುದರಿಂದ ತಾಲ್ಲೂಕು ಆಸ್ಪತ್ರೆ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಹೆಚ್ಚಿನ ಹುದ್ದೆಗಳು ಖಾಲಿ ಉಳಿದಿವೆ.

ನವೀಕರಣವಾಗದ ಗುತ್ತಿಗೆ: 2020ರ ಮಾರ್ಚ್‌ನಲ್ಲಿ ಕೋವಿಡ್ ಕಾಣಿಸಿಕೊಂಡ ಬಳಿಕ ಸರ್ಕಾರವು ಜಿಲ್ಲಾ ಮಟ್ಟದಲ್ಲಿ ಗುತ್ತಿಗೆ ಆಧಾರದಲ್ಲಿ ಒಂದು ವರ್ಷಕ್ಕೆ ಅನ್ವಯಿಸುವಂತೆ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಯನ್ನು ನೇಮಿಸಿಕೊಂಡಿತ್ತು. ಕೋವಿಡ್ ನಿಯಂತ್ರಣದ ಬಳಿಕ ಗುತ್ತಿಗೆ ನವೀಕರಿಸಿಲ್ಲ. ಇದರಿಂದಾಗಿ ವೈದ್ಯರ ಕೊರತೆ ಮುಂದುವರಿದಿದೆ. ದಂತವೈದ್ಯರು, ಮಕ್ಕಳ ತಜ್ಞರ ಹುದ್ದೆಗಳು ಬಹುತೇಕ ಜಿಲ್ಲೆಗಳಲ್ಲಿ ಖಾಲಿ ಉಳಿದಿವೆ.

'ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಲಾಗಿದ್ದು, ಅಗತ್ಯ ಸೌಲಭ್ಯ ಕಲ್ಪಿಸಲಾಗಿದೆ. ಖಾಸಗಿ ವ್ಯವಸ್ಥೆಯಡಿ ಉತ್ತಮ ವೇತನ ದೊರೆಯುವ ಕಾರಣ ಸ್ನಾತಕೋತ್ತರ ಪದವಿ ಪಡೆದವರು ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸಲು ನಿರಾಸಕ್ತಿ ತೋರುತ್ತಿದ್ದಾರೆ. ಇದರಿಂದಾಗಿಯೇ ಕೆಲ ಸರ್ಕಾರಿ ಆಸ್ಪತ್ರೆಗಳಲ್ಲಿ ಹುದ್ದೆಗಳು ಖಾಲಿ ಉಳಿದಿವೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಅಂಕಿ-ಅಂಶಗಳು

2,844 ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳು

16,993 ನೋಂದಾಯಿತ ಖಾಸಗಿ ಆಸ್ಪತ್ರೆಗಳು

ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆ

ಆಸ್ಪತ್ರೆ ಪ್ರಕಾರ	ಹುದ್ದೆಗಳ ಸಂಖ್ಯೆ
ಜಿಲ್ಲಾ ಆಸ್ಪತ್ರೆ	125
ತಾಲ್ಲೂಕು ಆಸ್ಪತ್ರೆ	646
ತಾಯಿ ಮತ್ತು ಮಕ್ಕಳ ಆಸ್ಪತ್ರೆ	32
ಸಮುದಾಯ ಆರೋಗ್ಯ ಕೇಂದ್ರಗಳು	340
ಪ್ರಾಥಮಿಕ ಆರೋಗ್ಯ ಕೇಂದ್ರಗಳು	388

ನಮ್ಮ ಕ್ಲಿನಿಕ್‌ನಲ್ಲೂ ಹುದ್ದೆ ಖಾಲಿ

ರಾಜ್ಯದಲ್ಲಿ 415 ನಮ್ಮ ಕ್ಲಿನಿಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಮೊದಲ ಹಂತದಲ್ಲಿ ಕಳೆದ ಫೆಬ್ರುವರಿ ತಿಂಗಳಲ್ಲಿ ನೂರಕ್ಕೂ ಅಧಿಕ ಕ್ಲಿನಿಕ್‌ಗಳಿಗೆ ಚಾಲನೆ ನೀಡಲಾಗಿತ್ತು. ಇನ್ನುಳಿದ ಕ್ಲಿನಿಕ್‌ಗಳು ತದನಂತರ ಕಾರ್ಯಾರಂಭಿಸಿವೆ. ಜ್ವರದಂತಹ ಸಾಮಾನ್ಯ ಅನಾರೋಗ್ಯ ಸಮಸ್ಯೆಗಳಿಗೆ ಚಿಕಿತ್ಸೆ ಒದಗಿಸುವ ಜತೆಗೆ ರಕ್ತ ಸೇರಿ ವಿವಿಧ ಪರೀಕ್ಷೆಗಳನ್ನೂ ನಡೆಸುವ ವ್ಯವಸ್ಥೆ ಇಲ್ಲಿದೆ.

ಈ ಕ್ಲಿನಿಕ್‌ಗಳಿಗೆ ತಲಾ ಒಬ್ಬರು ವೈದ್ಯರನ್ನು ಒಂದು ವರ್ಷಕ್ಕೆ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗುತ್ತದೆ. ಎಂಬಿಬಿಎಸ್ ಮುಗಿಸಿದ ವೈದ್ಯಾಧಿಕಾರಿಗೆ ₹47,250 ವೇತನ ನಿಗದಿಪಡಿಸಲಾಗಿದೆ. ವೇತನ ಕಡಿಮೆ ಎಂಬ ಕಾರಣಕ್ಕೆ ಈ ಕ್ಲಿನಿಕ್‌ಗಳಲ್ಲಿಯೂ 50ಕ್ಕೂ ಅಧಿಕ ವೈದ್ಯರ ಹುದ್ದೆ ಖಾಲಿಯಿದೆ.

ಸರ್ಕಾರಿ ಆಸ್ಪತ್ರೆಗಳಲ್ಲಿನ ಖಾಲಿ ಹುದ್ದೆಗಳನ್ನು ಗುತ್ತಿಗೆ ಆಧಾರದಲ್ಲಿ ಭರ್ತಿ ಮಾಡಲು ಸೂಚಿಸಲಾಗಿದೆ. ಕಡ್ಡಾಯ ಗ್ರಾಮೀಣ ಸೇವೆಯಡಿ ಲಭ್ಯವಿರುವ ಹುದ್ದೆಗಳಿಗೆ ಸ್ನಾತಕೋತ್ತರ ಪದವೀಧರರನ್ನು ಬಳಸಿಕೊಳ್ಳಲಾಗುತ್ತದೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಖಾಲಿ ಇರುವ ವೈದ್ಯರ ಹುದ್ದೆಗಳನ್ನು ಸರ್ಕಾರ ಶೀಘ್ರ ಭರ್ತಿ ಮಾಡಬೇಕು. ಗ್ರಾಮೀಣ ಭಾಗದಲ್ಲಿ ಸೇವೆ ಸಲ್ಲಿಸುವವರಿಗೂ ಸೂಕ್ತ ವೇತನ, ಸೌಲಭ್ಯ ನೀಡಬೇಕು

ಡಾ.ಎಸ್. ಶ್ರೀನಿವಾಸ್

ಭಾರತೀಯ ವೈದ್ಯಕೀಯ ಸಂಘದ ಕರ್ನಾಟಕ ಶಾಖೆಯ ಅಧ್ಯಕ್ಷ

ಎ.20, 21 ಸಿಇಟಿ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ 2024ರ ಏಪ್ರಿಲ್ 20 ಮತ್ತು 21ರಂದು ಸಿಇಟಿ (ಸಾಮಾನ್ಯ ಪ್ರವೇಶ ಪರೀಕ್ಷೆ) ನಡೆಯಲಿದೆ.

ಈ ಕುರಿತು ಮಾಹಿತಿ ನೀಡಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್. ರಮ್ಯಾ, ಆಕಾಂಕ್ಷಿಗಳು ಜನವರಿ 10ರಿಂದ ನಿಗದಿತ ಶುಲ್ಕದೊಂದಿಗೆ ಆನ್‌ಲೈನ್ ಅರ್ಜಿ ಸಲ್ಲಿಸಬಹುದು ಎಂದಿದ್ದಾರೆ.

ಏ.20ರ ಬೆಳಿಗ್ಗೆ 10.30ರಿಂದ ಜೀವ ವಿಜ್ಞಾನ, ಮಧ್ಯಾಹ್ನ 2.30ರಿಂದ ಗಣಿತ, 21ರಂದು ಬೆಳಿಗ್ಗೆ ಭೌತ ವಿಜ್ಞಾನ ಮತ್ತು ಮಧ್ಯಾಹ್ನ ರಸಾಯನ ವಿಜ್ಞಾನ ಪರೀಕ್ಷೆ ತಲಾ 60 ಅಂಕಗಳಿಗೆ ನಡೆಯಲಿದೆ. ಹೊರನಾಡು ಮತ್ತು ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ ಏ.19ರಂದು ಬೆಂಗಳೂರು, ಬೀದರ್, ಬೆಳಗಾವಿ, ಬಳ್ಳಾರಿ, ವಿಜಯಪುರ ಮತ್ತು ಮಂಗಳೂರು ಕೇಂದ್ರಗಳಲ್ಲಿ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ನ್ಯಾಚುರೋಪತಿ ಮತ್ತು ಯೋಗ, ಬಿ.ಫಾರ್ಮ, ಫಾರ್ಮ-ಡಿ, ದ್ವಿತೀಯ ವರ್ಷದ ಬಿ.ಫಾರ್ಮ, ಕೃಷಿ ಕೋರ್ಸ್‌ಗಳು, ಪಶು ಸಂಗೋಪನೆ, ಬಿ.ಎಸ್ಸಿ (ನರ್ಸಿಂಗ್), ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸ್‌ಗಳಿಗೆ ಪ್ರವೇಶ ಬಯಸುವ ಅಭ್ಯರ್ಥಿಗಳಿಗೂ ಈ ಸೂಚನೆ ಅನ್ವಯ-ಸುತ್ತದೆ ಎಂದು ಹೇಳಿದ್ದಾರೆ.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವಾಗ ಅಭ್ಯರ್ಥಿಗಳು ಸರಿಯಾದ ಆರ್.ಡಿ. ಸಂಖ್ಯೆ, ಜಾತಿ/ಆದಾಯ ಪ್ರಮಾಣಪತ್ರ ಮತ್ತು ಕಲ್ಯಾಣ ಕರ್ನಾಟಕ (371ಜೆ) ಪ್ರಮಾಣಪತ್ರಕ್ಕೆ ಸಂಬಂಧಿಸಿದ ಅಗತ್ಯ ವಿವರಗಳನ್ನು ದಾಖಲಿಸಬೇಕು. ತಪ್ಪಿದಲ್ಲಿ, ಇಂಥವರು ಅರ್ಜಿ ಸಲ್ಲಿಕೆ ಪೂರ್ಣಗೊಳಿಸಲು ಸಾಧ್ಯವಿಲ್ಲ ಎಂದಿದ್ದಾರೆ.

ಬಿ.ಇ.ಗೆ ನೇರ ಪ್ರವೇಶ: ಏ.18ರಂದು ಸಿಇಟಿ

ಎಂಜಿನಿಯರಿಂಗ್‌ನ 3ನೇ ಸೆಮಿಸ್ಟರ್‌ಗೆ ನೇರ ಪ್ರವೇಶಾತಿ ಬಯಸುವ ಅರ್ಹ ಅಭ್ಯರ್ಥಿಗಳಿಗೆ ಏ.18ರಂದು ಸಿಇಟಿ ನಡೆಸಲಾಗುವುದು. ಅರ್ಜಿ ತುಂಬಲು ಸದ್ಯದಲ್ಲೇ ಪೋರ್ಟಲ್ ತೆರೆಯಲಾಗುವುದು. ಎಂಬಿಎ, ಎಂಸಿಎ, ಎಂ.ಇ, ಎಂ.ಟೆಕ್, ಎಂ.ಆರ್ಕ್ ಕೋರ್ಸ್‌ಗಳಿಗೆ ಪ್ರವೇಶ ಬಯಸುವ ಅರ್ಹ ಅಭ್ಯರ್ಥಿಗಳಿಗೆ ಏ.18 ಮತ್ತು 19ರಂದು ಪಿಜಿಸಿಇಟಿ ನಡೆಸಲಾಗುವುದು. ಇದಕ್ಕೂ ಅರ್ಜಿ ಸಲ್ಲಿಕೆಗೆ ಶೀಘ್ರದಲ್ಲೇ ಪೋರ್ಟಲ್ ತೆರೆಯಲಾಗುವುದು ಎಂದು ಪ್ರಾಧಿಕಾರ ತಿಳಿಸಿದೆ.

ಸರಿಯಾದ ಬ್ಯಾಂಕ್ ವಿವರ ನೀಡಿ: 2023ರಲ್ಲಿ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ಪ್ರವೇಶ ಬಯಸಿ ನಂತರ ಸೀಟು ರದ್ದುಪಡಿಸಿಕೊಂಡಿರುವ ಅಥವಾ ಹೆಚ್ಚುವರಿ ಶುಲ್ಕ ಪಾವತಿಸಿರುವ ಅಭ್ಯರ್ಥಿಗಳಿಗೆ ಪ್ರಾಧಿಕಾರವು ಆ ಮೊತ್ತವನ್ನು ಹಿಂದಿರುಗಿಸುತ್ತಿದೆ. ಕೆಲವರ ಅರ್ಜಿಗಳಲ್ಲಿ ಬ್ಯಾಂಕ್ ವಿವರಗಳು ತಪ್ಪಾಗಿದ್ದು, ಡಿ.31ರೊಳಗೆ ಸರಿಯಾದ ವಿವರ ನಮೂದಿಸಲು ಪ್ರಾಧಿಕಾರ ಸೂಚಿಸಿದೆ.

ವಿದ್ಯಾಧರ ವ್ಯಾಸ್‌ಗೆ ರಾಷ್ಟ್ರೀಯ ಪ್ರಶಸ್ತಿ



ವಿದ್ಯಾಧರ ವ್ಯಾಸ್

ರವಿಕಿರಣ ನಾಕೋಡ

ವೆಂಕಟೇಶ ಆಲಕೋಡ

ಧಾರವಾಡ: ನಗರದ ಡಾ. ಮಲ್ಲಿಕಾರ್ಜುನ ಮನಸೂರ ರಾಷ್ಟ್ರೀಯ ಸ್ಮಾರಕ ಟ್ರಸ್ಟ್ ನೀಡುವ ರಾಷ್ಟ್ರೀಯ ಪ್ರಶಸ್ತಿಗೆ ಪುಣೆಯ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರ ವಿದ್ಯಾಧರ ವ್ಯಾಸ್, ರಾಷ್ಟ್ರೀಯ ಯುವ ಪ್ರಶಸ್ತಿಗೆ ಧಾರವಾಡದ ವಾದ್ಯ ಸಂಗೀತಗಾರ ರವಿಕಿರಣ ನಾಕೋಡ ಮತ್ತು ಗದುಗಿನ ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರ ವೆಂಕಟೇಶ ಆಲಕೋಡ ಆಯ್ಕೆಯಾಗಿದ್ದಾರೆ.

ರಾಷ್ಟ್ರೀಯ ಪ್ರಶಸ್ತಿಯು ₹ 1 ಲಕ್ಷ ನಗದು ಹಾಗೂ ಫಲಕ, ಯುವ ಪ್ರಶಸ್ತಿಯು ₹ 25 ಸಾವಿರ ನಗದು, ಫಲಕ ಒಳಗೊಂಡಿದೆ. ಧಾರವಾಡದ ಆಲೂರು ವೆಂಕಟರಾವ್ ಭವನದಲ್ಲಿ ಡಿಸೆಂಬರ್ 31ರ ಸಂಜೆ 5.30ಕ್ಕೆ ನಡೆಯುವ ಮಲ್ಲಿಕಾರ್ಜುನ ಮನಸೂರ ಅವರ 113ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಪ್ರತಿಭಟನೆ 'ಕೆಲಸ ಕಾಯಂಗೊಳಿಸಬೇಕು' ಎಂದು ಆಗ್ರಹಿಸಿ 'ರಾಜ್ಯ ನಗರಪಾಲಿಕೆ, ನಗರಸಭೆ, ಪುರಸಭೆ, ಪೌರ ಕಾರ್ಮಿಕರ ಮಹಾಮಂಡಳಿ' ನೇತೃತ್ವದಲ್ಲಿ ರಾಜ್ಯದ ಹಲವು ಭಾಗಗಳ ಪೌರ ಕಾರ್ಮಿಕರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ರಾಜನಾಥ್–ಎಚ್‌ಡಿಕೆ ಭೇಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರು ಶುಕ್ರವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.

ರಾಜ್ಯದ ವಿವಿಧ ವಿಷಯಗಳ ಬಗ್ಗೆ ದೀರ್ಘ ಸಮಾಲೋಚಿಸಲಾಯಿತು. ಜೆಡಿಎಸ್-ಬಿಜೆಪಿ ಮೈತ್ರಿ ಕುರಿತು ಚರ್ಚಿಸಲಾಯಿತು. ಕರ್ನಾಟಕದ ಒಳಿತಿಗಾಗಿ ಕೇಂದ್ರ ಸರ್ಕಾರದ ಬೆಂಬಲ ಸದಾ ಇರುತ್ತದೆ ಎಂಬುದಾಗಿ ರಾಜನಾಥ್ ಭರವಸೆ ನೀಡಿದರು ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.

ಕೆಎಎಸ್ ಅಧಿಕಾರಿ ವಿರುದ್ಧ ಪ್ರಕರಣಕ್ಕೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ನವದೆಹಲಿ: ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲ್ಲೂಕಿನ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಯಲ್ಲಿದ್ದ 14 ಎಕರೆ ಜಾಗವನ್ನು ನಾಲ್ಕು ವ್ಯಕ್ತಿಗಳಿಗೆ ಅಕ್ರಮವಾಗಿ ಮಂಜೂರು ಮಾಡಿರುವ ಹಿಂದಿನ ತಹಶೀಲ್ದಾರ್ ಜೆ. ಉಮೇಶ್ ವಿರುದ್ಧ ಅರಣ್ಯ ಸಂರಕ್ಷಣಾ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು ಎಂದು ಅರಣ್ಯ ಇಲಾಖೆಗೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ ನಿರ್ದೇಶನ ನೀಡಿದೆ.

ಈ ಸಂಬಂಧ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದಿರುವ ಸಚಿವಾಲಯದ ಉಪ ಮಹಾನಿರ್ದೇಶಕರು (ಅರಣ್ಯ), 'ಸದ್ಯ ವಿಶೇಷ ಭೂಸ್ವಾಧೀನ ಅಧಿಕಾರಿಯಾಗಿರುವ (ಅಮಾನತಿನಲ್ಲಿದ್ದಾರೆ) ಉಮೇಶ್ ನಿಯಮಬಾಹಿರವಾಗಿ ಅರಣ್ಯ ಭೂಮಿಯನ್ನು ಖಾಸಗಿಯವರಿಗೆ ಮಂಜೂರು ಮಾಡಿದ್ದಾರೆ ಎಂದು ರಾಜ್ಯ ಸರ್ಕಾರ ವರದಿ ನೀಡಿದೆ. ಅಧಿಕಾರಿ ವಿರುದ್ಧ 45 ದಿನಗಳೊಳಗೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಬೇಕು' ಎಂದು ಸೂಚಿಸಿದ್ದಾರೆ.

ರಾಜ್ಯದ ತೆರಿಗೆ ಪಾಲು ₹2,660 ಕೋಟಿ ಬಿಡುಗಡೆ

ನವದೆಹಲಿ: ಕೇಂದ್ರ ಸರ್ಕಾರವು ಕರ್ನಾಟಕ ಸರ್ಕಾರಕ್ಕೆ ತೆರಿಗೆ ಹಂಚಿಕೆಯ ಕಂತಿನ ರೂಪದಲ್ಲಿ ₹2,660 ಕೋಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದೆ. ಕೇಂದ್ರವು 28 ರಾಜ್ಯಗಳಿಗೆ ಒಟ್ಟು ₹72,961 ಕೋಟಿ ಬಿಡುಗಡೆಗೊಳಿಸಿದೆ.

ಮುಂಬರುವ ಹಬ್ಬ, ಹೊಸ ವರ್ಷವನ್ನು ಗಮನದಲ್ಲಿ ಇಟ್ಟುಕೊಂಡು ವಿವಿಧ ಸಾಮಾಜಿಕ ಕಲ್ಯಾಣ ಮತ್ತು ಮೂಲಸೌಕರ್ಯ ಅಭಿವೃದ್ಧಿ ಯೋಜನೆಗಳಿಗೆ ಹಣಕಾಸು ಒದಗಿಸಲು, ರಾಜ್ಯ ಸರ್ಕಾರಗಳ ಕೈಗಳನ್ನು ಬಲಪಡಿಸಲು ಮುಂಚಿತವಾಗಿ ಕಂತು ಬಿಡುಗಡೆಗೊಳಿಸಲಾಗಿದೆ. ಇದು ಜನವರಿ 10ರಂದು ರಾಜ್ಯಗಳಿಗೆ ಪಾವತಿಸಬೇಕಾದ ತೆರಿಗೆ ಹಂಚಿಕೆಯ ಕಂತು ಆಗಿದೆ ಹಾಗೂ ಡಿಸೆಂಬರ್ 10ರಂದು ಬಿಡುಗಡೆ ಮಾಡಲಾದ ₹72,961.21 ಕೋಟಿಗೆ ಹೆಚ್ಚುವರಿಯಾಗಿದೆ ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

CENTRAL UNIVERSITY OF KARNATAKA
(Established by an Act of the Parliament in 2009)
Kadaganchi, Aland Road, Kalaburagi Dist-585367 (Karnataka)
Website: www.cuk.ac.in ; email: : registrar@cuk.ac.in
NOTIFICATION NO. : 32/2023
ROLLING ADVERTISEMENT FOR RECRUITMENT OF TEACHING POSITIONS
The University invites applications through an online mode from eligible candidates for the appointment of Assistant Professors (16) in various Departments through Rolling Advertisement for recruitment. Interested candidates may please visit : www.cuk.ac.in for more details.
Place : Kalaburagi Sd/-
Date : 22-12-2023 REGISTRAR

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ, ರಾಷ್ಟ್ರೀಯ ಹೆದ್ದಾರಿ-4, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ-581 205,
ಕಛೇರಿ ದೂರವಾಣಿ: 0836-2255180 ಫ್ಯಾಕ್ಸ್ : 91836-307402
ಇ ಮೇಲ್: kajavivi@gmail.com
ಜಾಹೀರಾತು ಪ್ರಕಟಣೆ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ 2023-24 ನೇ ಸಾಲಿನ ಸ್ನಾತಕೋತ್ತರ ತರಗತಿಗಳ ಬೋಧನಾ ಕಾರ್ಯಕ್ಕಾಗಿ ಸೇವೆ ಸಲ್ಲಿಸಲು ತಾತ್ಕಾಲಿಕ ನಿಯೋಜನೆ ಆಧಾರದ ಮೇಲೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸ್ವೀಕರಿಸಲು 12-01-2024 ರ ಸಂಜೆ 5.30 ರ ಒಳಗಾಗಿ ನಿಗದಿತ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿ ಮತ್ತು ಇತರೆ ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾಲಯದ www.janapadauniversity.ac.in ವೆಬ್‌ಸೈಟ್ ಮತ್ತು ದೂ. 8762600898 / 9448789295 ಸಂಪರ್ಕಿಸಬಹುದಾಗಿದೆ.
ವಾಸಾಸಂಇ/ಹಾವೇರಿ/ಕೆಎಸ್ಎಂಸಿಎ/377/2023-24 ಸಹಿ/- ಕುಲಸಚಿವರು

ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಇ-ಪೋರ್ಟಲ್ ನಲ್ಲಿ ಮಾತ್ರ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಕಾವೇರಿ ನೀರಾವರಿ ನಿಗಮ ನಿಯಮಿತ, ಕಾವೇರಿ ಭವನ ಸಂಕೀರ್ಣ, ಗೋಕುಲಂ ನಾಲ್ಕನೇ ಹಂತ, ಯಾದವಗಿರಿ ಅಂಚೆ, ಮೈಸೂರು - 570 020. CIN-U45205KA2003SGC032044
Email:ccvccdn2@gmail.com. Ph: 0821-2515598.
ಅಲ್ಪಾವಧಿ ಇ-ಟೆಂಡರ್ ಸಂಖ್ಯೆ :06/2023-24 ದಿನಾಂಕ:22.12.2023..
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕಾ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ನಂ.2, ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು ಇವರು ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಕಾಮಗಾರಿಗಳಿಗಾಗಿ ಐಟಂವಾರು ದರದ ಅಲ್ಪಾವಧಿ ಟೆಂಡರ್‌ಗಳನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಅರ್ಹತೆಗೆ ಬೇಕಾಗುವ ಎಲ್ಲಾ ಅವಶ್ಯಕ ಪ್ರಮಾಣ ಪತ್ರಗಳನ್ನು ಮತ್ತು ದಾಖಲೆಗಳನ್ನು ಸ್ಕ್ಯಾನ್ ಮಾಡಿ ಆನ್‌ಲೈನ್ ಮೂಲಕ ಟೆಂಡರ್‌ಗಳ ಜೊತೆಗೆ ಸಲ್ಲಿಸುವುದು. ಕಾಮಗಾರಿಗಳಟ್ಟ ಕನಿಷ್ಠ ಮೊತ್ತ ರೂ.260.62 ಲಕ್ಷದಿಂದ ರೂ.337.78 ಲಕ್ಷದವರೆಗಿನ 07 ಸಂಖ್ಯೆಯ ಪ್ಯಾಕೇಜ್ ಕಾಮಗಾರಿಗಳನ್ನು ಕೈಗೊಳ್ಳಲು ಐಟಂವಾರು ಟೆಂಡರ್ ಕರೆಯಲಾಗಿದ್ದು, ಸದರಿ ಕಾಮಗಾರಿಗಳ ಟೆಂಡರ್‌ಕ್ವಾರಿಸ್/ಕ್ಲ್ಯಾರಿಫಿಕೇಶನ್ ಕೊನೆಯ ದಿನಾಂಕ: 02-01-2024 ಬೆಳಗ್ಗೆ 11.00 ಗಂಟೆಗೆ. ಆನ್‌ಲೈನ್ ಮೂಲಕ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ.ಎಂ.ಡಿಯೊಂದಿಗೆ ಸಲ್ಲಿಸುವ ಕೊನೆಯ ದಿನಾಂಕ: 05-01-2024 ಸಾಯಂಕಾಲ 04.30 ಗಂಟೆಯವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:06-01-2024 ಸಾಯಂಕಾಲ 05.00 ಗಂಟೆಗೆ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 10-01-2024 ಬೆಳಗ್ಗೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ:www.kppp.karnataka.gov.inರಲ್ಲಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್,
ನಂ.2 ವರುಣಾ ನಾಲಾ ನಿರ್ಮಾಣ ವಿಭಾಗ, ಮೈಸೂರು.

ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆರೋಗ್ಯ ಸೌಧ, 7ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು-560023
ದೂರವಾಣಿ ಸಂ: 22536200, ಇಮೇಲ್: directorsast@gmail.com
ಸಂಖ್ಯೆ: ಆಕುಕ/ಎಸ್ಎಎಸ್‌ಟಿ/ಐಟಿ/01/2023-24 ದಿನಾಂಕ: 22-12-2023
ಟೆಂಡರ್ ಪ್ರಕಟಣೆ
ವಿಷಯ: ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಟೆಂಡರ್ ಆಹ್ವಾನಿಸುವ ಬಗ್ಗೆ.
ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಂಗ ಸಂಸ್ಥೆಯಾಗಿದ್ದು, ಇದು Indian Trust Act, 1882 ರ ಅಡಿಯಲ್ಲಿ ನೋಂದಣಿಯಾಗಿರುತ್ತದೆ. ಸರ್ಕಾರದ ಆರೋಗ್ಯ ಯೋಜನೆಗಳನ್ನು ಟ್ರಸ್ಟ್ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಸಂಬಂಧ ಯೋಜನೆಗಳ ಸುಗಮ ಅನುಷ್ಠಾನಕ್ಕಾಗಿ ಸಿಬ್ಬಂದಿಗಳನ್ನು ಒದಗಿಸಲು ಮಾನವ ಸಂಪನ್ಮೂಲ ಸೇವೆಯನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರನ್ನು ಆಹ್ವಾನಿಸಲಾಗಿದೆ. ಬಿಡ್‌ಗಳನ್ನು ದಿನಾಂಕ: 22.12.2023 ರಿಂದ ಇ-ಪೋರ್ಟಲ್ https://kppp.karnataka.gov.in/#/portal/portal-home ನಲ್ಲಿ ಪಡೆಯಬಹುದಾಗಿರುತ್ತದೆ. ಇ-ಪೋರ್ಟಲ್ ಮೂಲಕ ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 12.01.2024 ರಂದು ಸಂಜೆ 5.00 ಗಂಟೆಯವರೆಗೆ ಕಾಲಾವಕಾಶವಿರುತ್ತದೆ.
ಸಹಿ/- ಕಾರ್ಯಕಾರಿ ನಿರ್ದೇಶಕರು
DIPR/CP/BCPL/2682/2023-24 ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು

ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003. ದೂರವಾಣಿ : 080-26422238
ಇ-ಮೇಲ್: mdktbs.tender@gmail.com ವೆಬ್‌ಸೈಟ್: https://www.ktbs.kar.nic.in
ಸಂಖ್ಯೆ: A7/E16158/KTBS/ADM/TBTR/2/2023-24 ದಿನಾಂಕ:21.12.2023
ಅಲ್ಪಾವಧಿ ಟೆಂಡರ್ ಅಧಿಸೂಚನೆ
(ಇ.ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
2024-25ನೇ ಸಾಲಿಗೆ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಅಂದಾಜು 1012.62 ಲಕ್ಷ ಪಠ್ಯ ಪುಸ್ತಕಗಳು, 4 ರಿಂದ 9ನೇ ತರಗತಿಯ ವಿದ್ಯಾರ್ಥಿಗಳಿಗೆ 138.20 ಲಕ್ಷ ಅಭ್ಯಾಸ ಪುಸ್ತಕಗಳು ಮತ್ತು 1 ರಿಂದ 12ನೇ ತರಗತಿಯ ವಿದ್ಯಾರ್ಥಿಗಳಿಗೆ 48.98 ಲಕ್ಷ ಶಾಲಾ ದಿನಚರಿಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯವುಳ್ಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ-ಪ್ರೊಕ್ಯೂರ್ಮೆಂಟ್ ಮೂಲಕ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ-ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು ದಿನಾಂಕ: 06.01.2024ರಂದು ಸಂಜೆ 5:30ರ ವರೆಗೂ ಸಲ್ಲಿಸಬಹುದಾಗಿರುತ್ತದೆ.ಇ-ಪ್ರೊಕ್ಯೂರ್ಮೆಂಟ್ ಪೋರ್ಟಲ್‌ನ ವಿಳಾಸ: https://www.kppp.karnataka.gov.in ಸಹಾಯವಾಣಿ: +91-8046010000/+91-8068948777, ಇಲಾಖೆಯ ವೆಬ್‌ಸೈಟ್: http://www.ktbs.kar.nic.in
ಸಹಿ/- ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಕರ್ನಾಟಕ ಸರಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಕಾರ್ಯನಿರ್ವಾಹಕ ಇಂಜಿನಿಯರವರ ಕಛೇರಿ, ಬಂದರು ಮತ್ತು ಮೀನುಗಾರಿಕಾ ವಿಭಾಗ,
'ಶ್ಯಾಮಿಲಿ ಹಾಲ್', 2ನೇ ಮಹಡಿ, ಅಂಬಲಪಾಡಿ, ಉಡುಪಿ -576103
Tel No: 0820-2532961, Fax No: 0820-2532961, Email: pfdudupi@gmail.com
ಸಂ:ಕಾನಿಇಂ:ಬಂಮೀವಿ:ಉಡುಪಿ:ಎಇ:ಟೆಂಡರ್ ಪ್ರಕಟಣೆ-12/2023-24: ದಿ: 20.12.2023
ಟೆಂಡರು ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಮಾತ್ರ) (ಏಕ ದಾಖಲೆ ಪದ್ಧತಿ)
ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ನಮೂದಿಸಿದ ಕಾಮಗಾರಿಯನ್ನು ಕೈಗೊಳ್ಳಲು ಇ-ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದ್ದು www.kppp.karnataka.gov.in ನಲ್ಲಿ ಹೆಚ್ಚಿನ ಮಾಹಿತಿ ಪಡೆದು ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಪಾಲ್ಗೊಳ್ಳಬಹುದಾಗಿದೆ. ಸದರಿ ಟೆಂಡರಿನ ಅವಧಿ ವಿಸ್ತರಣೆಯ ಮಾಹಿತಿಯನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಿಂದ ಪಡೆಯತಕ್ಕದ್ದು. ಈ ಕುರಿತು ಪ್ರತ್ಯೇಕವಾಗಿ ದಿನಪತ್ರಿಕೆಗಳಲ್ಲಿ ಪ್ರಕಟಣೆ ಮಾಡಲಾಗುವುದಿಲ್ಲ.
ಕಾಮಗಾರಿಯ ಹೆಸರು ಮತ್ತು ಟೆಂಡರ್ ನಂಬರ್: (1) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಹಳೇ ಬಂದರು ವ್ಯಾಪ್ತಿಯ ಡ್ರೈಡಾಕ್ ಮತ್ತು ರಾಜಕಾಲುವೆಯ ಮುಂಭಾಗದಲ್ಲಿ ತುರ್ತು ಹೂಳೆತ್ತುವ ಕಾಮಗಾರಿ. ಟೆಂಡರಿಗಿಟ್ಟ ಮೊತ್ತ: ರೂ. 15,06,305.00, ಇಎಂಡಿ ಮೊತ್ತ: Rs. 0.38 lakhs (Rs. 0.20 lakh e-payment)
ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ವೇಳೆ: 04-01-2024 ರಂದು 16.00 ಗಂಟೆಯವರೆಗೆ, ಟೆಂಡರ್ ಪಡೆಯುವ ದಿನಾಂಕ ಮತ್ತು ವೇಳೆ: 05-01-2024 ರಂದು 17.00 ಗಂಟೆಯವರೆಗೆ.
ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್
ವಾಸಾಇ/ಸನಿಉ/ಕೆಎಸ್‌ಎಂಸಿಎ/563/23-24 ದಿ: 22.12.2023 ಬಂದರು ಮತ್ತು ಮೀನುಗಾರಿಕಾ ವಿಭಾಗ, ಉಡುಪಿ

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ನಂ. 16 ಸಿ-1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ,
ಬೆಂಗಳೂರು-560052. ಫೋನ್: 080-22268677/78/79 ಫ್ಯಾಕ್ಸ್: 080-22268667
ಇ-ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ಸಂಖ್ಯೆ:ಕವಿನಿಆ-1-ಸಿ.ಒ.ಎನ್-2022-23/P2/1322/1076 ದಿನಾಂಕ: 21-12-2023
ಸೂಚನೆ
ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಹಸಿರು ಇಂಧನಕ್ಕಾಗಿ ಮುಕ್ತ ಅವಕಾಶಕ್ಕೆ ನಿಬಂಧನೆ ಮತ್ತು ಷರತ್ತುಗಳು) (ಒಂದನೇ ತಿದ್ದುಪಡಿ) ವಿನಿಯಮಗಳು, 2023.
ಮೇಲಿನ ವಿಷಯದ ಬಗ್ಗೆ ಹೊರಡಿಸಲಾದ ಕರಡು ವಿನಿಯಮಗಳನ್ನು ಕರ್ನಾಟಕದ ರಾಜ್ಯಪತ್ರದಲ್ಲಿ ದಿನಾಂಕ: 13-12-2023 ರಂದು ಪ್ರಕಟಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅಂತರ್ಜಾಲ ತಾಣ: https://kerc.karnataka.gov.in ದಲ್ಲಿ ಸದರಿ ಕರಡು ವಿನಿಯಮಗಳು ಲಭ್ಯವಿರುತ್ತದೆ. ಆಸಕ್ತರು, ಸದರಿ ಕರಡು ವಿನಿಯಮಗಳ ಬಗ್ಗೆ ಏನಾದರು ಅಭಿಪ್ರಾಯ / ವಿಮರ್ಶೆ / ಸಲಹೆ / ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿಯವರಿಗೆ, ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ 30 ದಿನಗಳ ಒಳಗಾಗಿ ಲಿಖಿತ ರೂಪದಲ್ಲಿ ಸಲ್ಲಿಸಬಹುದು.
ಸಹಿ/- ಕಾರ್ಯದರ್ಶಿ
ವಾಸಾಸಂಇ/ವಾ.ಪ್ರ/2699/2023-24 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ಕರ್ನಾಟಕ ಸರ್ಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ,
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ-577501)
ಇ-ಮೇಲ್ :E-Mail-ka.chitradurga.dudc@gmail.com
ಸಂಖ್ಯೆ ಜಿನಕೋ(2)ಇಂದಿರಾ ಕ್ಯಾ/ಸಿ.ಆರ್ 171/2023-24 ದಿನಾಂಕ:20/12/2023
ಟೆಂಡರ್ ಪ್ರಕಟಣೆ
ಚಿತ್ರದುರ್ಗ ಜಿಲ್ಲೆಯ ನಗರ ಸ್ಥಳೀಯ ಪ್ರದೇಶಗಳಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಿಗೆ ಅಡುಗೆ ಸೇವೆಗಳನ್ನು ಒದಗಿಸಲು ಅರ್ಹ ಟೆಂಡರುದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಈ ಕೆಳಕಂಡಂತೆ ಇ-ಟೆಂಡರ್ ಆಹ್ವಾನಿಸಲಾಗಿದೆ.
ಸಂಕ್ಷಿಪ್ತ ವಿವರ:- ಚಿತ್ರದುರ್ಗ ಜಿಲ್ಲೆಯ ಚಿತ್ರದುರ್ಗ-02, ಚಳ್ಳಕೆರೆ-01, ಹಿರಿಯೂರು-01, ನಗರಸಭೆ ಹಾಗೂ ಹೊಸದುರ್ಗ-01, ಹೊಳಲ್ಕೆರೆ-01 ಪುರಸಭೆ ವ್ಯಾಪ್ತಿಯಲ್ಲಿನ ಇಂದಿರಾ ಕ್ಯಾಂಟೀನ್‌ಗಳಿಗೆ ಅಡುಗೆ ಸೇವೆಗಳನ್ನು ಒದಗಿಸುವುದು. Indent No. DMA/2023-24/IND0938 ವರ್ಷಕ್ಕೆ ಸರಕು ಮತ್ತು ಸೇವೆಗಳ ಅಂದಾಜು ಮೊತ್ತ:- 588.38 ಲಕ್ಷ ಇಎಂಡಿ ಮೊತ್ತ:- 8.83 ಲಕ್ಷ ವಿತರಣಾ ವೇಳಾಪಟ್ಟಿ: ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವಂತೆ
ಆಸಕ್ತಿಯುಳ್ಳ ಆಹಾರ ಸರಬರಾಜು ಮಾಡುವ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಲು ಇ-ಪ್ರಕ್ಯೂರ್‌ಮೆಂಟ್ ಪ್ಲಾಟ್‌ಫಾರಂ https://www.kppp.karnataka.gov.in ರಲ್ಲಿ ಟೆಂಡರ್ ದಸ್ತಾವೇಜುಗಳನ್ನು ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಟೆಂಡರ್ ಪ್ರಕ್ರಿಯೆ ಶುಲ್ಕವನ್ನು ಸಹ ವಿದ್ಯುನ್ಮಾನವಾಗಿಯೇ ಸಲ್ಲಿಸುವುದು.
ಟೆಂಡರ್ ವೇಳಾಪಟ್ಟಿ :- 1) ಟೆಂಡರ್‌ನ ಬಗ್ಗೆ ವಿಚಾರಿಸಲು ಕೊನೆ ದಿ 08-01-2024 16.30 ಘಂಟೆ 2) ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ 20-01-2024 17.00 ಘಂಟೆ 3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 22-01-2024 17.15 ಘಂಟೆ 4) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆ ನಂತರ ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.
ಟೆಂಡರ್ ಕುರಿತಾದ ಹೆಚ್ಚಿನ ಮಾಹಿತಿಗಳನ್ನು ಮೇಲೆ ತಿಳಿಸಲಾದ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದು. ವೇಳಾಪಟ್ಟಿಯಲ್ಲಾಗುವ ಯಾವುದೇ ಬದಲಾವಣೆಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಸೂಚಿಸಲಾಗುವುದು ಮತ್ತು ದಿನಪತ್ರಿಕೆ ಜಾಹಿರಾತು ಪ್ರಕಟಣೆಯಲ್ಲಿ ನೀಡಲಾಗುವುದಿಲ್ಲ.
DIPR/CTA/KSMCA/428/2023-24 ಸಹಿ/- ಯೋಜನಾ ನಿರ್ದೇಶಕರು
ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿತ್ರದುರ್ಗ

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ.
ಸಂ:ಕಾನಿಅ/ಗ್ರಾಕುನೀ&ನೈ/ವಿಬ/ಜೆಇ-2/DMF/Ten.Nofi/2023-24/1919
ದಿನಾಂಕ:20.12.2023
ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ -2000 ರಂತೆ)
ಕರ್ನಾಟಕ ರಾಜ್ಯ ಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ರವರು ಜಿಲ್ಲಾ ಖನಿಜ ಪ್ರತಿಷ್ಠಾನ ಯೋಜನೆಯಡಿ ಅನುಮೋದನೆಗೊಂಡ ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ **"Multi village Drinking water Project for Kuruvalli & Other 02 villages of Siruguppa taluk in Ballari District"** ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಮೂಲಕ ಇ-ಟೆಂಡರ್ ಆಹ್ವಾನಿಸಲಾಗಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ಮುಖಾಂತರ ಸಲ್ಲಿಸಲು ಹಾಗೂ ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು **ದಿನಾಂಕ:21/12/2023 ರಿಂದ 05/01/2024** ರಂದು ಸಂಜೆ 4.00 ರವರೆಗೆ ಸಲ್ಲಿಸ ಬಹುದಾಗಿರುತ್ತದೆ, ತಾಂತ್ರಿಕ ಬಿಡ್ **ದಿನಾಂಕ:06/01/2024** ರಂದು ಸಂಜೆ 5.00 ಗಂಟೆಗೆ ತೆರೆಯಲಾಗುವುದು ಹಾಗೂ **ದಿನಾಂಕ: 30/12/2023** ರಂದು ಬೆಳಗ್ಗೆ 11.00 ಗಂಟೆಗೆ ಪೂರ್ವಭಾವಿ ಸಭೆಯನ್ನು, ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ, ಎಸ್.ಬಿ.ಐ ಬ್ಯಾಂಕ್‌ನ ಮೇಲ್ಮಹಡಿ ಕಟ್ಟಡ, ಸುಧಾ ಕ್ರಾಸ್, ಕಂಟೋನ್‌ಮೆಂಟ್, ಬಳ್ಳಾರಿ ಕಛೇರಿಯಲ್ಲಿ ಕರೆಯಲಾಗಿದೆ, ಕಾಮಗಾರಿಗಾಗಿ ಟೆಂಡರ್ ಸಲ್ಲಿಸಲು ನಿಗಧಿ ಪಡಿಸಿದ ಅರ್ಹತೆ, ಷರತ್ತುಗಳು, ಕಾಮಗಾರಿ ವಿವರ ಇತ್ಯಾದಿಗಳನ್ನು **ದಿ:30/12/2023** ರ ಸಂಜೆ 4.00 ಗಂಟೆಯವರಗೆ ವಿಭಾಗ, ಕಛೇರಿಯಲ್ಲಿ ಅಥವಾ "ಇ-ಪ್ರೋಕ್ಯೂರಮೆಂಟ್" ಹೆಲ್ಪ್ ಡೆಸ್ಕನಿಂದ ಪಡೆಯಬಹುದು. ಇನ್ನೂ ಹೆಚ್ಚಿನ ಮಾಹಿತಿಗಾಗಿ ಈ ವಿಭಾಗ ಕಛೇರಿ ಸಮಯದಲ್ಲಿ ಭೇಟಿ ನೀಡಿ ಮಾಹಿತಿಯನ್ನು ಪಡೆಯ ಬಹುದು.
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಕುನೀ&ನೈ. ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/629/ಕೆಎಸ್‌ಎಂಸಿಎ/2023-24

ಅಲ್ಪಸಂಖ್ಯಾತರ ನಿರ್ದೇಶನಾಲಯ
ನಂ.16ಸಿ, ಮೌಲಾನಾ ಅಬ್ದುಲ್ ಕಲಾಂ ಅಜಾದ್ ಭವನ,
ಮಿಲ್ಲರ್ ಟ್ಯಾಂಕ್ ರಸ್ತೆ, ವಸಂತನಗರ, ಬೆಂಗಳೂರು-560052.
2023-24ನೇ ಸಾಲಿನ ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ Basic & Advanced Courses ಕುರಿತಾದ ತರಬೇತಿಗಾಗಿ ರಾಮನಗರ, ಬೆಳಗಾವಿ, ದಾವಣಗೆರೆ, ಕಲಬುರಗಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ ಪ್ರಕಟಣೆ.
ಆನ್‌ಲೈನ್ ಅಪ್ಲಿಕೇಶನ್
2023-24ನೇ ಸಾಲಿನ ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ Basic & Advanced Courses ಕುರಿತಾದ ತರಬೇತಿಗಾಗಿ ರಾಮನಗರ, ಬೆಳಗಾವಿ, ದಾವಣಗೆರೆ, ಕಲಬುರಗಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಅಲ್ಪಸಂಖ್ಯಾತರ ಸಮುದಾಯದ ಅಭ್ಯರ್ಥಿಗಳಿಂದ ತರಬೇತಿಗಾಗಿ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
ಅರ್ಹತೆಗಳು
1. ರಾಮನಗರ, ಬೆಳಗಾವಿ, ದಾವಣಗೆರೆ, ಕಲಬುರಗಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಅಭ್ಯರ್ಥಿಗಳಾಗಿರಬೇಕು.
2. ಅಲ್ಪಸಂಖ್ಯಾತರ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ ಮತ್ತು ಪಾರ್ಸಿ ಸಮುದಾಯದವರಾಗಿರಬೇಕು.
3. ತರಬೇತಿಗನುಸಾರ ನಿಗಧಿತ ವಿದ್ಯಾರ್ಹತೆ ಹೊಂದಿರಬೇಕು.
4. ಅಭ್ಯರ್ಥಿಯ ಕುಟುಂಬದ ವಾರ್ಷಿಕ ಆದಾಯವು ರೂ.8.00 ಲಕ್ಷಗಳು ಮೀರಿರಬಾರದು.
5. ತರಬೇತಿ ಕಾಲಾವಧಿಯು 60 ದಿನಗಳಾಗಿರುತ್ತದೆ.
6. ಅಭ್ಯರ್ಥಿಗಳಿಗೆ ಯಾವುದೇ ತರಹದ ಸ್ಟೈಫಂಡ್ ನೀಡಲಾಗುವುದಿಲ್ಲ.
ಕೊನೆಯ ದಿನಾಂಕ
ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05/01/2024.
ಅರ್ಜಿದಾರರಿಗೆ ಸೂಚನೆಗಳು
ಅರ್ಜಿದಾರರು https://dom.karnataka.gov.in ಈ ಲಿಂಕ್ ಮೂಲಕ "2023-24ನೇ ಸಾಲಿನ ಅಲ್ಪಸಂಖ್ಯಾತರ ಕೌಶಲ್ಯ ಅಭಿವೃದ್ಧಿ ಯೋಜನೆಯಡಿ Basic & Advanced Courses ಕುರಿತಾದ ತರಬೇತಿಗೆ ಅರ್ಜಿ" (ಕ್ಲಿಕ್ ಮಾಡಿ) ಮೂಲಕ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ.
ದಿನಾಂಕ: 22.12.2023 ಸಹಿ/-
ನಿರ್ದೇಶಕರು
ವಾಸಾಸಂಇ/ವಾಪ್ರ/2700/ಎಂಎಎ/2023-24 ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು

ನಗರಸಭಾ ಕಾರ್ಯಾಲಯ, ಮಂಡ್ಯ.
ಸಂಖ್ಯೆ:ನಸಮಂ/ಕಾಮಗಾರಿ ವಿಭಾಗ/ಟೆಂಡರ್-18/2023-24
ದಿನಾಂಕ: 18-12-2023
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
2023-24ನೇ ಸಾಲಿನ 15ನೇ ಹಣಕಾಸು ನಿಧಿ ಅಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು KTTP Act -1999 & 2000ರಂತೆ, ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ-ಪ್ರೊಕ್ಯೂರ್ಮೆಂಟ್‌ನಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ-ಪೋರ್ಟಲ್ ಮುಖಾಂತರ ಟೆಂಡರ್‌ನ್ನು KW-1, 2ರ ದಾಸ್ತಾವೇಜು ಮೂಲಕ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಟೆಂಡರ್‌ಗಳನ್ನು ನಿಗಧಿಪಡಿಸಿದ ಅವಧಿಯೊಳಗೆ ಸಲ್ಲಿಸತಕ್ಕದ್ದು. https://kppp.karnataka. gov.in ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 03.01.2024 ಅಪರಾಹ್ನ 4.30 ಗಂಟೆಯೊಳಗೆ ಸಲ್ಲಿಸುವುದು. (1) ಇಂಡೆಂಟ್ ಸಂಖ್ಯೆ : DMA/2023-24/WS/WORK_ INDENT10205, ಅಂದಾಜು ಮೊತ್ತ ರೂ. 33.60 ಲಕ್ಷ, ಇ.ಎಂ.ಡಿ. ಮೊತ್ತ ರೂ. 35,600/-, 3ನೇ ದರ್ಜೆ ಹಾಗೂ ಮೇಲ್ಪಟ್ಟ (ಸಿವಿಲ್), ಗುತ್ತಿಗೆದಾರರು ವರ್ಗ ಮೀಸಲು-ಎಸ್.ಟಿ., (2) ಇಂಡೆಂಟ್ ಸಂಖ್ಯೆ : DMA/2023-24/RD/WORK_ INDENT10207, ಅಂದಾಜು ಮೊತ್ತ ರೂ. 48.00 ಲಕ್ಷ, ಇ.ಎಂ.ಡಿ. ಮೊತ್ತ ರೂ. 81,200/-, 3ನೇ ದರ್ಜೆ ಹಾಗೂ ಮೇಲ್ಪಟ್ಟ (ಸಿವಿಲ್), ಗುತ್ತಿಗೆದಾರರು ವರ್ಗ ಮೀಸಲು-ಸಾಮಾನ್ಯ, (3) ಇಂಡೆಂಟ್ ಸಂಖ್ಯೆ : DMA/2023-24/RD/WORK_INDENT10208, ಅಂದಾಜು ಮೊತ್ತ ರೂ. 36.00 ಲಕ್ಷ, ಇ.ಎಂ.ಡಿ. ಮೊತ್ತ ರೂ. 60,900/-, 3ನೇ ದರ್ಜೆ ಹಾಗೂ ಮೇಲ್ಪಟ್ಟ (ಸಿವಿಲ್), ಗುತ್ತಿಗೆದಾರರು ವರ್ಗ ಮೀಸಲು-ಸಾಮಾನ್ಯ, (4) ಇಂಡೆಂಟ್ ಸಂಖ್ಯೆ : DMA/2023-24/RD/WORK_INDENT10209, ಅಂದಾಜು ಮೊತ್ತ ರೂ. 24.00 ಲಕ್ಷ, ಇ.ಎಂ.ಡಿ. ಮೊತ್ತ ರೂ. 25,400/-, 3ನೇ ದರ್ಜೆ ಹಾಗೂ ಮೇಲ್ಪಟ್ಟ (ಸಿವಿಲ್), ಗುತ್ತಿಗೆದಾರರು ವರ್ಗ ಮೀಸಲು-ಎಸ್.ಸಿ., (5) ಇಂಡೆಂಟ್ ಸಂಖ್ಯೆ : DMA/2023-24/RD/WORK_INDENT10210, ಅಂದಾಜು ಮೊತ್ತ ರೂ. 12.00 ಲಕ್ಷ, ಇ.ಎಂ.ಡಿ. ಮೊತ್ತ ರೂ. 12,200/-, 4ನೇ ದರ್ಜೆ ಹಾಗೂ ಮೇಲ್ಪಟ್ಟ (ಸಿವಿಲ್), ಗುತ್ತಿಗೆದಾರರು ವರ್ಗ ಮೀಸಲು-ಎಸ್.ಸಿ., (6) ಇಂಡೆಂಟ್ ಸಂಖ್ಯೆ : DMA/2023-24/OW/WORK_INDENT10211, ಅಂದಾಜು ಮೊತ್ತ ರೂ. 48.00 ಲಕ್ಷ, ಇ.ಎಂ.ಡಿ. ಮೊತ್ತ ರೂ. 81,300/, 4ನೇ ದರ್ಜೆ ಹಾಗೂ ಮೇಲ್ಪಟ್ಟ (ಸಿವಿಲ್), ಗುತ್ತಿಗೆದಾರರು ವರ್ಗ ಮೀಸಲು-ಸಾಮಾನ್ಯ ಕಾಮಗಾರಿಯ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಕಛೇರಿಯ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ www.mandyacity.mrc.gov.in ನಲ್ಲಿ ಪಡೆಯಬಹುದು.
ಸಹಿ/-ಪೌರಾಯುಕ್ತರು, ನಗರಸಭೆ, ಮಂಡ್ಯ.
ವಾಸಾಸಂಇ/ಸನಿ-ಮಂ/ಕೆಎಸ್‌ಎಂಸಿ&ಎ/385/2023-24

ಬೆಂಗಳೂರಿನ ಅಂದ್ರಹಳ್ಳಿ ಸರ್ಕಾರಿ ಶಾಲೆಯಲ್ಲಿ ಘಟನೆ • ಪೋಷಕರ ಪ್ರತಿಭಟನೆ • ಮುಖ್ಯ ಶಿಕ್ಷಕಿ ಅಮಾನತು

ಮಕ್ಕಳಿಂದ ಮತ್ತೆ ಶೌಚಾಲಯ ಸ್ವಚ್ಛತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂದ್ರಹಳ್ಳಿ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಶೌಚಾಲಯವನ್ನು ಇಬ್ಬರು ಮಕ್ಕಳಿಂದ ಸ್ವಚ್ಛಗೊಳಿಸಿರುವ ಆರೋಪದ ಮೇಲೆ ಶಾಲೆಯ ಮುಖ್ಯ ಶಿಕ್ಷಕಿ ಟಿ. ಲಕ್ಷ್ಮಿದೇವಮ್ಮ ಅವರನ್ನು ಅಮಾನತು ಮಾಡಲಾಗಿದೆ.

ಬ್ಯಾಡರಹಳ್ಳಿ ಠಾಣೆ ವ್ಯಾಪ್ತಿಯಲ್ಲಿರುವ ಅಂದ್ರಹಳ್ಳಿಯ ಸರ್ಕಾರಿ ಶಾಲೆಯ ಶೌಚಾಲಯ ಗಲೀಜಾಗಿತ್ತು. ಕೆಲ ದಿನಗಳ ಹಿಂದೆಯಷ್ಟೇ ಇಬ್ಬರು ವಿದ್ಯಾರ್ಥಿಗಳು, ಶೌಚಾಲಯ ಸ್ವಚ್ಛಗೊಳಿಸುವ ಆ್ಯಸಿಡ್ ಹಾಕಿ ಪೊರಕೆ ಹಿಡಿದು ಸ್ವಚ್ಛಗೊಳಿಸಿದ್ದರು. ಇದೇ ಸಂದರ್ಭದಲ್ಲಿ ಶೌಚಾಲಯಕ್ಕೆ ಬಂದಿದ್ದ ಇಬ್ಬರು ಸ್ಥಳೀಯರು, ಮೊಬೈಲ್ ಕ್ಯಾಮೆರಾದಲ್ಲಿ ವಿಡಿಯೊ ಚಿತ್ರೀಕರಿಸಿದ್ದರು.

ಮಕ್ಕಳಿಂದ ಶೌಚಾಲಯ ಸ್ವಚ್ಛಗೊಳಿಸಿದ್ದ ಮುಖ್ಯ ಶಿಕ್ಷಕಿ ಹಾಗೂ ಶಿಕ್ಷಕರ ವಿರುದ್ಧ ಪೋಷಕರು ಆಕ್ರೋಶ ವ್ಯಕ್ತಪಡಿಸಿದ್ದರು.

ಈ ಬಗ್ಗೆ ಮಾಹಿತಿ ಗೊತ್ತಾಗುತ್ತಿದ್ದಂತೆಯೇ ಶಾಲೆಗೆ ಭೇಟಿ ನೀಡಿದ ಉತ್ತರ ವಲಯ–01ರ ಕ್ಷೇತ್ರ ಶಿಕ್ಷಣಾಧಿಕಾರಿ ಕೆ.ಜಿ. ಆಂಜನಪ್ಪ ಅವರು ವಿದ್ಯಾರ್ಥಿಗಳು ಹಾಗೂ ಇತರರ ಹೇಳಿಕೆ ದಾಖಲಿಸಿಕೊಂಡು, ಉಪ ನಿರ್ದೇಶಕರಿಗೆ ವರದಿ ಸಲ್ಲಿಸಿದ್ದರು. ವರದಿ ಪರಿಗಣಿಸಿದ ಉತ್ತರ ಜಿಲ್ಲೆಯ ಉಪನಿರ್ದೇಶಕ ಲೋಹಿತಾಶ್ವ ರೆಡ್ಡಿ ಅವರು, ಲಕ್ಷ್ಮಿದೇವಮ್ಮ ಅವರನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

ಸಭೆಯಲ್ಲಿ ಪ್ರಸ್ತಾಪ: 'ಇಲಾಖೆ ಪ್ರಗತಿ ಪರಿಶೀಲನೆ ಸಂಬಂಧ ಕಚೇರಿಯಲ್ಲಿ ಸಭೆ ನಡೆಸಲಾಗುತ್ತಿತ್ತು. ಇದೇ ಸಂದರ್ಭದಲ್ಲಿ ಸಭೆಗೆ ಬಂದಿದ್ದ ಸ್ಥಳೀಯರೊಬ್ಬರು, ಮಕ್ಕಳು ಶೌಚಾಲಯ ಸ್ವಚ್ಛಗೊಳಿಸಿದ್ದ ವಿಡಿಯೊ ತೋರಿಸಿದ್ದರು. ಇಂಥ ಘಟನೆಗಳು ಪದೇ ಪದೇ ನಡೆಯುತ್ತಿರುವುದಾಗಿ ದೂರಿದ್ದರು. ಸಭೆಯನ್ನು ಅರ್ಧಕ್ಕೆ ಮೊಟಕುಗೊಳಿಸಿ ಶಾಲೆಗೆ ಭೇಟಿ ನೀಡಿದೆ' ಎಂದು ಶಿಕ್ಷಣಾಧಿಕಾರಿ ಕೆ.ಜಿ. ಆಂಜನಪ್ಪ ತಿಳಿಸಿದರು.

'ಸ್ಥಳೀಯ ಸಂಘಟನೆಗಳ ಪದಾಧಿಕಾರಿಗಳ ಜೊತೆ ಪೋಷಕರು ಪ್ರತಿಭಟನೆ ನಡೆಸುತ್ತಿದ್ದರು. ಎಲ್ಲರ ಅಹವಾಲು ಆಲಿಸಿದೆ. ಶೌಚಾಲಯ ಸ್ವಚ್ಛಗೊಳಿಸಿದ್ದ ಇಬ್ಬರು ಮಕ್ಕಳ ಪೈಕಿ, ಒಬ್ಬನನ್ನು ಮಾತನಾಡಿಸಿ ಮಾಹಿತಿ ಪಡೆದಿದ್ದೇನೆ. ಇನ್ನೊಬ್ಬ ವಿದ್ಯಾರ್ಥಿ, ಶಾಲೆಗೆ ಗೈರಾಗಿದ್ದಾನೆ. ಆತನನ್ನೂ ಮಾತನಾಡಿಸುವೆ' ಎಂದು ಹೇಳಿದರು.

ಹಲವು ವರ್ಷಗಳ ಸ್ಥಿತಿ: 'ಅಂದ್ರಹಳ್ಳಿ ಸರ್ಕಾರಿ ಶಾಲೆಯ ಬಗ್ಗೆ ಎಲ್ಲರೂ ನಿರ್ಲಕ್ಷ್ಯ ವಹಿಸಿದ್ದಾರೆ. ಶೌಚಾಲಯ ಸ್ಥಿತಿ ತುಂಬಾ ಹದಗೆಟ್ಟಿದೆ. ಇಂಥ ಶೌಚಾಲಯವನ್ನು ವಿದ್ಯಾರ್ಥಿಗಳಿಂದಲೇ ಪದೇ ಪದೇ ಸ್ವಚ್ಛಗೊಳಿಸಲಾಗುತ್ತಿದೆ' ಎಂದು ಪೋಷಕರು ಆಕ್ರೋಶ ವ್ಯಕ್ತಪಡಿಸಿದರು.

ಮಕ್ಕಳಿಂದ ಶಾಲೆಯ ಶೌಚಾಲಯ ಸ್ವಚ್ಛಗೊಳಿಸಿರುವುದನ್ನು ಖಂಡಿಸಿ ಅಂದ್ರಹಳ್ಳಿಯ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯ ಮುಂದೆ ವಿದ್ಯಾರ್ಥಿಗಳ ಪೋಷಕರು ಪ್ರತಿಭಟಿಸಿದರು (ಎಡಚಿತ್ರ) ಶಾಲೆಯ ಶೌಚಾಲಯವೊಂದನ್ನು ಬಾಲಕ ಸ್ವಚ್ಛಗೊಳಿಸಿದ ದೃಶ್ಯ

'ಮುಖ್ಯ ಶಿಕ್ಷಕಿ ವಿರುದ್ಧ ಎಫ್‌ಐಆರ್'

ಮಕ್ಕಳಿಂದ ಶೌಚಾಲಯ ಸ್ವಚ್ಛಗೊಳಿಸಿದ ಆರೋಪದಡಿ ಶಾಲೆಯ ಮುಖ್ಯ ಶಿಕ್ಷಕಿ ಲಕ್ಷ್ಮಿದೇವಮ್ಮ ವಿರುದ್ಧ ಬ್ಯಾಡರಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಘಟನೆ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿ ಆಂಜನಪ್ಪ ದೂರು ನೀಡಿದ್ದಾರೆ. ಅದರನ್ವಯ ಮುಖ್ಯಶಿಕ್ಷಕಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪುರಾವೆಗಳನ್ನು ಸಂಗ್ರಹಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಶಾಲೆಗೆ ಬಂದಾಗಿನಿಂದ ಕೆಲವರ ಗಲಾಟೆ'

'ಶಾಲೆಯಲ್ಲಿ 643 ಮಕ್ಕಳಿದ್ದಾರೆ. ಶೌಚಾಲಯ ಸ್ವಚ್ಛಗೊಳಿಸಲು ಪ್ರತ್ಯೇಕ ಸಿಬ್ಬಂದಿ ಇದ್ದಾರೆ. ಮಕ್ಕಳಿಗೆ ಶೌಚಾಲಯ ಸ್ವಚ್ಛಗೊಳಿಸುವಂತೆ ನಾನು ಹೇಳಿಲ್ಲ. ಅಂದು ನಾನು ರಜೆ ಮೇಲಿದ್ದೆ' ಎಂದು ಮುಖ್ಯ ಶಿಕ್ಷಕಿ ಲಕ್ಷ್ಮಿದೇವಮ್ಮ ಸುದ್ದಿಗಾರರಿಗೆ ತಿಳಿಸಿದರು.

'ವಿಡಿಯೊ ನೋಡಿದಾಗಲೇ ನನಗೂ ವಿಷಯ ಗೊತ್ತಾಗಿದೆ. ನಾನು ಮುಖ್ಯ ಶಿಕ್ಷಕಿಯಾಗಿ ಶಾಲೆಗೆ ಬಂದಾಗಿನಿಂದಲೂ ಕೆಲವರು ಸುಖಾಸುಮ್ಮನೇ ಬಂದು ಗಲಾಟೆ ಮಾಡುತ್ತಿದ್ದಾರೆ' ಎಂದು ಅವರು ದೂರಿದರು.

ಆಡಳಿತ ಯಂತ್ರ ಕುಸಿದಿದೆ: ಅಶೋಕ ಕಿಡಿ

ರಾಜ್ಯದಲ್ಲಿ ಆಡಳಿತ ಯಂತ್ರ ಸಂಪೂರ್ಣ ಕುಸಿದಿರುವುದರ ಪರಿಣಾಮ ಮಾಲೂರಿನ ಬಳಿಕ ಅಂದ್ರಹಳ್ಳಿಯಲ್ಲಿ ಶಾಲಾ ಮಕ್ಕಳಿಂದಲೇ ಶೌಚಾಲಯವನ್ನು ಸ್ವಚ್ಛ ಮಾಡಿಸಿರುವ ಘಟನೆ ಮರುಕಳಿಸಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು.

ಅಂದ್ರಹಳ್ಳಿ ಸರ್ಕಾರಿ ಶಾಲೆಗೆ ಭೇಟಿ ನೀಡಿ, ಪರಿಶೀಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ಮಾಲೂರಿನ ಪ್ರಕರಣದ ಕಹಿ ನೆನಪು ಮಾಸುವುದಕ್ಕೂ ಮೊದಲೇ ವಿಧಾನಸೌಧದ ಕೂಗಳತೆ ದೂರದಲ್ಲಿರುವ ಶಾಲೆಯಲ್ಲೇ ಅದೇ ರೀತಿಯ ಘಟನೆ ಮರುಕಳಿಸಿದೆ. ಇದು ದುರದೃಷ್ಟಕರ ಎಂದರು.

ಹಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಕಾನೂನಿನ ಅರಿವು ಇಲ್ಲದಂತೆ ವರ್ತಿಸುತ್ತಿದ್ದಾರೆ. ಇಲಾಖೆ ಮುಖ್ಯಸ್ಥರು ಸರಿ ಇದ್ದರೆ ಇಡೀ ಇಲಾಖೆಯ ವ್ಯವಸ್ಥೆ ಸರಿ ಇರುತ್ತದೆ. ಈಗಾಗಲೇ ಒಂದು ಘಟನೆ ನಡೆದಿರುವ ಬೆನ್ನಲ್ಲೇ ಮತ್ತೆ ಮಕ್ಕಳ ಕೈಯಲ್ಲೇ ಶೌಚಾಲಯ ಸ್ವಚ್ಛಗೊಳಿಸಲಾಗುತ್ತಿದೆ ಎಂದರೆ ಏನರ್ಥ? ಈ ಸರ್ಕಾರ ಜನತೆಯ ಪಾಲಿಗೆ ಸತ್ತಂತಿದೆ. ಆದ್ದರಿಂದಲೇ ಇಂಥ ಪ್ರಕರಣಗಳು ಮರುಕಳಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗಮನಕ್ಕೆ ಬಂದಿಲ್ಲ: ಎಚ್‌ಸಿಎಂ

ಮೈಸೂರು: 'ಬೆಂಗಳೂರಿನ ಯಶವಂತಪುರದ ಅಂದ್ರಹಳ್ಳಿಯ ಸರ್ಕಾರಿ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛಗೊಳಿಸಿದ ವಿಷಯ ಗಮನಕ್ಕೆ ಬಂದಿಲ್ಲ' ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ಶಾಲೆ ಅಥವಾ ಹಾಸ್ಟೆಲ್ ಹಂತದಲ್ಲಿ ಏನಾಗಿದೆ ಎಂಬುದು ಗೊತ್ತಾಗುವುದಿಲ್ಲ. ಎಲ್ಲವನ್ನೂ ಗಮನಿಸುವುದಕ್ಕಾಗಿಯೇ ವಿಚಕ್ಷಣ ದಳ ರಚಿಸಲು ಸೂಚಿಸಿರುವೆ' ಎಂದರು.

'ಅಲ್ಲೊಂದು, ಇಲ್ಲೊಂದು ಘಟನೆ ನಡೆಯುತ್ತದೆ. ಇಂಥವು ಸಾಮಾನ್ಯವಾಗಿ ಹೋಗಿವೆ ಎನ್ನುವುದು ಬೇಡ. ನಾವು ಯಾರನ್ನೂ ರಕ್ಷಿಸುವುದಿಲ್ಲ' ಎಂದರು.

ಸುದ್ದಿ 2 ನಿಮಿಷ

ಕಾವೇರಿ ನೀರು ಕುಡಿಯಲು ಮೀಸಲು: ಚಲುವರಾಯಸ್ವಾಮಿ

ಮಂಡ್ಯ: 'ಕೆಆರ್‌ಎಸ್‌ನಲ್ಲಿ ಸದ್ಯ ಸಂಗ್ರಹವಿರುವ ನೀರನ್ನು ಕುಡಿಯುವುದಕ್ಕೆ ಮೀಸಲಿಟ್ಟಿದ್ದು, ಬೇಸಿಗೆಯಲ್ಲಿ ಬೆಳೆಗೆ ಹರಿಸದಿರಲು ತೀರ್ಮಾನಿಸಲಾಗಿದೆ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಜಲಾಶಯದ ಕಾವೇರಿ ಸಭಾಂಗಣದಲ್ಲಿ ಶುಕ್ರವಾರ ಕಾವೇರಿ ನೀರಾವರಿ ಸಲಹಾ ಸಮಿತಿ ಸಭೆಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, 'ಜಲಾಶಯದಲ್ಲಿ 16 ಟಿಎಂಸಿ ಅಡಿ ನೀರಿನ ಸಂಗ್ರಹವಿದೆ. ಅದರಲ್ಲಿ ಬೇಸಿಗೆಯಲ್ಲಿ 2-3 ಟಿಎಂಸಿ ನೀರು ಆವಿಯಾಗುವ ಸಾಧ್ಯತೆ ಇದೆ. ಇನ್ನು 13 ಟಿಎಂಸಿ ಅಷ್ಟೇ ಬಳಕೆಗೆ ಸಿಗಲಿದೆ' ಎಂದರು.

'ಜಲಾಶಯದಿಂದ ಬೆಂಗಳೂರು, ಮೈಸೂರು, ಮಂಡ್ಯ ಸೇರಿದಂತೆ ವಿವಿಧ ಜಿಲ್ಲೆಗಳಿಗೆ ತಿಂಗಳಿಗೆ 2.1 ಟಿಎಂಸಿ ನೀರು ಪೂರೈಕೆಯಾಗುತ್ತಿದೆ. ಜೂನ್‌ವರೆಗೆ ಕುಡಿಯುವ ನೀರಿಗೆಂದೇ 16 ಟಿಎಂಸಿ ನೀರು ಬೇಕು. ಮಳೆಯಾಗದಿದ್ದರೆ ಕಡೆಯ ಎರಡು ತಿಂಗಳು ಕುಡಿಯುವ ನೀರಿಗೆ ಕೊರತೆಯಾಗಬಹುದು' ಎಂದರು.

ಸೂರಪ್ಪ ಗೊತ್ತಿಲ್ಲವೆಂದಿದ್ದ ಮನೋರಂಜನ್ ಪೋಷಕರು!

ಮೈಸೂರು: ಸಂಸತ್ತಿನಲ್ಲಿ ಭದ್ರತಾ ಲೋಪ ಪ್ರಕರಣದ ಆರೋಪಿ ಡಿ.ಮನೋರಂಜನ್‌ಗೆ ಹಣ ವರ್ಗಾವಣೆ ಮಾಡಿದ್ದ ಸ್ನೇಹಿತ ಸೂರಪ್ಪ ಅವರ ವಿಚಾರಣೆ ನಡೆಸುತ್ತಿರುವ ದೆಹಲಿ ಪೊಲೀಸರಿಗೆ, 'ಆತ ಯಾರೆಂಬುದೇ ಗೊತ್ತಿಲ್ಲ' ಎಂದು ಆರೋಪಿಯ ಪೋಷಕರು ಹೇಳಿದ್ದರು!

'ಹಣ ವರ್ಗಾವಣೆ ಹಾಗೂ ಮೊಬೈಲ್ ಸಂಭಾಷಣೆ ಬಗ್ಗೆ ಕೇಳಿದಾಗಷ್ಟೇ, ಆತನ ಪರಿಚಯವಿತ್ತೆಂದು ಒಪ್ಪಿಕೊಂಡಿದ್ದರು. ಸೂರಪ್ಪ ಮೂಲಕ ಮತ್ತೊಬ್ಬ ಸ್ನೇಹಿತನ ಬಗ್ಗೆಯೂ ಮಾಹಿತಿ ಪಡೆದು ವಿಚಾರಣೆಗೊಳಪಡಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ. ಸೂರಪ್ಪ ಅವರನ್ನು ಪೊಲೀಸರು ಶುಕ್ರವಾರ ಸತತ 12 ಗಂಟೆ ಕಾಲ ವಿಚಾರಣೆಗೆ ಒಳಪಡಿಸಿದರು.

'ಪ್ರಾಂಶುಪಾಲರನ್ನೇ ಮಲದ ಗುಂಡಿಗೆ ಇಳಿಸಬೇಕಿತ್ತು'

ಪ್ರಜಾವಾಣಿ ವಾರ್ತೆ

ಕೋಲಾರ: 'ಪ್ರಾಂಶುಪಾಲರನ್ನೇ ಮಲದ ಗುಂಡಿಗೆ ಇಳಿಸಬೇಕಿತ್ತು. ಅವರೇನಾದರೂ ಇಲ್ಲಿ ಇದ್ದಿದ್ದರೆ ನಾನೇ ಅವರನ್ನು ಒಳಗೆ ಇಳಿಸುತ್ತಿದ್ದೆ. ದಲಿತ ಮಕ್ಕಳ ಕೈಯಲ್ಲಿ ಇಂಥ ಕೆಲಸ ಮಾಡಿಸಿದವರಿಗೆ ಸ್ವಲ್ಪವೂ ನಾಚಿಕೆ, ಮಾನ ಮರ್ಯಾದೇ ಇಲ್ಲವೇ?'

– ಮಾಲೂರು ತಾಲ್ಲೂಕಿನ ಯಲುವಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಶುಕ್ರವಾರ ಭೇಟಿ ನೀಡಿದ್ದ ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗದ ಸದಸ್ಯೆ, ಮಾಜಿ ಸಂಸದೆ ಅಂಜು ಬಾಲಾ, ಮಕ್ಕಳನ್ನು ಮಲದ ಗುಂಡಿಗೆ ಇಳಿಸಿ ಸ್ವಚ್ಛಗೊಳಿಸಿದ ಶಾಲೆಯ ಸಿಬ್ಬಂದಿಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ರೀತಿ ಇದು.

ಗುಂಡಿಯಲ್ಲಿ ಅಪಾಯಕಾರಿ ಅನಿಲ ಇರುತ್ತದೆ. ಸ್ವಲ್ಪ ಹೆಚ್ಚು ಕಡಿಮೆ ಆಗಿದ್ದರೆ ಮಕ್ಕಳ ಜೀವಕ್ಕೆ ಕುತ್ತು ಬರುತಿತ್ತು. ಇದೊಂದು ಅಮಾನವೀಯ ಘಟನೆ ಎಂದು ಅವರು ಹೇಳಿದರು.

ಆರೋಪಿಗಳ ವಿರುದ್ಧ ತಕ್ಷಣ ಕೊಲೆ ಯತ್ನ ಪ್ರಕರಣ (ಐಪಿಸಿ 307) ದಾಖಲಿಸುವಂತೆ ಸ್ಥಳದಲ್ಲಿದ್ದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಸೂಚನೆ ನೀಡಿದರು. ತಲೆಮರೆಸಿಕೊಂಡಿರುವ ಇನ್ನುಳಿದ ಮೂವರು ಆರೋಪಿಗಳನ್ನು 48 ಗಂಟೆಯಲ್ಲಿ ಬಂಧಿಸುವಂತೆ ತಾಕೀತು ಮಾಡಿದರು.

ಮಾಲೂರು ತಾಲ್ಲೂಕಿನ ಯಲುವಹಳ್ಳಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗದ ಸದಸ್ಯೆ ಅಂಜು ಬಾಲಾ ಶುಕ್ರವಾರ ಭೇಟಿ ನೀಡಿ ಮಲದ ಗುಂಡಿ ಪರಿಶೀಲಿಸಿದರು. ಸುನಿಲ್ ಬಾಬು, ಅಕ್ರಂ ಪಾಷ, ಎಂ.ನಾರಾಯಣ, ನವೀನ್ ಕುಮಾರ್ ರಾಜು ಜೊತೆಗಿದ್ದರು

ಬೆಂಗಳೂರಿನ ಶಾಲೆಯೊಂದರಲ್ಲಿ ಮಕ್ಕಳಿಂದ ಶೌಚಾಲಯ ಸ್ವಚ್ಛಗೊಳಿಸಿರುವ ಪ್ರಕರಣವನ್ನು ಪರಿಶೀಲಿಸಿ ಮಾಹಿತಿ ನೀಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರಿಗಳು ಶಾಲೆಗಳಿಗೆ ಆಗಾಗ್ಗೆ ಭೇಟಿ ನೀಡಿ ಪರಿಶೀಲಿಸಿದರೆ ಇಂಥ ಘಟನೆ ನಡೆಯಲ್ಲ. ವಿದ್ಯಾರ್ಥಿಗಳ ಪೋಷಕರು 15 ದಿನಗಳಿಗೆ ಒಮ್ಮೆಯಾದರು ಶಾಲೆಗೆ ಭೇಟಿ ನೀಡಿ ಮಾಹಿತಿ ಪಡೆದರೆ ಉತ್ತಮ. ಶಾಲೆಯಲ್ಲಿ ಅಂಬೇಡ್ಕರ್ ಫೋಟೊ ಹಾಕುವಂತೆ ಅವರು ಸೂಚಿಸಿದರು.

'ಹೊರಗುತ್ತಿಗೆ ನೌಕರರ ವಿರುದ್ಧ ಅಲ್ಲ; ಕಾಯಂ ನೌಕರರ ವಿರುದ್ಧ ಕೊಲೆ ಯತ್ನ ಪ್ರಕರಣ ದಾಖಲಿಸಬೇಕು. ಕೆಲಸದಿಂದ ವಜಾ ಮಾಡಿ' ಎಂದು ಜೊತೆಯಲ್ಲಿದ್ದ ಆಯೋಗದ ನಿರ್ದೇಶಕ ಸುನಿಲ್ ಬಾಬು ನಿರ್ದೇಶನ ನೀಡಿದರು.

ಮಕ್ಕಳ ಜೊತೆ ಮುದ್ದೆ ಊಟ: ವಸತಿ ಶಾಲೆಯ ಆವರಣದಲ್ಲಿರುವ ಮಲದ ಗುಂಡಿ ವೀಕ್ಷಿಸಿದ ತಂಡ, ಮೊದಲು ಅಧಿಕಾರಿಗಳಿಂದ ಮಾಹಿತಿ ಪಡೆಯಿತು. ಯಾವುದೇ ವಿಚಾರವನ್ನು ಮುಚ್ಚಿಡದೆ ವಿವರಿಸುವಂತೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ನಂತರ ಮಕ್ಕಳನ್ನು ಕರೆದು ಸಮಸ್ಯೆ ಆಲಿಸಿದರು.

ಭೋಜನ ಕೊಠಡಿಗೆ ಭೇಟಿ ನೀಡಿದ ತಂಡ ವಿದ್ಯಾರ್ಥಿಗಳ ಜೊತೆ ಕುಳಿತು ಮುದ್ದೆ ಊಟ ಮಾಡಿತು. ಎಲೆಯಲ್ಲಿ ಬಡಿಸಲು ಹೋದಾಗ ಮಕ್ಕಳಿಗೆ ನೀಡುವ ತಟ್ಟೆಯನ್ನೇ ತಮಗೂ ನೀಡಿ ಎಂದು ಕೇಳಿ ಪಡೆದರು. ವಿದ್ಯಾರ್ಥಿನಿಯೊಬ್ಬಳಿಗೆ ಅಂಜು ಬಾಲಾ ತುತ್ತು ತಿನ್ನಿಸಿದರು.

ಜಿಲ್ಲಾಧಿಕಾರಿ ಅಕ್ರಂ ಪಾಷ, ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯದ ಎಸ್‌ಪಿ ಎಚ್.ಡಿ.ಆನಂದ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ನಾರಾಯಣ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ (ಕ್ರೈಸ್) ಕಾರ್ಯನಿರ್ವಾಹಕ ನಿರ್ದೇಶಕ ನವೀನ್ ಕುಮಾರ್ ರಾಜ್, ಸದಸ್ಯರ ಆಪ್ತ ಕಾರ್ಯದರ್ಶಿ ಬಿ.ಕೆ.ಭೋಲಾ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಇದ್ದರು.

'ದಲಿತರ ಶೋಷಣೆ ಇನ್ನೂ ನಿಂತಿಲ್ಲ'

'ಮಾಧ್ಯಮಗಳಿಲ್ಲದಿದ್ದರೆ ಈ ಪ್ರಕರಣ ಹೊರಬರುತ್ತಿರಲಿಲ್ಲ. ಹೀಗಾಗಿ, ನಾನು ಮೊದಲು ಮಾಧ್ಯಮಗಳನ್ನು ಅಭಿನಂದಿಸುತ್ತೇನೆ' ಎಂದು ಅಂಜು ಬಾಲಾ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದಲಿತರ ಮೇಲೆ ನಡೆಯುತ್ತಿರುವ ಶೋಷಣೆ ಇನ್ನೂ ನಿಂತಿಲ್ಲ. ಇಂಥ ಘಟನೆ ನಡೆಯದಂತೆ ಎಲ್ಲಾ ಹಂತಗಳಲ್ಲಿ ಜಾಗೃತಿ ಮೂಡಿಸುವುದು ಅತ್ಯಗತ್ಯ. ಇಲ್ಲಿ ಕೈಗೊಂಡ ಕ್ರಮ ಮತ್ತೊಂದು ಶಾಲೆಯಲ್ಲಿ ಸಂಭವಿಸಬಹುದಾದ ಅನಾಹುತ ತಡೆಯುತ್ತದೆ' ಎಂದರು.

'ಪದೇ ಪದೇ ಇಂಥ ಘಟನೆ ನಡೆದರೆ ಸರ್ಕಾರದ ವೈಫಲ್ಯವೆಂದೂ, ಅಧಿಕಾರಿಗಳ ಮೇಲೆ ಹಿಡಿತವಿಲ್ಲವೆಂದೂ ಭಾವಿಸಬೇಕಾಗುತ್ತದೆ. ಸರ್ಕಾರ ಬದಲಾದಂತೆ ಅವರ ಮನಸ್ಥಿತಿಯೂ ಬದಲಾಗಿದೆ. ರಾಜ್ಯ ಸರ್ಕಾರ ಕೂಡಲೇ ಎಚ್ಚೆತ್ತುಕೊಳ್ಳಬೇಕು. ಯಾವುದೇ ಸರ್ಕಾರವಿರಲಿ; ಯಾರ ಮುಲಾಜಿನಲ್ಲೂ ಆಯೋಗ ಇಲ್ಲ' ಎಂದು ಸ್ಪಷ್ಟಪಡಿಸಿದರು.

> ದಲಿತ ಮಕ್ಕಳ ಬಗ್ಗೆ ಭೇದಭಾವ ಮಾಡುತ್ತಿರುವ ಬಗ್ಗೆಯೂ ದೂರುಗಳು ಬಂದಿದ್ದು, ಏಳು ದಿನದಲ್ಲಿ ಪ್ರಕರಣಕ್ಕೆ ಸಂಬಂಧಿಸಿದಂತೆ ಕೈಗೊಂಡ ಕ್ರಮಗಳ ಬಗ್ಗೆ ವರದಿ ನೀಡಲು ಸೂಚಿಸಿದ್ದೇನೆ
>
> **ಅಂಜು ಬಾಲಾ**
> ಸದಸ್ಯೆ, ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ

ದತ್ತ ಜಯಂತಿ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ವಿಶ್ವಹಿಂದೂ ಪರಿಷತ್ ಮತ್ತು ಬಜರಂಗದಳದ ವತಿಯಿಂದ ಇದೇ 24ರಿಂದ ಮೂರು ದಿನ ನಡೆಯಲಿರುವ ದತ್ತ ಜಯಂತಿಯಲ್ಲಿ ಶಾಂತಿ–ಸೌಹಾರ್ದ ಕಾಪಾಡಲು ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದೆ.

ಡಿ.24ರಂದು ಅನುಸೂಯ ಜಯಂತಿ, 25ರಂದು ಚಿಕ್ಕಮಗಳೂರು ನಗರದಲ್ಲಿ ಶೋಭಾಯಾತ್ರೆ, 26ರಂದು ಶ್ರೀಗುರು ಇನಾಂ ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾದಲ್ಲಿ ಮಾಲಾಧಾರಿಗಳು ದತ್ತ ಪಾದುಕೆ ದರ್ಶನ ಮಾಡಲಿದ್ದಾರೆ.

30 ಸಾವಿರ ಭಕ್ತರು ಸೇರುವ ನಿರೀಕ್ಷೆ ಇದ್ದು, ಭದ್ರತೆಗೆ 4 ಸಾವಿರಕ್ಕೂ ಹೆಚ್ಚು ಪೊಲೀಸರನ್ನು ನಿಯೋಜನೆ ಮಾಡಲಾಗಿದೆ.

ಮುಳ್ಳಯ್ಯನಗಿರಿ ಮತ್ತು ಸುತ್ತಮುತ್ತಲ ಪ್ರವಾಸಿ ತಾಣಕ್ಕೆ ಭೇಟಿ ನೀಡುವ ಬೇರೆ ಪ್ರವಾಸಿಗರು ದಿನಾಂಕ ಮುಂದೂಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಮನವಿ ಮಾಡಿದ್ದಾರೆ.

ಶೋಭಾಯಾತ್ರೆ, ಪಾದುಕೆ ದರ್ಶನದ ದಿನ ಹಲವು ರಸ್ತೆಗಳಲ್ಲಿ ಸಂಚಾರ ಬಂದ್ ಆಗಲಿದ್ದು, ಪ್ರವಾಸಿಗರು ದಟ್ಟಣೆಯಲ್ಲಿ ಸಿಲುಕಿ ತೊಂದರೆ ಅನುಭವಿಸುವುದು ಬೇಡ ಎಂಬ ಕಾರಣಕ್ಕೆ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ನಾಗೇನಹಳ್ಳಿಯಲ್ಲೂ ದತ್ತ ಜಯಂತಿ ಆಚರಣೆಗೆ ಶ್ರೀರಾಮ ಸೇನೆ ಸಜ್ಜು

ಚಿಕ್ಕಮಗಳೂರು: ಶ್ರೀಗುರು ಇನಾಂ ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾದಲ್ಲಿ ದತ್ತ ಜಯಂತಿ ಆಚರಣೆ ಜತೆಗೆ ಗೋರಿಗಳಿರುವ ನಾಗೇನಹಳ್ಳಿಯಲ್ಲೂ ಆಚರಣೆಗೆ ಶ್ರೀರಾಮ ಸೇನೆ ಮುಂದಾಗಿದೆ.

'ದತ್ತಪೀಠದಲ್ಲಿ ಸೌಹಾರ್ದತೆ ಕಾರಣಕ್ಕೆ ಉರುಸ್ ಆಚರಣೆಗೆ ಅವಕಾಶ ನೀಡಲಾಗಿದೆ. ಬಾಬಾಬುಡನ್ ಅವರ ಗೋರಿ ಇರುವ ನಾಗೇನಹಳ್ಳಿಯಲ್ಲಿ ಅವರ ಗುರುಗಳಾದ ದತ್ತಾತ್ರೇಯರ ಜಯಂತಿಯನ್ನು ಆಚರಣೆ ಮಾಡಬಾರದೇಕೆ' ಎಂದು ಶ್ರೀರಾಮ ಸೇನೆ ರಾಜ್ಯ ಘಟಕದ ಅಧ್ಯಕ್ಷ ಗಂಗಾಧರ ಕುಲಕರ್ಣಿ ಪ್ರಶ್ನಿಸಿದರು.

ಈ ಕುರಿತು ಅವರು ನೀಡಿರುವ ಹೇಳಿಕೆಯ ವಿಡಿಯೊವನ್ನು ಶ್ರೀರಾಮ ಸೇನೆ ಮಾಧ್ಯಮಗಳಿಗೆ ಬಿಡುಗಡೆ ಮಾಡಿದೆ.

'ಇದೇ 26ರಂದು ನಾಗೇನಹಳ್ಳಿಯಲ್ಲಿ ಸೌಹಾರ್ದತೆಯ ಸಂಕೇತವಾಗಿ ಜಯಂತಿ ಆಚರಿಸಲಾಗುವುದು. ಅದಕ್ಕೆ ಅನುಮತಿ ಕೋರಿ ಜಿಲ್ಲಾಧಿಕಾರಿ ಅವರಿಗೆ ಶನಿವಾರ ಮನವಿ ಸಲ್ಲಿಸಲಾಗುವುದು' ಎಂದು ಹೇಳಿದರು.

ನಾಗಮೋಹನ್‌ದಾಸ್, ಕುನ್ಹಾ ಆಯೋಗಗಳ ಅವಧಿ ವಿಸ್ತರಣೆ

ಬೆಂಗಳೂರು: ಸರ್ಕಾರದ ವಿವಿಧ ಇಲಾಖೆಗಳ ವಿರುದ್ಧದ ಶೇಕಡ 40ರಷ್ಟು ಕಮಿಷನ್ ಆರೋಪ ಹಾಗೂ ಕೋವಿಡ್ ಭ್ರಷ್ಟಾಚಾರದ ಕುರಿತು ವಿಚಾರಣೆ ನಡೆಸುತ್ತಿರುವ ನಿವೃತ್ತ ನ್ಯಾಯಮೂರ್ತಿಗಳಾದ ಎಚ್.ಎನ್. ನಾಗಮೋಹನ್‌ದಾಸ್ ಮತ್ತು ಜಾನ್ ಮೈಕಲ್ ಕುನ್ಹಾ ನೇತೃತ್ವದ ಆಯೋಗಗಳ ಅವಧಿಯನ್ನು 2024ರ ಮೇ 25ರವರೆಗೂ ವಿಸ್ತರಿಸಲಾಗಿದೆ.

ಎರಡೂ ಆಯೋಗಗಳನ್ನು 2023ರ ಆಗಸ್ಟ್ 25ರಂದು ನೇಮಿಸಲಾಗಿತ್ತು. ವಿಚಾರಣೆ ಪೂರ್ಣಗೊಳಿಸಿ ವರದಿ ಸಲ್ಲಿಸಲು ಮೂರು ತಿಂಗಳು ನೀಡಲಾಗಿತ್ತು. ಆದರೆ, ಹೆಚ್ಚಿನ ಕಾರ್ಯಭಾರ ಇರುವ ಕಾರಣದಿಂದ ಒಮ್ಮೆ ಗಡುವು ವಿಸ್ತರಿಸಲಾಗಿತ್ತು.

ವಿಚಾರಣೆಯ ವ್ಯಾಪ್ತಿ ವಿಸ್ತೃತವಾಗಿರುವುದರಿಂದ 2024ರ ನವೆಂಬರ್ 30ರವರೆಗೂ ಆಯೋಗದ ಅವಧಿ ವಿಸ್ತರಿಸುವಂತೆ ನಾಗಮೋಹನ್‌ದಾಸ್ ಕೋರಿದ್ದರು. ತಮ್ಮ ನೇತೃತ್ವದ ಆಯೋಗದ ಅವಧಿಯನ್ನು ಆರು ತಿಂಗಳವರೆಗೆ ವಿಸ್ತರಿಸುವಂತೆ ಜಾನ್ ಮೈಕಲ್ ಕುನ್ಹಾ ಕೋರಿದ್ದರು. ಎರಡೂ ಆಯೋಗಗಳ ಅವಧಿಯನ್ನು ಮೇ 25ರವರೆಗೂ ವಿಸ್ತರಿಸಿ ಒಳಾಡಳಿತ ಇಲಾಖೆ ಶುಕ್ರವಾರ ಆದೇಶ ಹೊರಡಿಸಿದೆ.

ಸಿ.ಎಂಗೆ ಐಷಾರಾಮಿ ವಿಮಾನ

ಒಂದನೇ ಪುಟದಿಂದ...

ಈ ವಿಡಿಯೊವನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಬಿಜೆಪಿ ನಾಯಕರು, ಸಿದ್ದರಾಮಯ್ಯ 'ಸಮಾಜವಾದಿಯಲ್ಲ ಮಜವಾದಿ' ಎಂದು ಹರಿಹಾಯ್ದಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಮತ್ತು ವಿರೋಧ ಪಕ್ಷದ ನಾಯಕ ಆರ್.ಅಶೋಕ ಮುಖ್ಯಮಂತ್ರಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

'ಯಾರದ್ದೋ ದುಡ್ಡು ಆಕಾಶದಲ್ಲಿ ಜಾತ್ರೆ': 'ಕಾಂಗ್ರೆಸ್ ಸರ್ಕಾರದ ಆಡಳಿತದಲ್ಲಿ ಕರ್ನಾಟಕ ಬರಗಾಲದಿಂದ ಬೇಯುತ್ತಿದೆ. ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಸಾಮಾನ್ಯರ ಬದುಕು ಅಸಹನೀಯ ಪರಿಸ್ಥಿತಿ ತಲುಪಿದೆ. ಇಂತಹ ಗಂಭೀರ ಪರಿಸ್ಥಿತಿಯಲ್ಲೂ ಶ್ರೀಮಂತಿಕೆಯ ದರ್ಪ ತೋರುವ, ಮೋಜು, ಮಸ್ತಿಯೇ ತಮ್ಮ ಜೀವನ ಶೈಲಿ ಎಂದು ಪ್ರದರ್ಶಿಸಿಕೊಳ್ಳುತ್ತಿರುವ ಸಚಿವ ಜಮೀರ್ ಅಹಮದ್ ಖಾನ್ ಜತೆ ಜನರ ತೆರಿಗೆ ಹಣ ವ್ಯಯಿಸಿ ಐಷಾರಾಮಿ ವಿಮಾನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮೋಜಿನ ಭಾಗವಾಗಿರುವುದು ರಾಜ್ಯದ ದೌರ್ಭಾಗ್ಯವಲ್ಲದೇ ಮತ್ತಿನ್ನೇನೂ ಅಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

'ಮುಖ್ಯಮಂತ್ರಿ ಮತ್ತವರ ಮಂತ್ರಿಮಂಡಲದ ಸದಸ್ಯರ ಆಡಂಬರ, ವೈಭವದ ಪ್ರದರ್ಶನಗಳನ್ನು ನೋಡಿದರೆ 'ರೋಮ್ ದೊರೆ ನೀರೋ' ಬಗೆಗಿನ ಮಾತನ್ನು 'ರಾಜ್ಯ ಬರದಿಂದ ತತ್ತರಿಸುತ್ತಿದ್ದರೆ 'ದೊರೆ ಆಕಾಶದಲ್ಲಿ ಓಲಾಡುತ್ತಾ ತೇಲುತ್ತಿದ್ದಾರೆ' ಎಂದು ಹೇಳಬಹುದು' ಎಂದು 'ಎಕ್ಸ್'ನಲ್ಲಿ ವಿಜಯೇಂದ್ರ ಟೀಕಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಅವರ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜು, ಸಚಿವರಾದ ಕೃಷ್ಣ ಬೈರೇಗೌಡ ಮತ್ತು ಜಮೀರ್ ಅಹಮದ್ ಖಾನ್ ವಿಶೇಷ ವಿಮಾನದಲ್ಲಿ

> ಬರದಿಂದ ರಾಜ್ಯ ತತ್ತರಿಸಿದೆ. ಐಷಾರಾಮಿ ಖಾಸಗಿ ವಿಮಾನದಲ್ಲಿ ಪ್ರವಾಸ ಮಾಡುತ್ತಿರುವುದು ಜನರಿಗೆ ಮಾಡುತ್ತಿರುವ ಅಪಮಾನ
>
> **ಪ್ರಲ್ಹಾದ ಜೋಶಿ**
> ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

> ರಾಜ್ಯ ಸಂಕಷ್ಟದ ದಿನಗಳನ್ನು ಎದುರಿಸುತ್ತಿರುವ ಸಂದರ್ಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಅವರ ಆಪ್ತ ಬಳಗ ಶ್ರೀಮಂತಿಕೆಯ ದೌಲತ್ತು ಪ್ರದರ್ಶಿಸಿದೆ
>
> **ಆರ್.ಅಶೋಕ**
> ವಿರೋಧ ಪಕ್ಷದ ನಾಯಕ

ವಿಶೇಷ ವಿಮಾನದ ವೈಶಿಷ್ಟ್ಯ ಏನು?

ಒಂದು ಗುಂಪು ಅಥವಾ ಕೆಲವೇ ವ್ಯಕ್ತಿಗಳು ಸೇರಿ ಪ್ರತ್ಯೇಕವಾಗಿ ವಿಮಾನದಲ್ಲಿ ಪ್ರಯಾಣ ಮಾಡುವುದಕ್ಕಾಗಿ ಗೊತ್ತು ಮಾಡುವ ವಿಮಾನಕ್ಕೆ ವಿಶೇಷ ಅಥವಾ ಚಾರ್ಟರ್ಡ್ ಜೆಟ್ ಎನ್ನಲಾಗುತ್ತದೆ. ಇದು ಎಲ್ಲ ರೀತಿಯಿಂದಲೂ ಐಷಾರಾಮಿ ಮತ್ತು ಆರಾಮದಾಯಕವಾಗಿರುತ್ತದೆ. ಖಾಸಗಿತನಕ್ಕೆ ಅವಕಾಶವಿರುತ್ತದೆ.

ಆರು ಆಸನಗಳಿಂದ ಹಿಡಿದು 180 ಆಸನಗಳವರೆಗಿನ ಚಾರ್ಟಡ್ ಫ್ಲೈಟ್‌ಗಳಿರುತ್ತವೆ. ಈ ವಿಮಾನಗಳಲ್ಲಿ ಸೋಫಾ ಮಾದರಿಯ ಆಸನಗಳಿರುತ್ತವೆ. ಆಸನಗಳ ಮಧ್ಯದ ಜಾಗ ವಿಶಾಲವಾಗಿದ್ದು, ಊಟ, ಉಪಾಹಾರಕ್ಕಾಗಿ ಮೇಜುಗಳು, ಅಲಂಕಾರಿಕ ವಸ್ತುಗಳು ಇರುತ್ತವೆ.

ಹಲವು ವಿಮಾನಗಳ ಕಂಪನಿಗಳು ಮತ್ತು ವ್ಯಕ್ತಿಗಳು ಚಾರ್ಟರ್ಡ್ ವಿಮಾನ ಸೇವೆಗಳನ್ನು ನೀಡುತ್ತಾರೆ. ಕರ್ನಾಟಕದಲ್ಲಿ ಮುಖ್ಯಮಂತ್ರಿಯವರಿಗೆ ಈ ರೀತಿಯ ವಿಶೇಷ ವಿಮಾನದಲ್ಲಿ ಪ್ರಯಾಣ ಮಾಡಲು ಅವಕಾಶವಿದೆ.

ಹಿಂದೆ ಮುಖ್ಯಮಂತ್ರಿಗಳಾಗಿದ್ದವರು ವಿಶೇಷ ಸಂದರ್ಭಗಳ ಪ್ರಯಾಣಕ್ಕಾಗಿ ಚಾರ್ಟರ್ಡ್ ವಿಮಾನಗಳನ್ನು ಬಳಸಿದ್ದಾರೆ.

'ಮೋದಿ ಪ್ರತೀ ಪ್ರವಾಸಕ್ಕೆ ₹8.9 ಕೋಟಿ ವೆಚ್ಚ'

ಒಂದನೇ ಪುಟದಿಂದ...

ವಿಮಾನ ಯಾನದ ಕುರಿತು ಬಿಜೆಪಿ ಟೀಕೆಗೆ ಪ್ರತಿಕ್ರಿಯಿಸಿರುವ ಅವರು, 'ಶಾಸಕರನ್ನು ಸುತ್ತಾಡಿಸಲು ಖರ್ಚು ಮಾಡಿದ ನೂರಾರು ಕೋಟಿ ಹಣ ಬಿಜೆಪಿಯವರು ನರೇಗಾ ಯೋಜನೆಯಲ್ಲಿ ಕೂಲಿ ಮಾಡಿ ಕೂಡಿಟ್ಟಿದ್ದಲ್ಲ' ಎಂದು ಸಿದ್ದರಾಮಯ್ಯ ಹಂಗಿಸಿದ್ದಾರೆ.

'ರಾಜ್ಯದ ಬರ ಪರಿಸ್ಥಿತಿ ಸಂಬಂಧ ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಚರ್ಚಿಸುವ ಸಲುವಾಗಿ ವಿಶೇಷ ವಿಮಾನದಲ್ಲಿ ನಾನು ಪ್ರಯಾಣ ಬೆಳೆಸಿದ್ದನ್ನು ವಿರೋಧಿಸುವ ನೈತಿಕತೆ ಬಿಜೆಪಿ ನಾಯಕರಿಗೆ ಇದೆಯೇ? ಪ್ರಧಾನಿ ನರೇಂದ್ರ ಮೋದಿ 2014ರ ಜೂನ್ 15ರಿಂದ 2023ರ ಸೆಪ್ಟೆಂಬರ್‌ವರೆಗೆ 74 ಬಾರಿ ವಿದೇಶ ಪ್ರಯಾಣ ಮಾಡಿದ್ದಾರೆ. ಪ್ರತಿ ಪ್ರವಾಸದ ಸರಾಸರಿ ವೆಚ್ಚ ₹8.9 ಕೋಟಿ. ದೇಶ ಹಸಿವಿನ ಸೂಚ್ಯಂಕದಲ್ಲಿ 111 ಸ್ಥಾನದಲ್ಲಿದೆ. ದೇಶದ ಜನ ಹಸಿವಿನಿಂದ ಬಳಲುತ್ತಿರುವ ವೇಳೆ ಪ್ರಧಾನಿಯವರು ವಿಶೇಷ ವಿಮಾನದ ಮೂಲಕ ವಿದೇಶ ಯಾತ್ರೆ ಮಾಡಿಕೊಂಡು, ಮೋಜು ಮಾಡುತ್ತಿದ್ದಾರೆ ಎಂದು ಹೇಳಲು ಆಗುತ್ತದೆಯೇ' ಎಂದೂ ಸಿದ್ದರಾಮಯ್ಯ ಅವರು ಪ್ರಶ್ನಿಸಿದ್ದಾರೆ.

ದಾವಣಗೆರೆ: ಕೇಂದ್ರದ ಒಬಿಸಿ ಪಟ್ಟಿಗೆ ಲಿಂಗಾಯತರ ಸೇರ್ಪಡೆಗೆ ಪ್ರಸ್ತಾವ ಸಾಧ್ಯತೆ

ವೀರಶೈವ ಲಿಂಗಾಯತ ಅಧಿವೇಶನ ಇಂದಿನಿಂದ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ 24ನೇ ಮಹಾ ಅಧಿವೇಶನ ಡಿ.23ರಿಂದ ಎರಡು ದಿನ ಇಲ್ಲಿನ ಬಾಪೂಜಿ ಎಂಬಿಎ ಕಾಲೇಜು ಮೈದಾನದಲ್ಲಿ ನಡೆಯಲಿದೆ.

2022ರ ಡಿಸೆಂಬರ್ 23ರಿಂದ 25ವರೆಗೆ ಅಧಿವೇಶನ ನಡೆಸಲು ನಿರ್ಧರಿಸಲಾಗಿತ್ತು. ಆದರೆ, ರಾಜಕೀಯ ಕಾರಣಗಳಿಂದಾಗಿ ಮುಂದೂಡಲಾಗಿತ್ತು. ಇದೀಗ ಅಧಿವೇಶನವನ್ನು 2 ದಿನಕ್ಕೆ ನಿಗದಿಗೊಳಿಸಲಾಗಿದೆ. ನಗರದಲ್ಲಿ ಈ ಹಿಂದೆ 1917ರಲ್ಲಿ ಮಹಾ ಅಧಿವೇಶನ ನಡೆದಿತ್ತು.

ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಒಳಪಂಗಡಗಳನ್ನು ಕೇಂದ್ರದ ಹಿಂದುಳಿದ ಜಾತಿಗಳ (ಒಬಿಸಿ) ಪಟ್ಟಿಗೆ ಸೇರಿಸುವಂತೆ ಶಿಫಾರಸು ಮಾಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಅಧಿವೇಶನದ ಕೊನೆಯ ದಿನವಾದ ಭಾನುವಾರ ಕೈಗೊಳ್ಳುವ ಸಾಧ್ಯತೆ ಇದೆ.

ಸಮುದಾಯ ಎದುರಿಸುತ್ತಿರುವ ಬಿಕ್ಕಟ್ಟುಗಳ ಕುರಿತು ಮುಕ್ತ ಚರ್ಚೆಗೆ ಅವಕಾಶ ಕಲ್ಪಿಸಲಿರುವ ಈ ಅಧಿವೇಶನವು 'ಶಕ್ತಿ ಪ್ರದರ್ಶನ'ಕ್ಕೆ ವೇದಿಕೆಯಾಗಲಿದೆ ಎಂದೇ ಹೇಳಲಾಗುತ್ತಿದೆ.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಶಾಸಕ ಶಾಮನೂರು ಶಿವಶಂಕರಪ್ಪ ಅಧ್ಯಕ್ಷತೆಯಲ್ಲಿ ಶನಿವಾರ 12.30ಕ್ಕೆ ಆರಂಭವಾಗಲಿರುವ ಮಹಾ ಅಧಿವೇಶನವನ್ನು ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸುವರು.

ಮುಖ್ಯಾಂಶಗಳು

- ಎರಡು ದಿನಗಳವರೆಗೆ ನಡೆಯಲಿರುವ ಅಧಿವೇಶನ
- 12 ಜಗದ್ಗುರುಗಳು, 400 ಶಿವಾಚಾರ್ಯರು ಭಾಗಿಯಾಗುವ ನಿರೀಕ್ಷೆ
- 120 ಮಳಿಗೆಗಳಲ್ಲಿ ಶರಣ, ರೇಣುಕ ಪರಂಪರೆ ಬಿಂಬಿಸುವ ಚಿತ್ರಗಳು

ಅಖಿಲ ಭಾರತ ವೀರಶೈವ– ಲಿಂಗಾಯತ ಮಹಾಸಭಾದ 24ನೇ ಅಧಿವೇಶನಕ್ಕೆ ದಾವಣಗೆರೆಯ ಎಂಬಿಎ ಮೈದಾನದಲ್ಲಿ ವೇದಿಕೆಯ ಸಿದ್ಧತೆಗೆ ಅಂತಿಮ ಸ್ಪರ್ಶ ನೀಡಲಾಯಿತು –ಪ್ರಜಾವಾಣಿ ಚಿತ್ರ

'ಎಸ್. ನಿಜಲಿಂಗಪ್ಪ' ಮುಖ್ಯವೇದಿಕೆ ಹಾಗೂ ಜೆ.ಎಚ್. ಪಟೇಲ್ ವೇದಿಕೆಗಳಲ್ಲಿ ಏಕ ಕಾಲದಲ್ಲಿ ಕಾರ್ಯಕ್ರಮಗಳು ನಡೆಯಲಿದ್ದು, 12 ಜನ ಜಗದ್ಗುರುಗಳು, 400 ಶಿವಾಚಾರ್ಯರು ಸೇರಿದಂತೆ ಸಮುದಾಯದ ಮುಖಂಡರು ಪಕ್ಷ ಭೇದವಿಲ್ಲದೇ ಪಾಲ್ಗೊಳ್ಳುತ್ತಿದ್ದಾರೆ. ಲಕ್ಷಾಂತರ ಜನ ಸೇರುವ ನಿರೀಕ್ಷೆ ಇದೆ.

ಅಧ್ಯಕ್ಷರ ಮೆರವಣಿಗೆಯ ನಂತರ ಕೃಷಿ ಮತ್ತು ಕೈಗಾರಿಕೆ, ಶೈಕ್ಷಣಿಕ ಗೋಷ್ಠಿಗಳು ನಡೆಯಲಿವೆ. ಭಾನುವಾರ ಧಾರ್ಮಿಕ, ಮಹಿಳಾ ಮತ್ತು ಯುವ ಗೋಷ್ಠಿ, ನೌಕರರ ಹಾಗೂ ಸಾಹಿತಿಗಳ ಗೋಷ್ಠಿಗಳು ನಡೆಯಲಿವೆ.

ಅಧಿವೇಶನದ ವೇದಿಕೆ ಬಳಿ ಅಳವಡಿಸಿರುವ 120 ಮಳಿಗೆಗಳಲ್ಲಿ ಶರಣ ಪರಂಪರೆ, ರೇಣುಕ ಪರಂಪರೆ ಬಿಂಬಿಸುವ ಚಿತ್ರಗಳು, ಕೃಷಿ ಹಾಗೂ ಕೈಗಾರಿಕಾ ವಸ್ತು ಪ್ರದರ್ಶನ ನಡೆಯಲಿದೆ. ದಾವಣಗೆರೆ ಬೆಣ್ಣೆದೋಸೆಗೆ ಬ್ರ್ಯಾಂಡಿಂಗ್ ನೀಡುವ ಉದ್ದೇಶದಿಂದ ಜಿಲ್ಲಾಡಳಿತವು 'ದೋಸೆ ಉತ್ಸವ' ಹಮ್ಮಿಕೊಂಡಿದೆ.

ಅಧಿವೇಶನದಲ್ಲಿ ಭಾಗವಹಿಸುವವರಿಗಾಗಿ ರಾಜ್ಯದ ವಿವಿಧೆಡೆಯಿಂದ ಸಾರಿಗೆ ಸಂಸ್ಥೆ ಬಸ್, ಖಾಸಗಿ ವಾಹನಗಳ ವ್ಯವಸ್ಥೆ ಮಾಡಲಾಗಿದೆ. ಕಲ್ಯಾಣ ಮಂಟಪ, ವಸತಿ ಗೃಹಗಳು, ಹರಿಹರದ ಪಂಚಮಸಾಲಿ ಪೀಠ ಹಾಗೂ ಚಿತ್ರದುರ್ಗದ ಮುರುಘಾ ಮಠ, ಸಿರಿಗೆಯ ತರಳಬಾಳು ಬೃಹನ್ಮಠದಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಕಲ್ಪಿಸಲಾಗಿದೆ. ಮಹಾ ಅಧಿವೇಶನದ ಅಂಗವಾಗಿ ಸಮುದಾಯದ ಮುಖಂಡರು ಶುಭ ಕೋರಿರುವ ಫ್ಲೆಕ್ಸ್ ಹಾಗೂ ಬಂಟಿಂಗ್ಸ್‌ಗಳು ನಗರದೆಲ್ಲೆಡೆ ರಾರಾಜಿಸುತ್ತಿವೆ.

'ಸಮಾವೇಶಕ್ಕೆ ಬರುವ ಜನರಿಗೆ ವಿಧವಿಧದ ಭೋಜನ ವ್ಯವಸ್ಥೆಗೂ ಏರ್ಪಾಡು ಮಾಡಲಾಗಿದೆ' ಎಂದು ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ದೇವರಮನೆ ಶಿವಕುಮಾರ್ ಅವರು ತಿಳಿಸಿದ್ದಾರೆ.

ಸಂಚು ರೂಪಿಸಿದ್ದೇ ಮನೋರಂಜನ್?



ಮನೋರಂಜನ್

ನವದೆಹಲಿ (ಪಿಟಿಐ): ಸಂಸತ್ ಭದ್ರತೆ ಉಲ್ಲಂಘನೆ ಪ್ರಕರಣದಲ್ಲಿ ಬಂಧಿತರಾಗಿರುವ ಆರು ಮಂದಿ ಪೈಕಿ ಮನೋರಂಜನ್ ಡಿ. ಅವರು ಪಿತೂರಿಯ ಪ್ರಮುಖ ಸಂಚುಕೋರ ಆಗಿದ್ದಾರೆ ಎಂದು ದೆಹಲಿ ಪೊಲೀಸ್ ವಿಶೇಷ ಘಟಕ ಶಂಕಿಸಿದೆ.

ಮನೋರಂಜನ್ ಅವರು, ಏನಾದರೂ ಗಮನ ಸೆಳೆಯುವ ಕಾರ್ಯ ಮಾಡಲು ಇತರ ಸದಸ್ಯರನ್ನು ಹುರಿದುಂಬಿಸಿದ್ದರು ಮತ್ತು ಸಂಸತ್ತಿನ ಭದ್ರತೆ ಉಲ್ಲಂಘಿಸುವ ಯೋಜನೆ ರೂಪಿಸಿದ್ದರು ಎಂದು ಮತ್ತೊಬ್ಬ ಆರೋಪಿ ಲಲಿತ್ ಝಾ ವಿಚಾರಣೆ ವೇಳೆ ತಿಳಿಸಿರುವುದಾಗಿ ಪೊಲೀಸರು ಹೇಳಿದ್ದಾರೆ.

ಕೃತ್ಯದ ಬಳಿಕ ಸಾಕ್ಷ್ಯಗಳನ್ನು ನಾಶ ಮಾಡುವುದಷ್ಟೇ ತಮ್ಮ ಪಾತ್ರವಾಗಿತ್ತು ಎಂದೂ ಝಾ ಹೇಳಿರುವುದಾಗಿ ತಿಳಿಸಿದ್ದಾರೆ.

ಡಿಸೆಂಬರ್ 13ರಂದು ಸಂಸತ್ತಿನ ಒಳಗೆ ಮನೋರಂಜನ್ ಮತ್ತು ಸಾಗರ್ ಅವರನ್ನು ಬಂಧಿಸಲಾಗಿತ್ತು. ಲೋಕಸಭೆಯ ಸದನದೊಳಗೆ ಸಂದರ್ಶಕರ ಗ್ಯಾಲರಿಯಿಂದ ಜಿಗಿದ ಈ ಇಬ್ಬರು ಶೂಗಳಲ್ಲಿ ಬಚ್ಚಿಟ್ಟಿದ್ದ ಸ್ಮೋಕ್ ಕ್ಯಾನ್ (ಅನಿಲ ಉಗುಳುವ ಡಬ್ಬಿ) ಪ್ರಯೋಗಿಸಿದ್ದರು.

ಮೈಸೂರಿನವರಾದ ಮನೋರಂಜನ್ ನಿರುದ್ಯೋಗಿಯಾಗಿದ್ದು ಈ ಹಿಂದೆ ಕಾಂಬೋಡಿಯಾಗೆ ಭೇಟಿ ನೀಡಿದ್ದರು ಎಂದು ಮೂಲಗಳು ಹೇಳಿವೆ.

ಝಾ ಅವರನ್ನು ದೆಹಲಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ್ದು ಅವರ ಬಂಧನ ಅವಧಿಯನ್ನು ಜ. 5ರವರೆಗೆ ವಿಸ್ತರಿಸಲಾಗಿದೆ. ಒಂದು ವರ್ಷದ ಹಿಂದೆಯೇ ಮನೋರಂಜನ್ ಅವರು ಮೈಸೂರಿಗೆ ಬರುವಂತೆ ಹೇಳಿ ತಮಗೆ ಮತ್ತು ಇತರರಿಗೆ ವಾಟ್ಸ್ ಆ್ಯಪ್‌ನಲ್ಲಿ ಟಿಕೆಟ್‌ಗಳನ್ನು ಕಳುಹಿಸಿದ್ದರು ಎಂದು ಝಾ ಹೇಳಿರುವುದಾಗಿ ಮೂಲಗಳು ತಿಳಿಸಿವೆ.

ಬಹು ಮಾಧ್ಯಮ ಪ್ರಜಾವಾಣಿ www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ಸೆಲೆಬ್ರಿಟಿ PREMIERE
ಶ್ರಾವ್ಯಾ ರಾವ್ ನಟಿ

ಪ್ರಜಾವಾಣಿ ಜೊತೆ ಶ್ರಾವ್ಯಾ ರಾವ್
ಸಂಜೆ 5 ಗಂಟೆಗೆ

ಭದ್ರತಾ ಲೋಪ: ಎಫ್‌ಐಆರ್ ಪ್ರತಿ ನೀಡುವುದಕ್ಕೆ ತಡೆ

ನವದೆಹಲಿ (ಪಿಟಿಐ): ಸಂಸತ್ತಿನ ಭದ್ರತಾ ಲೋಪ ಪ್ರಕರಣದ ಆರೋಪಿಯೊಬ್ಬರಿಗೆ ಎಫ್‌ಐಆರ್ ಪ್ರತಿ ನೀಡುವಂತೆ ವಿಚಾರಣಾ ನ್ಯಾಯಾಲಯವೊಂದು ಪೊಲೀಸರಿಗೆ ನೀಡಿದ್ದ ಆದೇಶಕ್ಕೆ ದೆಹಲಿ ಹೈಕೋರ್ಟ್ ತಡೆಯಾಜ್ಞೆ ನೀಡಿದೆ.

ಭದ್ರತಾ ಲೋಪವು ಸೂಕ್ಷ್ಮ ಸ್ವರೂಪವನ್ನು ಹೊಂದಿದೆ. ಸುಪ್ರೀಂ ಕೋರ್ಟ್ ತೀರ್ಪಿನ ಪ್ರಕಾರ ಲೈಂಗಿಕ ದೌರ್ಜನ್ಯ, ಭಯೋತ್ಪಾದನೆ ಮತ್ತು ಅದಕ್ಕೆ ಸಂಬಂಧಿಸಿದ ಪ್ರಕರಣಗಳು ಹಾಗೂ ಪೋಕ್ಸೊ ಕಾಯ್ದೆ ವ್ಯಾಪ್ತಿಗೆ ಬರುವ ಪ್ರಕರಣಗಳಲ್ಲಿ ಎಫ್‌ಐಆರ್ ಪ್ರತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಅಗತ್ಯವಿಲ್ಲ ಎಂದು ಪೊಲೀಸರ ಪರ ವಕೀಲರು ಕೋರ್ಟ್‌ಗೆ ತಿಳಿಸಿದರು.

ನ್ಯಾಯಮೂರ್ತಿ ಸ್ವರ್ಣಕಾಂತ ಶರ್ಮ ಅವರು ಆರೋಪಿ ನೀಲಂ ದೇವಿ ಅವರಿಗೆ ನೋಟಿಸ್ ಜಾರಿಗೆ ಆದೇಶಿಸಿದ್ದಾರೆ. ವಿಚಾರಣಾ ನ್ಯಾಯಾಲಯದ ಆದೇಶ ಪ್ರಶ್ನಿಸಿ ಪೊಲೀಸರು ದೆಹಲಿ ಹೈಕೋರ್ಟ್ ಮೊರೆ ಹೋಗಿದ್ದರು.

ಇಂತಹ ಪ್ರಕರಣಗಳಲ್ಲಿ ಎಫ್‌ಐಆರ್ ಪ್ರತಿಯನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸುವ ಅಗತ್ಯವಿಲ್ಲ. ಅಲ್ಲದೆ, ನಿರ್ದಿಷ್ಟ ಪ್ರಕ್ರಿಯೆಯನ್ನು ಪಾಲಿಸದೆ ಎಫ್‌ಐಆರ್ ಪ್ರತಿಯನ್ನು ಆರೋಪಿಗೆ ನೀಡುವ ಅಗತ್ಯ ಇಲ್ಲ ಎಂದು ಹೈಕೋರ್ಟ್ ಹೇಳಿದೆ.

ಸೂಕ್ಷ್ಮ ಪ್ರಕರಣಗಳಲ್ಲಿ ಎಫ್‌ಐಆರ್ ಪ್ರತಿ ಬೇಕಿದ್ದರೆ, ಆರೋಪಿಗಳು ಪೊಲೀಸ್ ಆಯುಕ್ತರಿಗೆ ಮನವಿ ಸಲ್ಲಿಸಬೇಕು. ಮನವಿಯನ್ನು ಪರಿಶೀಲಿಸಲು ಆಯುಕ್ತರು ಸಮಿತಿ ಯೊಂದನ್ನು ರಚಿಸುತ್ತಾರೆ. ಈ ಪ್ರಕ್ರಿಯೆಯ ಮೂಲಕ ಎಫ್‌ಐಆರ್ ಪ್ರತಿ ಪಡೆಯಲು ಸಾಧ್ಯವಾಗದಿದ್ದಾಗ ಮಾತ್ರ ಆರೋಪಿಗಳು ಕೋರ್ಟ್ ಮೊರೆ ಹೋಗಬಹುದು ಎಂದು ದೆಹಲಿ ಸರ್ಕಾರದ ಪರ ವಕೀಲರು ನ್ಯಾಯಪೀಠಕ್ಕೆ ತಿಳಿಸಿದರು.

ವಿಚಾರಣಾ ನ್ಯಾಯಾಲಯವು ನೀಲಂ ಅವರು ಸಲ್ಲಿಸಿದ್ದ ಅರ್ಜಿ ಆಲಿಸಿ, ಅವರ ಪರ ವಕೀಲರಿಗೆ ಎಫ್‌ಐಆರ್ ಪ್ರತಿಯನ್ನು ಒದಗಿಸುವಂತೆ ತನಿಖಾಧಿಕಾರಿಗೆ ಆದೇಶಿಸಿತ್ತು.

ಜಂತರ್ ಮಂತರ್‌ನಲ್ಲಿ 'ಇಂಡಿಯಾ' ಮೈತ್ರಿಕೂಟ ನಾಯಕರ ಪ್ರತಿಭಟನೆ • 16 ಪಕ್ಷಗಳ ನಾಯಕರು ಭಾಗಿ

ಪ್ರಜಾಪ್ರಭುತ್ವಕ್ಕೆ ಬೆದರಿಕೆ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂಸತ್ತಿನ ಉಭಯ ಸದನಗಳಿಂದ 146 ಸಂಸದರನ್ನು ಅಮಾನತು ಮಾಡಿರುವುದರ ವಿರುದ್ಧ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ನಾಯಕರು ಶುಕ್ರವಾರ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಿದರು.

'ಇಂಡಿಯಾ' ಮೈತ್ರಿಕೂಟದ ಬ್ಯಾನರ್‌ನಡಿ ನಡೆಸಿದ ಈ ಪ್ರತಿಭಟನೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಸಿಪಿಎಂನ ಸೀತಾರಾಮ್ ಯೆಚೂರಿ, ಸಿಪಿಐನ ಡಿ. ರಾಜಾ, ಜೆಎಂಎಂನ ಮಹುವಾ ಮಾಜೀ, ಡಿಎಂಕೆಯ ತಿರುಚ್ಚಿ ಶಿವ, ಆರ್‌ಜೆಡಿಯ ಮನೋಜ್ ಕುಮಾರ್ ಝಾ, ಟಿಎಂಸಿಯ ಮೌಸಂ ನೂರ್ ಮತ್ತಿತರ ನಾಯಕರು ಸೇರಿ ಮೈತ್ರಿಕೂಟದ 16 ಪಕ್ಷಗಳ ಸದಸ್ಯರು ಭಾಗವಹಿಸಿದ್ದರು.

ಪ್ರತಿಭಟನಕಾರರನ್ನು ಉದ್ದೇಶಿಸಿ ಮಾತನಾಡಿದ ಖರ್ಗೆ ಅವರು, ಬಿಜೆಪಿ ಸರ್ಕಾರದಲ್ಲಿ ಪ್ರಜಾಪ್ರಭುತ್ವಕ್ಕೆ ಬೆದರಿಕೆ ಇದೆ. ಈ ಕಾರಣ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳ ನಾಯಕರು ಒಗ್ಗೂಡಿದ್ದಾರೆ ಎಂದರು.

'ಎಲ್ಲರೂ ಒಗ್ಗೂಡಿದಾಗ ಮೋದಿ ಅವರು ಏನೂ ಮಾಡಲು ಸಾಧ್ಯವಾಗುವುದಿಲ್ಲ. ನೀವು ನಮ್ಮನ್ನು ತುಳಿದಷ್ಟೂ ನಾವು ಎದ್ದೇಳುತ್ತೇವೆ. ದೇಶ ಮತ್ತು ಪ್ರಜಾಪ್ರಭುತ್ವವನ್ನು ರಕ್ಷಿಸಲು ನಾವು ಒಗ್ಗೂಡಿ ಹೋರಾಡುತ್ತಿದ್ದೇವೆ' ಎಂದು ಹೇಳಿದರು.

ಡಿಸೆಂಬರ್ 13ರಂದು ನಡೆದ ಸಂಸತ್ ಭದ್ರತಾ ಉಲ್ಲಂಘನೆ ವಿಷಯದ ಬಗ್ಗೆ ಗೃಹ ಸಚಿವ ಅಮಿತ್ ಶಾ ಅವರು ಹೇಳಿಕೆ ನೀಡಬೇಕೆಂದು ಒತ್ತಾಯಿಸಿದ್ದಕ್ಕೆ ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಪ್ರತಿಪಕ್ಷಗಳ ಸದಸ್ಯರನ್ನು ಅಮಾನತು ಮಾಡಲಾಗಿದೆ ಎಂದು ರಾಹುಲ್ ಟೀಕಿಸಿದರು.

'ಬಿಜೆಪಿಯು ದ್ವೇಷವನ್ನು ಹರಡಿದರೆ, 'ಇಂಡಿಯಾ' ಕೂಟದ ಪಕ್ಷಗಳು ಪ್ರೀತಿ ಮತ್ತು ಸಹೋದರತ್ವವನ್ನು ಪಸರಿಸುತ್ತವೆ. ಸಂಸತ್ತಿನ ಭದ್ರತಾ ಉಲ್ಲಂಘನೆಗೆ ಸಂಬಂಧಿಸಿದಂತೆ ಆರೋಪಿಗಳು ಯಾಕೆ ಹಾಗೆ ಪ್ರತಿಭಟಿಸಿದರು ಎಂಬ ಪ್ರಶ್ನೆ ಮೂಡುತ್ತದೆ. ಇದಕ್ಕೆ ಉತ್ತರ, ರಾಷ್ಟ್ರದಲ್ಲಿನ ನಿರುದ್ಯೋಗ' ಎಂದರು.

'ಸಮೀಕ್ಷೆಯೊಂದರ ಪ್ರಕಾರ ಯುವಜನತೆ ಫೋನ್‌ನಲ್ಲಿ ಸಾಮಾಜಿಕ ಜಾಲತಾಣದಲ್ಲಿ ಸುಮಾರು ಏಳೂವರೆ ಗಂಟೆಗಳ ಕಾಲ ಕಳೆಯುತ್ತಾರೆ. ಇಷ್ಟು ದೀರ್ಘ ಅವಧಿಯವರೆಗೆ ಅವರು ಫೋನ್ ಯಾಕೆ ಬಳಸುತ್ತಾರೆ ಎಂದರೆ ಮೋದಿ ಅವರು ಅವರಿಗೆ ಉದ್ಯೋಗ ನೀಡದಿರುವುದಕ್ಕೆ. ಮಾಧ್ಯಮ ಇದನ್ನು ತೋರಿಸುತ್ತಿಲ್ಲ. ರಾಹುಲ್ ವಿಡಿಯೊ ಮಾಡಿದರು ಎಂದು ಹೇಳುತ್ತವೆ ಹೊರತು 146 ಸಂಸದರು ಅಮಾನತಾಗಿದ್ದಾರೆ ಎಂದು ಹೇಳುವುದಿಲ್ಲ' ಎಂದರು.

ನವದೆಹಲಿಯ ಜಂತರ್‌ಮಂತರ್‌ನಲ್ಲಿ ಶುಕ್ರವಾರ 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ನಡೆಸಿದ ಪ್ರತಿಭಟನೆಯಲ್ಲಿ ಅಧೀರ್‌ರಂಜನ್ ಚೌಧರಿ, ಸೀತಾರಾಮ್ ಯೆಚೂರಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಶರದ್ ಪವಾರ್, ಕೆ.ಸಿ. ವೇಣುಗೋಪಾಲ್, ತಿರುಚ್ಚಿ ಶಿವಾ, ಡಿ. ರಾಜಾ ಭಾಗವಹಿಸಿದ್ದರು ಪಿಟಿಐ ಚಿತ್ರ

ಖರ್ಗೆ ನಡೆ ಸರಿಯಿರಲಿಲ್ಲ: ಧನಕರ್

ನವದೆಹಲಿ (ಪಿಟಿಐ): ಒಪ್ಪಿಕೊಳ್ಳಲು ಸಾಧ್ಯವಿಲ್ಲದ ಬೇಡಿಕೆಯನ್ನು ಸಭಾಪತಿಯ ಎದುರು ಇರಿಸಿ, ಸದನವು ನಿಷ್ಕ್ರಿಯವಾಗುವಂತೆ ಮಾಡುವುದು ದುರದೃಷ್ಟಕರ ಹಾಗೂ ಸಾರ್ವಜನಿಕರ ಹಿತಕ್ಕೆ ವಿರುದ್ಧವಾದ ಕೆಲಸ ಎಂದು ರಾಜ್ಯಸಭೆ ಸಭಾಪತಿ ಜಗದೀಪ್ ಧನಕರ್ ಅವರು

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

ಖರ್ಗೆ ಅವರು ತಮ್ಮನ್ನು ಚಳಿಗಾಲದ ಅಧಿವೇಶನದ ಸಂದರ್ಭದಲ್ಲಿ ಭೇಟಿ ಮಾಡಲು ನಿರಾಕರಿಸಿದ ಬಗೆಯು ಸಂಸದೀಯ ನಡವಳಿಕೆಗಳಿಗೆ ಅನುಗುಣವಾಗಿ ಇರಲಿಲ್ಲ ಎಂದು ಧನಕರ್ ಅವರು ಪತ್ರದಲ್ಲಿ ಹೇಳಿದ್ದಾರೆ. ಖರ್ಗೆ ಅವರೊಂದಿಗೆ ಮಾತುಕತೆ ನಡೆಸಲು ತಾವು ಬಯಸುತ್ತಿರುವುದಾಗಿಯೂ ಹೇಳಿದ್ದಾರೆ.

ಚಳಿಗಾಲದ ಅಧಿವೇಶನದ ಅವಧಿ ಕೊನೆಗೊಳ್ಳುವವರೆಗೆ ಒಟ್ಟು 46 ಸಂಸದರನ್ನು ಸದನದಿಂದ ಅಮಾನತು ಮಾಡಲಾಯಿತು. ಸದನದ ಕಲಾಪ ಸುಗಮವಾಗಿ ನಡೆಯುವಂತೆ ಮಾಡಲು ಖರ್ಗೆ ಅವರೊಂದಿಗೆ ಸಭೆ ನಿಗದಿ ಮಾಡಲು ಯತ್ನಿಸಿದರೂ, ಅದಕ್ಕೆ ಖರ್ಗೆ ಅವರಿಂದ ಸ್ಪಂದನ ಸಿಗಲಿಲ್ಲ. ಇದು ತಮಗೆ ನೋವು ತಂದಿದೆ ಎಂದು ಧನಕರ್ ಅವರು ಪತ್ರದಲ್ಲಿ ಹೇಳಿದ್ದಾರೆ. ಸಂಸದೀಯ ವ್ಯವಸ್ಥೆಯಲ್ಲಿ ಸಭಾಪತಿ ಜೊತೆ ಮಾತುಕತೆಗೆ ಅತ್ಯಂತ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಧನಕರ್ ಅವರು ಹೇಳಿದ್ದಾರೆ. ಮುಂದಿನ ದಿನಗಳಲ್ಲಿ ಧನಕರ್ ಅವರು ಖರ್ಗೆ ಅವರೊಂದಿಗೆ ಮಾತುಕತೆ ನಡೆಸಲು ಉತ್ಸುಕರಾಗಿದ್ದಾರೆ ಎಂದು ಪತ್ರದಲ್ಲಿ ಉಲ್ಲೇಖಿಸಲಾಗಿದೆ.

ವಿರೋಧ ಪಕ್ಷಗಳ ಸದಸ್ಯರು ನಿರ್ದಿಷ್ಟ ವಿಷಯಗಳನ್ನು ಸದನದಲ್ಲಿ ಪ್ರಸ್ತಾಪಿಸಲು ಮನವಿ ಮಾಡಿದ ಬಗೆಯು ನಿಗದಿತ ಪ್ರಕ್ರಿಯೆಗಳಿಗೆ ಅನುಗುಣವಾಗಿ ಇರಲಿಲ್ಲ. ಈ ಕಾರಣಕ್ಕಾಗಿ ತಾವು ಮನವಿಯನ್ನು ಒಪ್ಪಲು ಸಾಧ್ಯವಿರಲಿಲ್ಲ ಎಂದು ಧನಕರ್ ಅವರು ಖರ್ಗೆ ಅವರಿಗೆ ಹೇಳಿದ್ದಾರೆ.

ಪವಾರ್‌ಗೂ ಪತ್ರ: ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರಿಗೆ ಪತ್ರ ಬರೆದಿರುವ ಧನಕರ್, ರಾಜ್ಯಸಭೆಯ ಸಂಸದರನ್ನು ಅಮಾನತು ಮಾಡುವುದು ಅನಿವಾರ್ಯವಾಗಿತ್ತು ಎಂದು ಹೇಳಿದ್ದಾರೆ.

ಸಂಸದರು ತೋರಿದ ಅತಿರೇಕದ ದುರ್ವರ್ತನೆಯ ಕಾರಣದಿಂದಾಗಿ ಹೀಗೆ ಮಾಡಬೇಕಾಯಿತು ಎಂದಿದ್ದಾರೆ. ಸಂಸದರ ಅಮಾನತು ವಿಚಾರದಲ್ಲಿ ರಾಜ್ಯಸಭೆಯ ಸಭಾಪತಿಯಾಗಿ ತಾವು ಮಧ್ಯಪ್ರವೇಶಿಸಬೇಕು ಎಂದು ಕೋರಿ ಪವಾರ್ ಅವರು ಧನಕರ್ ಅವರಿಗೆ ಪತ್ರ ಬರೆದು ಆಗ್ರಹಿಸಿದ್ದರು.

'ಮಾತನಾಡಲು ಅವಕಾಶ ನಿರಾಕರಣೆ ವಿಷಾದಕರ'

ನವದೆಹಲಿ: ವಿರೋಧ ಪಕ್ಷಗಳ ಸದಸ್ಯರು ಸೂಕ್ತ ನಿಯಮಗಳ ಅಡಿಯಲ್ಲಿಯೇ ನೋಟಿಸ್ ನೀಡಿದ್ದರು. ಆದರೆ, ಅವುಗಳನ್ನು ಮಾನ್ಯ ಮಾಡದೆ ಇದ್ದುದು, ತಮಗೆ ಅಥವಾ ವಿರೋಧ ಪಕ್ಷದ ಇತರ ಯಾವುದೇ ಸದಸ್ಯರಿಗೆ ಒಂದು ನಿಮಿಷವೂ ಮಾತನಾಡಲು ಅವಕಾಶ ಕೊಡದೆ ಇದ್ದುದು ವಿಷಾದಕರ ಎಂದು ಮಲ್ಲಿಕಾರ್ಜುನ ಖರ್ಗೆ ಪ್ರತಿಕ್ರಿಯೆ ನೀಡಿದ್ದಾರೆ. ಖರ್ಗೆ ಅವರು ಧನಕರ್ ಅವರ ಪತ್ರಕ್ಕೆ ಉತ್ತರವಾಗಿ ತಾವೂ ಪತ್ರ ಬರೆದಿದ್ದಾರೆ. 'ವಿರೋಧವಿದ್ದರೂ ಸರ್ಕಾರವು ತಾನು ಅಂದುಕೊಂಡಿದ್ದನ್ನು ಮಾಡುತ್ತದೆ. ಆದರೆ ವಿರೋಧ ಪಕ್ಷಗಳು ತಮ್ಮ ಅನಿಸಿಕೆಯನ್ನು ದಾಖಲಿಸಬೇಕು. ಈ ಮೂಲತತ್ವವನ್ನು ನೀವು ಎತ್ತಿಹಿಡಿಯುವಿರಿ ಎಂಬುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ' ಎಂದು ಖರ್ಗೆ ಉತ್ತರಿಸಿದ್ದಾರೆ. ವಿರೋಧ ಪಕ್ಷಗಳ ಸಂಸದರನ್ನು ಭಾರಿ ಸಂಖ್ಯೆಯಲ್ಲಿ ಅಮಾನತು ಮಾಡಿರುವುದು ಸಂಸದೀಯ ಪ್ರಜಾತಂತ್ರದ ಮೂಲ ತತ್ವಕ್ಕೆ ಕೆಡುಕು ಉಂಟುಮಾಡುವಂಥದ್ದು ಎಂದು ಖರ್ಗೆ ಪ್ರತಿಪಾದಿಸಿದ್ದಾರೆ.

ಸಂಸದರ ವಿರುದ್ಧ ಕ್ರಮದ ಮೂಲಕ ದೇಶವನ್ನು ಮೌನವಾಗಿಸಬಹುದು ಎಂದು ಸರ್ಕಾರ ಯೋಚಿಸಿದಂತಿದೆ. ಪ್ರಜಾಪ್ರಭುತ್ವ ರಕ್ಷಣೆಗೆ ಯಾವ ಬೆಲೆ ತೆರಲೂ ಸಿದ್ಧ
ಶರದ್ ಪವಾರ್ ಎನ್‌ಸಿಪಿ ನಾಯಕ

ಸಂಸತ್ತಿನಿಂದ ಸಂಸದರನ್ನು ಅಮಾನತು ಮಾಡುವ ಮೂಲಕ ಸರ್ಕಾರವು ಶೇಕಡಾ 60ರಷ್ಟು ಭಾರತೀಯರ ಧ್ವನಿಯನ್ನು ಅಡಗಿಸಿದೆ
ರಾಹುಲ್ ಗಾಂಧಿ ಕಾಂಗ್ರೆಸ್ ನಾಯಕ

ಇದು ಸಂಸದರ ಅಮಾನತು ಅಲ್ಲ. ವಾಸ್ತವವಾಗಿ ಸಂಸತ್ತಿನ ಅಮಾನತೇ ಆಗಿದೆ. ಪ್ರಜಾಪ್ರಭುತ್ವವನ್ನು ರಕ್ಷಿಸಲು ಬಿಜೆಪಿಯನ್ನು ಸೋಲಿಸಬೇಕು
ಡಿ. ರಾಜಾ ಸಿಪಿಐ ನಾಯಕ

ಅಧಿಕಾರದಲ್ಲಿದ್ದಾಗಲೂ ಜವಾಬ್ದಾರಿಯಿಂದ ವರ್ತಿಸದ ಕಾಂಗ್ರೆಸ್, ವಿರೋಧ ಪಕ್ಷದಲ್ಲಿರುವಾಗಲೂ ಅತ್ಯಂತ ಬೇಜವಾಬ್ದಾರಿ ತೋರಿದೆ
ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

'ಎಳಸು ಬುದ್ಧಿಯ ರಾಹುಲ್'

ನವದೆಹಲಿ (ಪಿಟಿಐ): ರಾಹುಲ್ ಅವರದ್ದು ಎಳಸು ಬುದ್ಧಿ, ಅವರು ಪ್ರಜಾಪ್ರಭುತ್ವ ವಿರೋಧಿ ನಾಯಕ ಎಂದು ವಾರ್ತಾ ಸಚಿವ ಅನುರಾಗ್ ಠಾಕೂರ್ ಆರೋಪಿಸಿದರು.

ಸಂಸತ್ ಭದ್ರತೆ ಉಲ್ಲಂಘನೆಯಂತಹ ವಿಷಯದ ಬಗ್ಗೆ ಎಲ್ಲಾ ಸಂಸದರು ಒಂದೇ ದನಿಯಲ್ಲಿ ಮಾತನಾಡಬೇಕಿತ್ತು. ಆದರೆ ರಾಹುಲ್ ಅವರಂತಹ ನಾಯಕರು ಸುಳ್ಳು ಆರೋಪಗಳನ್ನು ಮಾಡುತ್ತಿದ್ದಾರೆ ಎಂದು ಅವರು ಹೇಳಿದರು. 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಸಂಸತ್ತಿನಲ್ಲಿ ಜನರ ವಿಷಯಗಳ ಕುರಿತ ಚರ್ಚೆಯಲ್ಲಿ ಪಾಲ್ಗೊಳ್ಳಲಿಲ್ಲ ಎಂದು ಟೀಕಿಸಿದರು.

ಜಂತರ್ ಮಂತರ್‌ನಲ್ಲಿ ನಡೆಸಿದ ಪ್ರತಿಭಟನೆ ಕುರಿತು ಟೀಕಿಸಿದ ಬಿಜೆಪಿಯ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ ಅವರು, ಇಂತಹ ಚಳವಳಿಗಳಿಂದ ಜನರನ್ನು ಮೂರ್ಖರನ್ನಾಗಿಸುವ ದಿನಗಳು ಹೋದವು. ಜನರು ಈಗ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಗ್ಯಾರಂಟಿಗಳನ್ನು ನಂಬುತ್ತಾರೆ ಎಂದು ಹೇಳಿದರು.

'ಅಮಾನತು ಮಾಡುವಂತೆ ಸಂಸದರು ಕೋರಿದ್ದರು'

ನವದೆಹಲಿ (ಪಿಟಿಐ): 'ಸಂಸತ್ತಿನ ಚಳಿಗಾಲದ ಅಧಿವೇಶನದಿಂದ ಅಮಾನತು ಮಾಡುವಂತೆ ಕೆಲವರು ಸಂಸದರು ಅವರಾಗಿಯೇ ಮನವಿ

ಮಾಡಿದ್ದರು' ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಅಷ್ಟೊಂದು ಸಂಸದರನ್ನು ಅಮಾನತುಗೊಳಿಸುವ ಉದ್ದೇಶ ಸರ್ಕಾರಕ್ಕೆ ಇರಲಿಲ್ಲ. ಆದರೆ ಅಶಿಸ್ತಿಗಾಗಿ ಕೆಲವು ಸಂಸದರನ್ನು ಅಮಾನತು ಮಾಡಿದಾಗ, ಆ ಪಕ್ಷಗಳ ಇತರ ಸದಸ್ಯರು ತಮ್ಮನ್ನೂ ಅಮಾನತು ಮಾಡುವಂತೆ ಮನವಿ ಮಾಡಿಕೊಂಡರು. ಕಾಂಗ್ರೆಸ್ ಪಕ್ಷ ಯಾವ ಮಟ್ಟಕ್ಕೂ ಇಳಿಯಲು ಸಿದ್ಧ' ಎಂದು ಕಿಡಿಕಾರಿದರು.

'ಭಿತ್ತಿಪತ್ರಗಳನ್ನು ತಂದು ಅಶಿಸ್ತು ತೋರುವವರ ವಿರುದ್ಧ ಶಿಸ್ತು ಕ್ರಮದ ಎಚ್ಚರಿಕೆ ನೀಡಲಾಗಿತ್ತು. ಆದರೂ ಅಶಿಸ್ತು ತೋರಿದರು. ಅಮಾನತು ಆಗಬೇಕೆಂಬುದೇ ಅವರ ಉದ್ದೇಶವಾಗಿತ್ತು' ಎಂದರು.

ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿದ ಕಾನೂನುಗಳಲ್ಲಿ ಆಮೂಲಾಗ್ರ ಬದಲಾವಣೆಯನ್ನು ತರುವ ಉದ್ದೇಶ ಹೊಂದಿರುವ ಮೂರು ಮಸೂದೆಗಳಲ್ಲಿ ಏನಾದರೂ ಲೋಪಗಳಿದ್ದರೆ, ವಿರೋಧ ಪಕ್ಷಗಳು ನ್ಯಾಯಾಲಯದ ಮೊರೆ ಹೋಗಬಹುದು ಎಂದು ಅವರು ನುಡಿದರು.

'ಪ್ರತಾಪ ಸಿಂಹ ಹೇಳಿಕೆ ದಾಖಲು'

ಸಂಸತ್ ಭದ್ರತಾ ಲೋಪ ಪ್ರಕರಣಕ್ಕೆ ಸಂಬಂಧಿಸಿದ ತನಿಖೆಯ ಭಾಗವಾಗಿ ಮೈಸೂರು– ಕೊಡಗು ಕ್ಷೇತ್ರದ ಬಿಜೆಪಿ ಸಂಸದ ಪ್ರತಾಪ ಸಿಂಹ ಅವರ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪ್ರಲ್ಹಾದ ಜೋಶಿ ತಿಳಿಸಿದರು.

'ಡಿ.13ರ ಘಟನೆಯ ಬಗ್ಗೆ ತನಿಖೆ ನಡೆಯುತ್ತಿದೆ. ತನಿಖಾ ವರದಿ ಸಲ್ಲಿಕೆಯಾದ ಬಳಿಕ ಕಾನೂನು ಕ್ರಮ ಜರುಗಿಸಲಾಗುತ್ತದೆ' ಎಂದರು. ಲೋಕಸಭೆ ಕಲಾಪದ ಸಂದರ್ಭದಲ್ಲಿ ಸದನದಲ್ಲಿ ದಾಂದಲೆ ಎಬ್ಬಿಸಿದ್ದ ಇಬ್ಬರು, ಪ್ರತಾಪ ಸಿಂಹ ಅವರ ಶಿಫಾರಸಿನಂತೆ ಪಾಸ್ ಪಡೆದಿದ್ದರು.

'ಚರ್ಚೆ ಬಹಿಷ್ಕರಿಸಿದ ವಿಪಕ್ಷಗಳು'

ಚಂಡೀಗಡ (ಪಿಟಿಐ): ಕ್ರಿಮಿನಲ್ ಅಪರಾಧಗಳಿಗೆ ಸಂಬಂಧಿಸಿ ದಂತೆ ಮೂರು ಪರಿಷ್ಕೃತ ಮಸೂದೆ



ಗಳನ್ನು ಸಂಸತ್ತಿನಲ್ಲಿ ಮಂಡಿಸಿದ ವೇಳೆ ಪ್ರತಿಪಕ್ಷಗಳು ನೆಪಗಳನ್ನು ಮುಂದೊಡ್ಡಿ ಚರ್ಚೆಯನ್ನು ಬಹಿಷ್ಕರಿಸಿವೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಇಲ್ಲಿ ಟೀಕಿಸಿದರು.

ಕೆಲವು ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟಿಸಿ ಮಾತನಾಡಿದ ಅವರು, ಉಪ ರಾಷ್ಟ್ರಪತಿ ಅವರನ್ನು ಅಣಕಿಸಿದ ಬಗ್ಗೆ ಪ್ರತಿಪಕ್ಷಗಳ ವಿರುದ್ಧ ಕಿಡಿ ಕಾರಿದರು. 'ಮಸೂದೆಗಳ ಕುರಿತು ಪ್ರತಿಪಕ್ಷಗಳ ಸಂಸದರು ಅಭಿಪ್ರಾಯ ನೀಡಬೇಕೆಂದು ಬಯಸಿದ್ದೆ. ಆದರೆ ವರು ಚರ್ಚೆಯನ್ನು ಬಹಿಷ್ಕರಿಸಿ ಸಂಸತ್ತಿನ ಹೊರಗೆ ಉಪರಾಷ್ಟ್ರಪತಿ ಅವರನ್ನು ಅಣಕಿಸಿದರು. ಇದಕ್ಕಿಂತ ಖಂಡನಾರ್ಹವಾದದ್ದು ಮತ್ತೊಂದಿಲ್ಲ' ಎಂದರು.

ಕ್ರಿಮಿನಲ್ ಅಪರಾಧ ಕಾನೂನುಗಳು ಕೇಂದ್ರಾಡಳಿತ ಪ್ರದೇಶಗಳಲ್ಲಿ 2024ರ ಡಿಸೆಂಬರ್ ವೇಳೆಗೆ ಜಾರಿಗೆ ಬರಲು ಸಿದ್ಧವಾಗಲಿವೆ ಎಂದೂ ಹೇಳಿದರು.

ಗಣರಾಜ್ಯೋತ್ಸವ: ಫ್ರಾನ್ಸ್ ಅಧ್ಯಕ್ಷರಿಗೆ ಅತಿಥಿ ಗೌರವ

ಇಮ್ಯಾನುಯೆಲ್ ಮ್ಯಾಕ್ರನ್

ನವದೆಹಲಿ (ಪಿಟಿಐ): ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಅವರು ಜನವರಿ 26ರಂದು ನವದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಈ ಮೂಲಕ ಅವರು ಭಾರತದ ಗಣರಾಜ್ಯೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವ ಆರನೇ ಫ್ರೆಂಚ್ ನಾಯಕ ಎನಿಸಿಕೊಳ್ಳಲಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರ ಆಹ್ವಾನದ ಮೇರೆಗೆ ಮ್ಯಾಕ್ರನ್ ಅವರು ಭಾರತದ 75ನೇ ಗಣರಾಜ್ಯೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲು ಬರಲಿದ್ದಾರೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಈ ಮೊದಲು ಭಾರತವು ಗಣರಾಜ್ಯೋತ್ಸವದ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳುವಂತೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರನ್ನು ಆಹ್ವಾನಿಸಿತ್ತು. ಆದರೆ, ಬೈಡನ್ ಅವರು ಜನವರಿಯಲ್ಲಿ ನವದೆಹಲಿಗೆ ಆಗಮಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದ್ದರು.

ಬಳಿಕ ಭಾರತವು ಈ ಕಾರ್ಯಕ್ರಮಕ್ಕೆ ಫ್ರಾನ್ಸ್ ಅಧ್ಯಕ್ಷರನ್ನು ಆಹ್ವಾನಿಸಿತ್ತು. ಇದಕ್ಕೆ ಪ್ರತಿಕ್ರಿಯಿಸಿರುವ ಫ್ರಾನ್ಸ್ ಅಧ್ಯಕ್ಷರ ಕಚೇರಿಯು, 'ಅಧ್ಯಕ್ಷ ಮ್ಯಾಕ್ರನ್ ಅವರು ಭಾರತದ ಗಣರಾಜ್ಯೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲು ನವದೆಹಲಿ ಭೇಟಿ ನೀಡಲಿದ್ದಾರೆ' ಎಂದು ತಿಳಿಸಿದೆ.

ಪಂಜಾಬ್‌ನ ಅಮೃತಸರದಲ್ಲಿ ಕ್ರಿಸ್‌ಮಸ್ ಹಬ್ಬದ ಸಿದ್ಧತೆ ಅಂಗವಾಗಿ ಶುಕ್ರವಾರ ನಡೆದ ಧಾರ್ಮಿಕ ಮೆರವಣಿಗೆಯಲ್ಲಿ ಸಾಂಟಾ ಕ್ಲಾಸ್ ವೇಷ ಧರಿಸಿ ಜನರು ಸಂಭ್ರಮ ಪಟ್ಟರು ಎಎಫ್‌ಪಿ ಚಿತ್ರ

ಕೇಜ್ರಿವಾಲ್‌ಗೆ ಮತ್ತೆ ಇ.ಡಿ ಸಮನ್ಸ್

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಮತ್ತೆ ಸಮನ್ಸ್ ಜಾರಿ ಮಾಡಿದೆ.



ಅರವಿಂದ ಕೇಜ್ರಿವಾಲ್

ದೆಹಲಿ ಅಬಕಾರಿ ನೀತಿ ಹಗರಣದ ಜೊತೆಗೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜ. 3ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಈ ಸಮನ್ಸ್ ನೀಡಲಾಗಿದೆ. ನ. 2 ರಂದು ಮತ್ತು ಡಿ. 21ರಂದು ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಈ ಹಿಂದೆ ಕೇಜ್ರಿವಾಲ್‌ಗೆ ಸಮನ್ಸ್ ನೀಡಲಾಗಿತ್ತು. ಆದರೆ ಅವರು ಹಾಜರಾಗಿರಲಿಲ್ಲ.

ಕಾಂಗ್ರೆಸ್ ಶಾಸಕನಿಗೆ 5 ವರ್ಷ ಜೈಲು ಶಿಕ್ಷೆ

ಮುಂಬೈ: ನಾಗ್ಪುರ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್‌ನಲ್ಲಿ (ಎನ್‌ಡಿಸಿಸಿಬಿ) ನಡೆದಿದ್ದ ₹ 125 ಕೋಟಿಯ ಹಗರಣಕ್ಕೆ ಸಂಬಂಧಿಸಿ ಕಾಂಗ್ರೆಸ್‌ನ ಹಿರಿಯ ನಾಯಕ, ಶಾಸಕ ಸುನಿಲ್ ಕೇದರ್ ಅವರಿಗೆ ಮ್ಯಾಜಿಸ್ಟ್ರೇಟ್ ಕೋರ್ಟ್ ಐದು ವರ್ಷ ಜೈಲು ಶಿಕ್ಷೆ ವಿಧಿಸಿದೆ.

21 ವರ್ಷದ ಹಳೆಯ ಪ್ರಕರಣ ಇದಾಗಿದೆ. ಕೇದರ್ ಹಿಂದೆ ಎನ್‌ಡಿಸಿಸಿಬಿ ಅಧ್ಯಕ್ಷರಾಗಿದ್ದರು. 62 ವರ್ಷದ ಅವರು ಐದು ಅವಧಿಗೆ ಶಾಸಕರಾಗಿ ಆಯ್ಕೆಯಾಗಿದ್ದು, ಕಾಂಗ್ರೆಸ್–ಎನ್‌ಸಿಪಿ ಮೈತ್ರಿ ಸರ್ಕಾರದಲ್ಲಿ ಸಚಿವರಾಗಿದ್ದರು.

ನಾಗ್ಪುರದಲ್ಲಿ ಇದೇ 28ರಂದು ಪಕ್ಷದ ಸಂಸ್ಥಾಪನಾ ದಿನ ಕಾರ್ಯಕ್ರಮದ ಸಿದ್ಧತೆಯಲ್ಲಿರುವ ಕಾಂಗ್ರೆಸ್‌ಗೆ ಈ ಬೆಳವಣಿಗೆ ಇರಿಸುಮುರಿಸಿದ್ದಾಗಿದೆ. 28ರ ನಿಗದಿತ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷರು ಸೇರಿ ಹಲವು ಮುಖಂಡರು ಭಾಗವಹಿಸುವ ಸಾಧ್ಯತೆಗಳಿವೆ.

ಸಹಕಾರ ಸಂಘವು ಹಿಂದೆ ಷೇರು ಮಾರುಕಟ್ಟೆಯಲ್ಲಿ ಬಂಡವಾಳ ಹೂಡಿದ್ದು, ಆಗ ನಿಯಮಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಲಾಗಿತ್ತು. ಬಿಜೆಪಿ ನಾಯಕ ಕಿರಿತ್ ಸೋಮಯ್ಯ ದೂರು ದಾಖಲಿಸಿದ್ದರು. ಶಾಸಕರಲ್ಲಿ ಇತರ ಐವರನ್ನು ಅಪರಾಧಿಗಳು ಎಂದು ಕೋರ್ಟ್ ತೀರ್ಪು ನೀಡಿದೆ.

ನಿತೀಶ್ ಸಂತೈಸಲು ಯತ್ನ

ಪ್ರಜಾವಾಣಿ ವಾರ್ತೆ

ನವದೆಹಲಿ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಹೆಸರನ್ನು 'ಇಂಡಿಯಾ' ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಿ ಘೋಷಿಸಬೇಕು ಎಂಬ ಕೂಗು ಹೆಚ್ಚುತ್ತಿರುವುದು ಜೆಡಿಯುನಲ್ಲಿ 'ತಳಮಳ' ಉಂಟುಮಾಡಿದ್ದು, ಪಕ್ಷದ ಮುಖಂಡರು ಕಾಂಗ್ರೆಸ್ ಹಾಗೂ ಮೈತ್ರಿಕೂಟದ ಇತರ ಪಕ್ಷಗಳ ವಿರುದ್ಧ ಅಸಮಾಧಾನ ಹೊರಹಾಕುತ್ತಿದ್ದಾರೆ.

ನವದೆಹಲಿಯಲ್ಲಿ ನಡೆದ 'ಇಂಡಿಯಾ' ಸಭೆ ಹಾಗೂ ನಂತರದ ಬೆಳವಣಿಗೆಗಳ ಬಗ್ಗೆ ಬಿಹಾರ ಮುಖ್ಯಮಂತ್ರಿ ನಿತೀಶ್ ಅತೃಪ್ತಿ ಹೊಂದಿದ್ದಾರೆ. ಇದರ ನಡುವೆಯೇ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನಿತೀಶ್ ಜತೆ ಮಾತನಾಡಿದ್ದು, ಮೈತ್ರಿಕೂಟದಲ್ಲಿ ಅವರಿಗೆ ಮಹತ್ವ ಇದ್ದೇ ಇರುತ್ತದೆ ಎಂಬ ಭರವಸೆ ನೀಡಿದ್ದಾಗಿ ತಿಳಿದುಬಂದಿದೆ.

ನಿತೀಶ್ ಅವರಿಗೆ ಕಾಂಗ್ರೆಸ್ ಬಗ್ಗೆ ಅಸಮಾಧಾನ ಇಲ್ಲ. ಆದರೆ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ ಒಳಗೊಂಡಂತೆ ಇತರ ಕೆಲವು ಪ್ರಾದೇಶಿಕ ಪಕ್ಷಗಳ ಮುಖಂಡರು ತಮ್ಮ ಬಲ ಕುಗ್ಗಿಸಲು ಪ್ರಯತ್ನಿಸುತ್ತಿರುವುದಕ್ಕೆ ಅತೃಪ್ತಿ ಹೊಂದಿದ್ದಾರೆ ಎಂದು ಮೂಲಗಳು ಹೇಳಿವೆ.

'ಇಂಡಿಯಾ' ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಿ ಖರ್ಗೆ ಹೆಸರು ಘೋಷಿಸಬೇಕು ಎಂದು ಮಮತಾ ಹಾಗೂ ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು ಮಂಗಳವಾರ ನಡೆದ ಸಭೆಯಲ್ಲಿ ಆಗ್ರಹಿಸಿದ್ದರು. ಆದರೆ ಖರ್ಗೆ ಅವರು, 'ನಾವು ಮೊದಲು ಗೆಲ್ಲೋಣ, ಇಂತಹ ವಿಷಯಗಳನ್ನು ನಂತರ ತೀರ್ಮಾನಿಸೋಣ' ಎಂದಿದ್ದರು.

ಇದರ ನಡುವೆಯೇ ಜೆಡಿಯು ಡಿಸೆಂಬರ್ 29 ರಂದು ನವದೆಹಲಿಯಲ್ಲಿ ತನ್ನ ನ್ಯಾಷನಲ್ ಕೌನ್ಸಿಲ್ ಸಭೆ ಕರೆದಿದೆ. ಸಭೆಯಲ್ಲಿ ನಿತೀಶ್ ಅವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿಸುವ 'ದುಡುಕಿನ' ನಿರ್ಧಾರ ತೆಗೆದುಕೊಂಡು, ಬಿಕ್ಕಟ್ಟಿನ ಪರಿಸ್ಥಿತಿ ಉಂಟುಮಾಡಲಿಕ್ಕಿಲ್ಲ ಎಂದು ಮೂಲಗಳು ತಿಳಿಸಿವೆ. ಆದರೆ ಮೈತ್ರಿಕೂಟವು 'ಸಂಘಟಿತ ನಾಯಕತ್ವ'ದಡಿ ಮುನ್ನಡೆಯಬೇಕು ಎಂಬ ಬೇಡಿಕೆ ಮುಂದಿಡುವ ಸಾಧ್ಯತೆಯಿದೆ.

'ಖರ್ಗೆ ಯಾರೆಂಬುದು ಸಾಮಾನ್ಯ ಜನರಿಗೆ ತಿಳಿದಿಲ್ಲ. ಆ ಹೆಸರು ಕೇಳಿದ ಬಳಿಕವಷ್ಟೇ ನನಗೆ ಅವರು ಕಾಂಗ್ರೆಸ್ ಅಧ್ಯಕ್ಷ ಎಂಬುದು ಗೊತ್ತಾಗಿದೆ. ನಿತೀಶ್ ಯಾರೆಂಬುದು ಎಲ್ಲರಿಗೂ ತಿಳಿದಿದೆ. ಆದ್ದರಿಂದ ಅವರು ಪ್ರಧಾನಿ ಅಭ್ಯರ್ಥಿಯಾಗಬೇಕು' ಎಂದು ಜೆಡಿಯು ಶಾಸಕ ಗೋಪಾಲ್ ಮಂಡಲ್ ಶುಕ್ರವಾರ ಹೇಳಿದ್ದಾರೆ.

'ಕಾಂಗ್ರೆಸ್ ಬಳಿ ಸಾಕಷ್ಟು ಹಣ ಇಲ್ಲ. ಹಾಗಾಗಿ, ಮಂಗಳವಾರ ನಡೆದಿದ್ದ ಮೈತ್ರಿಕೂಟದ ಸಭೆ ಚಹಾ ಮತ್ತು ಬಿಸ್ಕತ್‌ಗೆ ಮಾತ್ರ ಸೀಮಿತವಾಗಿತ್ತು. ಸಭೆಯಲ್ಲಿ ಪಾಲ್ಗೊಂಡವರಿಗೆ ಸಮೋಸ ಕೊಡಲೂ ಅವರ ಬಳಿಕ ಹಣವಿರಲಿಲ್ಲ' ಎಂದು ಜೆಡಿಯು ಸಂಸದ ಸುನಿಲ್ ಕುಮಾರ್ ಪಿಂಟು ಈ ಹಿಂದೆ ಲೇವಡಿ ಮಾಡಿದ್ದರು.

'ಇಂಡಿಯಾ' ಮೈತ್ರಿಕೂಟದ ಸಭೆಯ ಬಳಿಕ ವಿವಿಧ ಪಕ್ಷಗಳ ಮುಖಂಡರು ನಡೆಸಿದ್ದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ನಿತೀಶ್ ಪಾಲ್ಗೊಂಡಿರಲಿಲ್ಲ.

'ನಿತೀಶ್ ಅಸಮಾಧಾನಗೊಂಡಿಲ್ಲ'

ಪಟ್ನಾ (ಪಿಟಿಐ): 'ಇಂಡಿಯಾ' ಮೈತ್ರಿಕೂಟದ ಸಂಚಾಲಕರಾಗಿ ತಮ್ಮ ಹೆಸರು ಸೂಚಿಸದೇ ಇರುವುದಕ್ಕೆ ನಿತೀಶ್ ಕುಮಾರ್ ಅಸಮಾಧಾನಗೊಂಡಿದ್ದಾರೆ ಎಂಬ ವರದಿಯನ್ನು ಜೆಡಿಯು ಪ್ರಧಾನ ಕಾರ್ಯದರ್ಶಿ ಸಂಜಯ್ ಕುಮಾರ್ ಝಾ ಅಲ್ಲಗಳೆದಿದ್ದಾರೆ.

'ಮೂರೂವರೆ ಗಂಟೆಯಷ್ಟು ಸುದೀರ್ಘವಾಗಿ ನಡೆದ ಸಭೆಯಲ್ಲಿ ನಾನು ಪಾಲ್ಗೊಂಡಿದ್ದೆ. ಅಲ್ಲಿ ಎಲ್ಲಾ ಚರ್ಚೆಗಳು ಸೌಹಾರ್ದಯುತ ವಾತಾವರಣದಲ್ಲಿ ನಡೆದಿವೆ. ಸಭೆಯ ಬಳಿಕ ಆಯ್ದ ಕೆಲವು ಮುಖಂಡರು ಮಾತ್ರ ಸುದ್ದಿಗೋಷ್ಠಿಯಲ್ಲಿ ಮಾತನಾಡಬೇಕು ಎಂದು ನಿರ್ಧರಿಸಲಾಗಿತ್ತು. ನಿತೀಶ್, ಪ್ರತಿಭಟನೆ ಸೂಚಕವಾಗಿ ಸುದ್ದಿಗೋಷ್ಠಿಯಲ್ಲಿ ಪಾಲ್ಗೊಳ್ಳಲಿಲ್ಲ ಎಂಬುದರಲ್ಲಿ ಯಾವುದೇ ಹುರುಳಿಲ್ಲ' ಎಂದು ಸ್ಪಷ್ಟಪಡಿಸಿದರು.

ನೆರವು ನೀಡದೇ ಜನತೆಗೆ ಅವಮಾನ: ಎಂ.ಕೆ.ಸ್ಟಾಲಿನ್

ಪ್ರವಾಹ: ಕೇಂದ್ರ–ರಾಜ್ಯ ಸರ್ಕಾರ ವಾಗ್ವಾದ

ಚೆನ್ನೈ: ತಮಿಳುನಾಡಿನ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಬಾಧಿಸಿರುವ ಪ್ರವಾಹ ಪರಿಸ್ಥಿತಿಯು ಈಗ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ.

ರಾಜ್ಯ ಸರ್ಕಾರ ಏನು ಸಿದ್ಧತೆ ಕೈಗೊಂಡಿತ್ತು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಶ್ನಿಸಿದ್ದರೆ, ಅಗತ್ಯ ನೆರವು ನಿರಾಕರಿಸುವ ಮೂಲಕ ಕೇಂದ್ರವು ತಮಿಳುನಾಡಿನ ಜನತೆಗೆ 'ಅವಮಾನ' ಮಾಡುತ್ತಿದೆ ಎಂದು ಡಿಎಂಕೆ ಸರ್ಕಾರ ತಿರುಗೇಟು ನೀಡಿದೆ.

ನವದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಚಿವೆ, 'ತಮಿಳುನಾಡಿನಲ್ಲಿ ಭಾರಿ ಮಳೆ, ನಂತರದ ಪ್ರವಾಹ ಸ್ಥಿತಿಯಿಂದ 31 ಜನರು ಸತ್ತಿದ್ದಾರೆ' ಎಂದರು. ಆದರೆ, ರಾಜ್ಯ ಸರ್ಕಾರ ಒಟ್ಟು 35 ಜನರು ಸತ್ತಿದ್ದಾರೆ

ಎಂ.ಕೆ.ಸ್ಟಾಲಿನ್

ನಿರ್ಮಲಾ ಸೀತಾರಾಮನ್

ಎಂದು ಪ್ರಕಟಿಸಿದೆ.

ಹವಾಮಾನ ಇಲಾಖೆಯ (ಐಎಂಡಿ) ಮುನ್ಸೂಚನೆ ವರದಿ ನಿಖರವಾಗಿರಲಿಲ್ಲ ಎಂಬ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹೇಳಿಕೆಯನ್ನೂ ಟೀಕಿಸಿದ ಸಚಿವೆ, 'ರಾಜ್ಯ ಸರ್ಕಾರ ಈಗ ಐಎಂಡಿ ಮೇಲೆ ಆರೋಪ ಹೊರಿಸುತ್ತಿದೆ. ಈ ಮೂಲಕ ಪೂರ್ವಸಿದ್ಧತೆ ಕೈಗೊಳ್ಳದ ತನ್ನ ಲೋಪ ಮುಚ್ಚಿಕೊಳ್ಳಲು ಯತ್ನಿಸುತ್ತಿದೆ' ಎಂದು ಹೇಳಿದರು.

ಮುಖ್ಯಮಂತ್ರಿ ಮತ್ತು ಸಚಿವ ಮನೊ ತ್ಯಾಗರಾಜ್ ಅವರು, 'ರೆಡ್ ಅಲರ್ಟ್ ಮುನ್ಸೂಚನೆ ಮತ್ತು ವಾಸ್ತವವಾಗಿ ಭಾರಿ ಮಳೆಯಾದ ಅವಧಿಗೂ ಅಂತರ ಕಡಿಮೆ ಇತ್ತು. ಅಲ್ಲದೆ, ಐಎಂಡಿ ಮುನ್ಸೂಚನೆ ನೀಡಿದ್ದಕ್ಕಿಂತಲೂ ಹೆಚ್ಚು ಪ್ರಮಾಣದ ಮಳೆಯಾಗಿದೆ' ಎಂದು ಹೇಳಿದ್ದರು.

ಇದನ್ನು ಸುದ್ದಿಗೋಷ್ಠಿಯಲ್ಲಿ ಉಲ್ಲೇಖಿಸಿದ್ದ ಸಚಿವೆ ನಿರ್ಮಲಾ ಸೀತಾರಾಮನ್, 'ಐಎಂಡಿ ಡಿ.12ರಂದೇ ಮೊದಲು ಭಾರಿ ಮಳೆ ಎಚ್ಚರಿಕೆ ನೀಡಿತ್ತು. 15ರಂದು ಆರೆಂಜ್ ಅಲರ್ಟ್ ಸೂಚನೆ ನೀಡಿತ್ತು. ಈ ಎಚ್ಚರಿಕೆಯು ಧಾರಾಕಾರದಿಂದ ಭಾರಿ ಮಳೆಯಾಗಲಿದೆ ಎಂಬುದೇ ಆಗಿದೆ' ಎಂದರು.

'ಐಎಂಡಿ ನಿರಂತರವಾಗಿ ಮುನ್ಸೂಚನೆ ನೀಡಿದೆ. ಆದರೆ, ರಾಜ್ಯ ಸರ್ಕಾರ ಏನು ಸಿದ್ಧತೆ ಮಾಡಿಕೊಂಡಿತ್ತು. ಸಚಿವರು ಏನು ಮಾಡುತ್ತಿದ್ದರು. ಅವರು ದಕ್ಷಿಣದ ರಾಜ್ಯಗಳಿಗೆ ಭೇಟಿ ನೀಡಿದ್ದು ಯಾವಾಗ, ಎನ್‌ಡಿಆರ್‌ಎಫ್ ಆ ಜಿಲ್ಲೆಗಳಿಗೆ ಮೊದಲು ಭೇಟಿ ನೀಡಿದ್ದು ಯಾವಾಗ?' ಎಂದು ಪ್ರಶ್ನೆಗಳ ಮಳೆ ಸುರಿಸಿದರು.

'ಮಳೆ ಬಾಧಿತ ಜಿಲ್ಲೆಗಳ ಜನರ ಜೊತೆಗೂ ಮುಖ್ಯಮಂತ್ರಿ ನಿಲ್ಲಲಿಲ್ಲ. ಅಲ್ಲಿ ಪ್ರವಾಹ ಇದ್ದಾಗ, ಅವರು 'ಇಂಡಿಯಾ' ಸಭೆಗಾಗಿ ಇಲ್ಲಿಗೆ ಬಂದಿದ್ದರು. ಅವರು ಬಂದಿದ್ದೇ ಇಂಡಿಯಾ ಸಭೆಗಾಗಿ, ಪ್ರಧಾನಿಯನ್ನು ಭೇಟಿ ಮಾಡಲು ಅಲ್ಲ' ಎಂದು ವಾಗ್ದಾಳಿ ನಡೆಸಿದರು.

ಸಚಿವೆಯ ಹೇಳಿಕೆಯನ್ನು ಅಲ್ಲಗಳೆದಿರುವ ಹಣಕಾಸು ಸಚಿವ ತಂಗಂ ತೆನ್ನರಸು, 'ಪರಿಹಾರ ಕಾರ್ಯಗಳಿಗೆ ರಾಜ್ಯ ಸರ್ಕಾರ ₹ 21,692 ಕೋಟಿ ಕೋರಿದೆ. ಅಲ್ಲದೆ, ಪ್ರಾಕೃತಿಕ ವಿಕೋಪ ಎಂದು ಘೋಷಿಸಲೂ ಆಗ್ರಹಪಡಿಸಿದೆ. ಆದರೆ, ಈ ಬೇಡಿಕೆ ತಳ್ಳಿಹಾಕಿರುವ ಸಚಿವೆ ತಮಿಳುನಾಡಿನ ಜನತೆಗೆ ಅವಮಾನವಾಗುವಂತೆ ಮಾತನಾಡಿದ್ದಾರೆ ಎಂದರು.

ಸ್ಟಾಲಿನ್ ವಿರುದ್ಧದ ಸಚಿವೆಯ ಟೀಕೆಗೂ ತಮ್ಮದೇ ಧಾಟಿಯಲ್ಲಿ ಪ್ರತಿಕ್ರಿಯಿಸಿರುವ ಅವರು, 'ನೀವು ಮೈಲಾಪೋರ್‌ನ ಮಾರುಕಟ್ಟೆಗೆ ತರಕಾರಿ ತೆಗೆದುಕೊಳ್ಳಲು ಬರುತ್ತೀರಿ. ಆದರೆ, ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ್ದೀರಾ?' ಎಂದು ಪ್ರಶ್ನಿಸಿದರು.

ರಾಜ್ಯ ಸರ್ಕಾರ 2015ರಲ್ಲಿ ಮೂಡಿದ್ದ ಪ್ರವಾಹ ಸ್ಥಿತಿಯಿಂದ ಪಾಠ ಕಲಿತಿಲ್ಲ. ಪರಿಹಾರ ಬಿಡುಗಡೆ ಕುರಿತು ಭಿನ್ನ ಧ್ವನಿಗಳಲ್ಲಿ ಮಾತನಾಡುತ್ತಿದೆ. ಆದರೆ, ಪರಿಹಾರ ಕಾರ್ಯಗಳಿಗಾಗಿ ಕೇಂದ್ರ ಸರ್ಕಾರ ಹೆಲಿಕಾಪ್ಟರ್ ಸೇವೆಯ ಜೊತೆಗೆ ಸೇನೆಯ ನೆರವನ್ನೂ ಒದಗಿಸಿದೆ ಎಂದು ಸಮರ್ಥಿಸಿಕೊಂಡರು.

nsm ರಾಷ್ಟ್ರೀಯ ಸೂಪರ್ ಕಂಪ್ಯೂಟಿಂಗ್ ಮಿಷನ್
ಮೂಲಸೌಕರ್ಯ | ತಂತ್ರಾಂಶಗಳು | ಆರ್&ಡಿ | ಹೆಚ್ಆರ್‌ಡಿ

ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್‌ಡ್ ಕಂಪ್ಯೂಟಿಂಗ್
ಭಾರತ ಸರ್ಕಾರ ಸಚಿವಾಲಯದ ವೈಜ್ಞಾನಿಕ ಸೊಸೈಟಿ
सी डैक CDAC

ಸಾಮಾಜಿಕವಾಗಿ ಹಿಂದುಳಿದ ಸಮೂಹಗಳಿಗೆ (ಎಸ್‌ಸಿ ಮತ್ತು ಎಸ್‌ಟಿ ಯುವಜನಾಂಗ) ಹೈ ಪರ್ಫಾರ್ಮನ್ಸ್ ಕಂಪ್ಯೂಟಿಂಗ್‌ನಲ್ಲಿ (ಹೆಚ್‌ಪಿಸಿ) ಪಿಜಿ ಡಿಪ್ಲೋಮಾ 2024 ಬ್ಯಾಚ್ ಕೋರ್ಸ್ ಪ್ರವೇಶಾತಿಗಾಗಿ ನೋಂದಣಿ

ಭಾರತ ಸರ್ಕಾರದ ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ (ಎಂಇಐಟಿವೈ) ಇವರಿಂದ ಅನುದಾನಿತ ನ್ಯಾಷನಲ್ ಸೂಪರ್‌ಕಂಪ್ಯೂಟಿಂಗ್ ಮಿಷನ್ (ಎನ್‌ಎಸ್‌ಎಂ) ಅಡಿಯಲ್ಲಿ, ಸೆಂಟರ್ ಫಾರ್ ಡೆವಲಪ್‌ಮೆಂಟ್ ಆಫ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ (ಸಿ–ಡಾಕ್) ಇವರು, ತಮ್ಮ ಪೋಸ್ಟ್ ಗ್ರಾಜುಯೇಟ್ ಕಂಪ್ಯೂಟಿಂಗ್ ಡಿಪ್ಲೋಮಾ ಕೋರ್ಸ್‌ಗಳ ಮುಖಾಂತರ ಕೌಶ್ಯಲಭರಿತ ಮತ್ತು ಪರಿಣಿತ ಮಾನವ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಇದೀಗ, ಸಿ–ಡಾಕ್ ರವರು, ಹೈ ಪರ್ಫಾರ್ಮನ್ಸ್ ಕಂಪ್ಯೂಟಿಂಗ್ (ಹೆಚ್‌ಪಿಸಿ) ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯಲು, ಸಿ–ಡಾಕ್ ಕಾಮನ್ ಅಡ್ಮಿಷನ್ ಟೆಸ್ಟ್ (ಸಿ–ಕ್ಯಾಟ್) ಗಾಗಿ, ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪರಿಶಿಷ್ಟ ಜನಾಂಗ (ಎಸ್‌ಟಿ) ಸಮುದಾಯಗಳ, ಆಯ್ದ ಇಂಜಿನಿಯರಿಂಗ್ ಮತ್ತು ಸೈನ್ಸ್ ವಿಭಾಗಗಳಲ್ಲಿ ಪೋಸ್ಟ್ ಗ್ರಾಜುಯೇಶನ್ ಪೂರ್ಣಗೊಳಿಸಿರುವ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಪೋಸ್ಟ್ ಗ್ರಾಜುಯೇಟ್ ಡಿಪ್ಲೋಮಾ ಕೋರ್ಸ್‌ಗಳು
ಹೆಚ್‌ಪಿಸಿ ಸಿಸ್ಟಮ್ ಅಡ್ಮಿನಿಸ್ಟ್ರೇಶನ್ (ಪಿಜಿ–ಡಿಹೆಚ್‌ಪಿಸಿಎಸ್‌ಎ)
ಹೆಚ್‌ಪಿಸಿ ಅಪ್ಲಿಕೇಶನ್ ಡೆವಲಪ್‌ಮೆಂಟ್ (ಪಿಜಿ–ಡಿಹೆಚ್‌ಪಿಸಿಎಡಿ)

ಮಹತ್ವದ ದಿನಾಂಕಗಳು:
ಆನ್‌ಲೈನ್ ನೋಂದಣಿಗೆ ಕೊನೆಯ ದಿನಾಂಕ: ಜನವರಿ 03, 2024
ಎನ್‌ಎಸ್‌ಎಂ ಸಿ–ಡಾಕ್ ಕಾಮನ್ ಟೆಸ್ಟ್: ಜನವರಿ 13-14, 2024
ಕೋರ್ಸ್ ಆರಂಭ: ಮಾರ್ಚ್ 05, 2024

ಕೋರ್ಸ್‌ಗಳು ಮತ್ತು ಅರ್ಹತಾ ಮಾನದಂಡಗಳು:
- ಭಾರತದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯ ಮಾತ್ರ ಅರ್ಜಿ ಸಲ್ಲಿಸುವುದು.
- ಅರ್ಜಿ ಮತ್ತು ಕೋರ್ಸ್ ಶುಲ್ಕ ವಿನಾಯಿತಿ
- ಕೋರ್ಸ್‌ನ 6 ತಿಂಗಳ ಅವಧಿಯಲ್ಲಿ ಸಾಂಪ್ರದಾಯಿಕ ಸ್ಟೈಪಂಡ್ ನೀಡಲಾಗುತ್ತದೆ.
- ತರಬೇತಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ ಮತ್ತು 900 ಗಂಟೆಗಳ ಪ್ರಮಾಣಪತ್ರದ ಬಳಿಕ ಪ್ಲೇಸ್‌ಮೆಂಟ್ ಅವಕಾಶಗಳು.

ಪ್ರವೇಶಾತಿ ಅರ್ಹತೆ, ಪ್ರವೇಶಾತಿ ಪ್ರಕ್ರಿಯೆ, ಪ್ರವೇಶಾತಿ ಪಠ್ಯಕ್ರಮ, ಸಮಯಸೂಚಿ ಹಾಗೂ ಇನ್ನಿತರ ಷರತ್ತು ಮತ್ತು ನಿಬಂಧನೆಗಳಿಗಾಗಿ, ಸಿ–ಡಾಕ್, ಎಸಿಟಿಸಿ ರವರ https://www.cdac.in/NSMTrainingSCST ವೆಬ್‌ಸೈಟ್‌ಗೆ ಭೇಟಿ ಕೊಡಿ.

CBC-06132/12/0028/2324

ऍक्टस acts ISO 9001:2015 Organisation
ತರಬೇತಿ ಕೇಂದ್ರ: ಅಡ್ವಾನ್ಸ್ಡ್ ಕಂಪ್ಯೂಟರ್ ಟ್ರೈನಿಂಗ್ ಸೆಂಟರ್, ಸೆಂಟರ್ ಫಾರ್ ಅಡ್ವಾನ್ಸ್ಡ್ ಕಂಪ್ಯೂಟಿಂಗ್ ಡೆವಲಪ್‌ಮೆಂಟ್, ಸಿ–ಡಾಕ್ ಇನ್ನೋವೇಶನ್ ಪಾರ್ಕ್, ಪಂಚವಟಿ, ಪಶನ್, ಪುಣೆ 411008 ಮಹಾರಾಷ್ಟ್ರ ಭಾರತ ಫೋನ್: 020–25503100, 107, 134, 136
ಇ–ಮೇಲ್: actssuppport@cdac.in

ಆನೇಕಲ್ ಯೋಜನಾ ಪ್ರಾಧಿಕಾರ
"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು–560099.
ದೂ.: 080–27835122 ಫ್ಯಾಕ್ಸ್ : 080–27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/32/2023–24 ದಿನಾಂಕ: 22.12.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ವಾಣಿಜ್ಯ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ **15 ದಿನಗಳೊಳಗಾಗಿ** ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ–ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್** ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ. ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ದಯಾನಂದ ರೆಡ್ಡಿ ಬಿನ್ ಲೇ. ಪಿಲ್ಲಾರೆಡ್ಡಿ	ಆನೇಕಲ್	ಕಸಬಾ	ಬ್ಯಾಗಡದೇನಹಳ್ಳಿ	6/1	02–25	ವಸತಿ	ವಾಣಿಜ್ಯ
2	ಶ್ರೀ ಶ್ಯಾಮರೆಡ್ಡಿ ಬಿನ್ ಲೇ. ಪಿಲ್ಲಾರೆಡ್ಡಿ	ಆನೇಕಲ್	ಕಸಬಾ	ಬ್ಯಾಗಡದೇನಹಳ್ಳಿ	6/2	0–02	ವಸತಿ	ವಾಣಿಜ್ಯ
3	ಶ್ರೀ ಶ್ಯಾಮರೆಡ್ಡಿ ಬಿನ್ ಲೇ. ಪಿಲ್ಲಾರೆಡ್ಡಿ	ಆನೇಕಲ್	ಕಸಬಾ	ಬ್ಯಾಗಡದೇನಹಳ್ಳಿ	6/3	0–04	ವಸತಿ	ವಾಣಿಜ್ಯ
4	ಶ್ರೀ ದಯಾನಂದ ರೆಡ್ಡಿ ಬಿನ್ ಲೇ. ಪಿಲ್ಲಾರೆಡ್ಡಿ	ಆನೇಕಲ್	ಕಸಬಾ	ಬ್ಯಾಗಡದೇನಹಳ್ಳಿ	6/4	0–18	ವಸತಿ	ವಾಣಿಜ್ಯ
5	ಶ್ರೀ ಶ್ಯಾಮರೆಡ್ಡಿ ಬಿನ್ ಲೇ. ಪಿಲ್ಲಾರೆಡ್ಡಿ	ಆನೇಕಲ್	ಕಸಬಾ	ಬ್ಯಾಗಡದೇನಹಳ್ಳಿ	6/7	01–10	ವಸತಿ	ವಾಣಿಜ್ಯ
6	ಶ್ರೀ ದಯಾನಂದ ರೆಡ್ಡಿ ಶ್ರೀ ಶ್ಯಾಮರೆಡ್ಡಿ ಬಿನ್ ಲೇ. ಪಿಲ್ಲಾರೆಡ್ಡಿ	ಆನೇಕಲ್	ಕಸಬಾ	ಬ್ಯಾಗಡದೇನಹಳ್ಳಿ	6/9	0–11	ವಸತಿ	ವಾಣಿಜ್ಯ
7	ಶ್ರೀ ಶ್ಯಾಮರೆಡ್ಡಿ ಬಿನ್ ಲೇ. ಪಿಲ್ಲಾರೆಡ್ಡಿ	ಆನೇಕಲ್	ಕಸಬಾ	ಬ್ಯಾಗಡದೇನಹಳ್ಳಿ	13/6	0–03	ವಸತಿ	ವಾಣಿಜ್ಯ
8	ಶ್ರೀ ಶ್ಯಾಮರೆಡ್ಡಿ ಬಿನ್ ಲೇ. ಪಿಲ್ಲಾರೆಡ್ಡಿ	ಆನೇಕಲ್	ಕಸಬಾ	ಬ್ಯಾಗಡದೇನಹಳ್ಳಿ	13/7	0–29	ವಸತಿ	ವಾಣಿಜ್ಯ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಾಣಿಜ್ಯ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಪ್ರಶ್ನಿತ ಜಮೀನುಗಳಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಾಣಿಜ್ಯ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಮತ್ತು ಕಾನೂನುಬದ್ಧವಾದ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ವಸತಿ ವಲಯದಿಂದ ವಾಣಿಜ್ಯ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–,
ಸದಸ್ಯ–ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/2691/2023–24

ಪುರಸಭಾ ಕಾರ್ಯಾಲಯ ಮಾಲೂರು, ಕೋಲಾರ ಜಿಲ್ಲೆ–563130
ದೂರವಾಣಿ ಸಂ: 08151–232847/ ಸಹಾಯವಾಣಿ:08151–232840,
ಇಮೇಲ್:itstaff_ulb_malur@yahoo.co.in, ವೆಬ್‌ಸೈಟ್: www.malurtown.mrc.gov.in
ಸಂಖ್ಯೆ:ಪು.ಸ.ಮಾ/ಕಿ.ಅ/ಟೆಂಡರ್–04/2023–24 ದಿನಾಂಕ:20.12.2023

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) (ದ್ವಿ–ಲಕೋಟೆ)

ಮಾಲೂರು ಪುರಸಭೆ ವ್ಯಾಪ್ತಿಯಲ್ಲಿ 2023–24 ನೇ ಸಾಲಿನ ವಿವಿಧ ಕಾಮಗಾರಿಗಳು ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕ ಅಧಿನಿಯಮ (ಕೆ.ಟಿ.ಪಿ.ಪಿ. –1999 ನಿಯಮಗಳು 2000) ಅನ್ವಯ ದ್ವಿ–ಲಕೋಟೆ ಪದ್ಧತಿ ಟೆಂಡರ್‌ನ್ನು ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಸರಬರಾಜುದಾರರು/ಗುತ್ತಿಗೆದಾರರು ಟೆಂಡರ್‌ಗಳನ್ನು, ತಾಂತ್ರಿಕ ಬಿಡ್‌ನ್ನು ಹಾಗು ಆರ್ಥಿಕ ಬಿಡ್‌ನ್ನು ತೆರೆಯುವ ವಿವರಗಳನ್ನು KPPP portal ನಲ್ಲಿ ಕಾಣಬಹುದು. **ಕಾಮಗಾರಿಗಳ ವಿವರ:** (1) Obtaining Environmental Clearance for SWM site in Malur, **Indent No:** DMA/2023-24/SE1730. (2) Providing breakfast for PK's in TMC Malur, **Indent No:** DMA/2023-24/SE1729. (3) Earthwork excavation, levelling and other works in Ashraya Layouts in TMC Maur, **Indent No:** DMA/2023-24/OW/WORK_INDENT9942. (4) Street light metering for CCMS in TMC Malur, **Indent No:** DMA/2023-24/EL/WORK_INDENT10019, (5)Providing and Fixing Pump motor etc to Borewells at Malur, **Indent No:** DMA/2023-24/WS/WORK_INDENT10059.

ಸಹಿ/–
(ಶ್ರೀ ರಮೇಶ್ ಕುಮಾರ್. ಕೆ)
ಆಡಳಿತಾಧಿಕಾರಿಗಳು
ಪುರಸಭೆ, ಮಾಲೂರು

ಸಹಿ/–
(ಶ್ರೀ ಪ್ರದೀಪ್ ಕುಮಾರ್ ಎ.ಬಿ)
ಮುಖ್ಯಾಧಿಕಾರಿ
ಪುರಸಭೆ, ಮಾಲೂರು

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:282/ಕೆಎಸ್‌ಎಂ.ಸಿ.ಎ/2023–24

ನಮೂನೆ – XII
ನಿಯಮ – 14 (3)
ಚುನಾವಣಾ ನೋಟೀಸ್

ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ನಂ. 156, 17ನೇ ಅಡ್ಡರಸ್ತೆ, 8ನೇ ಮುಖ್ಯರಸ್ತೆ, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು–560 055.

ಚುನಾವಣಾಧಿಕಾರಿ ಹಾಗೂ ಸಹಕಾರ ಸಂಘಗಳ ಅಪರ ನಿರ್ಬಂಧಕರು (ಕೈಗಾರಿಕೆ & ಹೈನುಗಾರಿಕೆ) ಇವರ ಆದೇಶ ಸಂಖ್ಯೆ ಅನಿ/(ಕೈ&ಹೈ)/ ಚುನಾವಣೆ/04/2023–24 ದಿನಾಂಕ : 10/11/2023 ರನ್ವಯ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಅಧಿನಿಯಮದ ಕಲಂ.39ಎ (1) ಮತ್ತು 39ಎ (2) ಹಾಗೂ ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮದನ್ವಯ "ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ಲಿಮಿಟೆಡ್", ಮಲ್ಲೇಶರಂ, ಬೆಂಗಳೂರು–560 055 ಇದರ ಆಡಳಿತ ಮಂಡಳಿಗೆ ಮುಂದಿನ 5 ವರ್ಷಗಳ ವಧಿಗೆ ದಿನಾಂಕ: 07/01/2024 ರ ಭಾನುವಾರದಂದು ಬೆಳಿಗ್ಗೆ 9–00 ಘಂಟೆಯಿಯಿಂದ ಸಂಜೆ 4–00 ಘಂಟೆಯವರೆಗೆ "ಶ್ರೀ ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘ ನಿಯಮಿತ", ಬಸವೇಶ್ವರ ಶಿಕ್ಷಣ ಸಂಸ್ಥೆಗಳು (ರಾಜಾಜಿನಗರ ಪೋಲೀಸ್ ಠಾಣೆ ಹಿಂಭಾಗ) 2ನೇ ಹಂತ, ರಾಜಾಜಿನಗರ, ಬೆಂಗಳೂರು–560 010, ಇಲ್ಲಿ ಚುನಾವಣೆಯನ್ನು ನಡೆಸಲು ನಿಗದಿಪಡಿಸಿದೆ.

ಚುನಾವಣಾ ವೇಳಾಪಟ್ಟಿಯು ಈ ಕೆಳಕಂಡಂತೆ ಇರುತ್ತದೆ.

1.	ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರವನ್ನು ಸಲ್ಲಿಸಲು ಪ್ರಾರಂಭದ ದಿನಾಂಕ	ಚುನಾವಣಾ ವೇಳಾ ಪಟ್ಟಿ ಪ್ರಕಟಣೆ ದಿನಾಂಕದಿಂದ ಬ್ಯಾಂಕಿನ ಕೇಂದ್ರ ಕಛೇರಿಯ ಕೆಲಸದ ವೇಳೆಯಲ್ಲಿ
2.	ಸ್ಪರ್ಧಿಸಲು ಇಚ್ಛಿಸುವಂತಹ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ (ನಿಯಮ 14–ಎ)	ದಿನಾಂಕ: 30.12.2023 ಶನಿವಾರ ಸಂಜೆ 04.00 ಘಂಟೆಯವರೆಗೆ
3.	ನಾಮಪತ್ರಗಳ ಪರಿಶೀಲನೆ ರಿಟರ್ನಿಂಗ್ ಅಧಿಕಾರಿಯಿಂದ (ನಿಯಮ 14–ಬಿ)	ದಿನಾಂಕ: 31.12.2023 ಭಾನುವಾರ ಬೆಳಿಗ್ಗೆ 11.00 ಘಂಟೆಗೆ
4.	ರಿಟರ್ನಿಂಗ್ ಅಧಿಕಾರಿಯಿಂದ ಕ್ರಮಬದ್ಧವಾಗಿ ನಾಮಪತ್ರ ಸಲ್ಲಿಸಿದ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ 14–ಬಿ(4))	ದಿನಾಂಕ: 01.01.2024 ಸೋಮವಾರ ನಾಮಪತ್ರಗಳ ಪರಿಶೀಲನೆ ನಂತರ
5.	ಸ್ಪರ್ಧಾ ಕಣದಲ್ಲಿರುವ ಅಭ್ಯರ್ಥಿಗಳು ತಮ್ಮ ನಾಮಪತ್ರಗಳನ್ನು ಹಿಂಪಡೆಯಲು ಕೊನೆಯ ದಿನಾಂಕ ಮತ್ತು ವೇಳೆ (ನಿಯಮ 14ಸಿ)	ದಿನಾಂಕ: 02.01.2024 ಮಂಗಳವಾರ ಸಂಜೆ 3.00 ಘಂಟೆಯುವರೆಗೆ
6.	ಸ್ಪರ್ಧಾ ಕಣದಲ್ಲಿ ಉಳಿದ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ, ರಿಟರ್ನಿಂಗ್ ಅಧಿಕಾರಿಗಳಿಂದ (ನಿಯಮ 14ಡಿ)	ದಿನಾಂಕ 02–01–2024 ಮಂಗಳವಾರ ಸಂಜೆ 3.00 ಘಂಟೆಯ ನಂತರ.
7.	ಅಗತ್ಯವಾದಲ್ಲಿ ರಿಟರ್ನಿಂಗ್ ಅಧಿಕಾರಿಗಳಿಂದ ಅಭ್ಯರ್ಥಿಗಳಿಗೆ ಚುನಾವಣಾ ಚಿಹ್ನೆ ಹಂಚಿಕೆ ಮಾಡುವುದು (ನಿಯಮ 14ಇ)	ದಿನಾಂಕ 02–01–2024 ಮಂಗಳವಾರ ಸಂಜೆ 3.00 ಘಂಟೆಯ ನಂತರ.
8.	ಚಿಹ್ನೆ ಸಹಿತ ಸ್ಪರ್ಧೆಯಲ್ಲಿರುವ ಕ್ರಮಬದ್ಧ ಅಭ್ಯರ್ಥಿಗಳ ಪಟ್ಟಿ ಪ್ರಕಟಣೆ (ನಿಯಮ 14 ಇ ಮತ್ತು ಎಫ್)	ದಿನಾಂಕ 04–01–2024 ಗುರುವಾರ
9.	ಚುನಾವಣೆ ನಡೆಸಲು ಚುನಾವಣಾ ದಿನಾಂಕ ಮತ್ತು ವೇಳೆ	ದಿನಾಂಕ: 07.01.2024 ಭಾನುವಾರ ಬೆಳಿಗ್ಗೆ 9.00 ರಿಂದ ಅಪರಾಹ್ನ 4.00 ಘಂಟೆವರೆಗೆ ಶ್ರೀ ಜಗಜ್ಯೋತಿ ಬಸವೇಶ್ವರ ಸಹಕಾರ ಸಂಘ (ನಿ) (ಬಸವೇಶ್ವರ ಶಿಕ್ಷಣ ಸಂಸ್ಥೆಗಳು) (ರಾಜಾಜಿನಗರ ಪೋಲೀಸ್ ಠಾಣೆ ಹಿಂಭಾಗ), ರಾಜಾಜಿನಗರ 2ನೇ ಹಂತ, ಬೆಂಗಳೂರು–560010
10.	ಮತ ಎಣಿಕೆಯ ದಿನಾಂಕ ಮತ್ತು ವೇಳೆ	ದಿನಾಂಕ: 07.01.2024 ಭಾನುವಾರ ಸಂಜೆ 4–00 ಘಂಟೆಯ ನಂತರ
11	ಚುನಾವಣೆಯ ಫಲಿತಾಂಶ ಘೋಷಣೆ ರಿಟರ್ನಿಂಗ್ ಅಧಿಕಾರಿಗಳಿಂದ	ದಿನಾಂಕ: 07.01.2024 ಭಾನುವಾರ ಮತ ಎಣಿಕೆಯು ಮುಗಿದ ನಂತರ

ಸೂಚನೆ :– ಬ್ಯಾಂಕಿನ ಉಪನಿಯಮ ಸಂಖ್ಯೆ 52ರ ಪ್ರಕಾರ ಆಡಳಿತ ಮಂಡಳಿಗೆ ಒಟ್ಟು 17 ಜನ ನಿರ್ದೇಶಕರನ್ನು ಮಾತ್ರ ಚುನಾಯಿಸಬೇಕಾಗುತ್ತದೆ. ಕರ್ನಾಟಕ ಸಹಕಾರ ಸಂಘಗಳ ಅಧಿ ನಿಯಮ 1959 ಕಲಂ 28ಎ ಪ್ರಕಾರ (3)ರ ರೀತ್ಯಾ , ಈ ಪೈಕಿ 01 (ಒಂದು) ಸ್ಥಾನವನ್ನು ಪರಿಶಿಷ್ಟ ಜಾತಿಯವರಿಗೆ, 01 (ಒಂದು) ಸ್ಥಾನವನ್ನು ಪರಿಶಿಷ್ಟ ಪಂಗಡದವರಿಗೆ ಮತ್ತು 02 (ಎರಡು) ಸ್ಥಾನಗಳನ್ನು ಮಹಿಳೆಯರಿಗೆ ಮತ್ತು 02 (ಎರಡು) ಸ್ಥಾನಗಳನ್ನು ಹಿಂದುಳಿದ ವರ್ಗದವರಿಗೆ ಮೀಸಲಿರಿಸಲಾಗಿದೆ. ಈ ಎರಡು ಹಿಂದುಳಿದ ವರ್ಗಗಳ ಸ್ಥಾನಗಳ ಪೈಕಿ ಒಂದು ಸ್ಥಾನ ಹಿಂದುಳಿದ ವರ್ಗದ ಪ್ರವರ್ಗ 'ಎ' ವರ್ಗಕ್ಕೆ, ಒಂದು ಸ್ಥಾನ ಹಿಂದುಳಿದ ವರ್ಗದ ಪ್ರವರ್ಗ 'ಬಿ' ವರ್ಗಕ್ಕೆ ಸೇರಿದವರಿಗೆ ಮೀಸಲಿರಿಸಲಾಗಿದೆ.
ಹೆಚ್ಚುವರಿ ಮಾಹಿತಿ ಅವಶ್ಯವಿದ್ದಲ್ಲಿ ಬ್ಯಾಂಕನ್ನು ಸಂಪರ್ಕಿಸಬಹುದು.

ಸಹಿ/–
(ಎಂ.ಪಿ. ಮಂಜುನಾಥ್)
ಸಹಕಾರ ಸಂಘಗಳ ಉಪ ನಿಬಂಧಕರು
2ನೇ ವಲಯ, ಬೆಂಗಳೂರು ನಗರ ಜಿಲ್ಲೆ ಹಾಗೂ ರಿಟರ್ನಿಂಗ್ ಅಧಿಕಾರಿ
ದಿ ಜನತಾ ಕೋ–ಆಪರೇಟಿವ್ ಬ್ಯಾಂಕ್ ನಿಯಮಿತ, ಬೆಂಗಳೂರು.

ಸ್ಥಳ: ಬೆಂಗಳೂರು
ದಿನಾಂಕ: 22.12.2023

'ದಾಖಲೆ ಜಪ್ತಿಯು ಬಾಕಿ ಹಣ ನಿರಾಕರಣೆಗೆ ಕಾರಣವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನಿಖಾ ಸಂಸ್ಥೆಗಳು ಕಾಮಗಾರಿಗೆ ಸಂಬಂಧಿಸಿದ ದಾಖಲೆಗಳನ್ನು ಜಪ್ತಿ ಮಾಡಿದೆ ಎಂಬ ಕಾರಣಕ್ಕೆ ಬಿಬಿಎಂಪಿ ಸಿವಿಲ್ ಗುತ್ತಿಗೆದಾರರಿಗೆ ಬಾಕಿ ಇರುವ ಹಣ ಪಾವತಿ ನಿರಾಕರಿಸುವಂತಿಲ್ಲ ಎಂದು ಹೈಕೋರ್ಟ್ ಆದೇಶ ನೀಡಿದೆ.

ಸಿವಿಲ್ ಗುತ್ತಿಗೆದಾರರಾದ ಮೆಸರ್ಸ್ ಓಎಂ ಎಸ್‌ಎಲ್‌ವಿ ಕನ್‌ಸ್ಟ್ರಕ್ಷನ್ ಸಲ್ಲಿಸಿದ್ದ ಅರ್ಜಿಯನ್ನು ಆಲಿಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯಪೀಠ ಈ ಆದೇಶ ನೀಡಿದೆ.

ವಾದ-ಪ್ರತಿವಾದ ಆಲಿಸಿದ ಬಳಿಕ ನ್ಯಾಯಾಲಯ, 'ಕ್ರಿಮಿನಲ್ ಪ್ರಕರಣಗಳಲ್ಲಿ ಆರೋಪಿಗಳು ಪಡೆಯುವಂತೆ, ಇಲಾಖಾ ಮುಖ್ಯಸ್ಥರು ಅಥವಾ ಬಿಬಿಎಂಪಿ ಮುಖ್ಯಸ್ಥರು ಕೂಡ ವಿಚಾರಣಾ ನ್ಯಾಯಾಲಯದಿಂದ ದಾಖಲೆಯ ಪ್ರತಿಗಳನ್ನು ಪಡೆದುಕೊಳ್ಳಬಹುದು. ಈ ಪ್ರಕರಣದಲ್ಲಿ ಅರ್ಜಿದಾರರು ಆರೋಪಿಯಾಗಿದ್ದು, ಅವರೂ ದಾಖಲೆ ಕೋರಿ ಅರ್ಜಿ ಸಲ್ಲಿಸಬಹುದು. ಆ ರೀತಿ ಅರ್ಜಿ ಸಲ್ಲಿಸುವ ಬದಲು ಪಾಲಿಕೆ ಮತ್ತು ಅರ್ಜಿದಾರರಿಬ್ಬರೂ ಸಹ ಒಬ್ಬರ ಮೇಲೆ ಒಬ್ಬರು ದೂಷಿಸಿಕೊಂಡು, ಕಾಮಗಾರಿ ಬಿಲ್‌ಗಳ ಪ್ರತಿಗಳನ್ನು ಪಡೆದುಕೊಂಡಿಲ್ಲ. ಹಾಗಾಗಿ ಅರ್ಜಿದಾರರು ನ್ಯಾಯಾಲಯದ ಮೊರೆ ಹೋಗಿದ್ದಾರೆ'' ಎಂದು ಹೇಳಿದೆ.

'ಒಮ್ಮೆ ಕಾಮಗಾರಿ ಪೂರ್ಣಗೊಂಡರೆ, ಅದರ ಬಿಲ್‌ಗಳನ್ನು ಪಾವತಿಸಲು ಅಗತ್ಯ ಪ್ರಕ್ರಿಯೆಗಳನ್ನು ಪಾಲಿಕೆ ಕೈಗೊಳ್ಳಬೇಕಾಗುತ್ತದೆ, ಏಕೆಂದರೆ ಪಾಲಿಕೆಯೇ ದಾಖಲೆಗಳ ಮೂಲ ವಾರಸುದಾರ.

ಅದೇ ನನ್ನ ಬಳಿ ದಾಖಲೆ ಇಲ್ಲ ಎಂದು ನೆಪ ಹೇಳಲಾಗದು. ಒಂದು ವೇಳೆ ದಾಖಲೆಯ ಪ್ರತಿ ಇಲ್ಲದಿದ್ದರೂ ಅದು ಸಂಬಂಧಿಸಿದ ಲೋಕಾಯುಕ್ತ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿ, ಪ್ರಮಾಣೀಕೃತ ಪ್ರತಿಯನ್ನು ಪಡೆದುಕೊಳ್ಳಬಹುದು' ಎಂದು ನ್ಯಾಯಾಲಯ ಆದೇಶದಲ್ಲಿ ತಿಳಿಸಿದೆ.

ತನಿಖಾ ಸಂಸ್ಥೆ ಜಪ್ತಿ ಮಾಡಿರುವ ದಾಖಲೆಗಳನ್ನು ಪಡೆದುಕೊಳ್ಳುವ ಗೋಜಿಗೆ ಹೋಗದೆ, ಅರ್ಜಿದಾರರು ಸಲ್ಲಿಸಿದ್ದ ಬಿಲ್ ಪಾವತಿಗೆ ಪ್ರಕ್ರಿಯೆ ನಡೆಸದ ಪಾಲಿಕೆ ಕ್ರಮ ಸರಿಯಲ್ಲ ಎಂದೂ ನ್ಯಾಯಪೀಠ ಹೇಳಿದೆ.

ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪ್ರಕರಣ ಬಾಕಿ ಇದೆ ಅದನ್ನು ಪರಿಗಣಿಸಿ ಪಾಲಿಕೆ ಬಿಲ್ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಆದೇಶಿಸಿದೆ.

ಪ್ರಕರಣದ ಹಿನ್ನೆಲೆ: ಸಿವಿಲ್ ಗುತ್ತಿಗೆದಾರರಾದ ಅರ್ಜಿದಾರರು ಪಾಲಿಕೆಗೆ 2006ರಲ್ಲಿ ಕಸ ತುಂಬಿಕೊಂಡು ಹೋಗುವ 131 ತಳ್ಳುವ ಗಾಡಿಗಳು, ಎರಡು ಕಾಂಪ್ಯಾಕ್ಟ್ ಮತ್ತು ಘನ ತ್ಯಾಜ್ಯ ವಿಲೇವಾರಿಗೆ 9 ಆಟೊಗಳನ್ನು ಪೂರೈಕೆ ಮಾಡಿದ್ದರು. ಆನಂತರ ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲಾಗಿದೆ ಎಂದು ಬಿಲ್ ಪಾವತಿಸುವಂತೆ ಮನವಿ ಸಲ್ಲಿಸಿದ್ದರು. ಆದರೆ ಆಟೊಗಳನ್ನು ಸರಿಯಾಗಿ ಪೂರೈಕೆ ಮಾಡಿಲ್ಲ ಎಂದು ಎಂಜಿನಿಯರ್ ತಗಾದೆ ತೆಗೆದು, ಗುತ್ತಿಗೆಯನ್ನು ರದ್ದುಪಡಿಸುವುದಾಗಿ ಎಚ್ಚರಿಕೆ ನೀಡಿದ್ದರು. ಆಗ ಅರ್ಜಿದಾರರು ಹೈಕೋರ್ಟ್ ಮೊರೆ ಹೋಗಿದ್ದರು.

ಟೆಂಡರ್‌ನಲ್ಲಿ ಅಕ್ರಮ ಕಂಡು ಬಂದಿದ್ದರಿಂದ ನ್ಯಾಯಾಲಯವು ಎಸಿಬಿ ತನಿಖೆಗೆ ಆದೇಶ ನೀಡಿತ್ತು. ತನಿಖೆ ಇನ್ನೂ ಬಾಕಿ ಇರುವಾಗಲೇ ಅರ್ಜಿದಾರರು ಹಣ ಪಾವತಿಸುವಂತೆ ಬಿಬಿಎಂಪಿಗೆ ಮನವಿ ಸಲ್ಲಿಸಿದ್ದರು. ಕಾಮಗಾರಿಯ ಬಿಲ್ ಸೇರಿದಂತೆ ಎಲ್ಲ ದಾಖಲೆಗಳು ತನಿಖಾ ಸಂಸ್ಥೆ ಬಳಿ ಇರುವುದರಿಂದ ಹಣ ಪಾವತಿಸಲಾಗದು ಎಂದು ಪಾಲಿಕೆ ಹೇಳಿತ್ತು. ಅದನ್ನು ಪ್ರಶ್ನಿಸಿ ಅರ್ಜಿದಾರರು ಮತ್ತೆ ಕೋರ್ಟ್ ಮೆಟ್ಟಿಲೇರಿದ್ದರು.

ಲಿಫ್ಟ್‌ನಲ್ಲಿ ಅಸಭ್ಯ ವರ್ತನೆ ಭದ್ರತಾ ಸಿಬ್ಬಂದಿಗೆ ಜೈಲು ಶಿಕ್ಷೆ

ಬೆಂಗಳೂರು: ನಗರದ ಆಸ್ಪತ್ರೆಯೊಂದರ ಲಿಫ್ಟ್‌ನಲ್ಲಿ ಬಾಲಕಿ ಜೊತೆ ಅಸಭ್ಯವಾಗಿ ವರ್ತಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ ಅಪರಾಧಿ ವೆಂಕಟರಮಣಪ್ಪನಿಗೆ (53) 5 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ನಗರದ ಒಂದನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಸಿದ್ದಾಪುರ ಠಾಣೆಯಲ್ಲಿ 2021ರಲ್ಲಿ ದಾಖಲಾಗಿದ್ದ ಪ್ರಕರಣದ ವಿಚಾರಣೆಯನ್ನು ನ್ಯಾಯಾಧೀಶರಾದ ರೂಪಾ ಕೆ.ಎನ್. ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಪಿ. ಕೃಷ್ಣವೇಣಿ ವಾದಿಸಿದ್ದರು.

ಮಾನಸಿಕ ಸಮಸ್ಯೆಯಿಂದ ಬಳಲುತ್ತಿದ್ದ 16 ವರ್ಷದ ಬಾಲಕಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅದೇ ಆಸ್ಪತ್ರೆಯಲ್ಲಿ ಅಪರಾಧಿ ವೆಂಕಟರಮಣಪ್ಪ, ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದ. ಅದೇ ಆಸ್ಪತ್ರೆಯ ಲಿಫ್ಟ್‌ನಲ್ಲಿ ಬಾಲಕಿ ಜೊತೆ ಅಸಭ್ಯವಾಗಿ ವರ್ತಿಸಿ ದೌರ್ಜನ್ಯ ಎಸಗಿದ್ದನೆಂಬ ಆರೋಪವಿತ್ತು. ಈ ಬಗ್ಗೆ ಪೋಷಕರು, ಠಾಣೆಗೆ ದೂರು ನೀಡಿದ್ದರು. ಆರೋಪಿ ಬಂಧಿಸಿದ್ದ ಪೊಲೀಸರು, ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ತಂದೆಗೆ 20 ವರ್ಷ ಶಿಕ್ಷೆ: ಏಳು ವರ್ಷದ ಮಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ತಂದೆಗೆ 20 ವರ್ಷ ಕಠಿಣ ಜೈಲು ಶಿಕ್ಷೆ ವಿಧಿಸಲಾಗಿದೆ. 2023ರಲ್ಲಿ ದಾಖಲಾಗಿದ್ದ ಪ್ರಕರಣದಲ್ಲಿ ನಗರದ ಒಂದನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಈ ಆದೇಶ ಹೊರಡಿಸಿದೆ.

ಪತ್ನಿ ಮನೆಯಲ್ಲಿದ್ದ ವೇಳೆ ಮಗಳ ಮೇಲೆ ತಂದೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಮಗಳ ಮೇಲಿನ ದೌರ್ಜನ್ಯದ ಬಗ್ಗೆ ತಾಯಿ ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ಕಾಡಾನೆ ಹಿಂಡು

ಕನಕಪುರ: ಸಾತನೂರು ಹೋಬಳಿ ಕಬ್ಬಾಳು, ಹಲಗೂರು ರೇಂಜ್, ಕಾವೇರಿ ರೇಂಜ್ ಸುತ್ತಮುತ್ತ ಗುರುವಾರ ರಾತ್ರಿ 15 ಕಾಡಾನೆಗಳ ಹಿಂಡು ಕಾಣಿಸಿಕೊಂಡಿದೆ. ಕಂಚನಹಳ್ಳಿ, ಕುರುಬಳ್ಳಿದೊಡ್ಡಿ ಸಾಸಲಪುರ ಸುತ್ತಮುತ್ತ ಕಟಾವಿಗೆ ಬಂದ ಭತ್ತ ಮತ್ತು ಬಾಳೆ ಬೆಳೆ ಹಾನಿ ಮಾಡಿವೆ.

ಅಸ್ಪೃಶ್ಯತೆ ಹೆಚ್ಚಳ: ಕಠಿಣ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಅಸ್ಪೃಶ್ಯತೆ ಹೆಚ್ಚಾಗುತ್ತಿದ್ದು, ಅದರ ತಡೆಗೆ ಕಠಿಣ ಕ್ರಮ ಕೈಗೊಳ್ಳಬೇಕು. ಸುಳ್ಳು ಜಾತಿ ಪ್ರಮಾಣ ಪತ್ರಗಳು ವಿತರಣೆಯಾದರೆ, ಆಯಾ ಜಿಲ್ಲಾಧಿಕಾರಿ ಮತ್ತು ಪೊಲೀಸ್ ವರಿಷ್ಠಾಧಿಕಾರಿಯನ್ನೇ ಹೊಣೆಗಾರರನ್ನಾಗಿ ಮಾಡಬೇಕು' ಎಂಬುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮ ವಾದ) ಪದಾಧಿಕಾರಿಗಳು ನಗರದಲ್ಲಿ ಪ್ರತಿಭಟನೆ ನಡೆಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸೇರಿದ್ದ ಪ್ರತಿಭಟನಕಾರರು, ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಘೋಷಣೆಗಳನ್ನು ಕೂಗಿ, ಭಿತ್ತಿಪತ್ರಗಳನ್ನು ಪ್ರದರ್ಶಿಸಿದರು.

'ಎಸ್‌.ಸಿ, ಎಸ್‌.ಟಿ ಸಮುದಾಯದವರ ಅಭಿವೃದ್ಧಿಗೆ ಸ್ಥಾಪಿಸಿರುವ ಎಲ್ಲ ನಿಗಮಮಂಡಳಿಗಳಿಗೆಹೆಚ್ಚಿನಅನುದಾನ ಬಿಡುಗಡೆ ಮಾಡಬೇಕು. ರಾಜ್ಯದಲ್ಲಿ ಎಸ್‌.ಸಿ, ಎಸ್‌.ಟಿ ಸಮುದಾಯದವರು ಸ್ಮಶಾನ ಸಮಸ್ಯೆ ಎದುರಿಸುತ್ತಿದ್ದು, ಸ್ಮಶಾನ ನಿರ್ಮಾಣಕ್ಕೆ ಸೂಕ್ತ ಭೂಮಿ ಮಂಜೂರು ಮಾಡಬೇಕು. ಕಾಂತರಾಜ ಆಯೋಗದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷಾ ವರದಿ ಬಿಡುಗಡೆಗೊಳಿಸಬೇಕು' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

'ಎಸ್‌.ಸಿ, ಎಸ್‌.ಟಿ ಸಮುದಾಯದವರಿಗೆ ಖಾಸಗಿ ಕ್ಷೇತ್ರದ ಉದ್ಯೋಗದಲ್ಲಿ ಮೀಸಲಾತಿ ನೀಡಬೇಕು. ಈ ಸಮುದಾಯದವರಿಗೆ ಮೀಸಲಿಟ್ಟಿದ್ದ ಅನುದಾನ ದುರ್ಬಳಕೆ ಆಗಿದ್ದು, ತಪ್ಪಿತಸ್ಥರಿಂದ ಅನುದಾನದ ಹಣವನ್ನು ವಸೂಲಿ ಮಾಡಬೇಕು' ಎಂದು ಆಗ್ರಹಿಸಿದರು.

'ನಮ್ಮ ಬೇಡಿಕೆಗಳ ಈಡೇರಿಕೆಗೆ ರಾಜ್ಯ ಸರ್ಕಾರ ತ್ವರಿತ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ, ಮುಖ್ಯಮಂತ್ರಿ ಅವರು ಪಾಲ್ಗೊಳ್ಳುವ ಕಾರ್ಯಕ್ರಮಗಳಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು' ಎಂದು ಪ್ರತಿಭಟನಕಾರರು ಎಚ್ಚರಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮ ವಾದ) ಪದಾಧಿಕಾರಿಗಳು ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು

ನಟಿ ಲೀಲಾವತಿ ಸಮಾಧಿ ಮೃತ್ತಿಕೆ ವಿಸರ್ಜನೆ

ಶ್ರೀರಂಗಪಟ್ಟಣ: ಪಟ್ಟಣ ಸಮೀಪದ ಪಶ್ಚಿಮವಾಹಿನಿ ಬಳಿ ಕಾವೇರಿ ನದಿಯಲ್ಲಿ ನಟಿ ಲೀಲಾವತಿ ಅವರ ಸಮಾಧಿಯ ಮೃತ್ತಿಕೆಯನ್ನು (ಮಣ್ಣು) ಶುಕ್ರವಾರ ಪುತ್ರ ವಿನೋದ್‌ರಾಜ್ ವಿಸರ್ಜಿಸಿದರು.

ಬಳಿಕ ಗಂಗೆ ಪೂಜೆ ಮಾಡುವ ವೇಳೆ ತಾಯಿಯನ್ನು ನೆನೆದು ಭಾವುಕರಾದರು. ಅವರ ಮನೆಯ ಸಾಕು ಪ್ರಾಣಿಗಳೂ ಆ ಕ್ಷಣಗಳಿಗೆ ಸಾಕ್ಷಿಯಾದವು. ಪಟ್ಟಣದ ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಅರ್ಚಕ ಕೆ.ಎಸ್. ಲಕ್ಷ್ಮೀಶ್ ಶರ್ಮಾ ನೇತೃತ್ವದ ತಂಡ ಪಿಂಡ ಪ್ರದಾನದ ವಿಧಿವಿಧಾನಗಳನ್ನು ನಡೆಸಿಕೊಟ್ಟಿತು.

'ಒಂದೂವರೆ ತಿಂಗಳ ಹಿಂದೆ, ಕಾವೇರಿ ನೀರಿನ ಹಕ್ಕಿಗಾಗಿ ಮಂಡ್ಯದಲ್ಲಿ ರೈತರು ನಡೆಸುತ್ತಿರುವ ಚಳವಳಿಯಲ್ಲಿ ತಾಯಿ ಪಾಲ್ಗೊಂಡಿದ್ದರು. ಈಗ ಅದೇ ಕಾವೇರಿ ನೀರಿನಲ್ಲಿ ಅಮ್ಮನ ಮೃತ್ತಿಕೆಯನ್ನು ಇಷ್ಟು ಬೇಗ ವಿಸರ್ಜನೆ ಮಾಡುವ ಸ್ಥಿತಿ ಬರುತ್ತದೆ ಎಂದು ಊಹಿಸಿರಲಿಲ್ಲ' ಎಂದು ವಿನೋದ್‌ರಾಜ್ ಕಣ್ತುಂಬಿಕೊಂಡು ಹೇಳಿದರು.

ನೈಋತ್ಯ ರೈಲ್ವೆ G20
ಓಪನ್ ಟೆಂಡರ ಸೂಚನೆ ಸಂ.: 18/SBC/23, ದಿನಾಂಕ: 13.12.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	**ಉಪ–ಕಾಮಗಾರಿ–1: ಬೆಂಗಳೂರು–ಸೇಲಂ ವಿಭಾಗ:** ಸಿಟಿಆರ್(ಪಿ) ಕಾಮಗಾರಿಗೆ ಸಂಬಂಧಿಸಿದಂತೆ 11/900–23/0 ಮತ್ತು 72/100–77/0 ಎಸ್‌ಎಲ್ ವರೆಗಿನ 16 ಕಿಮೀ ದೂರಕ್ಕೆ "ಡಿ" ಮಾರ್ಕ್ ರೈಲ್‌ಗಳ ಬದಲಾವಣೆಗಾಗಿ ಭೂಮಿಯ ಕೆಲಸಗಳು. **ಉಪ–ಕಾಮಗಾರಿ–2:** ಚಿಕ್ಕಬಣಾವರ – ಹಾಸನ ವಿಭಾಗದ ಕಾಮಗಾರಿಗೆ ಸಂಬಂಧಿಸಿದಂತೆ ಸೆಸ್ ಕಾಮಗಾರಿ, ನೆಲಮಂಗಲ ಯಾರ್ಡ್‌ನಲ್ಲಿ – 80 ಸಂ. ಪಾಯಿಂಟ್‌ಗಳು ಮತ್ತು ಕ್ರಾಸಿಂಗ್‌ಗಳ ಥ್ರೂ ಬಾಲಾಸ್ಟ್ ರಿಕೌಪ್‌ಮೆಂಟ್ ಕಾಮಗಾರಿ. ನಿರ್ವಹಣೆಯ ಅವಧಿ 06 ತಿಂಗಳು ಅಥವಾ ಒಂದು ಮಾನ್ಸೂನ್ ಅವಧಿ ಇವುಗಳಲ್ಲಿ ಯಾವುದು ನಂತರದಲ್ಲಿ ಬರುವುದೋ ಅದು.	ರೂ. 1,06,80,935/-
2	**ಉಪ–ಕಾಮಗಾರಿ–1:** ಬೆಂಗಳೂರು – ಸೇಲಂ ವಿಭಾಗದಲ್ಲಿ ಸಿಟಿಆರ್(ಪಿ) ಕಾಮಗಾರಿಗಳಿಗೆ ಸಂಬಂಧಿಸಿದಂತೆ 11/900–23/0 ಮತ್ತು 72/100–77/0 ಎಸ್‌ಎಲ್ ವರೆಗಿನ 16 ಕಿಮೀ ದೂರಕ್ಕೆ "ಡಿ" ಮಾರ್ಕ್ ರೈಲ್‌ಗಳ ಬದಲಾವಣೆಗಾಗಿ 6000 ಮೀ.ನ ಬಾಲಾಸ್ಟ್ ರೀಟೇನಿಂಗ್ ಗೋಡೆಯ ನಿರ್ಮಾಣ. **ಉಪ–ಕಾಮಗಾರಿ–2:** ಬೆಂಗಳೂರು – ಸೇಲಂ ವಿಭಾಗದಲ್ಲಿ ಸಿಟಿಆರ್(ಪಿ) ಕಾಮಗಾರಿಗಳಿಗೆ ಸಂಬಂಧಿಸಿದಂತೆ 11/900–23/0 ಮತ್ತು 72/100–77/0 ಎಸ್‌ಎಲ್ ವರೆಗಿನ 16 ಕಿಮೀ ದೂರಕ್ಕೆ "ಡಿ" ಮಾರ್ಕ್ ರೈಲ್‌ಗಳ ಬದಲಾವಣೆಗಾಗಿ 2200 ಮೀ. ಉದ್ದದ ಆರ್‌ಸಿಸಿ ಸೈಡ್ ಡ್ರೈನ್‌ನ ನಿರ್ಮಾಣ. **ಉಪ–ಕಾಮಗಾರಿ–3:** ಚಿಕ್ಕಬಣಾವರ – ಹಾಸನ ವಿಭಾಗದ ಕಾಮಗಾರಿಗೆ ಸಂಬಂಧಿಸಿದಂತೆ 1200 ಮೀ ಉದ್ದದ ಡ್ರೈನ್‌ನ ನಿರ್ಮಾಣ. ನೆಲಮಂಗಲ ಯಾರ್ಡ್‌ನಲ್ಲಿ 08 ಸಂ. ಯ ಪಾಯಿಂಟ್‌ಗಳು ಮತ್ತು ಕ್ರಾಸಿಂಗ್‌ಗಳಲ್ಲಿ ಥ್ರೂ ಬಾಲಾಸ್ಟ್ ರಿಕೌಪ್‌ಮೆಂಟ್. ನಿರ್ವಹಣೆಯ ಅವಧಿ 06 ತಿಂಗಳು.	ರೂ. 4,94,87,274/-
3	**ಉಪ–ಕಾಮಗಾರಿ–1: ಬೆಂಗಳೂರು – ಸೇಲಂ ವಿಭಾಗ:** 11/900–23/000 ಮತ್ತು 72/100–77/000 ಎಸ್‌ಎಲ್ ವರೆಗಿನ 16 ಕಿಮೀ ದೂರಕ್ಕೆ "ಡಿ" ಮಾರ್ಕ್ ರೈಲ್‌ಗಳ ಬದಲಾವಣೆಗಾಗಿ ಸಿಟಿಆರ್(ಪಿ) ಕಾಮಗಾರಿಗಳು. **ಉಪ–ಕಾಮಗಾರಿ–2:** ಬೆಂಗಳೂರು – ಸೇಲಂ ವಿಭಾಗದಲ್ಲಿ ಸಿಟಿಆರ್(ಪಿ) ಕಾಮಗಾರಿಗಳಿಗೆ ಸಂಬಂಧಿಸಿದಂತೆ 11/900–23/000 ಮತ್ತು 72/100–77/000 ಎಸ್‌ಎಲ್ ವರೆಗಿನ 16 ಕಿಮೀ ದೂರಕ್ಕೆ "ಡಿ" ಮಾರ್ಕ್ ರೈಲ್‌ಗಳ ಬದಲಾವಣೆಗಾಗಿ 75 ಸಂ. ಟ್ರಾಲೀ ರೇಫ್ಯೂಜೀಗಳ ನಿರ್ಮಾಣ. **ಉಪ–ಕಾಮಗಾರಿ–3:** ಬೆಂಗಳೂರು – ಸೇಲಂ ವಿಭಾಗದಲ್ಲಿ: 11/900–23/000 ಮತ್ತು 72/100–77/000 ಎಸ್‌ಎಲ್ ವರೆಗಿನ 16 ಕಿಮೀ ದೂರಕ್ಕೆ "ಡಿ" ಮಾರ್ಕ್ ರೈಲ್‌ಗಳ ಬದಲಾವಣೆಗಾಗಿ ಸಿಟಿಆರ್(ಪಿ) ಕಾಮಗಾರಿಗಳಿಗೆ ಸಂಬಂಧಿಸಿದಂತೆ 1 ನಂ. ರೈಲ್ ಬಫರ್‌ನ ನಿರ್ಮಾಣ.	ರೂ. 4,96,36,438/-
4	**ಕೆಎಸ್‌ಆರ್ ಬೆಂಗಳೂರು ಮತ್ತು ಬೆಂಗಳೂರು ದಂಡು: ಕೆಎಸ್‌ಆರ್ ಬೆಂಗಳೂರು ಪ್ರದೇಶದಲ್ಲಿ ಹಸಿರು ಪ್ರದೇಶಗಳಲ್ಲಿ ಪ್ರಸ್ತಾವಿತ ಅಭಿವೃದ್ಧಿ ಕಾರ್ಯಗಳು:** ಕೆಎಸ್‌ಆರ್ ಬೆಂಗಳೂರು ನಿಲ್ದಾಣ ಮತ್ತು ಅದರ ಓಡಾಡುವ ಪ್ರದೇಶ, ಪ್ಲಾಟ್‌ಫಾರ್ಮ್‌ಗಳು, ದ್ವಿತೀಯ ಪ್ರವೇಶ, ತೃತೀಯ ಪ್ರವೇಶ, ವಿಭಾಗೀಯ ಕಚೇರಿ, ರೈಲ್ವೇ ಅಸ್ಪತ್ರೆ, ನಂದಿ ಕ್ಲಬ್, ನಂದಿ ಕಾಲೊನಿಯ ಟ್ರಾನ್ಸಿಟ್ ಫ್ಲಾಟ್‌ಗಳು, ಓಆರ್‌ಹೆಚ್, ಮೇಪಲ್‌ಗಳು, ಎಸ್‌ಟಿಸಿ ಮುಖ್ಯ ದ್ವಾರದ ಹತ್ತಿರ, ಸಿಆರ್‌ಎಸ್ ಕಚೇರಿ, ಡಿಆರ್‌ಎಂ ರೆಸಿಡೆನ್ಸ್ ಕಚೇರಿ, ಎಂಜಿ ಕಾಲೊನಿ ಗಾರ್ಡನ್‌ಗಳು ಅಂದರೆ ಪ್ರವೇಶ, 415/490 ಬ್ಲಾಕ್ ಬಳಿಯ ಗಾರ್ಡನ್, ರೈಲ್ವೆ ಇನ್‌ಸ್ಟಿಟ್ಯೂಟ್, ಸ್ಪೆಪಿಂಗ್ ಸ್ಟೋನ್ ಸ್ಕೂಲ್ ಬಳಿ, ಬ್ಯೂಟ್ರೆಸ್ ಗೋಡೆಯ ಜೊತೆಗೆ, ಮೆಟ್ರೋ ನಿಲ್ದಾಣದ ಹತ್ತಿರ, ಮೆಟ್ರೋ ನಿಲ್ದಾಣದ ಅಪ್ರೋಚ್ ರಸ್ತೆ, 463 ಬ್ಲಾಕ್‌ನ ಮುಂಭಾಗ ಮತ್ತು ಹಿಂಭಾಗ, 455 ರಿಂದ 457 ರವರೆಗಿನ ಬ್ಲಾಕ್‌ಗಳ ಹಿಂಭಾಗ ಮತ್ತು ಇತರ ಪ್ರತ್ಯೇಕ ಸ್ಥಳಗಳು. **ಬೆಂಗಳೂರು ದಂಡು:** ದಂಡು ರೈಲ್ವೆ ನಿಲ್ದಾಣ ಪ್ಲಾಟ್‌ಫಾರ್ಮ್ 1 ಮತ್ತು 2, ಗಾಂಧಿ ಪಾರ್ಕ್ ಮತ್ತು ಹಳೆಯ ಕಾಲೊನಿಯಲ್ಲಿರುವ ಮಕ್ಕಳ ಉದ್ಯಾನವನ, ರೈಲ್ ಹೌಸ್, ರೈಲ್ ಹೌಸ್ / ನರ್ಸರಿ ಮತ್ತು ಇತರ ಪ್ರತ್ಯೇಕ ಸ್ಥಳಗಳು ಇತ್ಯಾದಿ. ಒಂದು ವರ್ಷದ ಅವಧಿಗೆ (12 ತಿಂಗಳು)	ರೂ. 1,69,60,895/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08.01.2024, 15:00 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
PUB/578/AAD/PRB/SWR/2023-24 ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಬೆಂಗಳೂರು
South Western Railway - SWR | SWRRLY | SWRRLY

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ, ಕೋಲಾರ–563101. e-mail: eepwdkolar07@gmail.com, website: www.kpwd.gov.in, e-portal : http://kppp.karnataka.gov.in
ದೂರವಾಣಿ ಸಂಖ್ಯೆ: 08152-222022, ಫ್ಯಾಕ್ಸ್ ಸಂಖ್ಯೆ: 08152-227443

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು –4
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ–19/2023–24
ದಿನಾಂಕ: 16.12.2023
ಉಲ್ಲೇಖ: ಅಧೀಕ್ಷಕ ಇಂಜಿನಿಯರ್ ರವರ ಪತ್ರ ಸಂ:6796/23–24 ದಿನಾಂಕ: 16.12.2023

ಕೋಲಾರ ಜಿಲ್ಲೆ ಕೋಲಾರ ತಾಲ್ಲೂಕು ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 8443– ಠೇವಣಿ ವಂತಿಗೆ ಅಡಿಯಲ್ಲಿ 1 ಕಟ್ಟಡ ನಿರ್ಮಾಣ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗೆ ಟೆಂಡರ್‌ಗಿಟ್ಟ ಮೊತ್ತ: **ರೂ. 349.54 ಲಕ್ಷಗಳು. ಇ.ಎಂ.ಡಿ ಮೊತ್ತ :ರೂ. 5.24 ಲಕ್ಷಗಳು. ಕಾಲಾವಧಿ : 11 ತಿಂಗಳು** ನಿರ್ವಹಿಸಲು 2ನೇ ದರ್ಜೆ ಮತ್ತು ಮೇಲ್ಪಟ್ಟ ನೊಂದಾಯಿತ ಗುತ್ತಿಗೆದಾರರಿಂದ ಕೆಪಿಪಿಪಿ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯು–4 ರ ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ (Viz., https://kppp.karnataka.gov.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಕೆಪಿಪಿಪಿ ಪೋರ್ಟಲ್‌ನಲ್ಲಿ **ದಿನಾಂಕ: 03.01.2024 ರಂದು ಸಂಜೆ 16.00 ಗಂಟೆ** ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು **ದಿನಾಂಕ: 04.01.2024 ರಂದು ಸಂಜೆ 16.30** ಗಂಟೆಯ ನಂತರ ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರಕ್ಯೂರ್‌ಮೆಂಟ್ ಪ್ರೊಟಾಲ್ (Viz., https://kppp. karnataka. gov.in) ನಲ್ಲಿ ಸಂಪರ್ಕಿಸಬಹುದಾಗಿದೆ ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಯಾವುದೇ ಬದಲಾವಣೆಗಳಾದಲ್ಲಿ ಇ–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು/ ಸೂಚಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್,
ಲೋ.ಇ. ಕೋಲಾರ ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:276/ಕೆಎಸ್‌ಎಂಸಿಎ/2023–24

ನೈಋತ್ಯ ರೈಲ್ವೆ G20
ಇ–ಟೆಂಡರು ಸೂಚನೆ ಸಂ.: 41/2023, ದಿನಾಂಕ: 14.12.2023
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:
ಸಂಕ್ಷಿಪ್ತವಾದ ವಿವರಣೆ: ಆರ್‌ಡಿಎಸ್‌ಓ ಟಿಎಎನ್ ಸಂ. ಎಸ್‌ಟಿಎಸ್/ಟಿಎಎನ್/3007 (ಆವೃತ್ತಿ 1.0 ಅಥವಾ ಇತ್ತೀಚಿನ ಮಾದರಿಗೆ ಸಮಾನವಾದ) ಎಲ್ಲಾ ಬಿಡಿಭಾಗಗಳಾದ ಕೀಬೋರ್ಡ್, ಮೌಸ್, ಆಂಟಿವೈರಸ್ ಇತ್ಯಾದಿ, ಕೈಗಾರಿಕಾ ದರ್ಜೆಯುಳ್ಳ ಫಾನ್ ರಹಿತ (ಮೋಕ್ಸಾ ವಿ2406 ಅಥವಾ ಅದಕ್ಕಿಂತ ಉತ್ತಮವಾದ) ಇಂಡಸ್ಟ್ರಿಯಲ್ ಗ್ರೇಡ್ ಎಂಬೆಡೆಡ್ ಪಿಸಿಯ ಪೂರೈಕೆ. **(ಪರಿಮಾಣ: 34 ಸಂ.)**
(ಟೆಂಡರು ಸಂ. L8236076B)
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08.01.2024, 10:30 ಗಂಟೆಯವರೆಗೆ**
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಬೆಂಗಳೂರು
PUB/571/AAD/PRB/SWR/2023-24
South Western Railway - SWR | @SWRRLY | SWRRLY

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ನಮ್ಮ ಕಕ್ಷಿದಾರರು, ಷೆಡ್ಯೂಲ್‌ನಲ್ಲಿ ವಿವರಿಸಿರುವ ಜಮೀನನ್ನು(**ಷೆಡ್ಯೂಲ್ ಸ್ವತ್ತು**), ಮೆಸರ್ಸ್. ಎಸ್ ಕೆ ಪಿ ಡೆವಲಪರ್ಸ್ ಎಲ್ ಎಲ್ ಪಿ ರವರಿಂದ ಖರೀದಿಸಲು ಇಚ್ಛಿಸಿರುತ್ತಾರೆ. ಸದರಿ ಮಾಲೀಕರು ಷೆಡ್ಯೂಲ್ ಸ್ವತ್ತಿನ ಸಂಪೂರ್ಣ ಮಾಲೀಕರಾಗಿ, ಅದನ್ನು ಮಾರಾಟಮಾಡುವ ತಡೆರಹಿತ ಹಕ್ಕನ್ನು ಹೊಂದಿರುತ್ತಾರೆ.

ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಅಥವಾ ಅದರ ಯಾವುದೇ ಭಾಗಕ್ಕೂ ಜಮೀನಿನ ಮೇಲೆ ಯಾವುದೇ ರೀತಿಯಲ್ಲಿ ಹಕ್ಕು ಪ್ರತಿಪಾದನೆ, ಮಾಲೀಕತ್ವ, ಆಸಕ್ತಿ ಹೊಂದಿರುವ ಅಥವಾ ಸದರಿ ಖರೀದಿಯ ವಿರುದ್ಧ ಯವುದೇ ಆಕ್ಷೇಪಣೆ ಇದ್ದಲ್ಲಿ ತಾವು ಯಾವ ಆಧಾರದ ಮೇಲೆ ಅಂತಹ ಹಕ್ಕು ಪ್ರತಿಪಾದನೆ, ಮಾಲೀಕತ್ವ, ಆಸಕ್ತಿ ಹೊಂದಿದ್ದೀರಿ ಎಂಬುದರ ಬಗ್ಗೆ ದಾಖಲೆಗಳ ಸಹಿತ, ಈ ಸಾರ್ವಜನಿಕ ಪ್ರಕಟಣೆ ಪ್ರಕಟಗೊಂಡ **ಹದಿನಾಲ್ಕು** (14) ದಿನಗಳೊಳಗೆ ಕೆಳಗೆ ಸಹಿ ಮಾಡಿರುವವರಿಗೆ ಲಿಖಿತ ರೂಪದಲ್ಲಿ ತಮ್ಮ ಆಕ್ಷೇಪಣೆಯನ್ನು ಸಲ್ಲಿಸತಕ್ಕದ್ದು. ಸದರಿ ಅವಧಿಯಲ್ಲಿ ಅಂತಹ ಯವುದೇ ಆಕ್ಷೇಪಣೆಗಳು ಬಾರದಿದ್ದ ಪಕ್ಷದಲ್ಲಿ, ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಮೇಲಿನ ಮಾಲೀಕರ ಹೊರತಾಗಿ ಮತ್ತಾರಿಗೂ ಯಾವುದೇ ಹಕ್ಕು, ಅಧಿಕಾರ, ಆಸಕ್ತಿಗಳಿಲ್ಲ ಎಂದು ಪರಿಗಣಿಸಿ ಮತ್ತು ಷೆಡ್ಯೂಲ್ ಸ್ವತ್ತಿನ ಮೇಲೆ ಯವುದೇ ಹಕ್ಕು ಇಲ್ಲವೆಂದು ಮತ್ತು ಒಂದುವೇಳೆ ಅಂತಹ ಹಕ್ಕು ಇದ್ದರು ಅದನ್ನು ಪರಿತ್ಯಜಿಸಿದ್ದಾರೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಖರೀದಿಗೆ ಮುಂದಾಗುವರು.

ಷೆಡ್ಯೂಲ್ ಸ್ವತ್ತು
(ಷೆಡ್ಯೂಲ್ ಸ್ವತ್ತಿನ ವಿವರ)

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಹೊಂಗಸಂದ್ರ ಗ್ರಾಮದ ಸರ್ವೆ ನಂಬರ್ 55/6 ಮತ್ತು ಹಾಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ವಾರ್ಡ್ ನಂ. 190 ರ ಖಾತಾ ನಂ. 920/905/889 ರಲ್ಲಿ 85,058.25 ಚದರ ಅಡಿ ವಿಸ್ತೀರ್ಣ ಇರುವ ಜಮೀನಿಗೆ ಚಕ್ಕುಬಂದಿ:–

ಪೂರ್ವ : ಬೆಂಗಳೂರು ಸೇಲಂ ರಾಷ್ಟ್ರೀಯ ಹೆದ್ದಾರಿ; (ಹೊಸೂರು ಹೆದ್ದಾರಿ)
ಪಶ್ಚಿಮ : ಸರ್ವೆ ನಂ. 55/5 ರ ಊರಬಾಗಿಲ ಕೃಷ್ಣಪ್ಪರವರ ಜಮೀನು;
ಉತ್ತರ : ಸರ್ವೆ ನಂ. 55/7 ರ ಎಸ್. ಎಸ್. ಕೆ. ಸ್ವಾಮಿರವರ ಜಮೀನು;
ದಕ್ಷಿಣ : ಸರ್ವೆ ನಂ. 49 ರ ಸಿ. ಚಿಕ್ಕಬೇಗೂರು ವೆಂಕಟಸ್ವಾಮಪ್ಪರವರ ಜಮೀನು;

ದಿನಾಂಕ: 23.12.2023
ಸ್ಥಳ: ಬೆಂಗಳೂರು.

ವಿಶಾಲ್ ಭಟ್, ಪಾಲುದಾರರು,
ವಕೀಲರು, ಅನೋಮ ಲೀಗಲ್, ಎ1 ಟವರ್, ಒಂದನೇ ಮಹಡಿ, ಗೋಲ್ಡನ್ ಎನ್‌ಕ್ಲೇವ್, ಕಾರ್ಪೋರೇಟ್ ಬ್ಲಾಕ್, ಹೆಚ್.ಎ.ಎಲ್ ಹಳೇ ವಿಮಾನ ನಿಲ್ದಾಣ ರಸ್ತೆ, ಬೆಂಗಳೂರು – 560 017.
ಈ–ಮೇಲ್– bengaluru@anomalegal.com

ಐಸಿಎಆರ್–ರಾಷ್ಟ್ರೀಯ ಪಶು ಪೋಷಣೆ ಮತ್ತು ಶರೀರ ಕ್ರಿಯಾ ವಿಜ್ಞಾನ ಸಂಸ್ಥೆ
ಆಡುಗೋಡಿ, ಬೆಂಗಳೂರು–560 030
ಕೃಷಿ ಸಂಶೋಧನೆ ಮತ್ತು ಶಿಕ್ಷಣ ಇಲಾಖೆ, ಭಾರತ ಸರ್ಕಾರ
ಎನ್‌ಐಎಎನ್‌ಪಿ/ಎಡಿವಿ–6–ಸಿಡಿಎನ್/2023–24
ಐಸಿಎಆರ್ – ಎನ್‌ಐಎಎನ್‌ಪಿ, ಬೆಂಗಳೂರು ಇವರಲ್ಲಿನ ಒಂದು (01) ಯಂಗ್ ಪ್ರೊಫೆಷನಲ್–1 ಹುದ್ದೆಗೆ, ಮಾಸಿಕ ರೂ. 30,000/– ಕ್ರೋಢಿಕೃತ ಸಂಭಾವಣೆ ಆಧಾರದಲ್ಲಿ ನೇಮಕಾತಿಗಾಗಿ, ಆಡಳಿತದ ಅಡಿಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 04.01.2024 ರಂದು ಬೆಳಗ್ಗೆ 10.30 ಗಂಟೆಗೆ ನೇರ ಸಂದರ್ಶನ. ವಿವರವಾದ ಜಾಹೀರಾತಿಗಾಗಿ ಸಂಸ್ಥೆಯ www.nianp.res.in ವೆಬ್‌ಸೈಟ್‌ಗೆ ಭೇಟಿ ಕೊಡಿ. ಸಹಿ/– ಆಡಳಿತಾಧಿಕಾರಿ

ಭಾರತ ಸರ್ಕಾರ, ಬಾಹ್ಯಾಕಾಶ ಇಲಾಖೆ,
ನಿರ್ಮಾಣ ಮತ್ತು ನಿರ್ವಹಣೆ ವಿಭಾಗ
ಎಲ್‌ಪಿಎಸ್‌ಸಿ ಕ್ಯಾಂಪಸ್, 80 ಅಡಿ ರಸ್ತೆ, ಹೆಚ್‌ಎಎಲ್ 2ನೇ ಹಂತ, ಬೆಂಗಳೂರು–560008. ದೂ: 080–25037 131/174/214
ದಿನಾಂಕ: 22.12.2023

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಈ ಕೆಳಕಂಡ ಕಾಮಗಾರಿಗಾಗಿ ಐಟಂದರದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು	ಬೆಂಗಳೂರಿನ ಎಲ್‌ಪಿಎಸ್‌ಸಿ(ಬಿ) ಕ್ಯಾಂಪಸ್‌ನಲ್ಲಿನ ಎಲ್‌ಎನ್2 ಕ್ಯಾಲಿಬ್ರೇಷನ್ ಸೌಲಭ್ಯದಲ್ಲಿ ನವೀಕರಣ ಕಾಮಗಾರಿಗಳು
ಟೆಂಡರ್ ಪ್ರಕಟಣೆ ಸಂಖ್ಯೆ	ಸಿಎಂಡಿ/ಎಲ್‌ಪಿಎಸ್‌ಸಿ(ಬಿ)/ಸಿ/ಎಂಐ/32/2023–24 ದಿನಾಂಕ: 22.12.2023
ಅಂದಾಜು ಮೊತ್ತ	₹ 7.44 ಲಕ್ಷಗಳು
ಪೂರ್ಣಗೊಳಿಸುವ ಅವಧಿ	1 ತಿಂಗಳು
ಮಾರಾಟದ ಅವಧಿ	22.12.2023 ರಿಂದ 31.12.2023 ರ ವರೆಗೆ
ಇಎಂಡಿ	₹ 14,880/-

ಆಸಕ್ತಿಯುಳ್ಳ ಟೆಂಡರ್‌ದಾರರು ದಯವಟ್ಟು www.tenderwizard.com/ISRO ಪರಿವೀಕ್ಷಿಸಿ. ಅಲ್ಲದೇ ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳನ್ನೊಳಗೊಂಡ ವಿವರವಾದ ಟೆಂಡರ್ ಪ್ರಕಟಣೆಯನ್ನು (ಎನ್‌ಐಟಿ) ವೆಬ್‌ಸೈಟ್ www.isro.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಿ .

ಸಹಿ/- ಮುಖ್ಯಸ್ಥರು ಸಿಎಂಡಿ, ಎಲ್‌ಪಿಎಸ್‌ಸಿ(ಬಿ)



MATHIKERE: Old Raghu Med. **Ph: 91484 50662. K R PURAM :** Nr. TC Palya signal, **Ph: 76195 55537. BANASHANKARI:** Opp. Big Bazaar, **Ph: 99000 46931. MARATHAHALLI:** Opp. Innovative, **Ph: 91484 50665/64. BOMMANAHALLI:** Next to Shell Petrol , **Ph: 99000 46913. YELAHANKA NEW TOWN:** Opp Yelahanka Central Mall, **Ph: 99000 46918. SAHAKAR NAGAR:** Next to Swati Garden, **Ph: 99000 46937. HEBBAGODI:** Opp SKF, Next to KFC, **Ph: 76195 55541. BASVESHWARA NAGAR:** Modi Hospital Road,**Ph: 99000 46934. R.T NAGAR:** Next to Police Station, **Ph:99000 29308. SANJAY NAGAR:** Next to HDFC Bank, **Ph: 99000 46928. DEVANAHALLI:** Opp. Indian Oil, **Ph: 91481 40111. HOSAKOTE:** Next to Chemmanur, **Ph: 91081 78999. AKSHAY NAGAR:** DLF City, Opp. Hiranandani, **Ph: 99000 46943. HONGASANDRA:** Opp SBI, Begur Road, **Ph: 95915 26018. COX TOWN:** Next to Gymkhana, **Ph: 99000 46930. FRAZER TOWN:** Opp. Canara Bank , **Ph: 99000 12851. GANGA NAGAR:** Opp Vishal Medicals, **Ph: 99000 46949. HANUMANTH NAGAR:** Opp. Canara Bank, **Ph: 99000 46940. HEGGANAHALLI:** Opp Bus Stop, **Ph: 76195 55506. HESARAGHATTA MN RD:** Opp. Karnataka Bank, **Ph: 76195 55543. HRBR LAYOUT:** Near Banaswadi Club, **Ph: 99000 46946. HSR LAYOUT:** Opp NIFT, 27 Main, **Ph: 99000 18126. KOTHANUR:** Next to Empire Hotel, **Ph: 99002 37116. NAGARBHAVI:** Ambedkar Col. Signal, **Ph: 99725 97017. SUNKADAKATTE:** Magadi Road, **Ph: 76195 55509. RR NAGAR:** Opp. BBMP Office, **Ph: 99000 18217. PEENYA T DASARAHALLI :** Next to Honda Showroom, **Ph: 91485 70490 . VIJAYANAGAR:** Opp. Water Tank, **Ph: 99000 12420. KENGERI:** Opp. DS Max, **Ph: 99000 12609. RAMANAGARA:** Near Izoor P Stn., **Ph: 99000 98795. NELAMANGALA:** Opp. Shell Petrol Station, **Ph: 99001 15781. KOLAR:** Opp Honda, **Ph: 99001 09852. TUMKUR:** Opp. SIT, Batwadi, **Ph: 91086 71999. DODDABALLAPUR:** Talulk Office Road, **Ph: 9900046923.**

LG BEST SHOPS: BANGALORE: RAMA MURTHY NAGAR, Ph:99000 46915. BANASHANKARI, Ph: 99000 29309. HRBR LAYOUT, Ph: 95133 05557. MATHIKERE, Ph: 91484 50663. NAGARBHAVI, Ph: 99725 97043. PEENYA, Ph: 99000 12439. SAHAKAR NAGAR (NXT TO SWATI GARDEN), Ph: 95133 05559. MYSORE: Kuvempunagar, **Ph: 91489 99894**

*Terms and conditions apply. On select brands and products. Limited period offers. Images are for representation only, not actual products. Free gift not applicable for samsung. Finance at the sole discretion of the financier. #20% cash back as per the offers by banks and finance companies.

50+ STORES | BENGALURU | MYSORE | TUMKUR | HOSAKOTE | RAMANAGARA | KOLAR | NELAMANGALA | MANDYA | CHITRADURGA | DODDABALLAPURA | SHIVAMOGGA | HASSAN | www.uniletstores.com

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Agricultural Land Converted

Kanakapura Road

FOR SALE Gabadi Gramatana, Herohalli Taluk, Kanakapura District, 32 Guntas. K.K. REALTORSS, Contact: 9741437555, 6366623666

Commercial Land

Banashankari

"40X60 COMMERCIAL Property for Sale Hosakerehalli 100 feet Ring Road Banashankari 3rd Stage, 2nd Phase. 9845500019/ 7019314962"

Mysore Road

COMMERCIAL LAND Outright Sale- 5 Acres on Mysore Road , Mayaganahalli, Brokers Excuse. Ph:7259785149, 8123999299

Vishweshwariah Layout

SITES SALE- Commercial 50x80, 80 Feet Road, Visveshwaraiah Layout 4th Block & NGEF Malathalli 30x40 West, 40 Feet Road-9886784539

Commerical

Peenya

3848 SQFT Office Space Available For Sale @ Jalahalli Cross Peenya Bangalore Contact No.9845305214

Farm House/ Land/ Resorts

Multiple Locations

NANDI HILLS rd 1/2 acre converted land 15 furnished AC rooms lawn garden villa sale 9Cr Ph: 7019346409

Industrial & Factory

Bommasandra

FACTORY FOR SALE: BENGALURU. Bommasandra Ind'l Area, 10 Acres KIADB freehold land with approx 5 lakh sq.ft Sheds, P&M & Vehicles. Agents Welcome. CALL: 9619676255 OR 7899802070. Email: sbpl.liquidator@gmail.com '

Mysore Road

SALE NEW Timber Layout Mysore Road 3650sft Shed In Sundar Industrial Estate Rental Returns 9845027192

Sites

Gnanabharathi

AVAILABLE 30X40 40ft Road South Facing Near Udupi Hotel Gnanabharthi 3rd Block 40x60 EF: 9380732662

***30X40 BDA** Katha* Park Facing Site Sale Railway Layout 1st Stage, Close to Gnanabharathi, 9742681666'

Nagarabhavi

AVAILABLE NAGARABHAVI Site D Group 30×40 West Facing BDA Katha Genuine Buyers Contact: 9743381719

Intl Airport Road

30x40 Converted Plots @ 1,80,000/- 150/- per sq.ft, 90 minutes Journey from Yelahanka Ready for Registration 9343510635

Jayanagar

45X40 WEST facing, Jayanagar 1st Block, Near Ashok Pillar. K.K. REALTORSS Mob: 9741437555, 6366623666

Kanakapura Road

JAYANAGAR HOUSING SOCIETY BDA SITE SALE 30X40 WEST 10,950/- NEGOTIABLE NEAR 80FT ROAD: 9538680364/ 9740150364

KANAKAPURA ROAD Kaggalipura BMRDA APPROVED 'E" Khatha 30x40, 30x50, East Facing, 3500/- Negotioble: 9538680364/ 9986146147

Kempegowda Layout

KEMPEGOWDA LAYOUT, BDA SITE FOR SALE 20X30 30X40, 40X60, 50X80 CONTACT KUMAR: 9945119449

COMMERCIAL SiteFor Sale, Kempegowda Layout 8th Block,Size:163X100, West Face, BDA,NOC,NNA, Conversion Land, Leagal Documnents, Price:4500/- Sq.Ft. Ph:9448793428, 9632227878

"KEMPEGOWDA LAYOUT 4th-Block 'F'-Sector 30x40 North_facing BDA SITE for_sale 6200/-per.sqft. "AVM_REAL ESTATE"- 9845171543/ 9513666788

Mysore Road

VIJAYASHREE LAYOUT Mailasandra Mysore Road. PLOT for SALE in BBMP Approved Layout includes BESCOM BWSSB SERVICES 2400.Sqft (40x60) East`Facing 30 Feet`Road 8,000/- per`sqft. Please Call: 9043506571.

Nelamangala

60X40 SITE_SALE Premium Location 100_Meter Golden Palms_Resort, Near-to Unibic_Factory Husukur Road,Alur Bangalore. 2050/-Sqft Genuine`Buyers Contact:9632330007 9986420007

Rajarajeshwari Nagar

RR-NAGAR 66X40 EAST FACING A KHATA RESIDENCIAL SITE GOOD LOCATION. 200 MTRS FROM TANISHQ: 9448288522

Vishweshwariah Layout

AVAILABLE BDA Site 20X30 Vishveshwariah Layout 2nd Block, Builder Location 47 Lacks Contact Buyers: 9844603127

DIRECT OWNER 40x60 E/FBDA #2194 Site Sale VISHVESWARAIAH LAYOUT 1st Block, 60ft-Road, Rs.10800/- 9886634578

AVAILABLE VISHVESHWARAIAH Layout 4th Block 30x40 East Facing Good Location Price 6000/- Contact: 9901156708

SITES FOR Sale No.581 SMV 5th Block 50X80 40X60 30X40 Commercial 100ft Road:8951748434/ 9448484176

BUYING / SELLING 30x40 Sites at Nagarabhavi, Vishweshwaraiah Railway Layout. Call- 7022530085

30X40 VISHVESHWARAIAH Layout North 2nd Block 100ft Road Parall 8000/- & 40X60 Site Sale 6th Block Direct Owner Near KLE Law College: 8550003509

WEEKEND CORNER
ಕ್ಲಾಸಿಫೈಡ್ಸ್



AVAILABLE BDA Site 30X40 W/F 6th Block Vishveshwariah Layout 7500/- Psft Contact Only Buyers:9844603127

Yelahanka

EAST FACING 30x40 BBMP site Sushilamma layout, Yelahanka,1.15 Crores. Contact. BG VENTURES LLP 6364678601

Mysore

HUNSUR ROAD Kuberananda Sagara Layout, 50X80 Site#691, 1.K.M. From Main Road. 2000/- Per Sqft. 9945724472.

House

Magadi Road

SALE GF Single Bedroom House 1st & 2nd Floor 3Bed House Kadabagere Contact Gangadhar: 9632824856

KBL FARM VILLE

Luxurious country side living.
Villa Farm plots for sale in Srirangapatna, near Mysore-Bangalore Expressway Toll.
Contact for more details & bookings.
9686833300, 6364342244

AVAILABLE FOR RENT / SALE

6000 SQ FT RCC BUILDING GROUND & 1ST FLOOR SUITABLE FOR GODOWN / GARMENT FACTORY AT KADIRENAHALLI. 1.5 KMS FROM BSK METRO ON UTTARAHALLI MAIN ROAD WITH BOREWELL & 70 HP POWER
CONTACT : 98455 55505

Vijayanagar

30X40 G+2 House Vijayanagar, Venkateshwara Layout, Attached BCC Layout, EF, 40ft Road, 2Cr: 9448673482

Malleshwaram

OLD HOUSE for Sale at Malleshwaram 30x70 East facing, 15th Cross, 4th Temple Main Road. Contact: 8660800061

Vishweshwariah Layout

"VISHVESWARAIAH 8TH-BLOCK 20x30 3BHK duplex House, & 6th Block 30x40 East facing Site. 9945698808"

Flat

Hanumanthnagar

SALE 3BHK Flat 1050 Sqft 4th floor 726, 6th cross, near Webster School Ashokanagar 145 Lakhs (Fixed) call: 9945455503

Nagarabhavi

FLATS FOR-SALE 2 & 3 BHK Near Nagarabhavi circle under construction 1 km from metro-station 95388-28808 98450-66608

J P Nagar

SALE OVER 10 YEAR, SEMI-FURNISHED 2 BHK FLAT 1080 SQFT, WITH ROOFED CAR-PARKING JPNAGAR 5TH PHASE: 9986763007

ಮನೆಗೆ ನುಗ್ಗಿ ದರೋಡೆ: ಪೀಣ್ಯ ಠಾಣೆ ವ್ಯಾಪ್ತಿಯಲ್ಲಿ ಘಟನೆ • ರೌಡಿಗಳು ಸೇರಿ 11 ಮಂದಿ ಸೆರೆ

ಉಪ ವಲಯ ಅರಣ್ಯಾಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಚ್‌ಎಂಟಿ ಬಡಾವಣೆಯಲ್ಲಿರುವ ಉದ್ಯಮಿಯೊಬ್ಬರ ಮನೆಗೆ ಪೊಲೀಸರ ಸೋಗಿನಲ್ಲಿ ನುಗ್ಗಿ ದರೋಡೆ ಮಾಡಿದ್ದ ಆರೋಪದಡಿ ಉಪ ವಲಯ ಅರಣ್ಯಾಧಿಕಾರಿ ಹಾಗೂ ಇಬ್ಬರು ರೌಡಿಗಳು ಸೇರಿದಂತೆ 10 ಮಂದಿಯನ್ನು ಪೀಣ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಡಿ. 4ರಂದು ರಾತ್ರಿ ನಡೆದಿದ್ದ ದರೋಡೆ ಸಂಬಂಧ ಉದ್ಯಮಿ ದೂರು ನೀಡಿದ್ದರು. ದಾವಣಗೆರೆ ಜಿಲ್ಲೆಯ ಚನ್ನಗಿರಿ ಉಪ ವಲಯ ಅರಣ್ಯಾಧಿಕಾರಿ ಸುರೇಂದ್ರ, ಟ್ಯಾಟೂ ಕಲಾವಿದ ಸೂರ್ಯ, ರೌಡಿಗಳಾದ ನವಾಜ್, ಶಹಬಾಜ್, ಉಸ್ಮಾನ್, ರಾಹೀಲ್, ನಾಗರಾಜ್, ಅನಿಲ್ ಕುಮಾರ್ ಸೇರಿ 11 ಮಂದಿಯನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸರು ತಿಳಿಸಿದರು.

ಆರೋಪಿಗಳಿಂದ ಜಪ್ತಿ ಮಾಡಲಾದ ಚಿನ್ನಾಭರಣ, ನಗದು ಹಾಗೂ ಇತರೆ ವಸ್ತುಗಳನ್ನು ಪೊಲೀಸ್ ಕಮಿಷನರ್ ಬಿ. ದಯಾನಂದ್ ವೀಕ್ಷಿಸಿದರು. (ಎಡದಿಂದ) ಇನ್‌ಸ್ಪೆಕ್ಟರ್ ಎಂ.ಎಸ್. ಅನಿಲ್‌ಕುಮಾರ್, ಡಿಸಿಪಿ ಸೈದುಲು ಅಡಾವತ್ ಹಾಗೂ ಎಸಿಪಿ ಸದಾನಂದ ತಿಪ್ಪಣ್ಣನವರ ಇದ್ದಾರೆ

‘ಬಂಧಿತ ಆರೋಪಿಗಳಿಂದ 273 ಗ್ರಾಂ ಚಿನ್ನಾಭರಣ, ₹ 23.37 ಲಕ್ಷ ನಗದು, 370 ಗ್ರಾಂ ಬೆಳ್ಳಿ ಸಾಮಗ್ರಿ, 13 ಮೊಬೈಲ್‌ಗಳು, 2 ದ್ವಿಚಕ್ರ ವಾಹನ ಹಾಗೂ ಮಾರಕಾಸ್ತ್ರಗಳನ್ನು ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ದೂರುದಾರರ ಬಳಿ ಕೆಲಸ: ‘ದೂರುದಾರರು ಹಣಕಾಸಿನ ವ್ಯವಹಾರ ನಡೆಸುತ್ತಿದ್ದರು. ಆರೋಪಿಗಳ ಪೈಕಿ ಒಬ್ಬಾತ, ದೂರುದಾರರ ಬಳಿ ಲಾರಿ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಹಣ ಸಂಗ್ರಹದ ಬಗ್ಗೆ ಮಾಹಿತಿ ತಿಳಿದುಕೊಂಡಿದ್ದ. ಕೆಲ ತಿಂಗಳ ಹಿಂದೆಯಷ್ಟೇ ಕೆಲಸ ಬಿಟ್ಟಿದ್ದ ಈತ, ಇತರೆ ಆರೋಪಿಗಳ ಜೊತೆ ಸೇರಿ ದರೋಡೆಗೆ ಸಂಚು ರೂಪಿಸಿದ್ದ’ ಎಂದು ಪೊಲೀಸರು ತಿಳಿಸಿದರು.

‘ಉಪ ವಲಯ ಅರಣ್ಯಾಧಿಕಾರಿ ಎಸ್.ಬಿ. ಸುರೇಂದ್ರ, ರೌಡಿ ಜೊತೆ ಒಡನಾಟ ಹೊಂದಿದ್ದ. ದರೋಡೆಗೆ ಸಂಚು ರೂಪಿಸಿದ್ದಾಗಿ ಹೇಳಿದ್ದ ರೌಡಿ, ಸಮವಸ್ತ್ರದಲ್ಲಿ ಬಂದು ಬೆದರಿಸುವಂತೆ ಸುರೇಂದ್ರಗೆ ಕೋರಿದ್ದ. ಬಂದ ಹಣದಲ್ಲಿ ಪಾಲು ನೀಡುವುದಾಗಿಯೂ ರೌಡಿ ಹೇಳಿದ್ದ’ ಎಂದು ವಿವರಿಸಿದರು.

ಪೊಲೀಸ್ ಎಂಬುದಾಗಿ ಪರಿಚಯ: ‘ಅರಣ್ಯ ಇಲಾಖೆ ಸಮವಸ್ತ್ರದಲ್ಲಿದ್ದ ಸುರೇಂದ್ರ, ದೂರುದಾರರ ಮನೆಗೆ ಹೋಗಿ ಬಾಗಿಲು ಬಡಿದಿದ್ದ. ತಾಯಿ ಜೊತೆಗಿದ್ದ ದೂರುದಾರ ಬಾಗಿಲು ತೆಗೆದಿದ್ದರು. ‘ನಾನು ಪೊಲೀಸ್ ಅಧಿಕಾರಿ. ನಿಮ್ಮ ಮನೆ ಪರಿಶೀಲನೆಗೆ ಬಂದಿದ್ದೇನೆ’ ಎಂದು ಆರೋಪಿ ಹೇಳಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಕೆಲ ಕ್ಷಣಗಳಲ್ಲಿ ಇತರ ಆರೋಪಿಗಳು ಸ್ಥಳಕ್ಕೆ ಬಂದಿದ್ದರು. ಎಲ್ಲರೂ ಸೇರಿ ಮನೆಯೊಳಗೆ ನುಗ್ಗಿದ್ದರು. ಮಾರಕಾಸ್ತ್ರ ತೋರಿಸಿ ಚಿನ್ನಾಭರಣ, ನಗದು ಹಾಗೂ ಇತರೆ ವಸ್ತುಗಳನ್ನು ದೋಚಿ ಪರಾರಿಯಾಗಿದ್ದರು. ಮನೆ ಅಕ್ಕ–ಪಕ್ಕದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲನೆ ನಡೆಸಿದಾಗ, ಆರೋಪಿಗಳ ಮುಖಚಹರೆ ಪತ್ತೆಯಾಗಿತ್ತು. ಅದೇ ಸುಳಿವು ಆಧರಿಸಿ ತನಿಖೆ ಆರೋಪಿಗಳನ್ನು ವಶಕ್ಕೆ ಪಡೆದಾಗ, ತಪ್ಪೊಪ್ಪಿಕೊಂಡರು’ ಎಂದು ಮೂಲಗಳು ಹೇಳಿವೆ.

ಕ್ರಿಸ್‌ಮಸ್...

ಕ್ರಿಸ್ಮಸ್ ಹಬ್ಬದ ಹಿನ್ನೆಲೆಯಲ್ಲಿ ನಗರದ ಚರ್ಚ್ ಸ್ಟ್ರೀಟ್‌ನ ಕೇಕ್ ಅಂಗಡಿಯೊಂದರ ಎದುರು ಗಮನ ಸೆಳೆದ ಸಾಂತಾಕ್ಲಾಸ್ ಪ್ರತಿಕೃತಿ

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಪಿಡಿಒಗಳ ವರ್ಗದಲ್ಲಿ ದಾಖಲೆ!

ಒಂದನೇ ಪುಟದಿಂದ

2023–24ನೇ ಸಾಲಿನಲ್ಲಿ ಈವರೆಗೆ ಒಟ್ಟು 1,562 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ.

ಇದೇ ಮೊದಲ ಬಾರಿಗೆ ಪಿಡಿಒ ಹುದ್ದೆಗಳನ್ನು ರಾಜ್ಯ ವೃಂದ ಎಂದು ನಿರ್ಧರಿಸಿದ್ದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಅಂತರ ಜಿಲ್ಲಾ ವರ್ಗಾವಣೆಗೆ ಚಾಲನೆ ನೀಡಿತ್ತು. ಜುಲೈ 4ರಿಂದ ಆರಂಭವಾದ ಪಿಡಿಒಗಳ ವರ್ಗಾವಣೆ ಪ್ರಕ್ರಿಯೆ ಇನ್ನೂ ನಿಂತಿಲ್ಲ. ನೂರಾರು ಪಿಡಿಒಗಳಿಗೆ ಸ್ಥಳ ತೋರಿಸದೇ ವರ್ಗಾವಣೆ ಮಾಡಿದ್ದು, ಅವರಲ್ಲಿ ಬಹುತೇಕರು ಪಂಚಾಯತ್ ರಾಜ್ ಆಯುಕ್ತಾಲಯದ ಕಚೇರಿ ಸುತ್ತುತ್ತಲೇ ಇದ್ದಾರೆ.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆದ ವಿಧಾನಮಂಡಲ ಅಧಿವೇಶನದಲ್ಲಿ ದೇವರ ಹಿಪ್ಪರಗಿ ಕ್ಷೇತ್ರದ ಶಾಸಕ ಭೀಮನಗೌಡ (ರಾಜುಗೌಡ) ಬಸನಗೌಡ ಪಾಟೀಲ ಪ್ರಶ್ನೆಗೆ ವಿಧಾನಸಭೆಯಲ್ಲಿ ನೀಡಿರುವ ಉತ್ತರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರೇ ಈ ಮಾಹಿತಿ ಹಂಚಿಕೊಂಡಿದ್ದಾರೆ.

ಮೈಸೂರು ಜಿಲ್ಲೆಯಲ್ಲಿ ಅತ್ಯಧಿಕ 161 ಪಿಡಿಒಗಳನ್ನು ವರ್ಗಾವಣೆ ಮಾಡಲಾಗಿದೆ. ಹಾಸನ (105), ಮಂಡ್ಯ (100), ಬಾಗಲಕೋಟೆ (92) ನಂತರದ ಸ್ಥಾನಗಳಲ್ಲಿವೆ. ಬಳ್ಳಾರಿ (11), ಯಾದಗಿರಿ (12), ವಿಜಯನಗರ ಮತ್ತು ಧಾರವಾಡ (ತಲಾ 17) ಜಿಲ್ಲೆಗಳಲ್ಲಿ ಕಡಿಮೆ ಸಂಖ್ಯೆಯ ಪಿಡಿಒಗಳ ವರ್ಗಾವಣೆ ಮಾಡಲಾಗಿದೆ. ಗ್ರಾಮೀಣಾಭಿವೃದ್ಧಿ ಸಚಿವರ ತವರು ಜಿಲ್ಲೆ ಕಲಬುರಗಿಯಲ್ಲಿ 64 ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ವರ್ಗಾವಣೆಯಾಗಿದೆ.

ಸರ್ಕಾರಿ ನೌಕರರ ಸಾಮಾನ್ಯ ವರ್ಗಾವಣೆ ಅವಧಿಯಲ್ಲಿ ಆಯಾ ವೃಂದಬಲದ ಶೇ 6ರಷ್ಟು ಮಂದಿಯನ್ನು ವರ್ಗಾವಣೆ ಮಾಡುವ ಅಧಿಕಾರವನ್ನು ಸಚಿವರಿಗೆ ನೀಡಲಾಗಿತ್ತು. ಆ ಮಿತಿಯನ್ನು ಮೀರಿದ ಸಂಖ್ಯೆಯ ವರ್ಗಾವಣೆಗಳಿಗೆ ಮುಖ್ಯಮಂತ್ರಿಯವರ ಅನುಮೋದನೆ ಪಡೆದು ಆದೇಶ ಹೊರಡಿಸಲು ಅವಕಾಶ ನೀಡಲಾಗಿತ್ತು.

ಸಾಮಾನ್ಯ ವರ್ಗಾವಣೆ ನಿಯಮಗಳ ಪ್ರಕಾರ, ಒಟ್ಟು 312 ಪಿಡಿಒಗಳ ವರ್ಗಾವಣೆಗೆ ಮಾತ್ರ ಅವಕಾಶವಿತ್ತು. 850 ಪಿಡಿಒಗಳನ್ನು ಹೆಚ್ಚುವರಿಯಾಗಿ ವರ್ಗಾವಣೆ ಮಾಡಿರುವುದನ್ನು ಸಚಿವರು ವಿಧಾನಸಭೆಗೆ ನೀಡಿದ ಉತ್ತರದಲ್ಲಿ ಬಹಿರಂಗಪಡಿಸಿದ್ದಾರೆ.

ಶೇ 14.85ರಷ್ಟು ಆದೇಶಗಳಿಗೆ ತಡೆ

1,562 ವರ್ಗಾವಣೆ ಆದೇಶಗಳ ಪೈಕಿ 232 (ಶೇ 14.85) ಪಿಡಿಒಗಳ ವರ್ಗಾವಣೆಗೆ ಕರ್ನಾಟಕ ಆಡಳಿತ ನ್ಯಾಯಮಂಡಳಿ (ಕೆಎಟಿ) ತಡೆಯಾಜ್ಞೆ ನೀಡಿದೆ. ಕೆಎಟಿ ಮತ್ತು ನ್ಯಾಯಾಲಯಗಳ ಆದೇಶಗಳನ್ನು ಉಲ್ಲಂಘಿಸಿರುವುದು, ಸ್ಥಳ ನಿಯುಕ್ತಿಗೊಳಿಸದೇ ವರ್ಗಾವಣೆ ಮಾಡಿರುವುದು, ವಯೋನಿವೃತ್ತಿಯ ಅಂಚಿನಲ್ಲಿರುವ ಅಧಿಕಾರಿಗಳು ಮತ್ತು ನೌಕರರನ್ನು ವರ್ಗಾವಣೆ ಮಾಡಬಾರದು ಎಂಬ ನಿಯಮ ಉಲ್ಲಂಘಿಸಿರುವ ಕಾರಣದಿಂದ ವರ್ಗಾವಣೆ ಆದೇಶಗಳಿಗೆ ಕೆಎಟಿ ತಡೆಯಾಜ್ಞೆ ನೀಡಿದೆ ಎಂಬ ಮಾಹಿತಿಯನ್ನು ಸಚಿವರು ನೀಡಿದ್ದಾರೆ.

ಒಂದು ಸ್ಥಳದಲ್ಲಿ ಕನಿಷ್ಠ ಎರಡು ವರ್ಷಗಳ ಸೇವಾವಧಿ ಪೂರ್ಣಗೊಳಿಸಿದವರನ್ನು ವರ್ಗಾವಣೆ ಮಾಡಲು ನಿಯಮಗಳಲ್ಲಿ ಅವಕಾಶವಿದೆ. ಅವಧಿ ಪೂರ್ಣಗೊಳ್ಳುವ ಮುನ್ನವೇ ವರ್ಗಾಯಿಸಲಾಗಿದೆ ಎಂಬ ಕಾರಣಕ್ಕೆ 186 ಪಿಡಿಗಳ ವರ್ಗಾವಣೆ ಆದೇಶಕ್ಕೆ ಕೆಎಟಿ ತಡೆ ನೀಡಿದೆ ಎಂಬುದನ್ನು ಸಚಿವರು ಉತ್ತರದಲ್ಲಿ ತಿಳಿಸಿದ್ದಾರೆ.

ಹೈದರಾಬಾದ್ ರೇಸ್

ರೂಬಿ ರೆಡ್ ಗೆಲ್ಲುವ ನಿರೀಕ್ಷೆ

ಚೈತನ್ಯ ಚಕ್ರಂ ಕಪ್ ಶನಿವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ರೂಬಿ ರೆಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:15ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಲಿಂಡಾ 6, ಕ್ಯಾನನ್ ರೋಸ್ 5, ಡ್ಯಾಪರ್ ಲುಕ್ 2
2ನೇ ರೇಸ್: ಅಲೆಕ್ಸಿನಾ 3, ಅದ್ಭುತ್ 5, ಹ್ಯಾಪಿ ಗೋ ಲಕ್ಕಿ 6
3ನೇ ರೇಸ್: ವಾರ್‌ವಿಕ್ 2, ಥಂಡರ್ ನೈಟ್ 1, ಮಿಕ್ಸ್ ದಿ ಮ್ಯಾಜಿಕ್ 2
4ನೇ ರೇಸ್: ಕೆನಾಫ್ 2, ಮ್ಯಾಗ್ನಮ್ 7, ಗಾರ್ನೆಟ್ 3
5ನೇ ರೇಸ್: ಡೆಕ್ಕನ್ ಡೈಸಿ 4, ಪಾಂಚೊ 2, ಗ್ರೇಟ್ ಗೀವರ್ 1
6ನೇ ರೇಸ್: ರೂಬಿ ರೆಡ್ 11, ಡೆಕಾಯ್ 5, ಕ್ಲೇರ್ 9
7ನೇ ರೇಸ್: ಎಮಿನೆನ್ಸಿ 1, ಇಂದರ್‌ಧನುಶ್ 6, ಟಾರ್ಟಿಲಾ ಚಿಪ್ 4

ಉತ್ತಮ ಬೆಟ್: ಕೆನಾಫ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
3,4,5,6,7	2,3,4	5,6,7

ಸಿಸಿಬಿ ಪೊಲೀಸರಿಂದ ಐವರ ಬಂಧನ

ನಕಲಿ ದಾಖಲೆ: ₹3 ಕೋಟಿ ಸಾಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೃದ್ಧೆಯೊಬ್ಬರ ಆಸ್ತಿಯ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಬ್ಯಾಂಕ್‌ವೊಂದರಲ್ಲಿ ₹ 3 ಕೋಟಿ ಸಾಲ ಪಡೆದು ವಂಚಿಸಿರುವ ಐವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಜೆ.ಪಿ.ನಗರದ ನಿವಾಸಿಯಾಗಿರುವ ವೃದ್ಧೆ, ವಂಚನೆಗೆ ಸಂಬಂಧಪಟ್ಟಂತೆ ಪುಟ್ಟೇನಹಳ್ಳಿ ಠಾಣೆಗೆ ದೂರು ನೀಡಿದ್ದರು. ಅದರನ್ವಯ ದಾಖಲಾಗಿದ್ದ ಪ್ರಕರಣದ ತನಿಖೆಯ ಜವಾಬ್ದಾರಿಯನ್ನು ಸಿಸಿಬಿಗೆ ವಹಿಸಲಾಗಿತ್ತು. ಆರೋಪಿಗಳಾದ ಭಾಸ್ಕರ್, ಅಭಿಷೇಕ್ ಗೌಡ, ಮಹೇಶ್, ಅರುಣ್ ಹಾಗೂ ಶಿವಕುಮಾರ್‌ನನ್ನು ಸೆರೆ ಹಿಡಿಯಲಾಗಿದೆ’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ಕೆನರಾ ಬ್ಯಾಂಕ್‌ನ ನಿವೃತ್ತ ವ್ಯವಸ್ಥಾಪಕರಾಗಿದ್ದ ವೃದ್ಧೆಗೆ ಸೇರಿದ್ದ 1,350 ಅಡಿ ವಿಸ್ತೀರ್ಣದ ಬಿಡಿಎ ನಿವೇಶನದಲ್ಲಿ ಎರಡು ಅಂತಸ್ತಿನ ಮನೆ ನಿರ್ಮಿಸಲಾಗಿದೆ. ಅದೇ ಮನೆಯಲ್ಲಿ ವೃದ್ಧೆ ವಾಸವಿದ್ದಾರೆ. ಇವರ ಮಕ್ಕಳು ವಿದೇಶದಲ್ಲಿ ನೆಲೆಸಿದ್ದಾರೆ. ವಿದೇಶಕ್ಕೆ ಹೋಗಿ ಮಕ್ಕಳ ಜೊತೆ ಇರಲು ತೀರ್ಮಾನಿಸಿದ್ದ ವೃದ್ಧೆ, ಮನೆ ಮಾರಾಟ ಮಾಡಲು ತೀರ್ಮಾನಿಸಿದ್ದರು.’

‘ಪಕ್ಕದ ಮನೆಯ ನಿವಾಸಿ ಮೂಲಕ ರಿಯಲ್ ಎಸ್ಟೇಟ್ ಏಜೆಂಟರನ್ನು ಸಂಪರ್ಕಿಸಿದ್ದ ವೃದ್ಧೆ, ಮನೆಯ ದಾಖಲೆಗಳನ್ನು ನೀಡಿದ್ದರು. ಅದೇ ದಾಖಲೆಗಳನ್ನು ಬಳಸಿಕೊಂಡು ಆರೋಪಿಗಳು, ನಕಲಿ ದಾಖಲೆ ಸೃಷ್ಟಿಸಿದ್ದರು. ಪ್ರತ್ಯೇಕವಾಗಿ ಮೂರು ಬ್ಯಾಂಕ್‌ಗಳಿಗೆ ದಾಖಲೆಗಳನ್ನು ನೀಡಿ ವೃದ್ಧೆ ಹೆಸರಿನಲ್ಲಿ ₹ 3 ಕೋಟಿ ಸಾಲ ಪಡೆದುಕೊಂಡಿದ್ದರು’ ಎಂದು ಪೊಲೀಸರು ತಿಳಿಸಿದರು.

ಬ್ಯಾಂಕ್ ವ್ಯವಸ್ಥಾಪಕಿಗೆ ನೋಟಿಸ್: ‘ಐವರು ಆರೋಪಿಗಳನ್ನು ಬಂಧಿಸಿ, ಅವರ ಬ್ಯಾಂಕ್ ಖಾತೆಗಳ ವಹಿವಾಟು ನಿಷ್ಕ್ರಿಯಗೊಳಿಸಲಾಗಿದೆ. ಸಾಲ ಪಡೆಯಲು ನೆರವಾಗಿದ್ದ ಬ್ಯಾಂಕ್‌ವೊಂದರ ವ್ಯವಸ್ಥಾಪಕಿಗೆ ನೋಟಿಸ್ ನೀಡಲಾಗಿದ್ದು, ವಿಚಾರಣೆ ನಡೆಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಸಿಸಿಬಿ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಹೇರ್ ಡ್ರೈಯರ್ ಬಳಸುತ್ತಿದ್ದಾಗ ಬೆಂಕಿ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಕಂಪನಿಯ ಮಹಿಳಾ ಎಂಜಿನಿಯರೊಬ್ಬರು ಹೇರ್ ಡ್ರೈಯರ್ ಬಳಸಿ ತಮ್ಮ ತಲೆಕೂದಲು ಒಣಗಿಸುತ್ತಿದ್ದ ಸಂದರ್ಭದಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಈ ಬಗ್ಗೆ ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡವೊಂದರ ಮಾಲೀಕ ಪೊಲೀಸರಿಗೆ ದೂರು ನೀಡಿದ್ದಾರೆ.

‘ಮಹಿಳಾ ಎಂಜಿನಿಯರ್ ಅವರ ನಿರ್ಲಕ್ಷ್ಯದಿಂದ ಪೀಠೋಪಕರಣಗಳಿಗೆ ಹಾನಿ ಆಗಿದೆ’ ಎಂದು ದೂರಿನಲ್ಲಿ ಮಾಲೀಕ ಆರೋಪಿಸಿರುವುದಾಗಿ ಗೊತ್ತಾಗಿದೆ. ದೂರು ಸ್ವೀಕರಿಸಿರುವ ಎಲೆಕ್ಟ್ರಾನಿಕ್ ಸಿಟಿ ಠಾಣೆ ಪೊಲೀಸರು, ಪರಿಶೀಲನೆ ನಡೆಸುತ್ತಿದ್ದಾರೆ.

‘ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿ ಮಹಿಳಾ ಎಂಜಿನಿಯರ್ ಉಳಿದುಕೊಂಡಿದ್ದಾರೆ. ಸ್ನಾನ ಮುಗಿಸಿದ್ದ ಅವರು, ಹೇರ್ ಡ್ರೈಯರ್ ಬಳಸಿ ತಲೆಕೂದಲು ಒಣಗಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಹೇರ್ ಡ್ರೈಯರ್‌ನಿಂದ ಬೆಂಕಿ ಹೊತ್ತಿಕೊಂಡಿತ್ತು. ಭಾಗಶಃ ತಲೆಕೂದಲುಗಳು ಸುಟ್ಟಿದ್ದವು. ಭಯದಲ್ಲಿ ಹೇರ್ ಡ್ರೈಯರ್ ಎಸೆದಿದ್ದರಿಂದ, ಪೀಠೋಪಕರಣಗಳಿಗೂ ಬೆಂಕಿ ಹೊತ್ತಿಕೊಂಡಿತ್ತು. ಅಕ್ಕ–ಪಕ್ಕದ ಯುವತಿಯರು ಹಾಗೂ ಸಿಬ್ಬಂದಿ ಸ್ಥಳಕ್ಕೆ ಬಂದು ಬೆಂಕಿ ನಂದಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

ಬೈಕ್ ಸವಾರ ಸಾವು

ಶಿಡ್ಲಘಟ್ಟ: ತಾಲ್ಲೂಕಿನ ಯಣ್ಣಂಗೂರು ಗೇಟ್ ಬಳಿ ನಡೆದ ಬೈಕ್ ಮತ್ತು ಟೆಂಪೊ ನಡುವಿನ ಅಪಘಾತದಲ್ಲಿ ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ನಡಿಪಿನಾಯಕನಹಳ್ಳಿಯ ಮೋಹನ್ (21) ಮೃತ ಯುವಕ. ಗುರುವಾರ ರಾತ್ರಿ ಎಟಿಎಂನಿಂದ ಹಣ ಡ್ರಾ ಮಾಡಿಕೊಂಡು ಬರಲು ಹೋಗಿದ್ದಾಗ ಈ ಘಟನೆ ನಡೆದಿದೆ.

ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಸಂಸ್ಥಾಪಕರ ದಿನಾಚರಣೆಯಲ್ಲಿ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು

ಜಯಪ್ರಕಾಶ್ ನಾರಾಯಣ್ ಜನ್ಮದಿನಾಚರಣೆ

‘ಶಿಕ್ಷಣ, ಆರೋಗ್ಯ ಗ್ಯಾರಂಟಿಯಾಗಲಿ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ಐದು ಗ್ಯಾರಂಟಿಗಳೊಂದಿಗೆ ಶಿಕ್ಷಣ ಹಾಗೂ ಆರೋಗ್ಯ ಸೇವೆಯನ್ನು ಸರ್ಕಾರ ಖಾತ್ರಿಗೊಳಿಸಲಿ ಎಂದು ಕಾಂಗ್ರೆಸ್ ಮುಖಂಡ ಬಿ.ಎಲ್. ಶಂಕರ್ ಒತ್ತಾಯಿಸಿದರು.

ಡಾ.ಬಿ.ಆರ್ ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ ಸಂಸ್ಥಾಪಕ ಎಂ.ಎಚ್. ಜಯಪ್ರಕಾಶ್ ನಾರಾಯಣ್ ಅವರ 97ನೇ ಜನ್ಮ ದಿನ ಹಾಗೂ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಶಿಕ್ಷಣ ಮತ್ತು ಆರೋಗ್ಯ ಸೇವೆ ತುಟ್ಟಿಯಾಗಿದೆ. ಸಾಮಾನ್ಯ ಜನರ ಜೀವನವನ್ನು ದುಬಾರಿಯಾಗಿಸಿದೆ. ಸರ್ಕಾರಗಳು ಈ ಎರಡು ಪ್ರಮುಖ ಮೂಲ ಸೌಕರ್ಯದತ್ತ ಗಮನ ಹರಿಸಬೇಕಿದೆ ಎಂದರು.

ಪಿವಿಪಿ ಟ್ರಸ್ಟಿ ಹಾಗೂ ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ‘ಎಂ.ಎಚ್. ಜಯಪ್ರಕಾಶ್ ಅವರ ದೂರದೃಷ್ಟಿಯ ಫಲವಾದ ಪಿವಿಪಿ ಟ್ರಸ್ಟಿನಲ್ಲಿ ಪ್ರಸ್ತುತ 4,500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದು, 23 ಅಂಗ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ’ ಎಂದು ಹೇಳಿದರು.

ಟ್ರಸ್ಟ್ ಅಧ್ಯಕ್ಷ ಎಸ್. ಮರಿಸ್ವಾಮಿ, ಕಾರ್ಯದರ್ಶಿ ಎಸ್. ಶಿವಮಲ್ಲು, ಖಜಾಂಚಿ ಎಂ. ಮಹದೇವ, ಎನ್.ಸಿ.ಶಿವಪ್ರಕಾಶ, ಎಲ್. ಎಂ.ಪಟ್ನಾಯಕ್, ಪ್ರಾಂಶುಪಾಲರಾದ ಎಂ. ಮೀನಾಕ್ಷಿ, ಉಪ ಪ್ರಾಂಶುಪಾಲ ಡಾ.ಸಿದ್ದರಾಜು ಭಾಗವಹಿಸಿದ್ದರು.

‘ನನ್ನ ತಟ್ಟೆಯಲ್ಲಿ ಸಿರಿಧಾನ್ಯಗಳ ಪುನರುತ್ಥಾನ’ ಕಾರ್ಯಕ್ರಮದಲ್ಲಿ ಕೃಷಿ ಸಚಿವ

ಸಿರಿಧಾನ್ಯ ಬೆಳೆಯುವವರಿಗೆ ಪ್ರೋತ್ಸಾಹ ಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿರಿಧಾನ್ಯ ಬೆಳೆಯುವ ರೈತರಿಗೆ ಸರ್ಕಾರ ಪ್ರೋತ್ಸಾಹ ಧನ ನೀಡಲಿದೆ ಎಂದು ಕೃಷಿ ಸಚಿವ ಚೆಲುವರಾಯ ಸ್ವಾಮಿ ತಿಳಿಸಿದರು.

ಜನವರಿ 5 ರಿಂದ 7ರವರೆಗೆ ನಡೆಯಲಿರುವ ಅಂತರರಾಷ್ಟ್ರೀಯ ಸಾವಯವ ಸಿರಿಧಾನ್ಯ ಮೇಳದ ಪೂರ್ವಭಾವಿಯಾಗಿ ನಗರದ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ ಗುರುವಾರ ನಡೆದ ‘ನನ್ನ ತಟ್ಟೆಯಲ್ಲಿ ಸಿರಿಧಾನ್ಯಗಳ ಪುನರುತ್ಥಾನ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಈ ಹಿಂದೆ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದಾಗ ಮೊದಲ ಬಾರಿಗೆ ಅಂತರರಾಷ್ಟ್ರೀಯ ಸಾವಯವ ಸಿರಿಧಾನ್ಯ ಮೇಳ ಆಯೋಜಿಸಲಾಗಿತ್ತು. ಇದೀಗ ಮತ್ತೊಮ್ಮೆ ಸಿರಿಧಾನ್ಯ ಮೇಳವನ್ನು ದೊಡ್ಡ ಮಟ್ಟದಲ್ಲಿ ಏರ್ಪಡಿಸಲಾಗುತ್ತಿದೆ. ಸರ್ಕಾರ ಸಿರಿಧಾನ್ಯಗಳಿಗೆ ಹೆಚ್ಚಿನ ಪ್ರಾಧಾನ್ಯ ನೀಡುತ್ತಿದೆ. ಸಿರಿಧಾನ್ಯಗಳ ಮಹತ್ವ ಕುರಿತು ವಿದ್ಯಾರ್ಥಿ ಸಮೂಹದಲ್ಲಿ ಅರಿವು ಮೂಡಿಸಲಾಗುತ್ತಿದೆ’ ಎಂದರು.

‘ನನ್ನ ತಟ್ಟೆಯಲ್ಲಿ ಸಿರಿಧಾನ್ಯಗಳ ಪುನರುತ್ಥಾನ’ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು ಸಿರಿಧಾನ್ಯ ಉತ್ಪನ್ನಗಳನ್ನು ಕುತೂಹಲದಿಂದ ವೀಕ್ಷಿಸಿದರು.

ಕೃಷಿ ಇಲಾಖೆ ಆಯುಕ್ತ ವೈ.ಎಸ್. ಪಾಟೀಲ್ ಮಾತನಾಡಿ, ‘ಬರಗಾಲವನ್ನು ಎದುರಿಸಿ ಬೆಳೆಯುವ ಶಕ್ತಿ ಸಿರಿಧಾನ್ಯಗಳಿಗಿದೆ. ಕಡಿಮೆ ನೀರಿನಿಂದ ಬೆಳೆಯುವ ಇಂಥ ಉತ್ಪನ್ನಗಳನ್ನು ಪ್ರೋತ್ಸಾಹಿಸಬೇಕು’ ಎಂದರು.

‘ಸಿರಿಧಾನ್ಯಗಳಿಂದ ಹಲವು ರೀತಿಯ ಖಾದ್ಯಗಳನ್ನು ತಯಾರಿಸಲಾಗುತ್ತಿದೆ. ಯುವ ಸಮೂಹ ಇಷ್ಟಪಡುವ ಪಿಜ್ಜಾ, ಬರ್ಗರ್‌ನಂತಹ ಉತ್ಪನ್ನಗಳನ್ನು ಸಹ ಸಿರಿಧಾನ್ಯಗಳಿಂದ ತಯಾರಿಸಲಾಗುತ್ತಿದೆ’ ಎಂದು ಹೇಳಿದರು.

ಕೃಷಿ ಇಲಾಖೆ ಕಾರ್ಯದರ್ಶಿ ವಿ. ಅನ್ಬುಕುಮಾರ್ ಮಾತನಾಡಿ, ‘ಕೆಲ ದಶಕಗಳ ಹಿಂದೆ ಸಿರಿಧಾನ್ಯಗಳು ನಮ್ಮ ದೈನಂದಿನ ಆಹಾರವಾಗಿದ್ದವು. ಈಗ ಸಿರಿಧಾನ್ಯವನ್ನು ಮತ್ತೆ ಪರಿಚಯಿಸಬೇಕಾದ ಪರಿಸ್ಥಿತಿ ಉಂಟಾಗಿದೆ’ ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ವಾರ್ಷಿಕ ₹ 270 ಕೋಟಿ ಮೌಲ್ಯದ ಸಿರಿಧಾನ್ಯಗಳನ್ನು ರಫ್ತು ಮಾಡುತ್ತಿದ್ದು, ವಿದೇಶಗಳಲ್ಲೂ ಸಿರಿಧಾನ್ಯಗಳಿಗೆ ಬೇಡಿಕೆ ಇದೆ. ವಿದ್ಯಾರ್ಥಿಗಳು ಸಿರಿಧಾನ್ಯ ವಲಯದಲ್ಲಿ ನವೋದ್ಯಮಿಗಳಾಗಿ ಹೊರ ಹೊಮ್ಮಬೇಕು ಎಂದು ಸಲಹೆ ನೀಡಿದರು.

ಮೌಂಟ್ ಕಾರ್ಮೆಲ್ ಸ್ವಾಯತ್ತ ಶಿಕ್ಷಣ ಸಂಸ್ಥೆಯ ಸ್ಕೂಲ್ ಆಫ್ ನ್ಯಾಚುರಲ್ ಆ್ಯಂಡ್ ಅಪ್ಲೈಡ್ ಸೈನ್ಸ್‌ನ ಡೀನ್ ಡಾ. ಎ. ಸುಂದರವಲ್ಲಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Flat

Basaveshwaranagar

1300 SFT Fully Furnished 3BHK Flats with Smart Marble Flooring Sharada Colony Basaveshwara Nagar: 9591785454

Villas/Bunglows

Nagarabhavi

50X60 SITE S/F with Posh Bungalow in Bairaveshwar Nagar, Nagarabhavi Main Road. Bangalore. 9341989867.

REAL ESTATE BUYING

Joint Development

Joint Venture

"URGENTLY REQUIRED Property any-dimensions in & around Bangalore for Builders (Joint Venture or Individual). genuine Parties-Call: 9019533999/ 9731379933"

Sites

Banashankari

BDASITES WANTED Anjanapura Arkhavathy Banashankari 6th Stage, Vishweshwaraiah, Kempegowda Any BDA LayoutContact: 9845062822 8660751654

Jayanagar

WANTED SITE or Old house 30x40, 40x60 in Jayanagar/ Jayanagar 'T' Block. Agents Excuse. 8971013882.

Kammanahalli

WANTED SITES/ Old Houses, HRBR, HBR, KAMMANAHALLI, OMBR, KASTURINAGAR Contact FALCON Nehru Road HRBR Opp Axis: 9845447868

Kanakapura Road

WANTED SITE 30x40, 40x60 Anjanapura, NarayanaNagar, BCMC Layout, J.P.Nagar, Gubblala, BCC Layout. Agents Excuse. 9380647082.

Multiple Locations

ANJANAPURA-ARKAVATHI, Banashankari 6th Stage, Vishweswaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

5_BHK DUPLEX house / office for Rent 7,000 sq. ft with basement parking for 3 lakhs & 3,000 sq. ft office space for Rent on 2nd floor Kumara park West serpentine Road. Rent 1.5 lakhs Ph - 9900065660, 8971192652,

COMMERCIAL : Fully Furnished Grade A IT Office Space 4500.sft to 9000.sft AVAILABLE for RENT near Yeshwanthpur Metro with all amenities. 9916155055.

RENT SHOWROOM SPACE G+1 4960sft HRBR Ring Road OFFICE SPACE FULL BUILDING 14000sft Hayes Road off Residency Road 8867580471 8050897262

Paying Guest

HSR LAYOUT 7th-Sector 40x60 Brand New-Building PG 50 Rooms Rental-income 6 Lakhs, 10.50Cr Contact.9945079777

JOB OPPORTUNITIES

Drivers

WANTED CAR Driver 2 years Experience, Near To J.P.Nagar, 5th Phase Hulimavu Area Contact: 9986746241

General

REQUIRED VRS are Bank Officials for our Esteem Organisation, Contact: 9480077845.

SOCIAL SERVICES

Old Age Home

BANGALORE-SHELTER HOME with Free Food, Education for Destitute Women, Children and oldage. 7411049247/ 8884572149.

BUSINESS

Business Offers

Finance

WANTED BUSINESS Partners Saree Business 12 Lakhs Investment Monthly Income 2 Lakhs Contact: 8892501007/ 9606701007

PUBLIC NOTICE

PUBLIC NOTICE
IN THE COURT OF THE PRL. SENIOR CIVIL JUDGE, CHIKMAGALURU
EX.8/2022
Decree Holder: D.R. Hanumegowda, since deceased by L.Rs. D.H. Jayaramegowda and others.
V/s
Judgement Debtor: Francis Pinto S/o Ignatious Pinto, Since decased by L.Rs.
1(a) Sri.Mathew Pinto S/o Francis Pinto, since deceased by L.Rs. **1(a)(i).** Smt.Rosy Pinto W/o Late Sri.Mathew Pinto, aged about 60 years. **1(a)(ii).** Smt.Hansel Pinto S/o Late Sri.Mathew Pinto, aged about 38 years. **1(a)(iii).** Sri.Hubert Pinto S/o Late Sri.Mathew Pinto, aged about 35 years. **1(b).** Sri.Felix Pinto S/o Francish Pinto, aged about 63 years. **1(c).** Sri.Stany Pinto S/o Francish Pinto, aged about 61 years. **1(d).** Smt.Marjaino Pinto D/o Francis Pinto, aged about 59 years. L **1(e).** Smt.Evelyn Pinto D/o Francis Pinto, aged about 55 years. **1(f)** Smt. Celine Pinto D/o Francis Pinto, aged about 53 years **1(g)** Smt.Molly Pinto D/o Francis Pinto, aged about 51 years. **1(h)** Smt.Nelly Pinto D/o Francis Pinto, aged about 49 years, **1(i)** Smt.Juliana Pinto D/o Francis Pinto, aged about 47 years, **1(j)** Sri.Rolphy Pinto S/o Francis Pinto, aged about 45 years. **2.** Sri.Urbin Pinto S/o Francis Pinto Since decased by L.Rs **2(b)** Smt.Asha Pinto D/o Urbin Pinto, aged about 35 years, **2(c)** Sri. Avil Pinto S/o Urbin Pinto, aged about 32 years, **2.(d).** Smt. Ashma Pinto D/o. Urbin Pinto, Aged about 30 years, All are Resldnet of Gorigandi, Devadana Village, Sangameshwara Pete Post, Khandya Hobll, Chlkmagalur Taluk and District-577136.
CAUSE NOTICE UNDER ORDER RULE 20 (1A) OF CPC
The notice that the above named Decree Holders have filed the above petition for possession of the suit schedule property as per the decree in O.S.80/1994, therefore you are hereby given notice to appear before the court in person or by a pleader duly instructed on 6.1.24 at 11 am. to answer the claim with documents in support of your defence failing which the matter will be decided in your absence.
Given under my hand and the seal of the court 21.12.2023
Shirastedar, Prl. Senior Civil Judge, Chikamagaluru.
Advocate for Decree Holder, I.S. Thejasvi Advocate
Roll No.KAR 2113/1999, Chikmagaluru.

EDUCATIONAL

Training

NURSERY TEACHERS TRAINING Course at JNANABHARATHI,with in Class Training 6 Months/1 year (offline/online),100% Job Assurance. Call:6363032729

PERSONAL

Change of Name

I,SANDIP MAHATO, changed my name to SANDEEP KUMAR RAI dated: 19.12.2023. Sworn before notary H.S.Sakalesh Aradhya, Bengaluru.

CHANGE OF NAME
I, **JAGADEESH M,** Residing at #2637, Jagadeeshwari Nilaya, Doddabegur, Begur, Bengaluru- 114, declare that my Late Father's name is wrongly mentioned in some documents as **MUNISWAMAPPA** instead of **MUNISHAMAPPA** vide affidavit dt. 22-12-2023, before Notary L. Gopalakrishna, Bengaluru.

CHANGE OF NAME
I, **B.S. SUHIL** s/o. **Abdul Salam,** residing at Biskuru Village, Kudur Hobli, Magadi Taluk, Ramanagara District, Karnataka, have changed my name from **B.S. SUHIL** to **B.S. SUHAIL** vide affidavit dated 13/12/2023 before notary Rajaiah, Ramanagara

CHANGE OF NAME
I, **MOHAMMED ZABIULLA BASHA,** R/at # 187, 8th Main, 8th Cross, Byrasandra, Jayanagar 1st Block, Bengaluru- 11, have changed our minor son's name from **MOHAMMED SHAHZAAN BASHA** to **MOHAMMED SHAZAN ABBAS** vide affidavit dt. 20-12-2023, before Notary Aravind Patil G G, Bengaluru.

CHANGE OF NAME
I, **MUBEENA** W/o. **B.S. Suhil,** residing at Biskuru Village, Kudur Hobli, Magadi Taluk, Ramanagara District, Karnataka, now my husband has changed his name from **B.S. SUHIL** to **B.S. SUHAIL,** Henceforth he shall be known as **B.S. SUHAIL** only. vide affidavit dated 13/12/2023 before notary Rajaiah, Ramanagara

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD
To Place your ad in Deccan Herald & Prajavani Classifieds
For details contact :
9845114560 : 9731810277
080 - 45557163 / 164

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಇಡೀ ವಿಶ್ವವು ಒಂದು ವೇದಿಕೆ ಮತ್ತು ನಾವು ಅಲ್ಲಿ ಪಾತ್ರಧಾರಿಗಳಷ್ಟೇ.

–ವಿಲಿಯಂ ಷೇಕ್ಸ್‌ಪಿಯರ್

ದೇಶದ ಅಂತಃಸಾಕ್ಷಿ ಕಲಕಿದ ಕುಸ್ತಿಪಟು ಸಾಕ್ಷಿ ವಿದಾಯ

ಒಲಿಂಪಿಕ್ ಕೂಟದ ಕುಸ್ತಿ ಕ್ರೀಡೆಯಲ್ಲಿ ಪದಕ ಜಯಿಸಿದ ಭಾರತದ ಮೊದಲ ಮಹಿಳೆ ಸಾಕ್ಷಿ ಮಲಿಕ್. ಹರಿಯಾಣದ ಈ ಕುಸ್ತಿಪಟು ಏಳು ವರ್ಷಗಳ ಹಿಂದೆ ಬ್ರೆಜಿಲ್ ದೇಶದ ರಿಯೊ ಡಿ ಜನೈರೊದಲ್ಲಿ ಜರುಗಿದ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಗೆದ್ದಾಗ ಇಡೀ ದೇಶವೇ ಸಂಭ್ರಮಿಸಿತ್ತು. ಈಗ ಆ ಸಾಕ್ಷಿ ಅವರೇ ರಾಷ್ಟ್ರದ ಆತ್ಮಸಾಕ್ಷಿಯನ್ನು ಕಲಕಿದ್ದಾರೆ. ಅಧಿಕಾರಸ್ಥರೂ ಆತ್ಮಾವಲೋಕನ ಮಾಡಿಕೊಳ್ಳಬೇಕಲ್ಲವೇ ಎಂದು ತಮ್ಮ ನಡೆಯ ಮೂಲಕವೇ ಪ್ರಶ್ನಿಸಿದ್ದಾರೆ. ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷರಾಗಿದ್ದ ಬಿಜೆಪಿ ಸಂಸದ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ದೂರಿ ಸಾಕ್ಷಿ ಸೇರಿದಂತೆ ಖ್ಯಾತನಾಮ ಕುಸ್ತಿಪಟುಗಳು ನವದೆಹಲಿಯ ಜಂತರ್ ಮಂತರ್‌ನಲ್ಲಿ ಧರಣಿ ನಡೆಸಿದ್ದರು. ಅಧ್ಯಕ್ಷ ಸ್ಥಾನದಿಂದ ಬ್ರಿಜ್ ಭೂಷಣ್ ಕೆಳಗಿಳಿಯುವಂತೆಯೂ ಮಾಡಿದ್ದರು. ಈಗ, ಪ್ರತಿಭಟನಕಾರರಿಗೆ ಸಡ್ಡು ಹೊಡೆದಿರುವ ಬ್ರಿಜ್ ಭೂಷಣ್ ತಮ್ಮ ಆಪ್ತ ಸಂಜಯ್ ಕುಮಾರ್ ಸಿಂಗ್ ಅವರನ್ನು ಡಬ್ಲ್ಯುಎಫ್‌ಐ ಅಧ್ಯಕ್ಷರನ್ನಾಗಿ ಗೆಲ್ಲಿಸಿಕೊಂಡು ಬಂದಿದ್ದಾರೆ. ಇದರಿಂದ ಸಾಕ್ಷಿ ಎಷ್ಟೊಂದು ಹತಾಶೆಗೊಂಡಿದ್ದಾರೆಂದರೆ, ಕಣ್ಣೀರು ಸುರಿಸುತ್ತಾ ಕುಸ್ತಿಯಿಂದಲೇ ನಿವೃತ್ತಿ ಘೋಷಿಸಿದ್ದಾರೆ. ಕ್ರೀಡೆಯ ಇತಿಹಾಸದಲ್ಲಿಯೇ ಈ ರೀತಿಯ ನಿವೃತ್ತಿಯನ್ನು ಯಾವ ಕ್ರೀಡಾಪಟುವೂ ಪ್ರಕಟಿಸಿರಲಿಲ್ಲ. ಇಂತಹದ್ದೊಂದು ಸನ್ನಿವೇಶ ಸೃಷ್ಟಿಯಾಗಿದ್ದು ವಿಷಾದದ ಸಂಗತಿ. ಬ್ರಿಜ್ ಭೂಷಣ್ ವಿರುದ್ಧ ನಡೆದ ಹೋರಾಟವನ್ನು ಪ್ರತೀ ಹಂತದಲ್ಲಿ ಹತ್ತಿಕ್ಕುವ ಪ್ರಯತ್ನ ನಡೆದದ್ದನ್ನು ಇಡೀ ದೇಶ ಗಮನಿಸಿದೆ. ಆಗ, ಕುಸ್ತಿಪಟುಗಳು ಪಟ್ಟು ಸಡಿಲಿಸದ ಕಾರಣ ಬ್ರಿಜ್ ಭೂಷಣ್ ವಿರುದ್ಧ ಕೊನೆಗೂ ಎರಡು ಎಫ್‌ಐಆರ್ ದಾಖಲಾದವು. ಹೊಸ ಆಡಳಿತ ಸಮಿತಿಗೆ ಚುನಾವಣೆಯನ್ನೂ ಘೋಷಿಸಲಾಯಿತು. ಆದರೆ, ಚುನಾವಣೆಯನ್ನು ಹಲವು ಬಾರಿ ಮುಂದೂಡುವಂತಹ ಹುನ್ನಾರಗಳು ನಡೆದವು. ಚುನಾಯಿತ ಸಮಿತಿ ಇಲ್ಲದ ಕಾರಣ ವಿಶ್ವ ಕುಸ್ತಿ ಫೆಡರೇಷನ್, ಭಾರತ ಕುಸ್ತಿ ಸಂಸ್ಥೆಯ ಮಾನ್ಯತೆಯನ್ನೂ ರದ್ದುಗೊಳಿಸಿತು. ಅಂತೂ ಇಂತೂ ಈಗ ನಡೆದ ಚುನಾವಣೆಯಲ್ಲಿ 15 ಸ್ಥಾನಗಳಲ್ಲಿ 13 ಸ್ಥಾನಗಳು ಬ್ರಿಜ್ ಭೂಷಣ್ ಬೆಂಬಲಿಗರ ಪಾಲಾಗಿವೆ. ಧರಣಿನಿರತರಾಗಿದ್ದ ಕುಸ್ತಿಪಟುಗಳ ಬೆಂಬಲಿತ ಬಣಕ್ಕೆ ದಕ್ಕಿದ್ದು ಎರಡು ಸ್ಥಾನಗಳು ಮಾತ್ರ. ಪ್ರಜಾಪ್ರಭುತ್ವದಲ್ಲಿ ಸಂಖ್ಯಾಬಲಕ್ಕೇ ಮನ್ನಣೆ. ಅಂತಹ ಸಂಖ್ಯಾಬಲ ಈಗ ಆರೋಪಿ ಸ್ಥಾನದಲ್ಲಿರುವವರ ಪರವೇ ಇದೆ. ಹೊಸ ಅಧ್ಯಕ್ಷರ ಪರವಾಗಿ ಬ್ರಿಜ್ ಭೂಷಣ್ ಅವರೇ ಅಧಿಕಾರ ಚಲಾಯಿಸುವ ಕುರಿತು ಕುಸ್ತಿಪಟುಗಳಿಗೆ ಯಾವುದೇ ಅನುಮಾನ ಉಳಿದಂತಿಲ್ಲ.

ದೇಶದ ಕುಸ್ತಿ ಕ್ರೀಡೆಯಲ್ಲಿ ನಡೆದಿರುವಂತಹ ಅಹಿತಕರ ಬೆಳವಣಿಗೆಗಳು ಕ್ರೀಡಾ ಕ್ಷೇತ್ರದ ಏಳಿಗೆಗೆ ಮಾರಕವಾಗುವಂಥವು

ಒಟ್ಟಾರೆ, ಪ್ರಕರಣದಲ್ಲಿ ನಿಜಕ್ಕೂ ಸೋತಿದ್ದು ಕೇಂದ್ರ ಕ್ರೀಡಾ ಸಚಿವಾಲಯ ಮತ್ತು ಭಾರತ ಒಲಿಂಪಿಕ್ ಸಂಸ್ಥೆ (ಐಒಎ). ಈ ಪ್ರಕರಣವನ್ನು ನಿರ್ವಹಿಸುವಲ್ಲಿ ಈ ಎರಡೂ ಅಧಿಕಾರ ಕೇಂದ್ರಗಳು ವಿಫಲವಾಗಿರುವುದು ಮೇಲ್ನೋಟಕ್ಕೇ ಎದ್ದುಕಾಣುವ ಸತ್ಯ. ದೇಶಕ್ಕೆ ಕೀರ್ತಿ ತಂದ ಕ್ರೀಡಾಪಟುಗಳ ಹಿತ ರಕ್ಷಿಸುವ ಕೆಲಸ ಪ್ರಾಮಾಣಿಕವಾಗಿ ನಡೆಯಲಿಲ್ಲ. ಇದರಿಂದಾಗಿ ಈ ವರ್ಷದ ಜನವರಿಯಿಂದ ಇಲ್ಲಿಯವರೆಗೂ ಈ ಪ್ರಕರಣ ಇನ್ನೂ ಸದ್ದು ಮಾಡುತ್ತಲೇ ಇದೆ. ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ದೇಶದ ಮಾನ ಮುಕ್ಕಾಗಿದೆ. ತಮ್ಮ ಪಕ್ಷದ ಪ್ರಭಾವಿ ಸಂಸದನನ್ನು ರಕ್ಷಿಸಲು ಆಡಳಿತಾರೂಢರು ಒಂದಲ್ಲ ಒಂದು ರೀತಿಯಲ್ಲಿ ಪ್ರಯತ್ನ ನಡೆಸಿದ್ದು ಸುಳ್ಳಲ್ಲ. ಧರಣಿನಿರತ ಕುಸ್ತಿಪಟುಗಳಲ್ಲಿ ಕೂಡ ಬಹುತೇಕರು ಬ್ರಿಜ್ ಭೂಷಣ್ ಪ್ರತಿನಿಧಿಸುವ ಪಕ್ಷದೊಟ್ಟಿಗೆ ಗುರುತಿಸಿಕೊಂಡವರು ಎಂಬುದು ವಿಪರ್ಯಾಸದ ಸಂಗತಿ. ಬ್ರಿಜ್‌ಭೂಷಣ್ ಮತ್ತು ತರಬೇತುದಾರರು ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಕೇಂದ್ರ ಗೃಹ ಸಚಿವರಿಗೆ ದೂರು ನೀಡಲು ಹೋದ ನಿಯೋಗದಲ್ಲಿ 15–20 ಕುಸ್ತಿಪಟುಗಳು ಇದ್ದರು. ಹೀಗೆ ಪ್ರತಿರೋಧ ತೋರಿದ್ದವರ ಸಂಖ್ಯೆ ಈಗ ಏಳಕ್ಕೆ ಇಳಿದಿದೆ. ಹಿಂಬಾಗಿಲ ರಾಜಕೀಯದ ಮೂಲಕ ಸಂತ್ರಸ್ತೆಯರ ಧ್ವನಿ ಅಡಗಿಸುವ ಹುನ್ನಾರ ನಡೆದಿದೆ ಎಂದು ಒಲಿಂಪಿಯನ್ ಕುಸ್ತಿಪಟು ಬಜರಂಗ್ ಪೂನಿಯಾ ಆರೋಪಿಸಿದ್ದಾರೆ. ಬಜರಂಗ್ ಅವರು ಪದ್ಮಶ್ರೀ ಪ್ರಶಸ್ತಿಯನ್ನು ಸರ್ಕಾರಕ್ಕೆ ಹಿಂತಿರುಗಿಸಿ, ಪ್ರತಿಭಟನೆ ದಾಖಲಿಸಿದ್ದಾರೆ. ಕುಸ್ತಿ ಕ್ರೀಡೆಯಲ್ಲಿ ನಡೆದಿರುವ ಅಹಿತಕರ ಘಟನೆಗಳು ದೇಶದ ಕ್ರೀಡಾ ಬೆಳವಣಿಗೆಗೆ ಮಾರಕವಾಗುವಂಥವು. ಇತ್ತೀಚಿನ ವರ್ಷಗಳಲ್ಲಿ ಮಹಿಳೆಯರು ಭಾರತಕ್ಕೆ ಅಂತರರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಪದಕಗಳನ್ನು ಗಳಿಸಿಕೊಡುತ್ತಿದ್ದಾರೆ. ದೇಶದ ಗೌರವವನ್ನು ಹೆಚ್ಚಿಸುತ್ತಿದ್ದಾರೆ. ಆದರೆ, ಅವರ ಆತ್ಮಗೌರವಕ್ಕೆ ಸೂಕ್ತ ಮನ್ನಣೆ ಸಿಗದಿದ್ದರೆ ಕ್ರೀಡಾಕ್ಷೇತ್ರದ ಭವಿಷ್ಯ ಮಂಕಾಗಬಹುದು. ಸದ್ಯ ಬಲಾಢ್ಯರು ಗೆದ್ದಿದ್ದಾರೆ. ಆದರೆ, ದೌರ್ಜನ್ಯ ಪ್ರಕರಣವು ನ್ಯಾಯಾಲಯದಲ್ಲಿದೆ. ಈಗ ಸಂತ್ರಸ್ತರ ಪಾಲಿಗೆ ಉಳಿದಿರುವ ಅಂತಿಮ ಆಶಾಕಿರಣ ನ್ಯಾಯಾಲಯವೊಂದೇ.

‘ಅಪರಾಧ ಸಾಬೀತಾಗುವವರೆಗೂ ನಿರಪರಾಧಿ’ ಎಂಬ ತತ್ವ ಎತ್ತಿಹಿಡಿಯುವ ಕೆಲಸ ಆಗಬೇಕು

ಹೈಕೋರ್ಟ್‌ಗಳ ಮೇಲೆ ಜಾಮೀನು ಹೊರೆ

ವಿಶ್ಲೇಷಣೆ

ಲಿಯಾ ವರ್ಗೀಸ್, ಸ್ಮಿತಾ ಮಠ್

ದೇಶದ ಹೈಕೋರ್ಟ್‌ಗಳಲ್ಲಿ ಸಲ್ಲಿಕೆಯಾಗಿರುವ ಜಾಮೀನು ಅರ್ಜಿಗಳ ಸಂಖ್ಯೆಯು ಈ ಎಂಟು ವರ್ಷಗಳ ಅವಧಿಯಲ್ಲಿ ಶೇಕಡ 35ರಷ್ಟು ಹೆಚ್ಚಾಗಿದೆ. ಜಾಮೀನು ಕೊಡುವುದು ಸಹಜವಾಗಿರಬೇಕು ಎಂಬುದನ್ನು ಸುಪ್ರೀಂ ಕೋರ್ಟ್ ಹತ್ತು ಹಲವು ಬಾರಿ ಹೇಳಿದ್ದರೂ ಜಿಲ್ಲಾ ನ್ಯಾಯಾಲಯಗಳು ಜಾಮೀನು ನಿರಾಕರಿಸುವುದನ್ನು ಸಹಜವಾಗಿಸಿವೆ. ದೇಶದ ಜೈಲುಗಳಲ್ಲಿನ ವಿಚಾರಣಾಧೀನ ಕೈದಿಗಳ ಪ್ರಮಾಣವು 2019ರಲ್ಲಿ ಶೇ 68ರಷ್ಟು ಇದ್ದುದು 2021ರಲ್ಲಿ ಶೇ 77ಕ್ಕೆ ಹೆಚ್ಚಳವಾಗಿದೆ.

ಜಾಮೀನು ನೀಡುವುದರಿಂದ ವಿಚಾರಣಾಧೀನ ಕೈದಿಗಳಿಗೆ ಜೈಲುವಾಸದಿಂದ ತಾತ್ಕಾಲಿಕ ಬಿಡುಗಡೆ ದೊರೆಯುತ್ತದೆ. ಜಾಮೀನು ನೀಡುವುದು ‘ಅಪರಾಧ ಸಾಬೀತಾಗುವವರೆಗೂ ನಿರಪರಾಧಿ’ ಎಂಬ ತತ್ವವನ್ನು ಎತ್ತಿಹಿಡಿಯುವ ಕೆಲಸವೂ ಹೌದು. ಇದು ಜೈಲುಗಳ ಮೇಲಿನ ಒತ್ತಡವನ್ನು ತಗ್ಗಿಸುತ್ತದೆ. ಆದರೆ ಜಾಮೀನು ಪ್ರಕರಣಗಳ ವಿಶ್ಲೇಷಣೆ ನಡೆಸಿದರೆ, ದೇಶದ ಕ್ರಿಮಿನಲ್ ನ್ಯಾಯದಾನ ವ್ಯವಸ್ಥೆಯಲ್ಲಿನ ದೋಷಗಳು ತೆರೆದುಕೊಳ್ಳುತ್ತವೆ. ದೇಶದಲ್ಲಿ ವಿಚಾರಣಾಧೀನ ಕೈದಿಗಳನ್ನು ಜೈಲಿನಲ್ಲಿ ಅತಿಯಾಗಿ ಇರಿಸಿಕೊಳ್ಳುವ ಪದ್ಧತಿ ಬಹುಕಾಲದಿಂದ ಇರುವುದರ ಮೇಲೆ ಬೆಳಕು ಚೆಲ್ಲುತ್ತದೆ. ಸುಪ್ರೀಂ ಕೋರ್ಟ್ ಹಾಗೂ ಹೈಕೋರ್ಟ್‌ಗಳಲ್ಲಿ ವಿಚಾರಣೆಯ ಹಂತದಲ್ಲಿ ಇರುವ ಎಲ್ಲ ಬಗೆಯ ಪ್ರಕರಣಗಳ ಸಂಖ್ಯೆ ದೊಡ್ಡದಿದೆ. ಇವುಗಳ ಜೊತೆಯಲ್ಲಿ, ಜಾಮೀನು ಪ್ರಕರಣಗಳೂ ಸೇರಿ ನ್ಯಾಯಾಂಗದ ಮೇಲಿನ ಹೊರೆಯು ಇನ್ನಷ್ಟು ಹೆಚ್ಚುತ್ತದೆ.

ಹೈಕೋರ್ಟ್‌ಗಳಲ್ಲಿನ ಜಾಮೀನು ಪ್ರಕರಣಗಳನ್ನು ಪರಿಶೀಲಿಸಿ, ಅವುಗಳ ಇತ್ಯರ್ಥಕ್ಕೆ ಬೇಕಾದ ಸಮಯ ಎಷ್ಟು ಎಂಬುದನ್ನು ಅರಿಯಲು ಈ ಲೇಖಕರು ಪ್ರಯತ್ನಿಸಿದರು. ಸುಪ್ರೀಂ ಕೋರ್ಟ್‌ನ ವಾರ್ಷಿಕ ವರದಿಗಳಲ್ಲಿನ ದತ್ತಾಂಶದ ಪ್ರಕಾರ, 2015-16ರಿಂದ 2019-20ರ ನಡುವಿನ ಅವಧಿಯಲ್ಲಿ ಜಾಮೀನು ಅರ್ಜಿಗಳ ಸಂಖ್ಯೆಯಲ್ಲಿ ನಿರಂತರ ಹೆಚ್ಚಳ ಕಂಡುಬಂದಿದೆ. 2019-20ರಿಂದ 2020-21ರ ನಡುವಿನ ಅವಧಿಯಲ್ಲಿ ಅತಿಹೆಚ್ಚಿನ ಪ್ರಮಾಣದ (ಶೇ 18ರಷ್ಟು) ಹೆಚ್ಚಳ ದಾಖಲಾಗಿದೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊದ (ಎನ್‌ಸಿಆರ್‌ಬಿ) ಬಂದೀಖಾನೆ ಅಂಕಿ-ಅಂಶಗಳ ಪ್ರಕಾರ, ಇದೇ ಅವಧಿಯಲ್ಲಿ ವಿಚಾರಣಾಧೀನ ಕೈದಿಗಳ ಸಂಖ್ಯೆಯಲ್ಲಿ ಏರಿಕೆ ಆಗಿದೆ. ಕೋವಿಡ್-19 ಸಾಂಕ್ರಾಮಿಕವು ದೇಶದಲ್ಲಿ ಹರಡಿದ್ದು ಕೂಡ ಇದೇ ಅವಧಿಯಲ್ಲಿ. ಈ ಸಂದರ್ಭದಲ್ಲಿ ಜೈಲುಗಳ ಮೇಲಿನ ಒತ್ತಡವನ್ನು ತಗ್ಗಿಸಲು ಕೆಲವು ಕ್ರಮಗಳನ್ನು ಕೈಗೊಳ್ಳಲಾಯಿತು. 2020ರ ಮಾರ್ಚ್‌ನಲ್ಲಿ ಆದೇಶವೊಂದನ್ನು ಹೊರಡಿಸಿದ ಸುಪ್ರೀಂ ಕೋರ್ಟ್, ಮಧ್ಯಂತರ ಜಾಮೀನು, ಪೆರೋಲ್ ಬಗ್ಗೆ ಶಿಫಾರಸು ಮಾಡಲು ಉನ್ನತಾಧಿಕಾರ ಸಮಿತಿ ರಚಿಸುವಂತೆ ರಾಜ್ಯಗಳಿಗೆ ಸೂಚಿಸಿತು.

ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಷಿಯೇಟಿವ್ (ಸಿಎಚ್‌ಆರ್‌ಐ) ಸಂಶೋಧನೆಯು ಈ ಕ್ರಮದ ಅಲ್ಪಾವಧಿ ಪರಿಣಾಮವನ್ನು ತೋರಿಸಿಕೊಟ್ಟಿದೆ. 2020ರ ಏಪ್ರಿಲ್ 1ರಿಂದ ಜೂನ್ 30ರ ನಡುವೆ ಜೈಲುವಾಸಿಗಳ ಸಂಖ್ಯೆಯು ಶೇ 10.42ರಷ್ಟು ಕಡಿಮೆ ಆಯಿತು. ಆದರೆ, ಬಿಹಾರ, ಜಾರ್ಖಂಡ್ ಮತ್ತು ಉತ್ತರಪ್ರದೇಶದಂತಹ ರಾಜ್ಯಗಳು ಕೈದಿಗಳ ಸಂಖ್ಯೆ ಹೆಚ್ಚಿರುವ ಒಂದು ಜೈಲಿನಿಂದ, ಇನ್ನೊಂದು ಜೈಲಿಗೆ ಕೈದಿಗಳನ್ನು ವರ್ಗಾವಣೆ ಮಾಡಿದವು. ಅಂದರೆ ಅವು, ಹೊರೆಯನ್ನು ತಗ್ಗಿಸುವ ಬದಲು, ಅದನ್ನು ಇನ್ನೊಂದೆಡೆ ವರ್ಗಾಯಿಸಿದವು. ಡಿಸೆಂಬರ್ ವೇಳೆಗೆ ಪರಿಸ್ಥಿತಿ ತಿರುವುಮುರುವಾಗಿತ್ತು. ಒಂದು ವರ್ಷದ ಹಿಂದಿನ ಅವಧಿಗಿಂತ, ಆಗ ವಿಚಾರಣಾಧೀನ ಕೈದಿಗಳ ಸಂಖ್ಯೆಯು ಹೆಚ್ಚಾಗಿತ್ತು. 2020ರಲ್ಲಿ ಜಾಮೀನು ಪಡೆದ ಕೈದಿಗಳ ಸಂಖ್ಯೆಯು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 18ರಷ್ಟು ಕಡಿಮೆ ಆಯಿತು ಎಂದು ಎನ್‌ಸಿಆರ್‌ಬಿಯ ಬಂದೀಖಾನೆಗೆ ಸಂಬಂಧಿಸಿದ ಅಂಕಿ-ಅಂಶಗಳು ಹೇಳುತ್ತವೆ.

ಹೈಕೋರ್ಟ್‌ಗಳಲ್ಲಿ ಜಾಮೀನು ಅರ್ಜಿಗಳು ಹೆಚ್ಚುತ್ತಿರುವುದಷ್ಟೇ ಅಲ್ಲ, ಇತರ ಎಲ್ಲ ಪ್ರಕರಣಗಳ ಜೊತೆ ಹೋಲಿಸಿದರೆ ಜಾಮೀನು ಅರ್ಜಿಗಳ ಪ್ರಮಾಣ ಕೂಡ ಹೆಚ್ಚಾಗುತ್ತಿದೆ. ಸಾಂವಿಧಾನಿಕ ಕೋರ್ಟ್‌ಗಳು ತಮ್ಮ ಸಮಯವನ್ನು ಕಾನೂನಿನ ವ್ಯಾಖ್ಯಾನಕ್ಕೆ ಹೆಚ್ಚು ತೊಡಗಿಸಿದರೆ ಚೆನ್ನ. ಆದರೆ, ಜಾಮೀನು ಅರ್ಜಿಗಳ ಕಾರಣದಿಂದಾಗಿ ಅವು ತಮ್ಮ ಸಮಯದಲ್ಲಿ ದೊಡ್ಡ ಭಾಗವನ್ನು ಇದಕ್ಕೆ ಮೀಸಲಾಗಿಸಬೇಕಾಗುತ್ತದೆ. 2021-22ರಲ್ಲಿ ಹಲವು ಹೈಕೋರ್ಟ್‌ಗಳಲ್ಲಿ ಒಟ್ಟು ಪ್ರಕರಣಗಳಲ್ಲಿ ಜಾಮೀನು ಪ್ರಕರಣಗಳ ಸಂಖ್ಯೆಯು ಹೆಚ್ಚಾಯಿತು. ಅದರಲ್ಲೂ ಮುಖ್ಯವಾಗಿ ಪಟ್ನಾ, ಜಾರ್ಖಂಡ್ ಹೈಕೋರ್ಟ್‌ಗಳಲ್ಲಿ ಒಟ್ಟು ಪ್ರಕರಣಗಳಲ್ಲಿ ಕ್ರಮವಾಗಿ ಶೇ 50 ಹಾಗೂ ಶೇ 60ಕ್ಕಿಂತ ಹೆಚ್ಚು ಪ್ರಕರಣಗಳು ಜಾಮೀನಿಗೆ ಸಂಬಂಧಿಸಿದ್ದವು. ಇಂತಹ ಪರಿಸ್ಥಿತಿಯು ಇಡೀ ನ್ಯಾಯಾಂಗ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮಗಳನ್ನು ಉಂಟುಮಾಡುತ್ತದೆ.

ಪಟ್ನಾ ಹೈಕೋರ್ಟ್‌ನಲ್ಲಿ ಜಾಮೀನು ಅರ್ಜಿಗಳ ಹೊರೆಯು ಎದ್ದುಕಾಣುವಂತಿದೆ. ಅಲ್ಲಿ ಎಂಟು ನ್ಯಾಯಪೀಠಗಳ ಪೈಕಿ ಐದು ಪೀಠಗಳು ಜಾಮೀನು ಅರ್ಜಿಗಳ ವಿಚಾರಣೆ ನಡೆಸುತ್ತಿವೆ. ಇದಕ್ಕೆ ಒಂದು ಕಾರಣ ಬಿಹಾರದಲ್ಲಿ ಜಾರಿಯಲ್ಲಿರುವ ಮದ್ಯ ನಿಷೇಧ ಕಾನೂನು ಆಗಿರಬಹುದು. 2021ರ ಡಿಸೆಂಬರ್ 31ರ ಮಾಹಿತಿ ಪ್ರಕಾರ, ಬಿಹಾರದ ಜೈಲುಗಳಲ್ಲಿನ 17,642 ವಿಚಾರಣಾಧೀನ ಕೈದಿಗಳು ಬಂಧನಕ್ಕೆ ಒಳಗಾಗಿದ್ದು ಅಬಕಾರಿ ಮತ್ತು ಪಾನನಿಷೇಧ ಕಾನೂನುಗಳ ಅಡಿಯಲ್ಲಿ. ಜಾರ್ಖಂಡ್ ಹೈಕೋರ್ಟ್ ಜಾಮೀನು ಅರ್ಜಿಗಳ ಹೊರೆಯನ್ನು ತಗ್ಗಿಸಿಕೊಳ್ಳಲು ಪ್ರತ್ಯೇಕ ಕ್ರಮವೊಂದನ್ನು ಕೈಗೊಂಡಿತು. ಇದನ್ನು ವಕೀಲರು ಆಡುಮಾತಿನಲ್ಲಿ ‘ಜಾಮೀನು ಮೇಳ’ ಎಂದು ಕರೆದರು.

ಜಾಮೀನು ಪ್ರಕರಣಗಳ ಇತ್ಯರ್ಥಕ್ಕೆ ತೆಗೆದುಕೊಂಡ ಸಮಯವನ್ನು ಪರಿಶೀಲಿಸಲಾಯಿತು. 2010ರಿಂದ 2021ರವರೆಗಿನ ಜಾಮೀನು ಅರ್ಜಿಗಳ ದತ್ತಾಂಶವನ್ನು ಪರಿಶೀಲಿಸಲಾಯಿತು. 15 ಹೈಕೋರ್ಟ್‌ಗಳ 9.27 ಲಕ್ಷ ಜಾಮೀನು ಪ್ರಕರಣಗಳನ್ನು ಪರಿಶೀಲನೆಗೆ ಒಳಪಡಿಸಲಾಯಿತು. ಸಾಮಾನ್ಯವಾಗಿ ಜಾಮೀನು ಪ್ರಕರಣಗಳ ಇತ್ಯರ್ಥಕ್ಕೆ ಹೆಚ್ಚಿನ ಸಮಯ ಬೇಕಾಗುವುದಿಲ್ಲ. ಜಾಮೀನು ಪ್ರಕರಣಗಳಲ್ಲಿ ನ್ಯಾಯಾಧೀಶರು, ಆರೋಪಿಗಳು ತಪ್ಪು ಮಾಡಿದ್ದಾರೋ ಇಲ್ಲವೋ ಎಂಬುದನ್ನು ಪರಿಶೀಲಿಸಬೇಕಾಗಿಲ್ಲ. ಹೀಗಿದ್ದರೂ, ಜಾಮೀನು ಅರ್ಜಿಗಳ ವಿಚಾರವಾಗಿ ಆದೇಶ ಹೊರಡಿಸಲು ಹೈಕೋರ್ಟ್‌ಗಳಲ್ಲಿ ಸರಾಸರಿ 23 ದಿನಗಳು ಬೇಕಾಗಿದ್ದವು.

ಜಮ್ಮು ಮತ್ತು ಕಾಶ್ಮೀರ ಹೈಕೋರ್ಟ್‌ನಲ್ಲಿ ಜಾಮೀನು ಅರ್ಜಿ ಇತ್ಯರ್ಥಕ್ಕೆ ಸರಾಸರಿ 156 ದಿನಗಳು ಬೇಕಾಗಿದ್ದವು. ಒಡಿಶಾ ಹೈಕೋರ್ಟ್ ಮತ್ತು ಬಾಂಬೆ ಹೈಕೋರ್ಟ್ ಕ್ರಮವಾಗಿ ಸರಾಸರಿ 61 ಹಾಗೂ 56 ದಿನಗಳನ್ನು ತೆಗೆದುಕೊಂಡವು. ಈಗ ಇತ್ಯರ್ಥವಾಗಿರುವ ಸರಿಸುಮಾರು ಶೇ 40ರಷ್ಟು ಜಾಮೀನು ಅರ್ಜಿಗಳು ಒಂದು ತಿಂಗಳಿಗೂ ಹೆಚ್ಚಿನ ಅವಧಿಯಿಂದ ಬಾಕಿ ಇದ್ದವು. ದೇಶದ ನ್ಯಾಯಾಲಯಗಳಲ್ಲಿ ಅರ್ಜಿಯೊಂದರ ಇತ್ಯರ್ಥಕ್ಕೆ ಒಂದು ತಿಂಗಳ ಅವಧಿ ಬೇಕಾಗುವುದು ದೊಡ್ಡದೇನೂ ಅಲ್ಲ ಎಂದು ಒಮ್ಮೆ ಅನ್ನಿಸಬಹುದು. ಆದರೆ ವಿಳಂಬವು ವ್ಯಕ್ತಿಗಳ ಸ್ವಾತಂತ್ರ್ಯದ ಮೇಲೆ ಬೀರುವ ಪರಿಣಾಮವನ್ನು ನಾವು ಹಗುರವಾಗಿ ಕಾಣಲು ಆಗದು.

ಅರ್ಜಿಯ ಇತ್ಯರ್ಥ ಆಗುವವರೆಗೆ ವಿಚಾರಣಾಧೀನ ಕೈದಿ ಜೈಲಿನಲ್ಲಿ ಇರಬೇಕಾಗುತ್ತದೆ. ಜಿಲ್ಲಾ ನ್ಯಾಯಾಲಯಗಳು ಜಾಮೀನು ನಿರಾಕರಿಸಿದ ಕಾರಣಕ್ಕೆ ಇಂತಹ ಪ್ರಕರಣಗಳು ಸಾಮಾನ್ಯವಾಗಿ ಹೈಕೋರ್ಟ್ ಮೆಟ್ಟಿಲೇರಿರುತ್ತವೆ. ಅಂದರೆ, ವಿಚಾರಣಾಧೀನ ಕೈದಿಗಳು ಜೈಲಿನಲ್ಲಿ ಕಾಲ ಕಳೆಯುವ ಸಮಯವು ಸಾಮಾನ್ಯವಾಗಿ, ಹೈಕೋರ್ಟ್‌ನಲ್ಲಿ ಅರ್ಜಿ ಇತ್ಯರ್ಥವಾಗುವುದಕ್ಕೆ ತೆಗೆದುಕೊಳ್ಳುವುದಕ್ಕಿಂತ ಹೆಚ್ಚಿನದಾಗಿರುತ್ತದೆ. ಈ ರೀತಿಯಲ್ಲಿ ವಿಚಾರಣಾಧೀನ ಕೈದಿಗಳನ್ನು ಜೈಲಿನಲ್ಲಿ ಇರಿಸುವುದು ‘ಅಪರಾಧ ಸಾಬೀತಾಗುವವರೆಗೂ ನಿರಪರಾಧಿ’ ಎಂಬ ತತ್ವಕ್ಕೆ ವಿರುದ್ಧ ದಿಕ್ಕಿನಲ್ಲಿ ಸಾಗುವ ಕ್ರಿಯೆ. ಇದು ಆರೋಪಿಗಳ ಜೀವನ ಹಾಗೂ ಅವರ ಸಂಬಂಧಗಳ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಬಹುದು.

ಜಾಮೀನು ಅರ್ಜಿಗಳ ಇತ್ಯರ್ಥಪಡಿಸುವಿಕೆಯಲ್ಲಿ ಜಿಲ್ಲಾ ನ್ಯಾಯಾಲಯಗಳ ವಿವೇಚನಾ ಅಧಿಕಾರವನ್ನು ಕಡಿಮೆ ಮಾಡಲು ಮಾರ್ಗಸೂಚಿ ರೂಪಿಸುವ ಗಂಭೀರ ಅಗತ್ಯ ಇದೆ. ಈ ಮಾರ್ಗಸೂಚಿಗಳನ್ನು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮಸೂದೆಯಲ್ಲಿ ಅಳವಡಿಸಬಹುದಿತ್ತು. ಆದರೆ ಈ ವಿಚಾರವಾಗಿ ಮಸೂದೆಯಲ್ಲಿ ಹೆಚ್ಚೇನೂ ಇಲ್ಲ. ವಿಚಾರಣಾಧೀನ ಕೈದಿಗಳನ್ನು ಬಹುದೀರ್ಘ ಅವಧಿಗೆ ಜೈಲಿನಲ್ಲಿ ಇರಿಸುವ ವ್ಯವಸ್ಥೆಯು ನ್ಯಾಯ ಹಾಗೂ ಸಮಾನತೆಯ ತತ್ವದ ಮಹತ್ವವನ್ನು ಕುಗ್ಗಿಸುತ್ತಿರುತ್ತದೆ.

(ಲೇಖನದ ಇಂಗ್ಲಿಷ್ ಆವೃತ್ತಿಯು ‘ದಿ ಪ್ರಿಂಟ್’ನಲ್ಲಿ ಪ್ರಕಟವಾಗಿತ್ತು. ಲಿಯಾ ಅವರು ಬೆಂಗಳೂರಿನ ದಕ್ಷ್ ಸಂಸ್ಥೆಯಲ್ಲಿ ಸಂಶೋಧನಾ ನಿರ್ವಾಹಕಿ, ಸ್ಮಿತಾ ಅವರು ದತ್ತಾಂಶ ವಿಭಾಗದ ಮುಖ್ಯಸ್ಥೆ)

ಚುರುಮುರಿ

ಅಷ್ಟು ಪವರ್‌ಫುಲ್ಲು..

• ಆನಂದ

‘**ಲಕ್ಷ್ಮಣ್** ಕಾರ್ಟೂನ್ ನೆನಪಿಗೆ ಬರ್ತಾ ಇದೇರಿ...’ ಎಂದು ಮಡದಿ ಪ್ರಾರಂಭಿಸಿದಳು. ಕೇಳಲು ಸಿದ್ಧನಾದೆ. ‘ಅದರಲ್ಲಿ ಹೊಸ ಮುಖ್ಯಮಂತ್ರಿಗಳನ್ನ ಆಯ್ಕೆ ಮಾಡಲು ಒಂದು ಶಾಸಕಾಂಗ ಸಭೆ ನಡೀತಿದೆ. ಪ್ರಧಾನಿ ಇಂದಿರಾ ಗಾಂಧಿ ಸಭೆಯನ್ನು ಅವಲೋಕಿಸಿ ‘ಯಾರದು, ಮೂರನೇ ಸಾಲಿನಲ್ಲಿ ನಾಲ್ಕನೆಯವರು. ನೀವೇ ಮುಖ್ಯಮಂತ್ರಿ. ಏನು ನಿಮ್ಮ ಹೆಸರು?’ ಎಂದು ಕೇಳುತ್ತಾರೆ. ಸಭೆ ಮುಗಿಯುತ್ತದೆ’.

‘ಈಗ ಅದೇಕೆ? ಇಂದಿರಮ್ಮ ಇಲ್ಲ. ಮೊಮ್ಮಗ ಪ್ರಧಾನಿ ಆಗುವ ಲಕ್ಷಣಗಳು ಕಾಣ್ತಿಲ್ಲ’ ಎಂದೆ.

‘ಆದರೆ ಮುಖ್ಯಮಂತ್ರಿಗಳ ಆಯ್ಕೆ ಈಗಲೂ ಹಾಗೇ ತಾನೆ?’ ಎಂದಾಗ ನನಗೆ ಸಖೇದಾಶ್ಚರ್ಯ.

‘ಎಲ್ಲಿ ನಡೆದಿದೆ? ಪುರಾವೆ ಕೊಡು’ ಎಂದೆ, ಹಗರಣಕ್ಕೆ ಪುರಾವೆ ಕೇಳುವಂತೆ.

‘ಅಲ್ರೀ ರಾಜಸ್ಥಾನ, ಛತ್ತೀಸಗಢ ಮತ್ತು ಮಧ್ಯಪ್ರದೇಶದಲ್ಲಿ ಹೊಸ ಮುಖ್ಯಮಂತ್ರಿಗಳು ಅಧಿಕಾರಕ್ಕೆ ಬಂದಿದ್ದಾರಲ್ಲ, ಅವರೆಲ್ಲ ಹೇಗೆ ಆಯ್ಕೆ ಆಗ್ತಾರೆಂದು ಯಾರಿಗಾದರೂ ಗೊತ್ತಿತ್ತಾ? ಬೇರೆಯವರಿರಲಿ ಸ್ವತಃ ಆಯ್ಕೆಯಾದವರಿಗೂ ಗೊತ್ತಿರಲಿಲ್ಲ. ಯೋಗಿ ಆದಿತ್ಯನಾಥ ಸಹ ಹೀಗೆ ಉತ್ತರ ಪ್ರದೇಶದಲ್ಲಿ ಮುಖ್ಯಮಂತ್ರಿಯಾಗಿ ಸರ್ವಾನುಮತದಿಂದ ಆಯ್ಕೆಯಾಗಿದ್ದರು’.

‘ಸರ್ವಾನುಮತದಿಂದ ಎಂದರೆ?’

‘ಅಂದರೆ, ದೆಹಲಿಯಲ್ಲಿನ ವರಿಷ್ಠರಿಗೆ ಹಳಬರು ಬೇಡವಾಗಿತ್ತು. ತಮಗೆ ಬೇಕಿದ್ದವರನ್ನು ತಂದು ಕೂರಿಸಿದರು, ಅಷ್ಟೆ’.

‘ಅಂದರೆ ರಿಮೋಟ್ ಕಂಟ್ರೋಲ್?’

‘ಅಲ್ವೆ ಮತ್ತೆ? ಶಾಸಕಾಂಗ ಪಕ್ಷದ ಸಭೆ ನಡೆದ ಹಾಗೂ ಆಯಿತು, ತಮಗೆ ಬೇಕಿದ್ದವರನ್ನು ಆಯ್ಕೆ ಮಾಡಿಸಿದ ಹಾಗೂ ಆಯಿತು’.

‘ಅಂದ್ರೆ ದೆಹಲಿಯವರು ಹೇಳಿದ ಹಾಗೆ ಕೇಳಿಕೊಂಡು ರಾಜ್ಯದಲ್ಲಿ ರಾಜ್ಯಭಾರ ನಡೆಸಬೇಕು. ದೆಹಲಿ ಅಷ್ಟು ಪವರ್‌ಫುಲ್ಲು’.

‘ಅದಕ್ಕೆ ತಾನೆ ಮೂರ್ನಾಲ್ಕು ಅವಧಿಗೆ ಸಿಎಂ ಆಗಿದ್ದ ಶಿವರಾಜ್ ಸಿಂಗ್ ಈ ಬಾರಿ ಮೌನವಾಗಿ ಜಾಗ ಖಾಲಿ ಮಾಡಿದ್ದು’.

‘ಮುಂದೇನು?’

‘ಹೊಸ ಮುಖ್ಯಮಂತ್ರಿಗಳ ಮೇಲೆ ದೆಹಲಿ ಕಣ್ಣಿನ ಜತೆಗೆ ರಾಜ್ಯದ ಭಾವಿ ಮುಖ್ಯಮಂತ್ರಿಗಳ ಕಣ್ಣು ಸಹ ಇರುತ್ತೆ. ನೆಮ್ಮದಿಯಿಂದ ಇರುವುದು ಕಷ್ಟ’.

ದಿನದ ಟ್ವೀಟ್

ಬಹಳಷ್ಟನ್ನು ತಿಳಿಸುತ್ತದೆ

ಸಾಕ್ಷಿಯವರೇ, ಒಂದು ದೇಶವಾಗಿ ನಾವು ನಿಮಗೆ ದ್ರೋಹ ಎಸಗಿದ್ದೇವೆ. ಕ್ರೀಡಾದಿಗ್ಗಜರು ನಿಮ್ಮ ಬೆಂಬಲಕ್ಕೆ ನಿಲ್ಲದಿರುವುದು, ನಾವು ಎಂತಹ ಹೀನಾಯ ರಾಜಕೀಯ ವಾತಾವರಣದ ಭಾಗವಾಗಿದ್ದೇವೆ ಎಂಬುದರ ಬಗ್ಗೆ ಬಹಳಷ್ಟನ್ನು ತಿಳಿಸುತ್ತದೆ. ಕ್ಷಮಿಸಿ ಸಾಕ್ಷಿ. ನಿಮ್ಮಂತಹ ಚಾಂಪಿಯನ್ನರನ್ನು ಉಳಿಸಿಕೊಳ್ಳುವ ಅರ್ಹತೆ ನಮಗಿಲ್ಲ. #SakshiMallik

ರಾಮಚಂದ್ರ ಎಮ್., ಬರಹಗಾರ

ಕಿಡಿನುಡಿ

ಭ್ರಷ್ಟಾಚಾರದಿಂದ ಬೇಸತ್ತು ರಾಜಕಾರಣದಿಂದ ದೂರ ಉಳಿಯುವ ಬಗ್ಗೆ ಆಲೋಚಿಸಿದ್ದೇನೆ. ಈ ಭ್ರಷ್ಟ ವ್ಯವಸ್ಥೆಯಲ್ಲಿ ಮುಂದುವರಿಯುವ ರಾಜಕಾರಣಿ ನಾನಲ್ಲ. ಇದು, ಮುಂಬರುವ ಲೋಕಸಭಾ ಚುನಾವಣೆಗೆ ಮಾತ್ರ ಸೀಮಿತವಲ್ಲ. ಭವಿಷ್ಯದಲ್ಲಿ ರಾಜಕಾರಣದಿಂದಲೇ ಹೊರಗುಳಿಯುವೆ.

ಎ.ನಾರಾಯಣಸ್ವಾಮಿ, ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವ

25 ವರ್ಷಗಳ ಹಿಂದೆ

ಬುಧವಾರ, 23-12-1998

• **ನಕಲಿ ಗಂಧದ ಎಣ್ಣೆ ಮಾರಾಟ ಜಾಲ ಪತ್ತೆ**

ಬೆಂಗಳೂರು, ಡಿ. 22– ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಯ (ಕೆಎಸ್‌ಡಿಎಲ್) ಮೊಹರು ಮತ್ತು ಚಿಹ್ನೆಯನ್ನು ದುರುಪಯೋಗಪಡಿಸಿಕೊಂಡು ನಕಲಿ ಗಂಧದ ಎಣ್ಣೆ ಮತ್ತು ಲೇಪನಗಳನ್ನು ಮಾರಾಟ ಮಾಡುವ ಜಾಲವೊಂದು ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವುದು ಬೆಳಕಿಗೆ ಬಂದಿದೆ.

ಪ್ರವಾಸಿಗರು, ಅದರಲ್ಲೂ ವಿಶೇಷವಾಗಿ ವಿದೇಶಿ ಪ್ರವಾಸಿಗರು ಹೆಚ್ಚಾಗಿ ಭೇಟಿ ನೀಡುವ ನಗರದ ಎಂ.ಜಿ. ರಸ್ತೆ, ಬ್ರಿಗೇಡ್ ರಸ್ತೆ, ಕಮರ್ಷಿಯಲ್ ರಸ್ತೆಗಳಲ್ಲಿರುವ ಕೆಲವು ಅಂಗಡಿಗಳಲ್ಲಿ ಸುಪ್ರಸಿದ್ಧ ಶ್ರೀಗಂಧದ ನಕಲಿ ಉತ್ಪನ್ನಗಳು ರಾಜಾರೋಷವಾಗಿ ಮಾರಾಟವಾಗುತ್ತಿವೆ.

ಈ ಜಾಲದಿಂದ ಮಾರಾಟವಾಗುವ ವಿಶಿಷ್ಟ ಪ್ಲಾಸ್ಟಿಕ್ ಪ್ಯಾಕೆಟ್ ಮೇಲೆ ಯಾವ ಭಯವೂ ಇಲ್ಲದೆ ‘ಕರ್ನಾಟಕ ಸರ್ಕಾರದ ಗಂಧದ ಎಣ್ಣೆ ಉತ್ಪನ್ನಗಳ ಉತ್ಪಾದನಾ ಘಟಕಗಳು, ಮೈಸೂರು ಮತ್ತು ಶಿವಮೊಗ್ಗ’ ಎಂದು ಎದ್ದು ಕಾಣುವಂತೆ ಮುದ್ರಿಸಲಾಗಿದೆ.

• **ರಾಜ್ಯದ ಎಲ್ಲ ರೈತರಿಗೆ ಕೃಷಿ ಪಾಸ್‌ಬುಕ್**

ಬೆಂಗಳೂರು, ಡಿ. 22– ಪ್ರತಿ ಖಾತೆದಾರನ ಭೂ ಒಡೆತನ, ಜಮೀನಿನ ವಿವರ, ನಕ್ಷೆ, ಗ್ರಾಮದ ಭೂಪಟ ಮೊದಲಾದ ವಿವರಗಳನ್ನು ಒಳಗೊಂಡ ಸಮಗ್ರ ನೂತನ ‘ಕೃಷಿ ಪಾಸ್‌ಬುಕ್’ ಅನ್ನು ಪ್ರತಿಯೊಬ್ಬ ರೈತನಿಗೆ ವಿತರಿಸಲು ಕಂದಾಯ ಇಲಾಖೆ ಕಾರ್ಯಕ್ರಮ ಹಾಕಿಕೊಂಡಿದೆ.

ರಾಜ್ಯದಲ್ಲಿ ಸುಮಾರು 65 ಲಕ್ಷ ಖಾತೆದಾರರಿದ್ದು, ಅವರಿಗೆ ಈ ಕೃಷಿ ಪಾಸ್‌ಬುಕ್ ವಿತರಿಸಲಾಗುತ್ತದೆ ಎಂದು ಕಂದಾಯ ಸಚಿವ ಬಿ.ಸೋಮಶೇಖರ್ ಅವರು ಇಂದು ವರದಿಗಾರರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 23-12-1973

• **ಒಂದು ವಾರದಲ್ಲಿ ಮುಖ್ಯಮಂತ್ರಿ ನೇತೃತ್ವದಲ್ಲಿ ನಿಯೋಗ**

ಬೆಂಗಳೂರು, ಡಿ. 22– ಮುಖ್ಯಮಂತ್ರಿ ಅರಸು ನಾಯಕತ್ವದಲ್ಲಿ ರಾಜ್ಯದ ವಿಧಾನಮಂಡಲದ ನಿಯೋಗವೊಂದು ಇನ್ನೊಂದು ವಾರದಲ್ಲಿ ದೆಹಲಿಗೆ ತೆರಳಿ ಮಹಾಜನ್ ವರದಿಯನ್ನು ಕಾರ್ಯರೂಪಕ್ಕೆ ತರಬೇಕೆಂಬ ಬೇಡಿಕೆಯನ್ನು ಪ್ರತಿಪಾದಿಸಿ, ಪ್ರಧಾನಿ ಹಾಗೂ ಕೇಂದ್ರದ ಇತರ ನಾಯಕರಿಗೆ ಮನವಿ ಸಲ್ಲಿಸಲಿದೆ.

ಮುಖ್ಯಮಂತ್ರಿ ಅರಸು ಅವರು ಇಂದು ಸಂಜೆ ವಿಧಾನಸೌಧದಲ್ಲಿ ವಿರೋಧ ಪಕ್ಷಗಳ ನಾಯಕರೊಡನೆ ಗಡಿ ವಿವಾದದ ಕುರಿತು ಮತ್ತೆ ಚರ್ಚೆ ನಡೆಸಿದರು. ಮಹಾರಾಷ್ಟ್ರದಲ್ಲಿ ಕನ್ನಡಿಗರು ಅನುಭವಿಸಿರುವ 10–12 ಕೋಟಿ ರೂಪಾಯಿಗಳಷ್ಟು ನಷ್ಟವನ್ನು ತುಂಬಿಕೊಡಬೇಕು ಎಂದು ಕೇಂದ್ರವನ್ನು ನಿಯೋಗ ಒತ್ತಾಯ ಮಾಡಲಿದೆ.

ಸಂಜೆ ನಡೆದ ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕ ಎಚ್.ಡಿ. ದೇವೇಗೌಡ, ಕಮ್ಯುನಿಸ್ಟ್ ಪಕ್ಷದ ಎಂ.ಎಸ್. ಕೃಷ್ಣನ್, ಸೋಷಲಿಸ್ಟ್ ಪಕ್ಷದ ಕಾಗೋಡು ತಿಮ್ಮಪ್ಪ, ಕ್ರಾಂತಿಕಾರಿ ಪಕ್ಷದ ಎಸ್. ಬಂಗಾರಪ್ಪ ಹಾಗೂ ಟಿ.ಆರ್. ಶಾಮಣ್ಣ ಸೇರಿದಂತೆ ಇತರರು ಭಾಗವಹಿಸಿದ್ದರು.

ಸಂಗತ

ಪೇಟೆಂಟ್: ಸಂಖ್ಯೆಗಿಂತ ಬಳಕೆ ಮುಖ್ಯ

ಮಂಜೂರಾಗುವ ಪೇಟೆಂಟ್‌ಗಳ ಸಂಖ್ಯೆಗಿಂತ ಅವುಗಳ ವಾಣಿಜ್ಯೀಕರಣದ ಪ್ರಮಾಣ ಎಷ್ಟೆಂಬುದನ್ನು ಪರಿಶೀಲಿಸುವುದು ನೀತಿ ನಿರೂಪಕರ ಆದ್ಯತೆಯಾಗಬೇಕಿದೆ

• ಎಚ್.ಕೆ.ಶರತ್

ಭಾರತೀಯ ಪೇಟೆಂಟ್ ಕಚೇರಿಯು 2023-24ನೇ ಸಾಲಿನಲ್ಲಿ ನವೆಂಬರ್ 15ರವರೆಗೂ 41,010 ಪೇಟೆಂಟ್‌ಗಳನ್ನು ನೀಡಿದೆ. ಇದನ್ನು ದೊಡ್ಡ ಸಾಧನೆಯಾಗಿ ಬಿಂಬಿಸಲು ಒಕ್ಕೂಟ ಸರ್ಕಾರ ಉತ್ಸುಕವಾಗಿರುವಂತೆ ತೋರುತ್ತಿದೆ. ಈ ಕುರಿತು ‘ಎಕ್ಸ್’ ತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್, ‘ಇದು ದಾಖಲೆ. ಆವಿಷ್ಕಾರಪ್ರಣೀತ ಜ್ಞಾನಕೇಂದ್ರಿತ ಆರ್ಥಿಕತೆಯ ಮೂಲಕ ದೇಶದ ಅಭಿವೃದ್ಧಿಗೆ ಹೊಸ ಆಯಾಮ ನೀಡುವ ಪ್ರಧಾನಿ ನರೇಂದ್ರ ಮೋದಿಯವರ ದೂರದೃಷ್ಟಿ ಫಲ ನೀಡತೊಡಗಿದೆ’ ಎಂದಿದ್ದರು.

ಪೇಟೆಂಟ್ ಪಡೆಯಲು ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿಗಳು ಸಲ್ಲಿಕೆಯಾಗುತ್ತಿರುವುದು ಮತ್ತು ಹೊಸದಾಗಿ ಮಂಜೂರು ಮಾಡಲಾಗುತ್ತಿರುವ ಪೇಟೆಂಟ್‌ಗಳ ಸಂಖ್ಯೆಯಲ್ಲಿ ನಿರಂತರವಾಗಿ ಏರಿಕೆ ಆಗುತ್ತಿರುವುದು ಆಶಾದಾಯಕ ಬೆಳವಣಿಗೆ. ಆದರೆ, ಇದಕ್ಕೆ ಯಾವೆಲ್ಲ ಅಂಶಗಳು ಕಾರಣ ಮತ್ತು ಇದರಿಂದ ಉಂಟಾಗಬಹುದಾದ ಪರಿಣಾಮ ಎಂತಹುದು ಎಂಬ ಬಗ್ಗೆಯೂ ಚಿಂತಿಸಬೇಕಲ್ಲವೇ? ಎಷ್ಟು ಪೇಟೆಂಟ್‌ಗಳನ್ನು ಮಂಜೂರು ಮಾಡುತ್ತಿದ್ದೇವೆ ಎನ್ನುವುದು ಮುಖ್ಯವಾಗಬೇಕೊ ಅಥವಾ ಹೀಗೆ ಮಂಜೂರಾದ ಪೇಟೆಂಟ್‌ಗಳ ಪೈಕಿ ಎಷ್ಟು ವಾಣಿಜ್ಯೀಕರಣಗೊಂಡು ವಾಸ್ತವದಲ್ಲೂ ಬಳಕೆಗೆ ಒಳಪಡುತ್ತಿವೆ ಎನ್ನುವುದು ಮುಖ್ಯವಾಗಬೇಕೊ?

ಉದ್ದಿಮೆ ಸಂಸ್ಥೆಗಳು ಹಾಗೂ ಸ್ಟಾರ್ಟ್‌ಅಪ್‌ಗಳಿಗೆ ಮಂಜೂರಾಗಿರುವ ಪೇಟೆಂಟ್‌ಗಳು ವಾಣಿಜ್ಯೀಕರಣಗೊಂಡು ಬಳಕೆಗೆ ಒಳಪಡುವ ಸಾಧ್ಯತೆ ಹೆಚ್ಚು. ಆದರೆ, ಮಂಜೂರಾಗುವ ಒಟ್ಟಾರೆ ಪೇಟೆಂಟ್‌ಗಳ ಪೈಕಿ ಹೆಚ್ಚಿನವು ಖಾಸಗಿ ವ್ಯಕ್ತಿಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳಿಗೆ ಸೇರಿರುತ್ತವೆ. ಹೀಗಾಗಿ, ಮಂಜೂರಾಗುವ ಪೇಟೆಂಟ್‌ಗಳ ಸಂಖ್ಯೆಗಿಂತ ಅವುಗಳ ವಾಣಿಜ್ಯೀಕರಣದ ಪ್ರಮಾಣ ಎಷ್ಟೆಂಬುದನ್ನು ಪರಿಶೀಲಿಸುವುದು ನೀತಿ ನಿರೂಪಕರ ಆದ್ಯತೆಯಾಗಬೇಕಿದೆ.

ಕೆಲವು ವರ್ಷಗಳಿಂದ ಶೈಕ್ಷಣಿಕ ವಲಯದಲ್ಲಿ ಕೂಡ ಬೌದ್ಧಿಕ ಆಸ್ತಿ ಹಕ್ಕು ಮತ್ತು ಕೃತಿಸ್ವಾಮ್ಯದ ಕುರಿತು ಅರಿವು ಮೂಡಿಸಲು ಹೆಚ್ಚಿನ ಮುತುವರ್ಜಿ ವಹಿಸಲಾಗುತ್ತಿದೆ. ಉಪನ್ಯಾಸ, ಕಾರ್ಯಾಗಾರಗಳನ್ನು ಏರ್ಪಡಿಸುವುದಲ್ಲದೆ ಪಠ್ಯದಲ್ಲಿ ಕೂಡ ಇದಕ್ಕೆ ಸಂಬಂಧಿಸಿದ ವಿಚಾರಗಳನ್ನು ಸೇರಿಸಲಾಗುತ್ತಿದೆ. ಅಲ್ಲದೆ, ಬೋಧಕ ವರ್ಗ ಮತ್ತು ಸಂಶೋಧನಾ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ವಿದ್ಯಾರ್ಥಿಗಳನ್ನು ಕೂಡ ಪೇಟೆಂಟ್‌ಗೆ ಅರ್ಜಿ ಸಲ್ಲಿಸಲು ಹುರಿದುಂಬಿಸಲಾಗುತ್ತಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿನ ಶೈಕ್ಷಣಿಕ ಗುಣಮಟ್ಟದ ಮಾಪನ ನಡೆಯುವ ಸಂದರ್ಭದಲ್ಲಿ ಪೇಟೆಂಟ್‌ಗೆ ಹೆಚ್ಚಿನ ಪ್ರಾಮುಖ್ಯ ನೀಡಲಾಗುತ್ತಿದೆ. ಆಯಾ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕರು ಹಾಗೂ ಸಂಶೋಧನಾರ್ಥಿಗಳ ಬಳಿ ಇರುವ ಮಂಜೂರಾದ ಪೇಟೆಂಟ್‌ಗಳ ಸಂಖ್ಯೆ ಎಷ್ಟು, ಪೇಟೆಂಟ್ ಪಡೆಯುವ ಸಲುವಾಗಿ ಸಲ್ಲಿಸಿರುವ ಹಾಗೂ ಪ್ರಕಟಿಸಿರುವ ಅರ್ಜಿಗಳ ಸಂಖ್ಯೆ ಎಷ್ಟು ಎನ್ನುವ ಅಂಕಿ-ಅಂಶವು ಶಿಕ್ಷಣ ಸಂಸ್ಥೆಯೊಂದರ ಗುಣಮಟ್ಟವನ್ನು ನಿರ್ಣಯಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದೆ.

ಹೇಗಾದರೂ ಸರಿ ಪೇಟೆಂಟ್ ಪಡೆಯಲೇಬೇಕು ಎನ್ನುವ ಒತ್ತಡ, ಸಂಶೋಧನಾ ಕೇಂದ್ರಗಳನ್ನು ಹೊಂದಿರುವ ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳ ಮೇಲಿದೆ. ಪೇಟೆಂಟ್‌ಗಳ ಸಂಖ್ಯೆ ನಿರಂತರವಾಗಿ ಹೆಚ್ಚುತ್ತಿರುವುದಕ್ಕೆ ಇದು ಕೂಡ ಪ್ರಮುಖ ಕಾರಣವಾಗಿರುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಹೀಗಾಗಿ, ಮಂಜೂರಾಗುತ್ತಿರುವ ಪೇಟೆಂಟ್‌ಗಳಲ್ಲಿನ ಆವಿಷ್ಕಾರಗಳು ಉತ್ಪನ್ನವೋ ತಂತ್ರಜ್ಞಾನವೋ ಮತ್ತೊಂದೋ ಆಗಿ ಪ್ರಾಯೋಗಿಕವಾಗಿಯೂ ಬಳಕೆಗೆ ಬರುವುದು ಅಪರೂಪ.

2021-22ನೇ ಸಾಲಿನಲ್ಲಿ ಅತಿ ಹೆಚ್ಚು ಪೇಟೆಂಟ್ ಪಡೆದುಕೊಂಡ ಐದು ಸಂಸ್ಥೆಗಳ ಪೈಕಿ ಮೂರು ವಿಶ್ವವಿದ್ಯಾಲಯಗಳೇ ಇರುವುದು, ಶೈಕ್ಷಣಿಕ ವಲಯದಲ್ಲಿ ಪೇಟೆಂಟ್‌ಗಳೆಡೆಗಿನ ಒಲವು ಹೆಚ್ಚುತ್ತಿರುವುದಕ್ಕೆ ಹಿಡಿದ ಕೈಗನ್ನಡಿ. 2017-18ನೇ ಸಾಲಿನಲ್ಲಿ ಒಂದು ವಿಶ್ವವಿದ್ಯಾಲಯ ಮಾತ್ರ ಈ ಪಟ್ಟಿಯಲ್ಲಿ ಸ್ಥಾನ ಪಡೆದಿತ್ತು. ಅದಕ್ಕೂ ಹಿಂದಿನ ವರ್ಷಗಳಲ್ಲಿ ಕೂಡ ಉದ್ದಿಮೆ ಸಂಸ್ಥೆಗಳೇ ಈ ಪಟ್ಟಿಯಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿವೆ.

‘ಭಾರತದಲ್ಲಿ ತಯಾರಿಸಿ’ ಎನ್ನುವ ಆಶಯ ನಿಜ ಅರ್ಥದಲ್ಲಿ ಈಡೇರಬೇಕಿದ್ದರೆ ಹೊಸ ಆವಿಷ್ಕಾರಗಳು, ಕ್ಲಿಷ್ಟ ತಂತ್ರಜ್ಞಾನಗಳು ಇಲ್ಲಿಂದಲೇ ಹೊರಹೊಮ್ಮತೊಡಗಬೇಕು. ಆದರೆ, ಭಾರತೀಯ ಸಂಸ್ಥೆಗಳು ಹಾಗೂ ವ್ಯಕ್ತಿಗಳಿಗಿಂತ ಹೆಚ್ಚಾಗಿ ವಿದೇಶಿ ಸಂಸ್ಥೆಗಳು ಮತ್ತು ವ್ಯಕ್ತಿಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾರತೀಯ ಪೇಟೆಂಟ್‌ಗಳು ಮಂಜೂರಾಗುತ್ತಿರುವ ಟ್ರೆಂಡ್ ಹಾಗೇ ಮುಂದುವರಿದುಕೊಂಡು ಹೋಗುತ್ತಿದೆ. 2021-22ನೇ ಸಾಲಿನಲ್ಲಿ ಮಂಜೂರಾದ 66,440 ಪೇಟೆಂಟ್‌ಗಳ ಪೈಕಿ 36,932 ಪೇಟೆಂಟ್‌ಗಳು ವಿದೇಶಿ ಸಂಸ್ಥೆಗಳು ಹಾಗೂ ವ್ಯಕ್ತಿಗಳಿಗೆ ಸೇರಿದ್ದರೆ, 29,508 ಪೇಟೆಂಟ್‌ಗಳು ಭಾರತೀಯ ವ್ಯಕ್ತಿಗಳು ಹಾಗೂ ಸಂಸ್ಥೆಗಳಿಗೆ ಸೇರಿದ್ದಾಗಿವೆ.

ಪೇಟೆಂಟ್‌ಗಳ ಸಂಖ್ಯೆ ಹೆಚ್ಚುವುದರ ಜೊತೆಗೆ, ಅವುಗಳ ವಾಣಿಜ್ಯೀಕರಣದ ಪ್ರಮಾಣದಲ್ಲೂ ಗಮನಾರ್ಹ ಏರಿಕೆಯಾದರೆ ಮಾತ್ರ ದೇಶದ ಆರ್ಥಿಕತೆಗೆ ಬಲ ಬರಲಿದೆ. ಮಂಜೂರಾದ ಪೇಟೆಂಟ್‌ಗಳ ಸಂಖ್ಯೆಯೊಂದಿಗೆ ಅವುಗಳ ವಾಣಿಜ್ಯೀಕರಣದ ಪ್ರಮಾಣವನ್ನೂ ಒಕ್ಕೂಟ ಸರ್ಕಾರ ಸಾರ್ವಜನಿಕಗೊಳಿಸಲು ಮುಂದಾದರೆ, ಆವಿಷ್ಕಾರಪ್ರಣೀತ ಜ್ಞಾನಕೇಂದ್ರಿತ ಆರ್ಥಿಕತೆ ಕಡೆಗಿನ ಪಯಣದಲ್ಲಿ ಅಸಲಿಗೂ ನಾವು ಎಷ್ಟು ಹೆಜ್ಜೆಗಳನ್ನು ಮುಂದಿಟ್ಟಿದ್ದೇವೆ ಎಂಬ ಕುರಿತು ಸ್ಪಷ್ಟ ಚಿತ್ರಣ ದೊರೆಯಲಿದೆ. ಅದಿಲ್ಲದೆ ಸಲ್ಲಿಕೆಯಾದ ಅರ್ಜಿಗಳು ಹಾಗೂ ಮಂಜೂರಾದ ಪೇಟೆಂಟ್‌ಗಳ ಸಂಖ್ಯೆಯನ್ನಷ್ಟೇ ಮುಂದು ಮಾಡಿದರೆ, ಅದರಿಂದ ಅರ್ಧಸತ್ಯವನ್ನಷ್ಟೇ ಹೇಳಿದಂತೆ ಆಗುತ್ತದೆ.

ವಾಚಕರ ವಾಣಿ

ಆಯುಕ್ತರ ನೇಮಕ: ಆಶಾವಾದ ಹೊಂದೋಣ

ಪ್ರಜಾಪ್ರಭುತ್ವವೆಂಬ ಬಂಡಿಗೆ ಆಧಾರವಾಗಿರುವ ಚುನಾವಣಾ ಆಯೋಗವೇ ಇನ್ನೊಬ್ಬರ ಕೈಗೊಂಬೆ ಆಗುವಂತಾದರೆ ಚಕ್ರ ತಿರುಗುವುದು ಹೇಗೆ? ಬಂಡಿ ಸಾಗುವುದಾದರೂ ಹೇಗೆ? ‘ಚುನಾವಣಾ ಆಯುಕ್ತರ ದುರ್ಬಲ ಹೆಗಲಿನ ಮೇಲೆ ಸಂವಿಧಾನವು ಅಪಾರ ಅಧಿಕಾರವನ್ನು ವಹಿಸಿದೆ. ಈ ಹುದ್ದೆಗೆ ಸಮರ್ಥ ವ್ಯಕ್ತಿಯನ್ನು ನೇಮಿಸುವುದು ಮುಖ್ಯ’ ಎಂದು ಈ ಹಿಂದೆ ಟಿ.ಎನ್.ಶೇಷನ್ ಅವರನ್ನು ಮುಖ್ಯ ಚುನಾವಣಾ ಆಯುಕ್ತರನ್ನಾಗಿ ನೇಮಿಸುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ಹೇಳಿತ್ತು. ಅದರಂತೆಯೇ ಚುನಾವಣಾ ವ್ಯವಸ್ಥೆಯಲ್ಲಿ ಬಹಳಷ್ಟು ಕ್ರಾಂತಿಕಾರಕ ಬದಲಾವಣೆಗಳನ್ನು ತಂದವರು ಶೇಷನ್ ಎಂಬುದು ನಮಗೆಲ್ಲಾ ತಿಳಿದಿದೆ.

ಮುಖ್ಯ ಚುನಾವಣಾ ಆಯುಕ್ತರು (ಸಿ.ಇ.ಸಿ) ಮತ್ತು ಇತರ ಚುನಾವಣಾ ಆಯುಕ್ತರ (ಇ.ಸಿ) ನೇಮಕಕ್ಕೆ ಸಂಬಂಧಿಸಿದ, ತಿದ್ದುಪಡಿಗಳನ್ನು ಮಾಡಲಾಗಿರುವ ಮಸೂದೆಯನ್ನು ಸುಪ್ರೀಂ ಕೋರ್ಟ್ ನೀಡಿದ ಸೂಚನೆಯ ಅನುಸಾರವೇ ಸಿದ್ಧಪಡಿಸಲಾಗಿದೆ ಎಂದು ಕೇಂದ್ರ ಸರ್ಕಾರ ಈಗ ಹೇಳುತ್ತಿದೆ. ಹೀಗಾಗಿ, ದಕ್ಷ, ಪ್ರಾಮಾಣಿಕ, ಸ್ವತಂತ್ರ ಮತ್ತು ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸುವ ಆಯುಕ್ತರ ನೇಮಕವಾಗಬಹುದು ಎಂಬ ಆಶಾವಾದವನ್ನು ಇಟ್ಟುಕೊಳ್ಳೋಣ. ಹಾಗೆಯೇ ಪ್ರಜಾಪ್ರಭುತ್ವದ ಉಳಿವಿನ ಹೊಣೆಯನ್ನು ಬರೀ ಸರ್ಕಾರ ಮತ್ತು ಚುನಾವಣಾ ಆಯೋಗದ ಹೆಗಲಿಗೇರಿಸಿ ಸುಮ್ಮನಿರದೆ, ಜಾಗೃತ ಪ್ರಜೆಗಳಾಗಿ ಪ್ರಜಾಪ್ರಭುತ್ವವನ್ನು ಬಲಗೊಳಿಸುವ ಪ್ರತಿಜ್ಞೆ ಮಾಡೋಣ.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ, ಮಂಡ್ಯ

ಆಮಂತ್ರಣಕ್ಕೆ ಮಾನದಂಡವೇನು?

ಅಯೋಧ್ಯೆಯಲ್ಲಿ ನಿರ್ಮಾಣವಾಗುತ್ತಿರುವ ರಾಮಮಂದಿರದ ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕೆ ಬಾರದಂತೆ, ವಯಸ್ಸು ಹಾಗೂ ಆರೋಗ್ಯದ ಕಾರಣದಿಂದ ಬಿಜೆಪಿಯ ಎಲ್.ಕೆ.ಅಡ್ವಾಣಿ ಮತ್ತು ಮುರಳಿ ಮನೋಹರ ಜೋಷಿ ಅವರಿಗೆ ರಾಮಮಂದಿರ ಟ್ರಸ್ಟ್ ಮನವಿ ಮಾಡಿರುವುದಾಗಿ ವರದಿಯಾಗಿದೆ. ಇವರಿಗೆ ಕ್ರಮವಾಗಿ 96 ಮತ್ತು 90 ವರ್ಷ ವಯಸ್ಸಾಗಿದೆ. ವಿಪರ್ಯಾಸವೆಂದರೆ, 90 ವರ್ಷದ ದೇವೇಗೌಡರಿಗೆ ಆಮಂತ್ರಣ ನೀಡಲಾಗಿದ್ದು, ಅವರಿಗೆ ಕಾರ್ಯಕ್ರಮಕ್ಕೆ ಬಾರದಂತೆ ಮನವಿ ಮಾಡಿದ ಮಾಹಿತಿ ಇಲ್ಲ.

ವಾಸ್ತವದಲ್ಲಿ, ಎಷ್ಟೇ ಕಷ್ಟವಾದರೂ ಈ ಶುಭ ಸಮಾರಂಭದಲ್ಲಿ ಹಾಜರಿರುವಂತೆ ಕೋರಿ, ರಾಮಮಂದಿರದ ಈ ರೂವಾರಿಗಳಿಗೆ ಆದ್ಯತೆಯ ಮೇಲೆ ಆಮಂತ್ರಣ ನೀಡಬೇಕಾಗಿತ್ತು ಮತ್ತು ಈ ಐತಿಹಾಸಿಕ ಕಾರ್ಯಕ್ರಮ ಅವರ ಸಮ್ಮುಖದಲ್ಲಿಯೇ ನಡೆಯಬೇಕಾಗಿತ್ತು. ನಮ್ಮ ಸಂಸ್ಕೃತಿಯ ಪ್ರಕಾರ, ಆಮಂತ್ರಣ ನೀಡುವುದು ನಮ್ಮ ಕರ್ತವ್ಯ. ಭಾಗವಹಿಸುವುದು ಅಥವಾ ಬಿಡುವುದು ಆಮಂತ್ರಿತರಿಗೆ ಬಿಟ್ಟ ವಿಷಯ. ಆಮಂತ್ರಿತರು ಬರಲಾಗದು ಎಂದು ಆಮಂತ್ರಿಸುವವರೇ ನಿರ್ಧರಿಸಿ, ಬರಬೇಡಿ ಎಂದು ಅವರಿಗೆ ಹೇಳುವುದು ಯಾವ ಬಗೆಯ ಸಂಸ್ಕೃತಿ ಎಂಬುದು ತಿಳಿಯದು.

ರಮಾನಂದ ಶರ್ಮಾ, ಬೆಂಗಳೂರು

ಮಾಸ್ಕ್ ಬೇಕಾಗಿದೆ!

ನಾನು ಟಿ.ವಿ.ಗೆ ಒಂದು
ಮಾಸ್ಕ್ ಹುಡುಕುತ್ತಿದ್ದೇನೆ,
ಯಾಕೆಂದರೆ, ಕೊರೊನಾ
ಮೊದಲು ವಕ್ಕರಿಸುವುದು
ಅದಕ್ಕೇ!

ರಾಜಶೇಖರ ಕುಕ್ಕುಂದಾ
ಬಾಗಲಕೋಟೆ

ಕುಸ್ತಿಪಟುಗಳಿಗೆ ವಿಶ್ವಾಸ ಮೂಡುವುದೇ?

ಭಾರತ ಕುಸ್ತಿ ಫೆಡರೇಷನ್‌ಗೆ ನಡೆದ ಚುನಾವಣೆಯಲ್ಲಿ ಬ್ರಿಜ್ ಭೂಷಣ್ ಅವರ ಆಪ್ತ ಸಂಜಯ್ ಕುಮಾರ್ ಸಿಂಗ್ ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿರುವುದನ್ನು ವಿರೋಧಿಸಿ, ಕುಸ್ತಿಪಟು ಸಾಕ್ಷಿ ಮಲಿಕ್ ಕುಸ್ತಿ ಕ್ರೀಡೆಗೆ ಕಣ್ಣೀರಿನೊಂದಿಗೆ ವಿದಾಯ ಘೋಷಿಸಿರುವುದರಿಂದ ದೇಶದ ಕ್ರೀಡಾಭಿಮಾನಿಗಳಿಗೆ ಆಘಾತವಾಗಿದೆ.

ನ್ಯಾಯಾಲಯದ ತೀರ್ಪು ಏನೇ ಬರಬಹುದು. ಚುನಾವಣೆಯಲ್ಲಿ ಗೆಲ್ಲುವುದಕ್ಕೂ ನೈತಿಕತೆಗೂ ಯಾವೊಂದು ಸಂಬಂಧವೂ ಇರುವುದಿಲ್ಲ ಎಂಬುದು ಈಗಾಗಲೇ ಹಲವು ಬಾರಿ ಇತಿಹಾಸದಲ್ಲಿ ಸಾಬೀತಾಗಿದೆ. ಇಂಥ ಸಂದರ್ಭದಲ್ಲಿ, ಫೆಡರೇಷನ್‌ನ ಪದಾಧಿಕಾರಿಗಳ ಮೇಲೆ ಮಹಿಳಾ ಕುಸ್ತಿಪಟುಗಳು ಹಾಗೂ ಅವರ ಪೋಷಕರಿಗೆ ವಿಶ್ವಾಸ ಮೂಡುವುದಾದರೂ ಹೇಗೆ?

ಎಂ.ಜಿ.ರಂಗಸ್ವಾಮಿ, ಹಿರಿಯೂರು

ಪದನಿಮಿತ್ತ ಗೌರವ ಗಳಿಸಬಹುದಷ್ಟೆ...

ಅವಧಿಗೆ ಮುನ್ನವೇ ಸಂಸತ್ತಿನ ಅಧಿವೇಶನವನ್ನು ಮೊಟಕುಗೊಳಿಸುವಾಗ ಲೋಕಸಭೆಯ ಉತ್ಪಾದಕತೆ ಶೇ 74 ಹಾಗೂ ರಾಜ್ಯಸಭೆಯಲ್ಲಿ ಅದು ಶೇ 79 ಎಂದು ಹೇಳಿಕೊಳ್ಳಲಾಗಿದೆ. ವಿರೋಧ ಪಕ್ಷಗಳ 140ಕ್ಕೂ ಹೆಚ್ಚು ಸದಸ್ಯರನ್ನು ಅಮಾನತು ಮಾಡಿ, ಹ್ಹೂಂಗುಟ್ಟುವವರ ಪಕ್ಷದಲ್ಲಿ ಇದ್ದೇನೆ ಎನ್ನುವುದು ಎಷ್ಟು ಅರ್ಥಪೂರ್ಣ? ಇಂಗ್ಲಿಷ್‌ನಲ್ಲಿ ಒಂದು ಮಾತಿದೆ: ಪವರ್ ಕರಪ್ಟ್ಸ್, ಆ್ಯಬ್ಸಲ್ಯೂಟ್ ಪವರ್ ಕರಪ್ಟ್ಸ್ ಆ್ಯಬ್ಸಲ್ಯೂಟ್ಲಿ’. ಇದನ್ನು ತುಸು ಬದಲಿಸಿ ‘ಆ್ಯಬ್ಸಲ್ಯೂಟ್ ಮೆಜಾರಿಟಿ ಇನ್‌ಟಾಕ್ಸಿಕೇಟ್ಸ್ ಆ್ಯಬ್ಸಲ್ಯೂಟ್ಲಿ’ ಎನ್ನಬಹುದಾಗಿದೆ. ಲೋಕಸಭೆಗೆ ಕೊನೆಯಲ್ಲಿ ಪ್ರವೇಶಿಸಿದ ಪ್ರಧಾನಿಯವರನ್ನು ‘ಜೈ ಶ್ರೀರಾಮ್’ ಘೋಷಣೆಯೊಡನೆ ಸ್ವಾಗತಿಸಿದ್ದು ಅದಕ್ಕೊಂದು ಪುರಾವೆ.

ನಾವು ಕೆಲವು ವಿಷಯಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಸಂಸತ್ ಭವನದ ಮೆಟ್ಟಿಲಿಗೆ ನಮಸ್ಕರಿಸುವುದು, ಹೊಸ ಕಟ್ಟಡ ನಿರ್ಮಿಸುವಂತಹ ನಡೆಗಳಿಗೂ, ಸಂಸತ್ತಿನ ಅಸಲಿ ಚೇತನವನ್ನು ಬಲಗೊಳಿಸುವುದಕ್ಕೂ ವ್ಯತ್ಯಾಸ ಇದೆ. ಪ್ರಧಾನಿ ಉತ್ತಮ ವಾಗ್ಮಿ, ವಾಕ್ಪಟು ನಿಜ. ಆದರೆ ಸಮರ್ಥ ಸಂಸದೀಯ ಪಟು ಅಲ್ಲ. ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡದೆ ಮುಖ್ಯಮಂತ್ರಿ ಆದವರು ಎಷ್ಟು ಪತ್ರಿಕಾಗೋಷ್ಠಿಗಳಲ್ಲಿ ಪ್ರಶ್ನೆ ಆಹ್ವಾನಿಸಿ ಉತ್ತರಿಸಿದ್ದಾರೆ? ಅಧಿವೇಶನ ಇದ್ದಾಗ ತಮ್ಮ ಹಿರಿಯ ಸಹೋದ್ಯೋಗಿಗಳಲ್ಲಿ ಕೆಲವರಿಗೆ ಹಾಜರಿರುವ ಜವಾಬ್ದಾರಿ ಒಪ್ಪಿಸಿ, ತಾವು ಹೊರಗೆ ಪ್ರವಾಸ, ಭಾಷಣ ಮಾಡುತ್ತ ಇರುತ್ತಾರೆ. ಪತ್ರಿಕೆಯ ಎರಡು ಸಂಪಾದಕೀಯಗಳನ್ನು (ಡಿ. 20, 22) ಓದಿದ ಮೇಲೆ ಭಾರತೀಯ ಪ್ರಜೆಗಳು, ಮುಖ್ಯವಾಗಿ ಮತದಾರರು ಈಗ ಏನು ಮಾಡಬೇಕು ಎಂಬ ಪ್ರಶ್ನೆ ಉದ್ಭವಿಸಿತು. ಯಾವ ಒಂದು ಪಕ್ಷಕ್ಕೂ ಪರಮ ಬಲ ನೀಡುವ ತಪ್ಪನ್ನು ಮತ್ತೆ ಮಾಡಬಾರದು. ‘ಭಾರತೀಯ... ಸಂಹಿತೆ’ ಎಂಬ ಹೆಸರಿನ ಮೋಹಕ್ಕೆ ಬೀಳದೆ, ಒಳಗೆ ಏನಿದೆ ಎಂದು ಎಚ್ಚರಿಕೆಯಿಂದ ಪರಿಶೀಲಿಸಬೇಕು. ಒಟ್ಟಿನಲ್ಲಿ- ಪದವಿಯೊಂದಕ್ಕೆ ಗೌರವವನ್ನು ಸರಿಯಾಗಿ ನಿರ್ವಹಿಸಿ ಪಡೆಯುವಂತಹದು. ಯಾವುದೋ ಕಾರಣ, ಗುರಿ ಇಟ್ಟುಕೊಂಡು ಸಾಂವಿಧಾನಿಕ ಸ್ಥಾನಗಳಿಗೆ ವ್ಯಕ್ತಿಗಳನ್ನು ತಂದಾಗ ಅವರು ಪದನಿಮಿತ್ತ ಗೌರವ ಗಳಿಸಬಲ್ಲರಷ್ಟೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜಪ್ರಭುತ್ವದೊಳಗೆ ಹುಟ್ಟಿದ ಕವಿರಾಜಮಾರ್ಗವು ಪ್ರಸ್ತಾಪಿಸುತ್ತಿರುವ ಈ ಸೈರಣೆ, ಬಹುಭಾಷೆ ಬಹುಧರ್ಮ ಬಹುಸಂಸ್ಕೃತಿಗಳಿರುವ ಸಮಾಜದಲ್ಲಿ ಇರಬೇಕಾದ ಸಾಂಸ್ಕೃತಿಕ ಡೆಮಾಕ್ರಸಿಗೆ ಸಂಬಂಧಿಸಿದ ಮೌಲ್ಯ. ಸ್ತ್ರೀಸಂವೇದನೆ ಮತ್ತು ಅಂಬೇಡ್ಕರ್ ಚಿಂತನೆಗಳ ಮೂಲಕ ಲೋಕವನ್ನು ನೋಡುವ ದೃಷ್ಟಿಕೋನಗಳು, ಹಿಂದಿಗಿಂತ ಹೆಚ್ಚು ಮುಂಚೂಣಿಗೆ ಬರುತ್ತಿವೆ

ಸಾಂಸ್ಕೃತಿಕ ಕರ್ನಾಟಕ ಸವಾಲು–ಸಾಧ್ಯತೆ

● ರಹಮತ್ ತರೀಕೆರೆ

ಕೆಂಗಲ್ ಅವರು ಮುಖ್ಯಮಂತ್ರಿಯಾಗಿದ್ದಾಗ, ಸರ್ಕಾರವು ಸಾಹಿತ್ಯ ಮತ್ತು ಸಂಸ್ಕೃತಿ ಇಲಾಖೆ ಸ್ಥಾಪಿಸಿತು. ಇಲಾಖೆಯ ಮೂಲಕ ಪ್ರಾಚೀನ ಕಾವ್ಯಗಳನ್ನು ಮುದ್ರಿಸಿ ಕಡಿಮೆ ಬೆಲೆಗೆ ವಿತರಿಸಲು ನಿರ್ಧರಿಸಿತು. ಆದರೆ ಸಂಸ್ಕೃತಿ ಹೆಸರಲ್ಲಿ ಸರ್ಕಾರದ ಕೆಲಸ ಸಾಂಪ್ರದಾಯಿಕ ಜೀವನ ಮೌಲ್ಯಗಳನ್ನು ಹರಡುವ ಪುಸ್ತಕಗಳನ್ನು ಮುದ್ರಿಸಿ ಒದಗಿಸುವುದಲ್ಲ ಎಂದು ಅನೇಕರು ಟೀಕಿಸಿದರು. ನಾಗರಿಕ ಸರ್ಕಾರವು ಪ್ರಜೆಗಳಲ್ಲಿ ಆಧುನಿಕ ಮೌಲ್ಯಗಳನ್ನು ಬಿತ್ತುವ ಕೆಲಸ ಮಾಡಬೇಕು ಎಂಬುದು ಅವರ ಆಶಯವಾಗಿತ್ತು. ಡಿಎಂಕೆ ಪಕ್ಷವು ತಮಿಳುನಾಡಿನಲ್ಲಿ ಅಧಿಕಾರಕ್ಕೆ ಬಂದಾಗ ಜಾತ್ಯತೀತ ಚಿಂತಕರನ್ನು ಕುರಿತ ಪುಸ್ತಕಗಳನ್ನು ತಮಿಳಿನಲ್ಲಿ ಪ್ರಕಟಿಸಿತು, ಅವರ ಗಮನದಲ್ಲಿದ್ದಿರಬಹುದು.

ಇದೇ ಕಾಲಕ್ಕೆ ಸಂಸ್ಕೃತಿ ಇಲಾಖೆಯಿಂದ ಸಂಸ್ಕೃತಿ ಪರಿಕಲ್ಪನೆಯನ್ನು ವ್ಯಾಖ್ಯಾನಿಸುವ ಪುಸ್ತಕಗಳು ಪ್ರಕಟವಾದವು. ಪ್ರಾಚೀನ ಪ್ರಭುತ್ವಗಳು ಕಲಾಪೋಷಣೆಗೆ ಮಾಡಿದ ಐತಿಹಾಸಿಕ ಕೆಲಸವನ್ನು ಕಟ್ಟಿಕೊಡುತ್ತ, ಈ ಕಾರ್ಯವನ್ನು ಆಧುನಿಕ ಸರ್ಕಾರಗಳು ಮಾಡಬೇಕೆಂಬುದು ಅವುಗಳ ಸಾರವಾಗಿತ್ತು. ಈಗಲೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಬಹುತೇಕ ಕಾರ್ಯಕ್ರಮಗಳು ಈ ವ್ಯಾಖ್ಯೆಯ ಚೌಕಟ್ಟಿನಲ್ಲೇ ಇರುವುದು ಗಮನಾರ್ಹ. ಆದರೆ ಉಚ್ಚವರ್ಗಗಳ ಜೀವನ ಮೌಲ್ಯಗಳ ನೆಲೆಯಿಂದ ರೂಪುಗೊಂಡಿದ್ದ ಈ ಸಂಸ್ಕೃತಿ ವ್ಯಾಖ್ಯೆ ಸಮಸ್ಯಾತ್ಮಕವಾಗಿತ್ತು. ಇದು ಸಾಹಿತ್ಯ ಸಂಗೀತ ನೃತ್ಯವೇ ಮೊದಲಾದ ಲಲಿತಕಲೆಗಳನ್ನು ತನ್ನ ಕಣ್ಣೆದುರು ಇರಿಸಿಕೊಂಡಿತ್ತು. ಸಂಸ್ಕೃತಿಯ ವಿಮರ್ಶಾತ್ಮಕ ಅನುಸಂಧಾನಕ್ಕೆ ಬದಲಾಗಿ ಉತ್ಸವ ಕೇಂದ್ರಿತ ಕಾರ್ಯಕ್ರಮಗಳನ್ನು ಮಾಡುತ್ತಿತ್ತು. ನಾಡಿನ ದುಡಿವ ವರ್ಗದ ವಿವಿಧ ಜನಸಮುದಾಯಗಳಲ್ಲಿರುವ ಜೀವನಪದ್ಧತಿಯನ್ನಾಗಲಿ ಅಲ್ಲಿರುವ ಲೋಕದೃಷ್ಟಿಗಳನ್ನಾಗಲಿ ಒಳಗೊಂಡಿರಲಿಲ್ಲ.

ಸಂಸ್ಕೃತಿಯ ಈ ಸಾಂಪ್ರದಾಯಿಕ ಚೌಕಟ್ಟನ್ನು ಭಗ್ನಗೊಳಿಸಿ, ಅದಕ್ಕೆ ಹೊಸ ತಿರುವು ಕೊಟ್ಟದ್ದು ಬಸವಲಿಂಗಪ್ಪನವರ ಬೂಸಾಸಾಹಿತ್ಯ ಪ್ರಕರಣ. ಈ ಪ್ರಕರಣದಿಂದ ಹೊಮ್ಮಿದ ಚಿಂತನೆಗಳಿಂದ ಪ್ರೇರಿತರಾಗಿ, ಲಂಕೇಶ್, ತೇಜಸ್ವಿ, ಚಂಪಾ, ಅನಂತಮೂರ್ತಿ ಮೊದಲಾದ ಲೇಖಕರು 'ಬರಹಗಾರರ ಮತ್ತು ಕಲಾವಿದರ ಒಕ್ಕೂಟ'ದ ಹೆಸರಲ್ಲಿ ಕಾರ್ಯಕ್ರಮ ಹಮ್ಮಿಕೊಂಡರು. ಇದನ್ನು ಉದ್ಘಾಟಿಸುತ್ತ ಕುವೆಂಪು 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ' ಭಾಷಣ ಮಾಡಿದರು. ಇಲ್ಲಿ ಸಾಮಾಜಿಕ ಅಥವಾ ರಾಜಕೀಯ ಪರಿಕಲ್ಪನೆಗಳಿಗೆ ಅಗತ್ಯವಾದ 'ಕ್ರಾಂತಿ' ವಿಶೇಷಣವನ್ನು 'ಸಂಸ್ಕೃತಿ'ಗೆ ಜೋಡಿಸಿದ್ದು ವಿಶೇಷವಾಗಿತ್ತು. ಕುವೆಂಪು ಪ್ರಕಾರ, ಜನರ ಚಿಂತನಾ ಕ್ರಮವನ್ನು ರೂಪಿಸುವ ಧರ್ಮ, ಸಾಹಿತ್ಯ, ಲಲಿತಕಲೆ, ನಂಬಿಕೆ, ಆಚರಣೆ, ಪುರಾಣಗಳಲ್ಲಿ ವರ್ತಮಾನವನ್ನು ಕೊರೆಯಬಲ್ಲದ್ದನ್ನು ಕುರುಡು ಅನುಸರಣೆಯಲ್ಲ. ಬರುವ ನಿರಾಕರಣೆಯೂ ಅಲ್ಲ. ಅವನ್ನು ವಿಮರ್ಶಾತ್ಮಕ ನೆಲೆಯಲ್ಲಿ ಮುಖಾಮುಖಿ ಮಾಡುತ್ತ, ಹೊಸ ಮೌಲ್ಯಪ್ರಜ್ಞೆಯನ್ನು ಸೃಷ್ಟಿಸಬೇಕು. ಬಳಿಕ ಮುಂದೆ ಅನಂತಮೂರ್ತಿಯವರ ಜತೆಗಿನ ತೀಕ್ಷ್ಣ ವಾಗ್ವಾದದಲ್ಲಿ ತೇಜಸ್ವಿಯವರು 'ಕರ್ನಾಟಕ ಸಂಸ್ಕೃತಿಯ ವಿಶ್ಲೇಷಣೆ' ಲೇಖನ ಬರೆದರು.

ಸಂಸ್ಕೃತಿ ಎಂದರೆ, ನಾಡಿನ ಜನ ಸಮುದಾಯಗಳ ಆಲೋಚನಕ್ರಮ, ಜೀವನವಿಧಾನ ಹಾಗೂ ಮೌಲ್ಯಪ್ರಜ್ಞೆಯ ಅಭಿವ್ಯಕ್ತಿ ಎಂಬ ಗ್ರಹಿಕೆ ಮುನ್ನೆಲೆಗೆ ಬಂದಿತು. ಇದು ನಾಡಿನ ಸಮಸ್ತ ಸಮುದಾಯಗಳ ಭಾಷೆ, ಧರ್ಮ, ಆಚರಣೆ, ನಂಬಿಕೆ, ಕಲಾಭಿವ್ಯಕ್ತಿಯ ಲೋಕಗಳನ್ನು ಒಳಗೊಳ್ಳಲು ಯತ್ನಿಸಿತು. ಸಂಸ್ಕೃತಿಯ ಭಾಗವಾಗಿರುವ ಸಂಗತಿಗಳು ಹಿಂದೆಂದೊ ರೂಪುಗೊಂಡ ಪರಿಯಲ್ಲೇ ಇರುವುದಿಲ್ಲ. ಚಾರಿತ್ರಿಕ ಒತ್ತಡಗಳಲ್ಲಿ ಬದಲಾಗುತ್ತವೆ. ಪ್ರಭಾವಶಾಲಿ ಚಿಂತಕರ, ಸಾಮಾಜಿಕ- ರಾಜಕೀಯ ಸಿದ್ಧಾಂತ ಮತ್ತು ಸಂಘಟನೆಗಳ ಮೂಲಕ ಅನುಸಂಧಾನಗೊಳ್ಳುತ್ತ ರೂಪಾಂತರ ಪಡೆಯುತ್ತವೆ ಎಂದು ಭಾವಿಸಿತ್ತು. ಇಂತಹ ಸಾಂಸ್ಕೃತಿಕ ಮಧ್ಯಪ್ರವೇಶವನ್ನು ಯಾರು ಮಾಡಬೇಕು, ಅದರ ಹಿಂದಿನ ತತ್ವ ಯಾವುದು, ಅದರ ಪರಿಣಾಮ ಯಾವುವು ಎಂಬ ಪ್ರಶ್ನೆಗಳನ್ನೂ ಇದು ಹುಟ್ಟಿಸಿತು.

ಮೈಸೂರು ರಾಜ್ಯಕ್ಕೆ 'ಕರ್ನಾಟಕ'ವೆಂದು ನಾಮಕರಣವಾದ ಆಸುಪಾಸಲ್ಲಿ ಹುಟ್ಟಿದ ಈ ವಾಗ್ವಾದಗಳು, ಸಂಸ್ಕೃತಿಯನ್ನು ಪ್ರಶ್ನೆ ಮತ್ತು ಎಚ್ಚರದಲ್ಲಿ ಅನುಸಂಧಾನ ಮಾಡುವುದನ್ನು ತಿಳಿಸಿದವು. ಅವುಗಳಲ್ಲಿ ನಾಡನ್ನು ಸಮಾನತೆ, ವೈಚಾರಿಕತೆಯ ಮೂಲಕ ಪ್ರಜಾಸತ್ತಾತ್ಮಕವಾಗಿ ಕಟ್ಟುವ ಮುಂಗಾಣ್ಕೆಯಿತ್ತು. ಇದೇ ಕಾಲಕ್ಕೆ ಅವುಗಳಿಂದ ಪ್ರಭಾವಿತರಾದ ಕೆಲವು ತಳಸ್ತರದ ಚಿಂತಕರು, ಪ್ರಚಲಿತದಲ್ಲಿರುವ ಸಂಸ್ಕೃತಿಯ ಚೌಕಟ್ಟಿನಲ್ಲಿ, ತಮ್ಮ ಸಮುದಾಯಗಳ ಜೀವನಕ್ರಮಗಳ ಗೈರುಹಾಜರಿಯನ್ನು ಗುರುತಿಸಿದರು. ದಲಿತ, ಮುಸ್ಲಿಂ, ಮಹಿಳಾ ನೆಲೆಗಳಿಂದ ಬಂದ ಲೇಖಕರು, ತಮ್ಮ ಅನುಭವ ಲೋಕದ ಮೂಲಕ ಬರೆಯಲು ಆರಂಭಿಸಿದರು. ತಮ್ಮ ಸಮುದಾಯಗಳ ಸಂಸ್ಕೃತಿ, ಚರಿತ್ರೆ, ಪರಂಪರೆಗಳಲ್ಲಿ ಹೊಸ ಜೀವನ ಮೌಲ್ಯ ವಿಮರ್ಶಾತ್ಮಕವಾಗಿ ಹುಡುಕಿದರು. ಇರುವುದು ಸಂಸ್ಕೃತಿಯಲ್ಲ, ಸಂಸ್ಕೃತಿಗಳು ಎಂದು ಕಾಣಿಸಿದರು. ಅವರ ಯತ್ನಗಳಿಗೆ ಬೌದ್ಧಿಕ ಚೌಕಟ್ಟನ್ನು ಕೊಡುವ ಕೆಲಸವನ್ನು ವಿಶ್ವವಿದ್ಯಾಲಯಗಳು ಮಾಡಿದವು.

ಸಂಸ್ಕೃತಿ ಪರಿಕಲ್ಪನೆಯ ವಿಮರ್ಶಾತ್ಮಕ ಅನುಸಂಧಾನ ಮತ್ತು ಒಳಗೊಳ್ಳುವಿಕೆಯ ಪ್ರಕ್ರಿಯೆಯು, ಕೇವಲ ಅಕಡೆಮಿಕ್ ಪ್ರಯತ್ನ ಆಗಿರಲಿಲ್ಲ. ಜಾತ್ಯತೀತತೆ, ಸಮಾನತೆ, ಸ್ವಾತಂತ್ರ್ಯ, ಸೌಹಾರ್ದತೆ, ಮಾನವೀಯ ಪ್ರಜ್ಞೆಯನ್ನು ಒಳಗೊಂಡ ಹೊಸ ಸಮಾಜ ಕಟ್ಟುವ ಯತ್ನವೂ ಆಗಿತ್ತು. ಇದಕ್ಕೆ ಇದೇ ದಶಕಗಳಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆಯಿಂದ ಹುಟ್ಟಿದ ರಾಜಕೀಯ ಸಾಮಾಜಿಕ ಚಳವಳಿಗಳು ಇಂಬಾದವು. ಸಂಸ್ಕೃತಿಯ ಮರುವ್ಯಾಖ್ಯಾನ, ನಾಗರಿಕ ಆಂದೋಲನ ಮತ್ತು ಸಾಮಾಜಿಕ, ರಾಜಕೀಯ, ಆರ್ಥಿಕ ವ್ಯವಸ್ಥೆಗಳ ಮರುರಚನೆಗಳು ಒಟ್ಟೊಟ್ಟಿಗೆ ನಡೆಯುತ್ತವೆ.

20ನೇ ಶತಮಾನದ ಕೊನೆಯ ವರ್ಷಗಳಲ್ಲಿ ಭಾರತ ಮುಕ್ತಮಾರುಕಟ್ಟೆಯ ಆರ್ಥಿಕ ವ್ಯವಸ್ಥೆಗೆ ಪ್ರವೇಶಿಸಿತು. ಈ ಕಾಲಘಟ್ಟದಲ್ಲಿ ಧರ್ಮ, ನಂಬಿಕೆ, ಶ್ರದ್ಧೆ ಹೆಸರಲ್ಲಿ ಭಾವನಾತ್ಮಕ ಅಲೆಗಳನ್ನು ಎಬ್ಬಿಸಿದ ರಾಜಕೀಯ ಚಳವಳಿಯೂ ಪ್ರಧಾನಧಾರೆಗೆ ಬಂದಿತು. ಇದು ಸಾಂಸ್ಕೃತಿಕ ರಾಷ್ಟ್ರೀಯತೆಯ ಹೆಸರಲ್ಲಿ ಮೇಲ್ಜಾತಿ-ಮೇಲ್ವರ್ಗಗಳ ಧರ್ಮ ಭಾಷೆ ಆಚರಣೆ ನಂಬಿಕೆಗಳನ್ನು ದೇಶದ ಸಂಸ್ಕೃತಿಯೆಂದು ಮಂಡಿಸಿತು. ಇದಕ್ಕೆ ಹೊಂದುವಂತೆ, ತಳಸ್ತರದ ಸಮುದಾಯಗಳ ಮತ್ತು ಬುಡಕಟ್ಟುಗಳ ಲೋಕಗಳನ್ನು ಪಳಗಿಸಿತು. ಬೌದ್ಧ, ಇಸ್ಲಾಂ, ಕ್ರೈಸ್ತ ಧಾರ್ಮಿಕ-ಸಾಮಾಜಿಕ ಸಮುದಾಯಗಳ ಚರಿತ್ರೆ ಪರಂಪರೆ ಸಂಸ್ಕೃತಿಗಳು ಅನ್ಯೀಕರಣಗೊಂಡವು. ಈ ಪ್ರಕ್ರಿಯೆಯಲ್ಲಿ ಸಿನಿಮಾ, ರಂಗಭೂಮಿ, ಸಾಹಿತ್ಯ, ಭಾಷೆ, ಧಾರ್ಮಿಕ ಆಚರಣೆ ಸೋಂಕಿಗೆ ಒಳಗಾದವು. ಈ ಸೋಂಕು ಯಕ್ಷಗಾನದಲ್ಲಿ ಹೆಚ್ಚು ಕಾಣಿಸಿತು. ವೈಚಾರಿಕತೆ, ಸಹನಶೀಲತೆ ಮತ್ತು ವಿವೇಚನೆ ಕಳೆದುಕೊಂಡ, ದ್ವೇಷ ಹರಡುವ ಜ್ಞಾನವಿರೋಧಿ ಯುವ ತಲೆಮಾರು ಸೃಷ್ಟಿಯಾಯಿತು. ಮಾಧ್ಯಮಗಳು ಮಾರುಕಟ್ಟೆ ಸಂಸ್ಕೃತಿಯ ಭಾಗವಾದವು. ಜಾತಿ ಸಮುದಾಯಗಳು ಅಸ್ಮಿತೆಯ ರಾಜಕಾರಣದ ಹಾದಿಯಲ್ಲಿ ತಮ್ಮದೇ ಸಾಂಸ್ಕೃತಿಕ ನಾಯಕರನ್ನು ರೂಪಿಸಿಕೊಂಡು ಸಂಘಟಿತವಾದವು; ಕರ್ನಾಟಕದ ಶಕ್ತಿರಾಜಕಾರಣವು ದಂಧೆಯ ಲಕ್ಷಣವನ್ನು ಮೈಗೊಡಿಸಿಕೊಂಡಿತು. ಹೊಸಚಿಂತನೆ ಹುಟ್ಟಿಸಬೇಕಿದ್ದ ವಿಶ್ವವಿದ್ಯಾಲಯಗಳು ನಿಷ್ಕ್ರಿಯವಾದವು.

ಆದರೆ ಇಂತಹ ಪ್ರತಿಕ್ರಾಂತಿಕಾರಕ ಬೆಳವಣಿಗೆಗಳ ಜತೆಯಲ್ಲೆ, ಸಮಾಜವನ್ನು ಮರುಕಟ್ಟುವ ಸಾಂಸ್ಕೃತಿಕ ಯತ್ನಗಳು ನಿಲ್ಲಲಿಲ್ಲ. ಈಚಿನ ಸಾರ್ವಜನಿಕ ಚರ್ಚೆಗಳಲ್ಲಿ ಕುವೆಂಪು ಅವರ 'ಸರ್ವಜನಾಂಗದ ಶಾಂತಿಯ ತೋಟ' ಮತ್ತು ಕವಿರಾಜಮಾರ್ಗದ 'ಪರ ಧರ್ಮಮುಮಂ ಪರ ವಿಚಾರಮುಮಂ ನೆರೆ ಸೈರಿಸಲಾರ್ಪುದು' ಹೇಳಿಕೆಗಳು ಬಳಕೆಯಾದವು ಎಂಬುದು ಗಮನಾರ್ಹ. ರಾಜಪ್ರಭುತ್ವದೊಳಗೆ ಹುಟ್ಟಿದ ಕವಿರಾಜಮಾರ್ಗವು ಪ್ರಸ್ತಾಪಿಸುತ್ತಿರುವ ಈ ಸೈರಣೆ, ಬಹುಭಾಷೆ ಬಹುಧರ್ಮ ಬಹುಸಂಸ್ಕೃತಿಗಳಿರುವ ಸಮಾಜದಲ್ಲಿ ಇರಬೇಕಾದ ಸಾಂಸ್ಕೃತಿಕ ಡೆಮಾಕ್ರಸಿಗೆ ಸಂಬಂಧಿಸಿದ ಮೌಲ್ಯ. ಸ್ತ್ರೀಸಂವೇದನೆ ಮತ್ತು ಅಂಬೇಡ್ಕರ್ ಚಿಂತನೆಗಳ ಮೂಲಕ ಲೋಕವನ್ನು ನೋಡುವ ದೃಷ್ಟಿಕೋನಗಳು, ಹಿಂದಿಗಿಂತ ಹೆಚ್ಚು ಮುಂಚೂಣಿಗೆ ಬರುತ್ತಿವೆ. ಪಶುಪಕ್ಷಿಗಳ ಬದುಕುವ ಹಕ್ಕನ್ನು ಮನ್ನಿಸುವ, ಲೈಂಗಿಕ ಅಲ್ಪಸಂಖ್ಯಾತರ ಸಂವೇದನೆಗೆ ಮಿಡಿವ ಸಂವೇದನಶೀಲತೆ ಹೆಚ್ಚುತ್ತಿದೆ. ಕೂಡುಬಾಳಿನ ಆಶಯದಲ್ಲಿ ಎಲ್ಲ ಸಮುದಾಯಗಳನ್ನು ಒಳಗೊಂಡು ಸಮಾಜವನ್ನು ಕಟ್ಟುವ ಬಹುತ್ವದ ಪ್ರಜ್ಞೆಯನ್ನು ಮತ್ತು ಅಸಮಾನತೆ ತೊಡೆಯಲು ಬೇಕಾದ ಸಂಘರ್ಷ ತತ್ವವನ್ನು ಏಕಕಾಲಕ್ಕೆ ಜಾಗೃತಗೊಳಿಸುವುದು ಕುವೆಂಪು ಹೇಳುವ 'ಸಂಸ್ಕೃತಿ ಕ್ರಾಂತಿ'ಯ ಕೆಲಸ. ಈ ಹಿನ್ನೆಲೆಯಲ್ಲಿ ಬರುವ ದಶಕಗಳಲ್ಲಿ ಕರ್ನಾಟಕವು ಕೈಗೊಳ್ಳಬೇಕಾದ ಕೆಲವು ಹೊಣೆಗಳನ್ನು ಹೀಗೆ ಹೇಳಬಹುದು:

ಒಕ್ಕೂಟ ಸರ್ಕಾರವು ರಾಜ್ಯಗಳ ಮೇಲೆ ಭಾಷೆ, ಶಿಕ್ಷಣನೀತಿ, ಕಾನೂನುಗಳನ್ನು ಹೇರಿಕೆ ಮಾಡುತ್ತಿರುವ ಈ ಹೊತ್ತಿನಲ್ಲಿ, ಕರ್ನಾಟಕದ ಅಸ್ಮಿತೆ-ಸ್ವಂತಿಕೆ ಉಳಿಸುವ ಕ್ರಮ ಕೈಗೊಳ್ಳುವುದು; ನಾಡಿನ ಸಮಾಜ, ರಾಜಕಾರಣ, ಧರ್ಮ, ಆರ್ಥಿಕತೆಗಳ ಪ್ರಜಾಪ್ರಭುತ್ವೀಕರಣ ಮಾಡುವ ಚಿಂತನೆಗಳನ್ನು ಪಸರಿಸುವುದು (ಇದಕ್ಕಾಗಿ ಆರೋಗ್ಯಕರ ಚಿಂತನೆಯುಳ್ಳ ಪುಸ್ತಿಕೆಗಳನ್ನು ಪ್ರಕಟಿಸಬಹುದು; ವಿಡಿಯೊಗಳನ್ನು ಹಂಚಬಹುದು); ದಿಟ್ಟವಾಗಿ ಪ್ರಶ್ನೆ ಕೇಳುವ, ಭಿನ್ನಮತ ಹೇಳಲು ಹಿಂಜರಿಯದ ಮತ್ತು ಅದನ್ನು ಆಲಿಸುವ ಸಹನೆಯುಳ್ಳ 'ನಿರಂಕುಶಮತಿ'ತ್ವದ ವಾತಾವರಣ ನಿರ್ಮಿಸುವುದು; ದ್ವೇಷಭಾಷಣ ಮಾಡದಂತೆ, ಸಾಮಾಜಿಕ ಜಾಲತಾಣಗಳು ದ್ವೇಷಸಾಧನೆಯ ಉಪಕರಣಗಳಾಗದಂತೆ ನಿಯಮ ರೂಪಿಸುವುದು; ನಾಡಿನ ಸಾಮಾಜಿಕ ಧಾರ್ಮಿಕ ಬುಡಕಟ್ಟು ಸಮುದಾಯಗಳ ಆರೋಗ್ಯಕರ ಲೋಕದೃಷ್ಟಿ ಮತ್ತು ಸೃಜನಶೀಲತೆ ಒಳಗೊಂಡಿರುವಂತಹ ಸಾಂಸ್ಕೃತಿಕ ಅಭಿವ್ಯಕ್ತಿಗಳನ್ನು ಶೈಕ್ಷಣಿಕ ವಲಯದಲ್ಲಿ ಅಳವಡುವಂತೆ ಮಾಡುವುದು; ಸಾರ್ವಜನಿಕ ಉತ್ಸವಗಳಲ್ಲಿ ಜನಪದ ಕಲಾವಿದರನ್ನು ನಡೆಸಿಕೊಳ್ಳುವುದರಲ್ಲೂ ಕಾಣುವ ಕಲಾಲೋಕದ ತರತಮಗಳನ್ನು ಇಲ್ಲವಾಗಿಸುವುದು; ಮತೀಯ ಜಾತೀಯ ದ್ವೇಷ, ಲಿಂಗತಾರತಮ್ಯ ಹಾಗೂ ಹಿಂಸೆಯನ್ನು ಪ್ರಚೋದಿಸುವ ಬರೆಹ ಸಿನಿಮಾ ರಂಗಪ್ರದರ್ಶನಗಳನ್ನು ಬಹಿಷ್ಕರಿಸುವ ಪ್ರಜ್ಞೆ ಕಾಮನ್‌ಸೆನ್ಸಾಗುವಂತೆ ಮಾಡುವುದು; ಸಂವಿಧಾನದ ಪ್ರಸ್ತಾವನೆಯಲ್ಲಿರುವ ಮೌಲ್ಯಾದರ್ಶಗಳು ಜನರ ಪ್ರಜ್ಞೆಯ ಆಲೋಚನಕ್ರಮದ ಭಾಗವಾಗುವಂತೆ ಕಾರ್ಯಕ್ರಮ ಏರ್ಪಡಿಸುವುದು; (ಕಳೆದ ಕೆಲವು ವರ್ಷಗಳಿಂದ ನ್ಯಾಯಮೂರ್ತಿ ನಾಗಮೋಹನದಾಸ್ ಅವರು ಈ ಕೆಲಸ ಮಾಡಿ ಹಾದಿ ರೂಪಿಸಿದ್ದಾರೆ); ಪದವಿ ನೀಡಿಕೆಗೆ ಸೀಮಿತವಾಗುತ್ತಿರುವ ವಿಶ್ವವಿದ್ಯಾಲಯಗಳು ಮತ್ತು ಮಾಧ್ಯಮಗಳು ಕರ್ನಾಟಕದ ಹದುಳವನ್ನು ಸಾಧಿಸುವ ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಣೆಗಾರಿಕೆಯ ವೇದಿಕೆಗಳಾಗುವುದು.

ಈ ಮುನ್ನೋಟವು ಕಷ್ಟಕರವಾದ ಕನಸಿನಂತೆ ಕಾಣುತ್ತವೆ. ಈ ಕನಸನ್ನು ಕರ್ನಾಟಕದ ಮುಂಬರುವ ದಶಕಗಳು ಹೇಗೆ ಆವಾಹಿಸಿಕೊಳ್ಳುತ್ತವೆ ಮತ್ತು ನಿಭಾಯಿಸುತ್ತವೆ ಎಂಬುದರ ಮೇಲೆ, ನಾಡಿನ ಚಹರೆ ನಿಶ್ಚಯವಾಗಲಿದೆ. ಈ ಕೆಲಸದಲ್ಲಿ ಪ್ರಭುತ್ವದ ಪಾತ್ರವಿದೆ, ನಿಜ. ಆದರೆ ಮತಗಳಿಕೆಯ ರಾಜಕಾರಣದಲ್ಲೇ ಎಲ್ಲವನ್ನು ನೋಡುವ ಸರ್ಕಾರಗಳಿಂದ ಇದನ್ನೆಲ್ಲ ಬಯಸುವುದು ಕಷ್ಟ. ನಾಗರಿಕ ಸಮಾಜವು ಪ್ರಭುತ್ವದ ಮೇಲೆ ನೈತಿಕವಾದ ಒತ್ತಡ ನಿರ್ಮಿಸುವುದು ಮತ್ತು ಪ್ರಭುತ್ವವನ್ನು ಸಂವೇದನಶೀಲಗೊಳಿಸುವುದು ಸಾಧ್ಯವಿದೆ. ಹೀಗೆ ಮಾಡುವುದಕ್ಕೆ ಮೊದಲು ಸ್ವತಃ ಅದು ಸಂವೇದನಶೀಲಗೊಳ್ಳುವುದು ಕೂಡ ಅಗತ್ಯವಾಗಿದೆ.

ಲೇಖಕ: ಸಂಸ್ಕೃತಿ ಚಿಂತಕ

'ಅನ್ನದ ಭಾಷೆಯಾಗಿಸಿ'

- ಶಾಸ್ತ್ರೀಯ ಭಾಷಾ ಅಧ್ಯಯನ ಸಂಸ್ಥೆಗೆ ಸ್ವಾಯತ್ತ ದೊರಕಿಸಿಕೊಡಬೇಕು. ಸಂಸ್ಥೆಯು ಪ್ರಾಚೀನ ಸಾಹಿತ್ಯಕ್ಕಷ್ಟೇ ಸೀಮಿತವಾಗದೆ, ಹೊಸಗನ್ನಡದ ಇತ್ತೀಚಿನ ಬೆಳವಣಿಗೆಗಳನ್ನೂ ಒಳಗೊಳ್ಳುವಂತೆ ಇದನ್ನು ರೂಪಿಸಬೇಕು
- ಕನ್ನಡೇತರ ರಾಜ್ಯಗಳಲ್ಲಿ ವಿದೇಶಗಳಲ್ಲಿ ಇರುವ ಕನ್ನಡ ಅಧ್ಯಯನ ಪೀಠಗಳಿಗೆ ಯಾವ ಕಾಲಕ್ಕೂ ಅಧ್ಯಾಪಕರ ಕೊರತೆಯಾಗದಂತೆ ನಿಯಮ ರೂಪುಗೊಳ್ಳಬೇಕು
- ಪಂಪ, ರನ್ನ, ಕುಮಾರವ್ಯಾಸರ ಜೊತೆಗೇ ಆಧುನಿಕ ಸಾಹಿತ್ಯದ ಪಥನಿರ್ಮಾತೃ ಲೇಖಕರನ್ನು ಇಂಗ್ಲಿಷ್‌ಗೆ ಅನುವಾದಿಸಲು ಆದ್ಯತೆ ನೀಡಬೇಕು
- ಖಾಸಗಿ ವಲಯದಲ್ಲೂ ಕನ್ನಡಿಗರಿಗೆ ಮೀಸಲಾತಿ ಸಿಗುವಂತೆ ಮಾಡುವ ಮೂಲಕ ಕನ್ನಡವನ್ನು ಅನ್ನದ ಭಾಷೆಯಾಗಿ ಮಾರ್ಪಡಿಸುವ ಇಚ್ಛಾಶಕ್ತಿಯನ್ನು ಪ್ರದರ್ಶಿಸಬೇಕು
- ರಾಜ್ಯದ ಪ್ರತಿಯೊಂದು ಪ್ರದೇಶಕ್ಕೂ ಕನ್ನಡದ ಕೆಲಸದಲ್ಲಿ ಸಮಾನ ಮಹತ್ವದ ಪಾತ್ರವಿದೆ ಎನ್ನುವ ಭಾವನೆ ಬಲಗೊಳ್ಳುವಂತೆ ಆಡಳಿತವು ಬೆಂಗಳೂರಿನಾಚೆ ಬೇರೆ ಬೇರೆ ಕಡೆ ವಿಕೇಂದ್ರೀಕರಣಗೊಳ್ಳಬೇಕು
- ಸದ್ಯ ಕೇಂದ್ರ ಸಾಹಿತ್ಯ ಅಕಾಡೆಮಿಯಲ್ಲಿರುವಂತೆ, ಸರ್ಕಾರ ಬದಲಾದರೂ ಆ ಸಮಿತಿಗಳ ಅವಧಿ ಪೂರ್ಣಗೊಳಿಸಬೇಕು. ಈ ದಿಸೆಯಲ್ಲಿ ಪ್ರೊ. ಬರಗೂರು ರಾಮಚಂದ್ರಪ್ಪನವರು ಸಲ್ಲಿಸಿರುವ ಸಾಂಸ್ಕೃತಿಕ ನೀತಿಯ ನಿರ್ಧಾರಗಳಲ್ಲಿ ಜಾರಿಗೆ ಬರುವಂತಾಗಬೇಕು
- ಸರ್ಕಾರಗಳು ಬದಲಾದಂತೆ ಪಠ್ಯಕ್ರಮಗಳು ಬದಲಾಗುವುದು, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಬದಲಾಗುವುದು ತಪ್ಪಿ, ತಜ್ಞತೆಗೆ ಹೆಚ್ಚಿನ ಪ್ರಾಧಾನ್ಯ ದೊರೆಯಬೇಕು. ಅದಕ್ಕಾಗಿ ಮುಖ್ಯವಾಗಿ ರಾಜಕಾರಣಿಗಳು ಮತ್ತು ಉದ್ಯಮಿಗಳು ಸಿಂಡಿಕೇಟ್ ಮತ್ತು ವಿದ್ಯಾವಿಷಯಕ ಪರಿಷತ್ತುಗಳಿಗೆ ನೇಮಕಗೊಳ್ಳದಂತೆ ನಿಯಮ ರೂಪಿಸಬೇಕು

ಚಿದಾನಂದ ಸಾಲಿ, ಲೇಖಕ

'ಸಾಂಸ್ಕೃತಿಕ ರಾಜಕಾರಣ ಕಟ್ಟಬೇಕು'

ಭಾರತೀಯ ಸಂಸ್ಕೃತಿಯೇ ಶ್ರೇಷ್ಠ ಎಂಬ ಸಂಕಥನವನ್ನು ಅತ್ಯಂತ ಪ್ರಚಂಡ ರೀತಿಯಲ್ಲಿ ಇಂದು ಮುನ್ನೆಲೆಗೆ ತರಲಾಗುತ್ತಿದೆ. ಕರ್ನಾಟಕ ಮತ್ತು ಇನ್ನ್ಯಾವುದೇ ರಾಜ್ಯಗಳ ಪ್ರಾದೇಶಿಕ ಸಂಸ್ಕೃತಿಗಳನ್ನು ಭಾರತೀಯ ಸಂಸ್ಕೃತಿಯೊಳಗೆ ಸೇರಿಸಿಬಿಡುವ ಅಥವಾ ಅದರ ಒಂದು ಸಣ್ಣ ಭಾಗ ಅನ್ನುವ ಹಾಗೆ ಮಾಡಲಾಗುತ್ತಿದೆ. ಕರ್ನಾಟಕವು ಸಾಂಸ್ಕೃತಿಕವಾಗಿ ಉಳಿದು ಮುಂದುವರಿಯಬೇಕಾದರೆ, ಕರ್ನಾಟಕ ಸಂಸ್ಕೃತಿಯ ವೈಶಿಷ್ಟ್ಯ ಮತ್ತು ಸಂವಿಧಾನವು ನಮಗೆ ಹೇಳಿಕೊಟ್ಟಿರುವಂತೆ ತಳ ಸಂಸ್ಕೃತಿಗಳು, ಪ್ರಾದೇಶಿಕ ಸಂಸ್ಕೃತಿಗಳು ಕೂಡಿಯೇ ಭಾರತೀಯ ಸಂಸ್ಕೃತಿ ಎಂಬುದು ರೂಪುಗೊಂಡಿದೆ ಎಂಬುದನ್ನು ನಾವು ಪ್ರತಿಪಾದಿಸಬೇಕಿದೆ. ಈ ಮೂಲಕ ಭಾರತೀಯ ಸಂಸ್ಕೃತಿ ಎಂಬ ತೀರಾ ಸೀಮಿತವಾದ ಮತ್ತು ವರ್ಣಾಧಾರಿತವಾದಂತಹ ಪರಿಕಲ್ಪನೆಯನ್ನು ವಿರೋಧಿಸಬೇಕಾಗಿದೆ.

ಸಾಂಸ್ಕೃತಿಕ ಆಗುಹೋಗುಗಳು ಇಂದು ಇವೆಂಟ್ ಮ್ಯಾನೇಜ್‌ಮೆಂಟ್‌ಗಳಾಗುತ್ತಿವೆ. ಒಂದು ಪುಸ್ತಕ ಬಿಡುಗಡೆ, ವಿಮರ್ಶೆ, ಸಾಮಾಜಿಕ ಜಾಲತಾಣಗಳಲ್ಲಿ ಆ ಪುಸ್ತಕಕ್ಕೆ ಒಂದು ವೇದಿಕೆ ಕಟ್ಟಿಕೊಡುವವರೆಗೆ ಎಲ್ಲವೂ ವ್ಯಾಪಾರವಾಗಿ ಹೋಗಿದೆ. ಇಂತಹ ವ್ಯಾಪಾರದ ಮೂಲಕ ಬರುವ ಸಂಸ್ಕೃತಿ ಮತ್ತು ಸಾಹಿತ್ಯ ಬಹಳ ತೆಳುವಾಗಿರುತ್ತವೆ. ಅವು ಯಾವ ಆಳವಾದ ಪ್ರಶ್ನೆಗಳನ್ನೂ ಎತ್ತಿಕೊಳ್ಳುವುದಿಲ್ಲ. ಇದು ಕರ್ನಾಟಕದ ಸಂಸ್ಕೃತಿಯನ್ನು ಆಕ್ರಮಿಸಿಕೊಳ್ಳುತ್ತಿದೆ. ಈ ಬಗ್ಗೆಯೂ ನಾವು ಎಚ್ಚರಿಕೆಯಿಂದ ಇರಬೇಕು ಮತ್ತು ಅದಕ್ಕೆ ಬಲವಾದ ಪ್ರತಿರೋಧವನ್ನು ಕಟ್ಟಿಕೊಳ್ಳಬೇಕು. ಕರ್ನಾಟಕ ಸಂಸ್ಕೃತಿಯನ್ನು ಸಂಘರ್ಷವಿಲ್ಲದ ಸಂಸ್ಕೃತಿಯನ್ನಾಗಿ ರೂಪಿಸಲಾಗುತ್ತಿದೆ. ದಲಿತ ಸಂಸ್ಕೃತಿ, ಸ್ತ್ರೀ ಸಂವೇದನೆ, ಲೈಂಗಿಕ ಅಲ್ಪಸಂಖ್ಯಾತತ್ವ... ಇವ್ಯಾವುವೂ ಬೇಡ. ಚರ್ಚೆ, ವಾದ–ವಿವಾದವೇ ಇಲ್ಲದ ಸಂಸ್ಕೃತಿ ನಮ್ಮದು ಎನ್ನುವಂತಹ ಚಟುವಟಿಕೆಗಳು ನಡೆಯುತ್ತಿವೆ. ಈ ಹೊತ್ತಿನಲ್ಲಿ ಸಹಿಷ್ಣುತೆ ಮತ್ತು ಬಹುತ್ವ ಎಂಬುದು ಜನಸಾಮಾನ್ಯರ 'ಕಾಮನ್‌ಸೆನ್ಸ್'ನಿಂದಲೇ ಹೊರಟುಹೋಗಿದೆ. ಇವೆಲ್ಲವನ್ನೂ ನಾವು ನೇರವಾಗಿ ಎದುರಿಸಬೇಕು.

ನಮ್ಮ ಸಂಸ್ಕೃತಿಯ ಆರೋಗ್ಯಕ್ಕೆ ಬೇಕಾಗಿರುವಂತಹ ನಂಬಿಕೆ, ನಿಲುವು, ನಡವಳಿಕೆಗಳನ್ನು ನಾವು ಸ್ಪಷ್ಟವಾಗಿ ಹೇಳಿಕೊಂಡು ಅದಕ್ಕೆ ಪೂರಕವಾದ ಕ್ರಿಯೆಗಳನ್ನು ಮಾಡುವುದೇ ಸಾಂಸ್ಕೃತಿಕ ರಾಜಕಾರಣ. ಸಾಮುದಾಯಿಕವಾಗಿ ಈ ದಿಸೆಯಲ್ಲಿ ನಡೆಯುವಂತಹ ಕೆಲಸವನ್ನು ನಾವು ಮಾಡಬೇಕಾಗುತ್ತದೆ. ಹೀಗೆ ಈ ಸಾಂಸ್ಕೃತಿಕ ರಾಜಕಾರಣವನ್ನು ನಾವು ಮುಂದಿನ 25 ವರ್ಷಗಳಲ್ಲಿ ಬಹಳ ಗಟ್ಟಿಯಾಗಿ ಕಟ್ಟಿಕೊಡಬೇಕಾಗಿದೆ.

ರಾಜೇಂದ್ರ ಚೆನ್ನಿ, ವಿಮರ್ಶಕ

'ಕನ್ನಡವಾಗಬೇಕು'

ಸಾಂಸ್ಕೃತಿಕವಾಗಿ ಮುಂದಿನ 25 ವರ್ಷಗಳಲ್ಲಿ ಕರ್ನಾಟಕ ಹೇಗಾಗಬೇಕೆಂದು ನೀವು ಆಶಿಸುವಿರಿ ಎಂಬ ಪ್ರಶ್ನೆಗೆ ನನ್ನ ಒಂದೇ ಸಾಲಿನ ಉತ್ತರ 'ಕನ್ನಡವಾಗಬೇಕು'

ಕನ್ನಡ ಎನ್ನುವಾಗ ಕನ್ನಡದ ಮಣ್ಣು, ಅನ್ನ, ನೀರು, ಗಾಳಿ, ಆರೋಗ್ಯ, ಅಕ್ಷರ, ಉದ್ಯಮ, ಕಲೆ, ವಿಜ್ಞಾನ, ಮನರಂಜನೆ ಮತ್ತೊಂದೂ ಸೇರುತ್ತವೆ. ಈ ಎಲ್ಲವೂ ಸಂಪೂರ್ಣವಾಗಿ ಕನ್ನಡದ ಹಿಡಿತಕ್ಕೆ ದಕ್ಕಬೇಕು. ನಮ್ಮದಾದ ಮೇಲೆ ಇತರರ ಭೋಗ. ಗಣರಾಜ್ಯ ಒಕ್ಕೂಟದ ಮೂಲಮಂತ್ರ ಇದು. ನೀನು ಬೆಳೆದು ದೇಶವನ್ನೂ ಬೆಳೆಯಗೊಡು, ನೀನು ದಿವಾಳಿಯಾಗಿ ದೇಶ ಬೆಳೆಸು ಎಂದಲ್ಲ. ಕನ್ನಡದ ನೀರಿಗೆ ಜಲ ಪ್ರಾಧಿಕಾರಗಳ ಮುಂದೆ ಬೋಸಿ ಹಿಡಿದು ಅಂಗಲಾಚುವ ದೈನೇಸಿ ಸ್ಥಿತಿ, ಕನ್ನಡದ ತೆರಿಗೆ ಆದಾಯಕ್ಕೆ ಗೋಗರೆಯುವ ಪರದೇಸಿತನ, ಕನ್ನಡ ಭಾಷೆಯ ಸಹಜ ಸಾರ್ವಭೌಮತ್ವವನ್ನು ಸಾಮಂತತನಕ್ಕಿಳಿಸಿರುವ ಲಜ್ಜೆಗೇಡಿತನ ನಾಶಗೊಂಡು ಇವು ನನ್ನ ಹಕ್ಕು ಎಂದು ಕಾನೂನಿನ ಅನ್ವಯವೇ ಗಟ್ಟಿಸಿ ಕೇಳುವ ಕೆಚ್ಚು ಕನ್ನಡದ್ದಾಗಬೇಕು.

ಕನ್ನಡವನ್ನು ನಾಲ್ಕನೆಯ ತರಗತಿಯವರಿಗೆ ಶಿಕ್ಷಣ ಮಾಧ್ಯಮವಾಗಿಯೂ ಅಥವಾ ಹತ್ತನೆಯ ತರಗತಿಯವರೆಗೆ ಪ್ರಥಮ ಭಾಷೆಯಾಗಿಯೂ ಓದಿರುವ ವಿದ್ಯಾರ್ಥಿಗೆ ಮಾತ್ರವೇ ಕನ್ನಡ ನೆಲದ ಪದವಿ ತರಗತಿಗೆ ಮೊಮ್ಮೊದಲ ಪ್ರವೇಶ ಹಾಗೂ ಎಲ್ಲ ವರ್ಗದ ಉದ್ಯೋಗಗಳಲ್ಲಿ ಆದ್ಯತೆ, ತರುವಾಯವೇ ಇತರರಿಗೆ ಮಣೆ ಎಂಬುದನ್ನು ಸರ್ಕಾರ ಮೊದಲು ತನಗೆ ತಾನು ಹೇಳಿಕೊಂಡು ತದನಂತರ ಕೋರ್ಟಿಗೆ ಒಪ್ಪಿಸಬೇಕಾಗಿದೆ. ಇದೊಂದು ಆದುದೇ ಆದರೆ ಯಾರ ಸೇವೆಯೂ ಇಲ್ಲದೆ ಕನ್ನಡ ಸಿಂಹಾಸನವೇರುತ್ತದೆ. ಜಾತಿ ಮೀಸಲಾತಿಯ ಕೋಷ್ಟಕದ ನಿಯಮದಲ್ಲೆ ಈ ಎರಡೂ ಆದ್ಯತೆಗಳನ್ನು ಯಾವ ಬಾಧಕವೂ ಇರದೆ ಜಾರಿಗೆ ತರುವುದು ನೂರಕ್ಕೆ ನೂರು ಸಾಧ್ಯ.

ಆದರೆ ಈ ವಿಷಯದಲ್ಲಿ ಪದೇ ಪದೇ ನ್ಯಾಯಾಲಯದಲ್ಲಿ ನಾವು ಸೋಲು ಅನುಭವಿಸುತ್ತಿರುವುದರ ಹಿಂದೆ ಇರುವುದು ಅಪ್ಪಟ ರಾಜಕೀಯ. ಈ ಕಾರ್ಕೋಟಕ ವಿಷ ಕನ್ನಡ ನೆಲವನ್ನು ಸಾವಿರ ವರ್ಷದ ತನಕ ಬಂಜರು ಮಾಡುತ್ತದೆಂಬುದರ ಅರಿವು ನಮಗಿಲ್ಲ. ಇದು ಸರಿಹೋಗದ ಹೊರತು ಎಷ್ಟು ಮಾತನಾಡಿದರೂ ಅದು ಸುಣ್ಣ ಬಿರೆಹುಯ್ದ ಬಾನಿಗೆ ಕನ್ನಡ ಶಿಶು ತಳ್ಳಿ ದೂರ ನಿಂತು ಬಾಯಿ ಬಡಕೊಂಡಂತೆ. ಮುತ್ತುರತ್ನಗಳನು ಬಳ್ಳದಲ್ಲಳೆದು ಮಾರಬೇಕೆಂಬ ಅತಿಯಾಸೆ, ನೀರ ಮೇಲೆ ಬಿಟ್ಟ ಎಣ್ಣೆಯಂತೆ ಪ್ರತ್ಯೇಕ ನಿಲ್ಲುವ ಉದ್ಧಟತನ ನಮಗೆ ಬೇಡ. ಸಾಲಿನ ಕೊನೆಯಲ್ಲಿ ನಿಂತ ಕನ್ನಡ ವ್ಯಕ್ತಿಯೂ ಅತ್ಮಗೌರವದಿಂದ ಬಾಳಬೇಕೆಂಬುದಷ್ಟೆ ಆಶಯ.

ಲಲಿತಾ ಸಿದ್ಧಬಸವಯ್ಯ, ಕವಯಿತ್ರಿ

ಖಾನ್ಸಾರ್ ಕೋಟೆಯ ರಕ್ತಚರಿತ್ರೆ

'ಕೆಜಿಎಫ್' ಖ್ಯಾತಿಯ ನಿರ್ದೇಶಕ ಪ್ರಶಾಂತ್ ನೀಲ್ ಹಾಗೂ ತೆಲುಗು ನಟ ಪ್ರಭಾಸ್ ಒಟ್ಟಾಗಿರುವ 'ಸಲಾರ್' ನಿರೀಕ್ಷೆಯಂತೆ ದೃಶ್ಯ ವೈಭವದ, ಕತ್ತಲಿನ ನಡುವೆ ಆಗಾಗ ಬೆಳಕು ಕಾಣಿಸುವ ಸಿನಿಮಾ. ದೇವ ಮತ್ತು ವರದನೆಂಬ ಇಬ್ಬರು ಪುಟ್ಟಮಕ್ಕಳ ಸ್ನೇಹವನ್ನು ವಿವರಿಸುವ ದೃಶ್ಯದೊಂದಿಗೆ ಸಿನಿಮಾ ಪ್ರಾರಂಭವಾಗುತ್ತದೆ. ಇಡೀ ಕಥೆಯನ್ನು ಅವರಿಬ್ಬರ ನಂಟಿನೊಂದಿಗೆ ಕಟ್ಟಲಾಗಿದೆ. ಹೈ ವೋಲ್ಟೇಜ್ ಕರೆಂಟ್ ಹೊಡೆದು ನೆಲಕ್ಕೆ ಬಿದ್ದ ದೇವ, ಪ್ರಾಣಕ್ಕೆ ಒಂಚೂರೂ ಹಾನಿಯಾಗದಂತೆ ಎದ್ದು ಬರುವುದು ಈ ಕಥೆಯಲ್ಲಿ ಲಾಜಿಕ್‌ಗೆ ನಿರ್ದೇಶಕರು ಜಾಗ ಕೊಟ್ಟಿಲ್ಲ ಎಂಬುದನ್ನು ಸ್ಪಷ್ಟಪಡಿಸಿಬಿಡುತ್ತದೆ. ಪ್ರಾರಂಭದಲ್ಲಿನ ದೃಶ್ಯಗಳು, ತಾಯಿ–ಮಗನ ಕಥೆ ಇದು ಮತ್ತೊಂದು 'ಕೆಜಿಎಫ್' ಇರಬಹುದಾ ಎಂಬ ಅನುಮಾನ ಮೂಡಿಸುತ್ತದೆ.

ಕೆಲ ಘಟನೆಗಳಿಂದ ತಾಯಿಯೊಂದಿಗೆ ಊರು ಬಿಟ್ಟ ದೇವ ಒಡಿಶಾದ ಕಲ್ಲಿದ್ದಲು ಗಣಿಯೊಂದಕ್ಕೆ ಬಂದು ಠಿಕಾಣಿ ಹೂಡುತ್ತಾನೆ. ಈ ದೇವನೇ ನಾಯಕ ಪ್ರಭಾಸ್. ಚಿಕ್ಕ ಚಿಕ್ಕ ಘಟನೆಗಳಿಗೂ ಬಿಲ್ಡಪ್ ನೀಡಿ ಇಡೀ ಸಿನಿಮಾದುದ್ದಕ್ಕೂ ನಾಯಕನನ್ನು 'ಮಾಸ್' ಆಗಿ ತೋರಿಸುವಲ್ಲಿ ನಿರ್ದೇಶಕರು ಯಶಸ್ವಿಯಾಗಿದ್ದಾರೆ. ಆದರೆ ಇಲ್ಲೆಲ್ಲ ರವಿ ಬಸ್ರೂರು ಅವರ ಹಿನ್ನೆಲೆ ಸಂಗೀತ ಹೊಸತೆನಿಸುವುದಿಲ್ಲ. ಒಂದು ಮಿತಿಯವರೆಗೆ ಸೈಲೆಂಟಾಗಿದ್ದು, ಇದ್ದಕ್ಕಿದ್ದಂತೆ ವೈಲೆಂಟ್ ಆಗುವ ತಮ್ಮ ಪಾತ್ರಕ್ಕೆ ಪ್ರಭಾಸ್ ಸಂಪೂರ್ಣ ನ್ಯಾಯ ಒದಗಿಸಿದ್ದಾರೆ.

ವರದನಾಗಿ ಪೃಥ್ವಿರಾಜ್ ಸುಕುಮಾರನ್ ನಟಿಸಿದ್ದಾರೆ. ಸಕಾರಾತ್ಮಕ ಶೇಡ್ ಹೊಂದಿರುವ ಖಳನಾಯಕನ ಈ ಪಾತ್ರದಲ್ಲಿ ಪೃಥ್ವಿರಾಜ್ ತಮ್ಮ ಹಾವಭಾವಗಳಿಂದಲೇ ಇಷ್ಟವಾಗುತ್ತಾರೆ. ಇಲ್ಲಿ ನಡೆಯುವ ಕಥೆಗೆ 'ಉಗ್ರಂ'ನ ಛಾಯೆ ಇದೆಯಾದರೂ ಕೆಲ ನಿಮಿಷಗಳ ಬಳಿಕ ಕಥೆ ಬೇರೆಡೆಗೆ ಹೊರಳಿಕೊಳ್ಳುತ್ತದೆ. 'ಕೆಜಿಎಫ್‌ನಲ್ಲಿ' ಚಿನ್ನದ ಗಣಿಯ ಕತ್ತಲಿನ ಸಾಮ್ರಾಜ್ಯ ಸೃಷ್ಟಿಸಿದ್ದ ನಿರ್ದೇಶಕ ಪ್ರಶಾಂತ್ ನೀಲ್, ಇಲ್ಲಿ ಅದಕ್ಕಿಂತ ತುಸು ಹೆಚ್ಚು ಬೆಳಕಿರುವ ಕಲ್ಲಿದ್ದಲು ಗಣಿಯನ್ನು ತೆರೆದಿಡುತ್ತಾರೆ. ಇಲ್ಲಿನ ದೃಶ್ಯಗಳಲ್ಲಿ ಛಾಯಾಚಿತ್ರಗ್ರಾಹಕ ಭುವನ್‌ಗೌಡ ತಮ್ಮ ಕೈಚಳಕ ತೋರಿಸಿದ್ದಾರೆ. ನಾಯಕಿ ಶ್ರುತಿ ಹಾಸನ್ ಅವರನ್ನು ನಾಯಕನ ಬಳಿ ತರಲಿಕ್ಕಾಗಿಯೇ ನಿರ್ದೇಶಕರು ಮತ್ತೊಂದು ಉಪಕಥೆಯನ್ನು ತೆರೆದಿಡುತ್ತಾರೆ. ರಕ್ತಚರಿತ್ರೆಯಲ್ಲೊಂದು ದೃಷ್ಟಿಬೊಟ್ಟಿನಂತಹ ಪಾತ್ರವಿದು! ಜೊತೆಗೆ ಹಲವು ಪಾತ್ರಗಳನ್ನು ಬಿಚ್ಚಿಟ್ಟು, ಅವುಗಳಿಗೆ ಪರಸ್ಪರ ಕೊಂಡಿ ಬೆಸೆದು, ಒಂದಷ್ಟು ಪ್ರಶ್ನೆಗಳನ್ನು ಹುಟ್ಟುಹಾಕಿ ನಿರ್ದೇಶಕರು ಮೊದಲಾರ್ಧವನ್ನು ಮುಗಿಸುತ್ತಾರೆ.

ಇಪ್ಪತ್ತೈದು ವರ್ಷಗಳ ಹಿಂದೆ ಬಿಟ್ಟ ಊರಿಗೆ ದೇವ ಮರಳುವುದರೊಂದಿಗೆ ದ್ವಿತೀಯಾರ್ಧ ಪ್ರಾರಂಭವಾಗುತ್ತದೆ. ಅದುವೇ ಖಾನ್ಸಾರ್ ಸಾಮ್ರಾಜ್ಯದ ಸೀಸ್‌ಫೈಯರ್ ಕಥೆ. ಇದು ಸಂಪೂರ್ಣ ಖಳನಟರದ್ದೇ ಸಾಮ್ರಾಜ್ಯ. ಇದರ ರಾಜನಾಗಿ ಜಗಪತಿಬಾಬು ಖಡಕ್ ಆಗಿ ನಟಿಸಿದ್ದಾರೆ. ಈ ಭಾಗದಲ್ಲಿ ಸಾಕಷ್ಟು ಕನ್ನಡದ ನಟರನ್ನು ಪ್ರಶಾಂತ್ ನೀಲ್ ಬಳಸಿಕೊಂಡಿದ್ದಾರೆ. ನಾಯಕಿ ತಂದೆಯಾಗಿ ರವಿ ಭಟ್ ಚಿತ್ರದ ಪ್ರಾರಂಭದಿಂದಲೇ ಇದ್ದಾರೆ. ಪಂಡಿತ್ ಆಗಿ ನಟ ನವೀನ್ ಶಂಕರ್, ಪೃಥ್ವಿ ತಮ್ಮನಾಗಿ ನಟ ಪ್ರಮೋದ್ ಗಮನ ಸೆಳೆಯುತ್ತಾರೆ. ದೇವರಾಜ್, ಮಧು ಗುರುಸ್ವಾಮಿ, 'ಗರುಡ' ರಾಮ್ ತಮಗೆ ಸಿಕ್ಕ ಪಾತ್ರಗಳನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಖಾನ್ಸಾರ್ ಕೋಟೆಯ ಒಳಜಗಳದೊಂದಿಗೆ ಅಳೆಯಲು ಸಾಧ್ಯವಿಲ್ಲದಷ್ಟು ರಕ್ತವೇ ಹರಿಯುತ್ತದೆ. ಕ್ರೂರವಾದ ಹೊಡೆದಾಟಗಳೊಂದಿಗೆ ಕತ್ತಲ ಕೋಟೆ ಸಂಪೂರ್ಣ ಕೆಂಪಾಗುತ್ತದೆ! ಒಂದು ರೀತಿ ಹಾಲಿವುಡ್‌ನ 'ಗ್ಲೇಡಿಯೇಟರ್' ಕೋಟೆಯನ್ನು ಪ್ರವೇಶಿಸಿದ ಅನುಭವವಾಗುತ್ತದೆ. ಮುಂದಿನ ಅಧ್ಯಾಯದಲ್ಲಿ ದೇವ ಮತ್ತು ವರದನ ನಡುವೆ ಕಾಳಗ ನಡೆಯಬಹುದೇ ಎಂಬ ಪ್ರಶ್ನೆಯನ್ನಿಟ್ಟು, ಕೆಲ ಉಪಕಥೆಗಳನ್ನು ಅಪೂರ್ಣಗೊಳಿಸಿ ನಿರ್ದೇಶಕರು ಸೀಸ್‌ಫೈಯರ್ ಅಧ್ಯಾಯಕ್ಕೆ ವಿರಾಮ ಹಾಡುತ್ತಾರೆ.

ವಿನಾಯಕ ಕೆ.ಎಸ್.

ನಾವು ನೋಡಿದ ಸಿನಿಮಾ

ಸಲಾರ್ (ಕನ್ನಡಕ್ಕೆ ಡಬ್ ಆದ ಆವೃತ್ತಿ)

- **ನಿರ್ದೇಶಕ:** ಪ್ರಶಾಂತ್ ನೀಲ್
- **ನಿರ್ಮಾಣ:** ಹೊಂಬಾಳೆ ಫಿಲ್ಮ್ಸ್
- **ತಾರಾಗಣ:** ಪ್ರಭಾಸ್, ಪೃಥ್ವಿರಾಜ್ ಸುಕುಮಾರನ್, ಶ್ರುತಿ ಹಾಸನ್, ಜಗಪತಿ ಬಾಬು ಮತ್ತಿತರರು

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5538

– ವಿದ್ಯಾ ವಿನಯ್

■	■	1	■	2				■
3			■		■	■	■	■
	■	■	■		■	4	5	
	■	■	6		7	■		■
8	9			■	10			11
■		■	12	13		■	■	
14			■		■	■	■	
■	■	■	■		■	15		
■	16				■		■	■

ಎಡದಿಂದ ಬಲಕ್ಕೆ

2.ಉಗ್ರವಾದ ಹೊಡೆದಾಟ (4)
3.ಉಯಿಲು ಬರೆದ ಜಾಗದಲ್ಲಿನ ತೂಗುತೊಟ್ಟಿಲು (3)
4.ಕೌಪೀನ ಇಲ್ಲಿದೆ (3)
6.ದಂಡ ಹಿಡಿದು ಶಿಕ್ಷಿಸುವುದು (3)
8.ಈ ಪರಿ ಬಂದಿರುವ ಅತಿಯಾದ ದುಃಖ (4)
10.ನಡುಗುವ ಮೂರ್ಖನ ನೋಡಿ ಈ ಹಸನ್ಮುಖಿ! (4)
12.ಪುರುಸೊತ್ತಿನಲ್ಲಿ ಕನ್ನಡಿಗ ಹಿಡಿದಿರುವ ಸ್ಕ್ರೂ! (3)
14.ಮಂತ್ರಿ ಮಂಡಲವಿದು (3)
15.ಊರೊಳಗೆ ಕಾಣಿಸಿದ ಸರ್ಪ (3)
16.ಅಂತರಂಗವನ್ನು ನಿಯಾಮಿಸತಕ್ಕವನು (4)

ಮೇಲಿಂದ ಕೆಳಕ್ಕೆ

1.ಅಬಲೆ ಹಿಡಿದಿರುವ ಜಾಲ (2)
2.ಹಳಬರ ಕಂಡಾಗ ಹೀಗೆ ದಿಗ್ಭ್ರಮೆ! (4)
3.ಉಪಾಯವಾಗಿ ಪ್ರಾರಂಭಿಸಿದ ಅಧಿಕಪ್ರಸಂಗ (4)
5.ಉಗ್ರಾಣ ಇಲ್ಲಿದೆ (3)
6.ಇವರು ಗಂಡಹೆಂಡಿರು (3)
7.ಒನಪು ತೋರಿದಾಗ ಬಂದಿರುವ ಜ್ಞಾಪಕ (3)
9.ರಿಪುವಿನ ಅಶ್ವ ಏರಲು ಬಳಸಿದ ಬಳೆ (3)
11.ಖಂಡುಗದಷ್ಟು ಆಹಾರವನ್ನು ತಿನ್ನುತ್ತಿರುವ ಕಾಡುಕೋಣ (4)
13.ರುದ್ರನಿರುವ ಜಾಗದಲ್ಲಿರುವ ಸುಡುಗಾಡು (4)
15.ಕುಯುಕ್ತಿಯಲ್ಲಿನ ಮಾತು! (2)

5537ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಬಲಹೀನ 3.ವರಮಾನ
5.ಗಗನ 6.ವಿರಹ
8.ಬಾಲಕ 9.ಉಪವನ
10.ಸಬಕಾರ 11.ನಯನ
12.ಕಟುಕ 14.ಸ್ವಗತ
16.ಕಳೇಬರ 17.ಲೆಕ್ಕಾಚಾರ

ಮೇಲಿಂದ ಕೆಳಕ್ಕೆ:
1.ಬಡವಿ 2.ನಗ
3.ವನ 4.ನಡುಕ
7.ಹಯವದನ
8.ಬಾಲಬಡುಕ
11.ನರ್ತಕ 13.ಕರ್ತಾರ
14.ಸ್ವರ 15.ತಲೆ

ಸುಡೊಕು 5923

	6			7		2	9	3
	8		5	2		1	6	
1		5					8	
4			2		5			1
	9			8			2	
		9	3		2			
7			9		8	5		2
	5			4			3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ತಿದ್ದುಪಡಿ
ಶನಿವಾರದ ಸಂಚಿಕೆಯಲ್ಲಿ ಸುಡೊಕು– 5923 ಪ್ರಶ್ನೆಯ ಬಾಕ್ಸ್‌ನಲ್ಲಿ ಸುಡೊಕು– 5922ರ ಉತ್ತರದ ಬಾಕ್ಸ್ ಕಣ್ತಪ್ಪಿನಿಂದ ತಪ್ಪಾಗಿ ಪ್ರಕಟವಾಗಿತ್ತು. ಸುಡೊಕು– 5923ರ ಅಂಕಿ ತುಂಬಬೇಕಾದ ಸರಿಯಾದ ಬಾಕ್ಸ್‌ಅನ್ನು ಇಂದು ನೀಡಲಾಗಿದೆ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಶನಿವಾರ ಡಿಸೆಂಬರ್ 23, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಏಕಾದಶಿ ಗಂ. 07-12 ನಂತರ ದ್ವಾದಶಿ ಗಂ. 30-25 **ನಕ್ಷತ್ರ:** ಭರಣಿ ಗಂ. 21-19
ಯೋಗ: ಶಿವ ಗಂ 09-07 **ಕರಣ:** ವಿಷ್ಟಿ ಗಂ. 07-12, ಧನು ಮಾಸದ 07 ನೇ ದಿನ
ಮಳೆನಕ್ಷತ್ರ: ಮೂಲಾ 3, **ರಾಹುಕಾಲ :** ಬೆಳಿಗ್ಗೆ 09-00 – 10-30,
ಸೂರ್ಯೋದಯ : 06-53 **ಸೂರ್ಯಾಸ್ತ :** 06-06,
ಮುಸ್ಲಿಂ ದಿನಾಂಕ : 09 ಜುಮಾದುಸ್ಸಾನಿ
ದಿನ ವಿಶೇಷ : ಮೋಕ್ಷ ಏಕಾದಶಿ, ಅದೃಷ್ಟ ಸಂಖ್ಯೆ : 2, 8

ಮೇಷ: ಮನೆಯ ಆಚರಣೆಯಲ್ಲಿ ನಿಂತಿದ್ದ ಕಾರ್ಯಗಳನ್ನು ಪುನಃ ಆರಂಭಿಸುವ ಬಗ್ಗೆ ಯೋಚಿಸಿ. ಕಣ್ಣಿನ ದೃಷ್ಟಿ ಸರಿಪಡಿಸಿಕೊಳ್ಳಲು ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಬೇಕಾಗುವುದು. ನವದಂಪತಿಗಳಿಗೆ ಸಂತಾನ ಭಾಗ್ಯದ ಫಲ ದೊರೆಯಲಿದೆ.

ವೃಷಭ: ಈ ದಿನ ನೀವು ಹಿಡಿದ ಕಾರ್ಯಗಳಲ್ಲಿ ವಿಳಂಬ ಉಂಟಾಗುವುದು ಅಥವಾ ಅಂತಿಮ ಕ್ಷಣದಲ್ಲಿ ನೆರವೇರುವ ಅನುಭವವಾಗಲಿದೆ. ಸಂಸ್ಥೆಯಲ್ಲಿ ಸಲಹೆಗಾರರಾಗಿ ಇರುವವರಿಗೆ ಕೆಲವು ಅನಿವಾರ್ಯತೆಗಳು ಎದುರಾಗುವುದು.

ಮಿಥುನ: ಮಾನಸಿಕ ನೆಮ್ಮದಿಗಾಗಿ ಧಾರ್ಮಿಕ ಕಾರ್ಯ ಅಥವಾ ಪುಣ್ಯಕ್ಷೇತ್ರಗಳ ದರ್ಶನ ಮಾಡುವುದು ಉತ್ತಮ. ಸಜ್ಜನರ ಭೇಟಿಯಿಂದ ಕಾರ್ಯ ಕೈಗೂಡುವುದು. ಶ್ರೀಮಂತಿಕೆಯ ಬದುಕಿಗೆ ಮನಸ್ಸು ಹಾತೊರೆಯುವುದು.

ಕರ್ಕಾಟಕ: ನಿಮ್ಮ ಪ್ರತಿ ಕೆಲಸಕ್ಕೂ ಬೆನ್ನೆಲುಬಾಗುವ ಪತ್ನಿಯ ಸಹಕಾರ ಮುನ್ನಡೆಗೆ ಪೂರಕವಾಗಲಿದೆ. ವಿದ್ವಾಂಸರೊಡನೆ ಕೆಲ ಹೊತ್ತು ಕಳೆಯುವ ಸಂಭವ ಸಿಗಲಿದೆ. ಪ್ರವಾಸಿ ಏಜೆಂಟರಿಗೆ ಅಧಿಕ ಆದಾಯವಿರುವುದು.

ಸಿಂಹ: ಶಿಕ್ಷಣ ಕ್ಷೇತ್ರದಲ್ಲಿನ ನಿಮ್ಮ ಅನನ್ಯ ಸೇವೆಗಾಗಿ ಸಂಘ-ಸಂಸ್ಥೆಗಳ ಸನ್ಮಾನಕ್ಕೆ ಭಾಜನರಾಗುವಿರಿ. ಬಹಳ ದಿನಗಳ ನಂತರ ಕೆಲಸದಲ್ಲಿ ಸಮಾಧಾನವನ್ನು ಹೊಂದುವಿರಿ. ಮನೆಯಲ್ಲಿ ಮೃದು ಭಾಷಿಗಳು ಎನಿಸಿಕೊಳ್ಳುವಿರಿ.

ಕನ್ಯಾ: ಕಲಾವಿದರಿಗೆ ಉತ್ತಮ ಅವಕಾಶವಿದ್ದರೂ ಅದನ್ನು ಸದುಪಯೋಗ ಪಡಿಸಿಕೊಳ್ಳುವುದು ಅನಾರೋಗ್ಯದಿಂದಾಗಿ ಕಷ್ಟಕರವಾಗಲಿದೆ. ರೇಷ್ಮೆ ಹಾಗೂ ಕಬ್ಬು ಬೆಳೆಗಳಿಂದ ನಿರೀಕ್ಷೆಗೂ ಮೀರಿದ ಲಾಭವಿರುವುದು.

ತುಲಾ: ಸಹೋದರರಲ್ಲಿನ ಕೋರ್ಟ್ ವ್ಯವಹಾರಗಳನ್ನು ರಾಜಿ ಸಂಧಾನ ಮೂಲಕ ಬಗೆ ಹರಿಸಿಕೊಳ್ಳುವ ಪ್ರಯತ್ನವನ್ನು ಮಾಡುವುದು ಒಳ್ಳೆಯದು. ಸಂಜೆಯ ಸಮಯವನ್ನು ಪ್ರೀತಿ ಪಾತ್ರರೊಂದಿಗೆ ಕಳೆಯಲು ಬಯಸುವಿರಿ.

ವೃಶ್ಚಿಕ: ದುರಭ್ಯಾಸದಿಂದ ದೂರ ಉಳಿಯುವ ಪ್ರಯತ್ನಕ್ಕೆ ಸ್ನೇಹಿತರು ತೊಂದರೆ ಮಾಡಿಯಾರು, ಆದರೆ ನಿರ್ಧಾರ ಬದಲಿಸಬೇಡಿ. ನಿಮ್ಮ ಮಾನಸಿಕ ಸ್ಥಿತಿಯನ್ನು ಹತೋಟಿಗೆ ತರುವಲ್ಲಿ ಹೆಚ್ಚಿನ ಶ್ರಮ ಅಗತ್ಯ. ಹೊಸ ಕೆಲಸಕ್ಕೆ ಶ್ಲಾಘನೆ ಸಿಗಲಿದೆ.

ಧನು: ಕಟ್ಟಡ ಕಾರ್ಮಿಕರಿಗೆ ಈ ದಿನ ಉಡುಗೊರೆ ಸಹಿತವಾಗಿ ಹೆಚ್ಚಿನ ಸಂಪಾದನೆ ಇರುವುದು. ನಿಮ್ಮ ಸಹಾಯದ ಮನೋಭಾವದಿಂದ ಸ್ನೇಹ ಸಂಬಂಧಗಳು ಇನ್ನಷ್ಟು ಗಟ್ಟಿಗೊಳ್ಳಲಿವೆ. ವೈದ್ಯಕೀಯ ಖರ್ಚುಗಳು ಹೆಚ್ಚಲಿದೆ.

ಮಕರ: ಆರ್ಥಿಕ ಪರಿಸ್ಥಿತಿ ಅಷ್ಟೇನು ಉತ್ತಮವಾಗಿರುವುದಿಲ್ಲ. ಆದ್ದರಿಂದ ವ್ಯವಹಾರದಲ್ಲಿ ಮತ್ತು ಖರ್ಚು ವೆಚ್ಚದಲ್ಲಿ ಮಿತಬಳಕೆಯನ್ನು ಸಾಧಿಸಿ. ನಿಮ್ಮ ಕೆಲಸಕ್ಕೆ ಇತರ ಸಿಬ್ಬಂದಿಗಳಿಂದ ಅಡೆತಡೆಗಳು ಎದುರಾಗಬಹುದು.

ಕುಂಭ: ಧ್ಯಾನ ಮಾಡುವುದರಿಂದ ಮನಸ್ಸು ನಕಾರಾತ್ಮಕ ಭಾವನೆಯಿಂದ ಹೊರಬರಲಿದೆ. ಚಿಂತೆ, ಭಯವನ್ನು ದೂರ ಮಾಡಿಕೊಳ್ಳುವುದಕ್ಕೆ ಪ್ರಯತ್ನಿಸಿ. ಕಾಲಕ್ಕೆ ತಕ್ಕಂತೆ ಹೊಂದಿಕೊಳ್ಳುವುದು ಅನಿವಾರ್ಯವಾಗಲಿದೆ.

ಮೀನ: ರಾಜಕೀಯ ವರ್ಗದವರಿಗೆ ತಮ್ಮ ತಮ್ಮ ಆಕಾಂಕ್ಷೆಗಳನ್ನು ಈಡೇರಿಸಿಕೊಳ್ಳಲು ಇಂದು ಸಕಾಲ. ನಿಮ್ಮ ಪ್ರೀತಿ ಪಾತ್ರರೊಡನೆ ಆತ್ಮೀಯ ಒಡನಾಟವನ್ನು ಇಟ್ಟುಕೊಳ್ಳಿ. ಆಹಾರ ಧಾನ್ಯಗಳ ಬೆಳೆಗಾರರಿಗೆ ಹೆಚ್ಚಿನ ಲಾಭವಿರುವುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,255
ಇಂದಿನ ಅಂತ್ಯ	21,349
▲	94
ದಿನದ ಗರಿಷ್ಠ	21,390

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹615
12 ಮೊಟ್ಟೆಗೆ	₹80
ಮೈಸೂರು	
100 ಮೊಟ್ಟೆಗೆ	₹617

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1600)
ಸೋಯಾ (ರಿಫೈನ್ಡ್)	₹880 (890)
ಸೂರ್ಯಕಾಂತಿ (ರಿಫೈನ್ಡ್)	₹900 (905)
ಪಾಮೋಲಿನ್	₹820 (825)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹270-485
ದ್ವಿತಳಿ (ಬಿ.ವಿ)	₹222-575

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹128

ವಿನಿಮಯ ದರ

$ ಡಾಲರ್	83.16
£ ಪೌಂಡ್	105.68
€ ಯುರೊ	91.59
¥ ಯೆನ್ (100ಕ್ಕೆ)	59

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹2400-2700
ಮಧ್ಯಮ	₹1800-2000
ಸಣ್ಣ	₹1000-1800

ಆಭರಣದ ಚಿಲ್ಲರೆ ವ್ಯಾಪಾರ ಶೇ 12ರಷ್ಟು ಬೆಳೆಯುವ ನಿರೀಕ್ಷೆ

ಕೋಲ್ಕತ್ತ (ಪಿಟಿಐ): ಚಿನ್ನದ ದರ ಏರಿಕೆಯ ಕಾರಣದಿಂದ ದೇಶೀಯ ಆಭರಣದ ಚಿಲ್ಲರೆ ಉದ್ಯಮವು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 10-12ರಷ್ಟು ಬೆಳವಣಿಗೆ ಆಗುವ ನಿರೀಕ್ಷೆ ಇದೆ ಎಂದು ಕ್ರೆಡಿಟ್ ರೇಟಿಂಗ್ ಸಂಸ್ಥೆ ಐಸಿಆರ್‌ಎ ತಿಳಿಸಿದೆ.

ಕಳೆದ ಹಣಕಾಸು ವರ್ಷದಲ್ಲಿ ಉದ್ಯಮವು ಶೇ 15ಕ್ಕಿಂತಲೂ ಹೆಚ್ಚು ಬೆಳವಣಿಗೆ ಆಗಿತ್ತು. ಪ್ರಸಕ್ತ ಹಬ್ಬದ ಋತುವಿನಲ್ಲಿ ಚಿನ್ನದ ದರ ಏರುಗತಿಯಲ್ಲಿಯೇ ಇದ್ದರೂ ಬೇಡಿಕೆಯ ಪ್ರಮಾಣವು ಸ್ಥಿರವಾಗಿತ್ತು ಎಂದು ಐಸಿಆರ್‌ಎ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ ಚಿನ್ನದ ಬೆಲೆಯು ಪ್ರತಿ ಗ್ರಾಂ.ಗೆ ₹5,600ರಿಂದ ₹5,700ರ ವ್ಯಾಪ್ತಿಯಲ್ಲಿ ಸ್ಥಿರವಾಗಿವೆ. ಅದಕ್ಕೂ ಹಿಂದಿನ ತ್ರೈಮಾಸಿಕಕ್ಕೆ ಹೋಲಿಸಿದರೆ ಇದು ಅಂದಾಜು ಶೇ 14ರಷ್ಟು ಏರಿಕೆ ಆಗಿದೆ. ಸ್ಥಿರ ಬೇಡಿಕೆಯಿಂದಾಗಿ ಪ್ರಸಕ್ತ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಆಭರಣ ಉದ್ಯಮವು ವರ್ಷದಿಂದ ವರ್ಷಕ್ಕೆ ಶೇ 6-8 ರಷ್ಟು ಬೆಳವಣಿಗೆಯಾಗಲಿದೆ ಎಂದು ಅದು ಅಂದಾಜಿಸಿದೆ.

ಚಿನ್ನದ ದರ ₹300, ಬೆಳ್ಳಿ ₹400 ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಚಿನ್ನ ಮತ್ತು ಬೆಳ್ಳಿ ದರ ಏರಿಕೆ ಆಗಿದೆ. ಚಿನ್ನದ ದರ 10 ಗ್ರಾಂ. ಗೆ ₹300 ಏರಿಕೆಯಾಗಿ, ₹63,350ರಂತೆ ಮಾರಾಟವಾಯಿತು.

ಬೆಳ್ಳಿ ಧಾರಣೆ ಕೆ.ಜಿಗೆ ₹400 ಹೆಚ್ಚಳವಾಗಿ, ₹79,500 ತಲುಪಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿದ್ದು, ದೇಶೀಯ ಮಾರುಕಟ್ಟೆಯ ಮೇಲೂ ಪರಿಣಾಮ ಬೀರಿತು ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,050 ಡಾಲರ್ ಮತ್ತು 24.45 ಡಾಲರ್‌ನಂತೆ ಮಾರಾಟವಾಗಿದೆ.

ಎಐಎಸ್ ನಿಯಮಗಳ ಉಲ್ಲಂಘನೆ; ಮೂರು ಪಟ್ಟು ಹೆಚ್ಚು ನೇಮಕ

ಅನ್ಯ ಹುದ್ದೆಗಳತ್ತ ಐಎಎಸ್ ಆಸಕ್ತಿ!

● ಆರ್. ಮಂಜುನಾಥ್

ಬೆಂಗಳೂರು: ಐಎಎಸ್ ಅಲ್ಲದ ಅಧಿಕಾರಿಗಳು ನಿಭಾಯಿಸಬಹುದಾದ ಹುದ್ದೆಗಳ ಹೊಣೆಯನ್ನು ಐಎಎಸ್ ಅಧಿಕಾರಿಗಳಿಗೇ ನೀಡುತ್ತಿರುವ ಸರ್ಕಾರ, ಅಖಿಲ ಭಾರತ ಸೇವೆಗಳ (ಎಐಎಸ್) ನಿಯಮಗಳನ್ನು ಉಲ್ಲಂಘಿಸುತ್ತಿದೆ. ಇಷ್ಟೇ ಸಂಖ್ಯೆಯ ಹುದ್ದೆಗಳನ್ನು ಐಎಎಸ್ ಅಧಿಕಾರಿಗಳಿಗೆ ನೀಡಬೇಕು ಎಂಬ ನಿಯಮವನ್ನೂ ಮುರಿದಿದೆ.

ಇಲಾಖೆಯಲ್ಲಿ ತಳಹಂತದ ಹುದ್ದೆಯಿಂದ ಮೇಲ್ದರ್ಜೆಗೆ ಏರಿದ ಅಧಿಕಾರಿಗಳಿಗೆ ತಾಂತ್ರಿಕ ತಿಳಿವಳಿಕೆ, ಅನುಭವ ಇರುತ್ತದೆ. ನೀರಾವರಿ, ಲೋಕೋಪಯೋಗಿ, ಇಂಧನ ಇಲಾಖೆಯ ಕಾರ್ಯದರ್ಶಿ, ನಿಗಮಗಳ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗಳಿಗೆ ಆಯಾ ಇಲಾಖೆಯ ಮುಖ್ಯ ಎಂಜಿನಿಯರ್ ಶ್ರೇಣಿಯವರಿಗೆ ನೀಡುವ ಪರಿಪಾಟವಿತ್ತು. ಆದರೆ, ಈಗ ಇಂತಹ ಹುದ್ದೆಗಳು ಕೂಡ ಐಎಎಸ್ ಅಧಿಕಾರಿಗಳಿಗೆ ಮೀಸಲು ಎಂಬ ಅಲಿಖಿತ ನಿಯಮವನ್ನು ಸೃಷ್ಟಿಸಲಾಗಿದೆ ಎಂಬ ಆಪಾದನೆಯೂ ಇದೆ.

ರಾಜ್ಯದ ಆಡಳಿತಾತ್ಮಕ ಹುದ್ದೆಗಳ ಪೈಕಿ ಹಿರಿಯ ಶ್ರೇಣಿಯ 163 ಹುದ್ದೆಗಳನ್ನು ಐಎಎಸ್ ಅಧಿಕಾರಿಗಳಿಗೆ ನಿಗದಿಪಡಿಸಲಾಗಿದೆ. ಎಐಎಸ್ ನಿಯಮ ಆರ್ 8(2), 11 (ಆರ್1)ರಲ್ಲಿ ಐಎಎಸ್ ಅಧಿಕಾರಿಗಳು ಯಾವ ಹುದ್ದೆಯಲ್ಲಿ ಇರಬೇಕು ಎಂಬುದನ್ನು ಸ್ಪಷ್ಟವಾಗಿ ನಮೂದಿಸಲಾಗಿದೆ.

ರಾಜ್ಯ ಸರ್ಕಾರದ ವ್ಯಾಪ್ತಿಯಲ್ಲಿರುವ ವಿವಿಧ ಇಲಾಖೆಗಳ ಮುಖ್ಯಸ್ಥರು, ನಿಗಮ, ಮಂಡಳಿಗಳ ಪ್ರಮುಖ ಹುದ್ದೆಗಳನ್ನು ಎಕ್ಸ್ ಕೇಡರ್ ಹುದ್ದೆಗಳು ಎಂದು ಗುರುತಿಸಲಾಗಿದೆ. ಈ ಹುದ್ದೆಗಳಿಗೆ ಒಟ್ಟು ಐಎಎಸ್ ಅಧಿಕಾರಿಗಳ ಪೈಕಿ ಶೇ 25ರಷ್ಟು ಮಂದಿ ಅಂದರೆ, 40 ಅಧಿಕಾರಿಗಳು ಮಾತ್ರ ಎಕ್ಸ್ ಕೇಡರ್‌ನಲ್ಲಿ ಕಾರ್ಯನಿರ್ವಹಿಸಬಹುದು. ಆದರೆ, ರಾಜ್ಯದಲ್ಲಿ ಈ ಸಂಖ್ಯೆ 129ರಷ್ಟಿದೆ.

ಕರ್ನಾಟಕಕ್ಕೆ ಹಂಚಿಕೆಯಾದ ಐಎಎಸ್ ಅಧಿಕಾರಿಗಳ ಪೈಕಿ ಶೇ 40ರಷ್ಟು ಮಂದಿ ನಿಯೋಜನೆ ಮೇರೆಗೆ ಕೇಂದ್ರ ಸೇವೆಗೆ ಹೋಗಬಹುದು. ಅಂದರೆ, 65 ಮಂದಿ ಹೋಗಲು ಅವಕಾಶ ಇದೆ. ಆದರೆ, ಈ ಸಂಖ್ಯೆ 25 ಅನ್ನು ದಾಟಿಲ್ಲ.

ಈ ಹುದ್ದೆಗಳಲ್ಲಿ, ಹಿರಿಯ ಶ್ರೇಣಿಯ ಅಧಿಕಾರಿಗಳ ಸಂಖ್ಯೆ 40 ಅನ್ನು ಮೀರುವಂತಿಲ್ಲ. ಒಂದು ವೇಳೆ, ಇದ್ದರೂ ಆರು ತಿಂಗಳಿಗಿಂತ ಹೆಚ್ಚು ಅವಧಿ ಮುಂದುವರಿಯುವಂತಿಲ್ಲ. ಮುಂದುವರಿಯುವ ಅನಿವಾರ್ಯವಿದ್ದರೆ, ಕೇಂದ್ರ ಸರ್ಕಾರದ ಅನುಮತಿ ಅಗತ್ಯ ಎಂದು ನಿಯಮ ಹೇಳಿದೆ.

'ಐಎಎಸ್ ಅಧಿಕಾರಿಗಳು ಕೇಡರ್ ಹುದ್ದೆಯ ಜೊತೆಗೆ ಎಕ್ಸ್-ಕೇಡರ್ ಹುದ್ದೆಗಳಲ್ಲಿ ವರ್ಷಾನುಗಟ್ಟಲೆ ಮುಂದುವರಿದಿದ್ದಾರೆ. ಕೇಂದ್ರ ಸರ್ಕಾರದ ಹುದ್ದೆಗಳಿಗೆ ಹೋಗಲು ಬಯಸದ ಇವರು, ನಿಗಮ-ಮಂಡಳಿ ಸೇರಿದಂತೆ ಹಲವು ಹುದ್ದೆಗಳನ್ನೇ ಹೆಚ್ಚುವರಿಯಾಗಿ ಹೊಂದಿದ್ದಾರೆ. ಕೆಲವರು ಕೇಡರ್ ಹುದ್ದೆ ಜೊತೆಗೆ ಎರಡು-ಮೂರು ಎಕ್ಸ್ ಕೇಡರ್ ಹುದ್ದೆಗಳನ್ನೂ ಹೊಂದಿದ್ದಾರೆ. ಇದರಿಂದ ಐಎಎಸ್‌ಯೇತರ ಅಧಿಕಾರಿಗಳಿಗೆ ಉನ್ನತ ಹುದ್ದೆ ವಹಿಸಿಕೊಳ್ಳುವ, ಬಡ್ತಿ ಹೊಂದುವ ಅವಕಾಶ ತಪ್ಪುತ್ತಿದೆ. ರಾಜ್ಯ ಸರ್ಕಾರದಲ್ಲಿ ಆಡಳಿತದ ನಿಯಮಗಳನ್ನು ಮಾಡುವವರು ಐಎಎಸ್ ಅಧಿಕಾರಿಗಳೇ ಆಗಿರುವುದರಿಂದ ಮುಖ್ಯಮಂತ್ರಿ, ಸಚಿವರಿಗೆ ಎಐಎಸ್ ನಿಯಮಗಳ ಮಾಹಿತಿ, ಅದರ ಉಲ್ಲಂಘನೆಯ ಅರಿವಾಗುತ್ತಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಹಿರಿಯ ಅಧಿಕಾರಿಗಳು ಮಾಹಿತಿ ನೀಡಿದರು.

ನಿಯಮ ಮೀರಿ ಎಸಿಎಸ್ ಹುದ್ದೆ!

ಎಐಎಸ್ ನಿಯಮಗಳ ಪ್ರಕಾರ, ಇಬ್ಬರು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಿರಬೇಕು. ಆದರೆ, ರಾಜ್ಯ ಸರ್ಕಾರದಲ್ಲಿ ಎಂಟು ಎಸಿಎಸ್‌ಗಳಿದ್ದಾರೆ. 'ಪ್ರತಿವರ್ಷದ ಡಿಸೆಂಬರ್ ಅಂತ್ಯಕ್ಕೆ ಇಷ್ಟು ವರ್ಷ ಸೇವೆ ಮುಗಿಯಿತು ಎಂದು ಬಡ್ತಿ ಪಡೆದುಕೊಂಡು ಎಸಿಎಸ್‌ಗಳಾಗುತ್ತಾರೆ. ಆದರೆ, ಅದಕ್ಕೆ ಅವಕಾಶ ಇದೆಯೇ ಇಲ್ಲವೇ ಎಂಬುದನ್ನು ಖಾತರಿಪಡಿಸಿಕೊಳ್ಳುವುದಿಲ್ಲ. ಆರು ಎಸಿಎಸ್‌ಗಳು ನಿಯಮ ಮೀರಿ ಆ ಹುದ್ದೆಯಲ್ಲಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದರು.

ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಹುದ್ದೆಯಲ್ಲಿರುವವರು

ಐಎಎಸ್ ಅಧಿಕಾರಿ	ಇಲಾಖೆ
ರಾಕೇಶ್ ಸಿಂಗ್	ನಗರಾಭಿವೃದ್ಧಿ, ಜಲಸಂಪನ್ಮೂಲ, ಆಡಳಿತಾಧಿಕಾರಿ–ಬಿಬಿಎಂಪಿ, ಅಧ್ಯಕ್ಷ–ಬಿಡಿಎ
ಶಾಲಿನಿ ರಜನೀಶ್	ಅಭಿವೃದ್ಧಿ ಆಯುಕ್ತೆ, ಡಿಪಿಎಆರ್ (ಇ–ಆಡಳಿತ)
ಜಾವೇದ್ ಅಖ್ತರ್	ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯ ಶಿಕ್ಷಣ)
ಗೌರವ್ ಗುಪ್ತ	ಇಂಧನ ಇಲಾಖೆ, ವ್ಯವಸ್ಥಾಪಕ ನಿರ್ದೇಶಕ, ಕೆಪಿಸಿಎಲ್
ಎಲ್.ಕೆ. ಅತೀಕ್	ಮುಖ್ಯಮಂತ್ರಿ ಹೆಚ್ಚುವರಿ ಕಾರ್ಯದರ್ಶಿ, ಹಣಕಾಸು ಇಲಾಖೆ
ವಂದನಾ ಗುರ್ನಾನಿ	ಕರ್ನಾಟಕ ಭವನ
ಉಮಾ ಮಹದೇವನ್	ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್, ಕೌಶಲ ಅಭಿವೃದ್ಧಿ, ನಿರ್ದೇಶಕಿ– ಆರ್ಥಿಕ ನೀತಿ, ಇನ್‌ಸ್ಟಿಟ್ಯೂಟ್, ಹಣಕಾಸು ಇಲಾಖೆ
ಎಸ್.ಆರ್. ಉಮಾಶಂಕರ್	ಗೃಹ ಇಲಾಖೆ

ಮಾಹಿತಿ: ಸರ್ಕಾರದ ನಿಯುಕ್ತಿ ವೆಬ್‌ಸೈಟ್

ಎಐಎಸ್ ನಿಯಮಗಳ ಪ್ರಕಾರ ಹುದ್ದೆ

ದರ್ಜೆ	ಮಂಜೂರು ಹುದ್ದೆ	ಕೇಂದ್ರ ಸರ್ಕಾರಕ್ಕೆ ನಿಯೋಜನೆ		ರಾಜ್ಯ ಸರ್ಕಾರದ ಎಕ್ಸ್ ಕೇಡರ್ ಹುದ್ದೆಗೆ ನಿಯೋಜನೆ	
		ಮಂಜೂರು	ವಾಸ್ತವ	ಮಂಜೂರು	ವಾಸ್ತವ
ಐಎಎಸ್	163	65	24	40	129
ಐಪಿಎಸ್	112	44	19	25	75
ಐಎಫ್‌ಎಸ್	100	20	5	25	46

'ಎಲ್ಲ ಹುದ್ದೆಗಳಲ್ಲೂ ಆಕ್ರಮಣ ಸರಿಯಲ್ಲ'

'ಐಎಎಸ್, ಐಪಿಎಸ್ ಹಾಗೂ ಐಎಫ್‌ಎಸ್ ಅಧಿಕಾರಿಗಳಿಗೆ ಅವರದ್ದೇ ಆದ ಹುದ್ದೆಗಳಿವೆ. ಆ ಸ್ಥಾನಗಳಿಗೆ ಬೇರೆಯವರು ಹೋಗುವಂತಿಲ್ಲ. ಅದರಂತೆಯೇ ಅವರು ಅಗತ್ಯವಿಲ್ಲದ ಹುದ್ದೆಗಳನ್ನೂ ಆಕ್ರಮಿಸಿಕೊಳ್ಳುವುದು ಸರಿಯಲ್ಲ. ಪರಿಸರ ಕ್ಷೇತ್ರ ಇಲಾಖೆ, ನಿಗಮ, ಪ್ರಾಧಿಕಾರಗಳಿಗೆ ಐಎಎಸ್ ಅಧಿಕಾರಿಗಳನ್ನು ಕೂರಿಸುವುದು ನಿಯಮಬಾಹಿರ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಧ್ಯಕ್ಷ ಹಾಗೂ ಸದಸ್ಯ ಕಾರ್ಯದರ್ಶಿ ಹುದ್ದೆಗೆ ನೇಮಕ ವಿಷಯದಲ್ಲಿ ಹೈಕೋರ್ಟ್‌ನಲ್ಲಿ ನಾನು ದಾಖಲಿಸಿರುವ ಮೊಕದ್ದಮೆಯ ಆದೇಶದಲ್ಲಿ ಇದನ್ನು ಸ್ಪಷ್ಟವಾಗಿ ತಿಳಿಸಲಾಗಿದೆ' ಎಂದು ಆಂಜನೇಯ ರೆಡ್ಡಿ ಹೇಳಿದರು.

ಎಲ್‌ಐಸಿಯ ಷೇರು ಮೌಲ್ಯ ಶೇ 4ರಷ್ಟು ಏರಿಕೆ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ಷೇರುಗಳು ಮೌಲ್ಯವು ಶುಕ್ರವಾರ ಸುಮಾರು ಶೇ 4ರಷ್ಟು ಏರಿಕೆ ಕಂಡವು.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ ಷೇರುಗಳು ಶೇ 7.25ರಷ್ಟು ಏರಿಕೆಯಾಗಿ, 52 ವಾರಗಳ ಗರಿಷ್ಠ ಮಟ್ಟವಾದ ₹820ಕ್ಕೆ ತಲುಪಿತು. ವಹಿವಾಟು ಕೊನೆಗೊಳ್ಳುವ ಹೊತ್ತಿಗೆ ₹793ಕ್ಕೆ ಇಳಿಯಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿಯಲ್ಲಿ ಕಂಪನಿಯ ಷೇರುಗಳು ಶೇ 3.62ರಷ್ಟು ಏರಿಕೆಯಾಗಿ ₹792ಕ್ಕೆ ಅಂತ್ಯಗೊಂಡಿತು. ಒಂದು ಸಂದರ್ಭದಲ್ಲಿ ಶೇ 7.39ರಷ್ಟು ಏರಿಕೆಯಾಗಿ, ₹821ಕ್ಕೆ ತಲುಪಿತ್ತು. ಇದು 52 ವಾರಗಳ ಗರಿಷ್ಠ ಮಟ್ಟ ಆಗಿತ್ತು. ಕಂಪನಿಯ ಮಾರುಕಟ್ಟೆ ಮೌಲ್ಯವು ₹18 ಸಾವಿರ ಕೋಟಿಯಷ್ಟು ಏರಿಕೆಯಾಗಿ ₹5 ಲಕ್ಷ ಕೋಟಿಗೆ ತಲುಪಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ



ಶ್ರೀ ಜಿ. ಎಂ. ನಾಗರಾಜ್
ಜನನ: 23-04-1951 ಮರಣ: 23-12-2017
ನಿಮ್ಮ ಮಾರ್ಗದರ್ಶನ ನಮಗೆ ದಾರಿ ದೀಪ ಭಗವಂತ ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಪ್ರಾರ್ಥಿಸುವ ಶ್ರೀಮತಿ ಎಂ. ಮಹಾಲಕ್ಷ್ಮಿ

6ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಎ.ವಿ.ನಿರ್ಮಲ
ನೀವು ನಮ್ಮನ್ನಗಲಿ ಇಂದಿಗೆ 6ನೇ ವರ್ಷವಾದರೂ ನಿಮ್ಮ ಸವಿನೆನಪು ಸದಾ ಹಸಿರಾಗಿರುತ್ತದೆ.
ಪದ್ಮಾಂಜಲಿ ಸಿಮೆಂಟ್ಸ್
ಫೋನ್ :- 080 - 26630444
9945007988 / 9845210247

3ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಎಂ.ಆರ್. ವೆಂಕಟೇಶ್ವರರಾವ್
ನಿವೃತ್ತ ಎಇಇ, ಬಿಬಿಎಂಪಿ ಬೆಂಗಳೂರು
ಮರಣ : 23-12-2020
ಪತ್ನಿ, ಪುತ್ರರು ಹಾಗೂ ಬಂಧು-ಮಿತ್ರರು

₹2,673 ಕೋಟಿ ಮೌಲ್ಯದ ಆರ್ಡರ್ ಪಡೆದ ಬಿಇಎಲ್

ನವದೆಹಲಿ (ಪಿಟಿಐ): ಗೋವಾ ಶಿಪ್‌ಯಾರ್ಡ್ ಲಿಮಿಟೆಡ್ ಮತ್ತು ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಆ್ಯಂಡ್ ಎಂಜಿನಿಯರ್ಸ್ ಲಿಮಿಟೆಡ್‌ನಿಂದ ₹2,673 ಕೋಟಿ ಮೌಲ್ಯದ ಉಪಕರಣಗಳನ್ನು ಪೂರೈಸಲು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಶುಕ್ರವಾರ ತಿಳಿಸಿದೆ.

ಬಿಇಎಲ್ ತಯಾರಿಸಿದ ಉಪಕರಣಗಳು 'ಆತ್ಮನಿರ್ಭರ್ ಭಾರತ್' ಕಾರ್ಯಕ್ರಮದ ಭಾಗವಾಗಿವೆ ಎಂದು ಷೇರುಪೇಟೆಗೆ ಕಂಪನಿ ತಿಳಿಸಿದೆ.

ಮುಂದಿನ ತಲೆಮಾರಿನ ಜಲಗಸ್ತು ನೌಕೆಗಳಲ್ಲಿ (ಎನ್‌ಜಿಒಪಿವಿ) ಬಳಸಲು 14 ರೀತಿಯ ಸೆನ್ಸರ್‌ಗಳ ಪೂರೈಕೆ ಮಾಡಲು ಗೋವಾ ಶಿಪ್‌ಯಾರ್ಡ್ ಲಿಮಿಟೆಡ್ (₹1,701 ಕೋಟಿ) ಮತ್ತು ಗಾರ್ಡನ್ ರೀಚ್ ಶಿಪ್‌ಬಿಲ್ಡರ್ಸ್ ಆ್ಯಂಡ್ ಎಂಜಿನಿಯರ್ಸ್ (₹972 ಕೋಟಿ) ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಬಿಇಎಲ್ ತಿಳಿಸಿದೆ.

ಚಾವಣಿ ಸೌರ ಯೋಜನೆಗೆ ವಿಶ್ವಬ್ಯಾಂಕ್ ಜೊತೆ ಎಸ್‌ಬಿಐ ಒಪ್ಪಂದ

ನವದೆಹಲಿ (ಪಿಟಿಐ): ದೇಶದಲ್ಲಿ ಚಾವಣಿ ಸೌರ ಯೋಜನೆಯನ್ನು ಉತ್ತೇಜಿಸಲು ವಿಶ್ವಬ್ಯಾಂಕ್‌ನೊಂದಿಗೆ ₹1,300 ಕೋಟಿಗೂ ಹೆಚ್ಚು ಸಾಲ ಪತ್ರ (ಎಲ್‌ಒಸಿ) ಯೋಜನೆಗೆ ಸಹಿ ಹಾಕಿರುವುದಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಶುಕ್ರವಾರ ಹೇಳಿದೆ.

ವಸತಿ ಮತ್ತು ಸಾಂಸ್ಥಿಕ ವಲಯಗಳಲ್ಲಿ ಗ್ರಿಡ್-ಸಂಪರ್ಕಿತ ಚಾವಣಿ ಸೌರ ಯೋಜನೆಗಳನ್ನು ಎಲ್‌ಒಸಿ ಬೆಂಬಲಿಸಲಿದೆ ಎಂದು ಎಸ್‌ಬಿಐ ಷೇರುಪೇಟೆಗೆ ತಿಳಿಸಿದೆ. ಈ ವಾರದ ಆರಂಭದಲ್ಲಿ, ಹವಾಮಾನ ಕ್ರಿಯಾ ಯೋಜನೆಗಳನ್ನು ಬೆಂಬಲಿಸಲು ಎಸ್‌ಬಿಐ, ಯುರೋಪಿಯನ್ ಇನ್ವೆಸ್ಟ್‌ಮೆಂಟ್ ಬ್ಯಾಂಕ್‌ನೊಂದಿಗೆ (ಇಐಬಿ) ₹1,800 ಕೋಟಿ ಮೊತ್ತದ ಎಲ್‌ಒಸಿಗೆ ಸಹಿ ಹಾಕಿತ್ತು.

ಸಕ್ಕರೆ ಸಚಿವ ಶಿವಾನಂದ ಪಾಟೀಲ ಅಸಮಾಧಾನ

'ಕೇಂದ್ರದ ನೀತಿಯಿಂದ ಕಾರ್ಖಾನೆಗಳು ಇಕ್ಕಟ್ಟಿಗೆ'

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಎಥೆನಾಲ್ ಉತ್ಪಾದನೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ರೂಪಿಸಿದ ನೀತಿಗಳು ಸಕ್ಕರೆ ಕಾರ್ಖಾನೆಗಳನ್ನು ಚಿಂತೆಗೀಡು ಮಾಡಿವೆ. ಹಲವು ಕಾರ್ಖಾನೆಗಳು ₹200 ಕೋಟಿಯಿಂದ ₹500 ಕೋಟಿಯವರೆಗೆ ಹೂಡಿಕೆ ಮಾಡಿವೆ. ಆದರೆ, ಈಗ ಕೇಂದ್ರ ಸರ್ಕಾರ ಬದಲಿಸಿದ ನೀತಿಯಿಂದ ಕಾರ್ಖಾನೆಗಳು ಇಕ್ಕಟ್ಟಿಗೆ ಸಿಲುಕಿವೆ' ಎಂದು ಸಕ್ಕರೆ ಸಚಿವ ಶಿವಾನಂದ ಪಾಟೀಲ ಅಸಮಾಧಾನ ವ್ಯಕ್ತಪಡಿಸಿದರು.

ಇಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಈ ಹಿಂದೆ ಕೇಂದ್ರ ಸರ್ಕಾರವು ಎಥೆನಾಲ್ ಉತ್ಪಾದನೆಯನ್ನು ಪ್ರೋತ್ಸಾಹಿಸಿತ್ತು. ಈಗ ನೇರವಾಗಿ ಎಥೆನಾಲ್ ಉತ್ಪಾದಿಸದಂತೆ ನಿರ್ದೇಶಿಸಿದೆ. ಎಥೆನಾಲ್ ಉತ್ಪಾದನೆಗೆ ಸಂಬಂಧಿಸಿ ಹೊಸ ಮಾರ್ಗಸೂಚಿಗಳು ಇನ್ನೂ ಬಂದಿಲ್ಲ' ಎಂದರು.



ಬರದಿಂದ ರಾಜ್ಯದಲ್ಲಿ ಕಬ್ಬಿನ ಬಿತ್ತನೆ ಕ್ಷೇತ್ರ ಕಡಿಮೆಯಾಗಿದೆ. ಸಾಮಾನ್ಯ ವರ್ಷಗಳಲ್ಲಿ 7 ಲಕ್ಷ ಮೆಟ್ರಿಕ್ ಟನ್ ಕಬ್ಬು ಉತ್ಪಾದನೆಯಾಗುತ್ತಿತ್ತು. ಈ ವರ್ಷ 1.5 ಲಕ್ಷ ಮೆಟ್ರಿಕ್ ಟನ್ ಇಳಿಕೆಯಾಗಲಿದೆ.
ಶಿವಾನಂದ ಪಾಟೀಲ, ಸಕ್ಕರೆ ಸಚಿವ

'ಸಕ್ಕರೆ ರಫ್ತು ನಿಷೇಧಿಸಲಾಗಿದೆ. ಒಂದು ವೇಳೆ ರಫ್ತಿಗೆ ಅವಕಾಶ ಕೊಟ್ಟರೆ, ಕಾರ್ಖಾನೆಗಳಿಗೆ ಅನುಕೂಲ ಆಗುತ್ತದೆ. ಅಕ್ಕಿ ಮತ್ತು ಈರುಳ್ಳಿ ರಫ್ತು ನಿಷೇಧಿಸಲಾಗಿದೆ. ಆದರೆ, ತಾಳೆಎಣ್ಣೆ ಆಮದು ಮಾಡಿಕೊಳ್ಳುತ್ತಿರುವ ಕಾರಣ ಕೊಬ್ಬರಿ ಧಾರಣೆ ಕುಸಿದಿದೆ' ಎಂದು ಹೇಳಿದರು.

'ಕಾರ್ಖಾನೆಗಳಲ್ಲಿ ರೈತರಿಗೆ ತೂಕದಲ್ಲಿ ಆಗುತ್ತಿರುವ ಮೋಸ ತಪ್ಪಿಸಲು, ಮುಂದಿನ ವರ್ಷದೊಳಗೆ ಎಲ್ಲ ಸಕ್ಕರೆ ಕಾರ್ಖಾನೆಗಳಲ್ಲಿ ಸರ್ಕಾರದಿಂದಲೇ ತೂಕದ ಮಾಪಕ ಅಳವಡಿಸಲಾಗುವುದು. ಎಲ್ಲ ಕಾರ್ಖಾನೆಗಳು ತೂಕದ ವ್ಯವಸ್ಥೆಯನ್ನು ಅನ್‌ಲಾಗ್ ಮೋಡ್‌ನಿಂದ ಡಿಜಿಟಲ್ ಮೋಡ್‌ಗೆ ಪರಿವರ್ತಿಸುವಂತೆ ತಿಳಿಸಲಾಗಿದೆ' ಎಂದರು.

'ರೈತರು ತಮ್ಮ ಉತ್ಪನ್ನಗಳನ್ನು ಕಾರ್ಖಾನೆಗಳಲ್ಲಿ ತೂಕ ಮಾಡಿಸುವ ಮುನ್ನ ರಾಜ್ಯದಾದ್ಯಂತ ಎಪಿಎಂಸಿಗಳಲ್ಲಿ ಇರುವ ಮಾಪಕಗಳಲ್ಲಿ ಉಚಿತವಾಗಿ ತೂಕ ಮಾಡಿಸಬೇಕು. ಆಗ ತೂಕದಲ್ಲಿ ವ್ಯತ್ಯಾಸ ಕಂಡುಬಂದರೆ ಆಯಾ ಸಕ್ಕರೆ ಕಾರ್ಖಾನೆ ವಿರುದ್ಧ ದೂರು ಸಲ್ಲಿಸಬಹುದು' ಎಂದರು.

ಸಂಕ್ಷಿಪ್ತ ಸುದ್ದಿ

'2030ರ ಹೊತ್ತಿಗೆ ವಾರ್ಷಿಕ 1 ಕೋಟಿ ಇ.ವಿ ಮಾರಾಟ'

ನವದೆಹಲಿ (ಪಿಟಿಐ): ದೇಶದಲ್ಲಿ 2030ರ ಹೊತ್ತಿಗೆ ವಾರ್ಷಿಕ 1 ಕೋಟಿ ಎಲೆಕ್ಟ್ರಿಕ್ ವಾಹನಗಳು (ಇ.ವಿ.) ಮಾರಾಟವಾಗುವ ನಿರೀಕ್ಷೆ ಇದ್ದು, 5 ಕೋಟಿಯಷ್ಟು ಉದ್ಯೋಗ ಸೃಷ್ಟಿಯಾಗುವ ಸಾಧ್ಯತೆ ಇದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಶುಕ್ರವಾರ ಹೇಳಿದ್ದಾರೆ.

ಇಲ್ಲಿ ಹಮ್ಮಿಕೊಂಡಿದ್ದ ಇ.ವಿ. ಎಕ್ಸ್‌ಪೋ 2023 ಉದ್ಘಾಟಿಸಿ ಮಾತನಾಡಿದ ಅವರು, 34.54 ಲಕ್ಷ ಎಲೆಕ್ಟ್ರಿಕ್ ವಾಹನಗಳು ಈಗಾಗಲೇ ನೋಂದಣಿಯಾಗಿವೆ ಎಂದಿದ್ದಾರೆ.

ಚೀನಾ: 34 ಸಾವಿರ ಆನ್‌ಲೈನ್ ಖಾತೆ ಸ್ಥಗಿತ

ಶಾಂಘೈ (ಎಎಫ್‌ಪಿ): ವದಂತಿ ಹಬ್ಬಿಸುತ್ತಿದ್ದ ಆರೋಪದ ಮೇಲೆ ಚೀನಾದಲ್ಲಿ ಪೊಲೀಸರು 34 ಸಾವಿರ ಆನ್‌ಲೈನ್ ಖಾತೆಗಳನ್ನು ಸ್ಥಗಿತಗೊಳಿಸಿದ್ದು, 6,300 ಜನರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ಸುಳ್ಳು ಮಾಹಿತಿ ಹಂಚುವ ಖಾತೆಗಳನ್ನು ನಿರ್ಬಂಧಿಸುವ ಕಾರ್ಯಾಚರಣೆಯನ್ನು ಚೀನಾ ಕಳೆದ ಏಪ್ರಿಲ್‌ನಲ್ಲಿ ಆರಂಭಿಸಿತ್ತು.

ಸಾಮಾಜಿಕ ಸ್ಥಿರತೆ ಕಾಪಾಡುವ ನೆಪದಲ್ಲಿ ಸಾಮಾಜಿಕ ಮಾಧ್ಯಮಗಳ ಮೇಲೆ ಸೆನ್ಸಾರ್‌ಶಿಪ್ ಹೇರಿರುವ ಚೀನಾ, ನಕಾರಾತ್ಮಕ ವರದಿಗಳನ್ನು ನಿಗ್ರಹಿಸುತ್ತಿದೆ. ಸಾಂಕ್ರಾಮಿಕ ರೋಗಗಳು, ಅಪಾಯ ಮತ್ತು ವಿಪತ್ತಿಗೆ ಸಂಬಂಧಿಸಿದಂತೆ ಸುಳ್ಳು ಮಾಹಿತಿ ಹಬ್ಬಿಸುವವರ ವಿರುದ್ಧ ಪೊಲೀಸ್ ಇಲಾಖೆ ಕ್ರಮ ಕೈಗೊಳ್ಳುತ್ತಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		**ಪುತ್ತೂರು**		**ಶಿರಸಿ**	
ಬಂಟ್ವಾಳ		ಕೋಕ	11000-25000	ಬೆಟ್ಟೆ	37399-44599
ಹಳತು	41500-44000	ಹೊಸತು	27000-36500	ಬಿಳಿಗೋಟು	28611-35778
ಕೋಕ	15000-27500	**ಶಿವಮೊಗ್ಗ**		ಚಾಲಿ	36019-39181
ಹೊನ್ನಾವರ		ಬೆಟ್ಟೆ	44599-53700	ಕೆಂಪುಗೋಟು	31303-31303
ಹಳೆಚಾಲಿ	36000-38000	ಗೊರಬಲು	16009-41121	ರಾಶಿ	45158-47399
ಕಾರ್ಕಳ		ಹೊಸತು	44489-48399	**ಯಲ್ಲಾಪುರ**	
ಹೊಸತು	25000-36500	ರಾಶಿ	40119-48399	ಅಪಿ	56379-62369
ಹಳತು	30000-45000	ಸರಕು	47100-75440	ಬಿಳಿಗೋಟು	24899-35499
ಕುಮಟ		**ಸಿದ್ದಾಪುರ**		ಚಾಲಿ	36219-39009
ಚಿಪ್ಪು	26019-33999	ಬಿಳಿಗೋಟು	30819-33319	ಕೋಕ	17201-33699
ಕೋಕ	19509-31019	ಚಾಲಿ	36989-38899	ಕೆಂಪುಗೋಟು	24899-35307
ಫ್ಯಾಕ್ಟರಿ	11019-23429	ಕೋಕ	30319-33889	ರಾಶಿ	45000-54769
ಹಳೆಚಾಲಿ	36269-38549	ಕೆಂಪುಗೋಟು	31699-36089	ತಟ್ಟಿಬೆಟ್ಟೆ	38069-44100
ಹೊಸಚಾಲಿ	32599-34309	ರಾಶಿ	42599-47682		
		ತಟ್ಟಿಬೆಟ್ಟೆ	37869-42379		

ವಾಣಿಜ್ಯ ಬಳಕೆ ಸಿಲಿಂಡರ್ ದರ ₹39 ಇಳಿಕೆ

ನವದೆಹಲಿ (ಪಿಟಿಐ): ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರ ಶುಕ್ರವಾರ ₹39.50ರಷ್ಟು ಇಳಿಕೆ ಆಗಿದೆ.

14.2 ಕೆ.ಜಿಯ ಗೃಹ ಬಳಕೆ ಸಿಲಿಂಡರ್ ದರವು ಯಥಾಸ್ಥಿತಿಯಲ್ಲಿದ್ದು, ₹903 ಇದೆ. ವಾಣಿಜ್ಯ ಬಳಕೆಯ 19 ಕೆ.ಜಿ. ತೂಕದ ಸಿಲಿಂಡರ್ ಬೆಲೆಯು ದೆಹಲಿಯಲ್ಲಿ ₹1,757, ಮುಂಬೈ ₹1,710, ಕೋಲ್ಕತ್ತ ₹1,868 ಮತ್ತು ಚೆನ್ನೈನಲ್ಲಿ ₹1,929 ಇದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಸಂಸ್ಥೆಗಳು ತಿಳಿಸಿವೆ. ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯು ಸ್ಥಿರವಾಗಿದ್ದು, ದೆಹಲಿಯಲ್ಲಿ ಲೀಟರ್ ಪೆಟ್ರೋಲ್ ₹96.72 ಮತ್ತು ಡೀಸೆಲ್ ₹89.62 ಇದೆ.

ಮುಂಬೈ ಧಾರಣೆ

ಶೇಂಗಾ

22-12-2023

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10400-10500

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1610)
ಒಂದು ವಾರದ ಡೆಲಿವರಿ	1595 (1605)
ಸೋಯಾ ಕಚ್ಚಾ	840 (860)
ಪಾಮ್ ವಾರದ ಡೆಲಿವರಿ	818 (823)
ಸೂರ್ಯಕಾಂತಿ ಎಣ್ಣೆ ಕಚ್ಚಾ	830 (840)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
62,700 (62,200)
ಬೆಳ್ಳಿ ಕೆ.ಜಿ 74,900 (74,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹13800
ಎಸಿ	₹7700
ಆರ್‌ಪಿ	₹10500
ಆರ್‌ಸಿ	₹6760

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು- 56. ಸಂಪರ್ಕಿಸಿ: 7899235388, 9148525233

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಬೇಕಾಗಿದ್ದಾರೆ: ಕಾಫಿ ತೋಟದ ಅನುಭವವಿರುವ ಮೇಸ್ತ್ರಿ ಮತ್ತು ಕಾರ್ಮಿಕರು, ವಸತಿ ಸೌಕರ್ಯ, ಆಕರ್ಷಕ ವೇತನವಿದೆ. ಸಂಪರ್ಕಿಸಿ: 9448842684, 9241738717

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266, 8050198999

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ಬಿಲ್ಡರ್ ಎಸೆನ್ಷಿಯಲ್
Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಇತರೆ
Medical

ಸಂಪೂರ್ಣ ಉಚಿತವಾಗಿ ಕೊಡಲಾಗುವುದು. ತನ್ಮಯಿ ಜಾಯಿಂಟ್ ಕೇರ್ ಆಯಿಲ್ & ಕ್ರೀಮ್. ಮಂಡಿ ನೋವು, ಬೆನ್ನು ನೋವು,ಕೀಲು ನೋವು, ವೆರಿಕೋಸ್ ವೇನ್ಸ್, ಮಾನಸಿಕ ಸಮಸ್ಯೆ, ತಲೆನೋವು ಮೈಗ್ರೇನ್, ಬುಜದ ನೋವು, ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಉಪಯೋಗವಿದೆ. ವಿಳಾಸ : ಶೇಷಾದ್ರಿಪುರಂ ಪೊಲೀಸ್ ಠಾಣೆ ಎದುರು ಶೇಷಾದ್ರಿಪುರಂ ಬೆಂಗಳೂರು. ಮೊಬೈಲ್ : 7349494852

ಪ್ರವಾಸ
Travel

15/02/2024ರಿಂದ ಮಥುರೈ, ರಾಮೇಶ್ವರ,ನವಗ್ರಹ ಹಾಗೂ ವಾಸವಿಪೆನ್ನಗೊಂಡ,`ಪಂಚರಾಮ ಕ್ಷೇತ್ರ. 14/03/2024ರಿಂದ 16ದಿನಗಳ`ಮುಕ್ತಿನಾಥ್, ಪೋಕ್ರಾ,ಕಾಶಿ,ಅಯೋಧ್ಯ, ಚಾರುಧಾಮ್,ವೈಷ್ಣೋದೇವಿ, ಕಾಶ್ಮೀರ`ಯಾತ್ರೆಗಳಿಗೆ`ವಿಚಾರಿಸಿ: ವಿಷ್ಣನ್`ಟ್ರಾವೆಲ್`ಲೈನ್ಸ್, ಮಿನರ್ವ`ಸರ್ಕಲ್. ಬೆಂಗಳೂರು-04. 8105657052/ 9480182865.

ಭಾರತಪರಂಪರ ದರ್ಶನ 5.1.2024, 6ದಿನಗಳ ಅಹೋಬಿಲಮ್ ಶ್ರೀಶೈಲಂ,ಜ್ಯೋತಿರ್ಲಿಂಗ. 16.1.2024, 11ದಿನಗಳ ಗುಜರಾತ್, ಮಧ್ಯಪ್ರದೇಶ 4,ಜ್ಯೋತಿರ್ಲಿಂಗ. 23.2.2024 ಅಯೋಧ್ಯ,ಕಾಶಿ 7ದಿನಗಳು. 9448792891.

★ವಿಮಾನದಲ್ಲಿ★ 10.01.2024 4ದಿನಗಳು ಉಜ್ಜೈನ್ ಓಂಕಾರೇಶ್ವರ ಪ್ರವಾಸ. 03.01.2024 10ದಿನಗಳು ರಾಜಸ್ಥಾನ ಪ್ರವಾಸ.ಆರ್.ಗಾಂಧಿ ಟೂರ್ಸ್. ತ್ಯಾಗರಾಜನಗರ, ಬೆಂಗಳೂರು.9945445809/ 9902433500

ರಿಯಲ್ ಎಸ್ಟೇಟ್ ಸೆಲ್ಲಿಂಗ್
Industrial & Factory
Bommasandra

FACTORY FOR SALE: BENGALURU. Bommasandra Ind'l Area, 10 Acres KADB freehold land with approx 5 lakh sq.ft Sheds, P&M & Vehicles. Agents Welcome. CALL: 9619676255 OR 7899802070. Email: sbpl.liquidator@gmail.com '

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ನೀವು ನಿಮ್ಮ ಮನೆ/ಸೈಟ್ ಮಾರಾಟ/ಖರೀದಿ ಮಾಡುವಾಗ ಮಾಡಬೇಕಾದ ಮೊದಲ ಕೆಲಸ
ರಿಯಲ್ ಎಸ್ಟೇಟ್
#1 ಇಲ್ಲಿ ಜಾಹೀರಾತು ನೀಡಿರಿ
www.dhclassifieds.com
ಬುಕ್ ಮಾಡಿ
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿ! ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9900428036 | +91 9731810277 |
+91 9845114560 | +91 9901641752 |
+91 9886213331 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪನ್ನು ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
www.homepages.deccanherald.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಮಹಿಳಾ ಟೆಸ್ಟ್: ದೀಪ್ತಿ, ಪೂಜಾ ಶತಕದ ಜೊತೆಯಾಟ, ಸ್ಮೃತಿ, ರಿಚಾ, ಜೆಮಿಮಾ ಅರ್ಧಶತಕ

ಭಾರತಕ್ಕೆ ಮೊದಲ ಇನಿಂಗ್ಸ್ ಮುನ್ನಡೆ

ಮುಂಬೈ (ಪಿಟಿಐ): ದೀಪ್ತಿ ಶರ್ಮಾ ಮತ್ತು ಪೂಜಾ ವಸ್ತ್ರಾಕರ್ ಅವರ ಅಜೇಯ ಜೊತೆಯಾಟದ ಬಲದಿಂದ ಭಾರತ ಮಹಿಳಾ ಕ್ರಿಕೆಟ್ ತಂಡವು ಆಸ್ಟ್ರೇಲಿಯಾ ಎದುರಿನ ಏಕೈಕ ಟೆಸ್ಟ್‌ನಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದ ಎರಡನೇ ದಿನದಾಟವಾದ ಶುಕ್ರವಾರ ಆತಿಥೇಯ ತಂಡವು 157 ರನ್‌ಗಳ ಮಹತ್ವದ ಮುನ್ನಡೆ ಗಳಿಸಿತು.

ಗುರುವಾರ ಮೊದಲ ಇನಿಂಗ್ಸ್‌ನಲ್ಲಿ ಆಸ್ಟ್ರೇಲಿಯಾ ತಂಡವು 219 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಭಾರತ ತಂಡವು 119 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 376 ರನ್ ಗಳಿಸಿತು. ದೀಪ್ತಿ (ಬ್ಯಾಟಿಂಗ್ 70) ಮತ್ತು ಪೂಜಾ (ಬ್ಯಾಟಿಂಗ್ 33) ಕ್ರೀಸ್‌ನಲ್ಲಿದ್ದಾರೆ.

ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ (74 ರನ್), ಜೆಮಿಮಾ ರಾಡ್ರಿಗಸ್ (73 ರನ್) ಮತ್ತು ಪದಾರ್ಪಣೆ ಪಂದ್ಯ ಆಡಿದ ರಿಚಾ ಘೋಷ್ (52 ರನ್) ಅವರ ಅರ್ಧಶತಕಗಳಿಂದಾಗಿ ತಂಡವು ದೊಡ್ಡ ಮೊತ್ತ ಗಳಿಸುವತ್ತ ಸಾಗಿತ್ತು. ಆದರೆ ಆ್ಯಷ್ಲೆ ಗಾರ್ಡನರ್ (100ಕ್ಕೆ4) ಮತ್ತು ಉಳಿದ ಬೌಲರ್‌ಗಳ ಆಟದಿಂದ ನಾಲ್ಕು ವಿಕೆಟ್‌ಗಳು ಬೇಗನೆ ಪತನವಾದವು. ಈ ಹಂತದಲ್ಲಿ ಜೊತೆಗೂಡಿದ ದೀಪ್ತಿ ಮತ್ತು ಪೂಜಾ ಮುರಿಯದ ಎಂಟನೇ ವಿಕೆಟ್ ಜೊತೆಯಾಟದಲ್ಲಿ 102 ರನ್ ಸೇರಿಸಿದರು.

ಆಸ್ಟ್ರೇಲಿಯಾ ತಂಡದ ಎಂಟು ಬೌಲರ್‌ಗಳು ಇವರ ಜೊತೆಯಾಟವನ್ನು ಮುರಿಯಲು ಯತ್ನಿಸಿ ವಿಫಲರಾದರು. ಪೂಜಾ ಮತ್ತು ದೀಪ್ತಿ ಅವರು ತಾಳ್ಮೆಯಿಂದ ಇನಿಂಗ್ಸ್ ಕಟ್ಟಿದರು. ದೀಪ್ತಿ 9 ಬೌಂಡರಿ ಗಳಿಸಿದರು. 147 ಎಸೆತ ಎದುರಿಸಿದರು. ಇನ್ನೊಂದೆಡೆ ಪೂಜಾ 115 ಎಸೆತಗಳನ್ನು ಆಡಿದರು. ಅದರಲ್ಲಿ ನಾಲ್ಕು ಬೌಂಡರಿ ಬಾರಿಸಿದರು.

ಪೂಜಾ ಮತ್ತು ದೀಪ್ತಿ ಬೌಲಿಂಗ್‌ನಲ್ಲಿಯೂ ಮಿಂಚಿದ್ದರು. ಅವರು ಕ್ರಮವಾಗಿ ನಾಲ್ಕು ಮತ್ತು ಎರಡು ವಿಕೆಟ್ ಗಳಿಸಿ ಆಸ್ಟ್ರೇಲಿಯಾ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿಹಾಕುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.ಪಂದ್ಯದಲ್ಲಿ ಇನ್ನೂ ಮೂರು ದಿನಗಳು ಬಾಕಿ ಇವೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ: 77.4 ಓವರ್‌ಗಳಲ್ಲಿ 219. ಭಾರತ: 119 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 376 (ಸ್ಮೃತಿ ಮಂದಾನ 74, ರಿಚಾ ಘೋಷ್ 52, ಜೆಮಿಮಾ ರಾಡ್ರಿಗಸ್ 73, ದೀಪ್ತಿ ಶರ್ಮಾ ಬ್ಯಾಟಿಂಗ್ 70, ಪೂಜಾ ವಸ್ತ್ರಾಕರ್ ಬ್ಯಾಟಿಂಗ್ 33, ಆ್ಯಷ್ಲೆ ಗಾರ್ಡನರ್ 100ಕ್ಕೆ4)

ಮುಂಬೈನಲ್ಲಿ ನಡೆಯುತ್ತಿರುವ ಮಹಿಳಾ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಶುಕ್ರವಾರ ಅರ್ಧಶತಕ ಗಳಿಸಿದ ಭಾರತ ತಂಡದ ದೀಪ್ತಿ ಶರ್ಮಾ ಸಂಭ್ರಮಿಸಿದರು. ಅವರೊಂದಿಗೆ ಪೂಜಾ ವಸ್ತ್ರಾಕರ್ ಇದ್ದಾರೆ (ಎಡಚಿತ್ರ). ಸ್ಮೃತಿ ಮಂದಾನ ಬ್ಯಾಟಿಂಗ್ ವೈಖರಿ –ಪಿಟಿಐ ಚಿತ್ರಗಳು

ಸ್ವದೇಶಕ್ಕೆ ಮರಳಿದ ವಿರಾಟ್ ಕೊಹ್ಲಿ

26ರಿಂದ ದಕ್ಷಿಣ ಆಫ್ರಿಕಾ ವಿರುದ್ಧ ಮೊದಲ ಟೆಸ್ಟ್ ಪಂದ್ಯ

ಸೆಂಚುರಿಯನ್ (ಪಿಟಿಐ): ದಕ್ಷಿಣ ಆಫ್ರಿಕಾ ಪ್ರವಾಸದಲ್ಲಿರುವ ಭಾರತ ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಕೌಟುಂಬಿಕ ಕಾರಣಗಳಿಗಾಗಿ ಸ್ವದೇಶಕ್ಕೆ ಮರಳಿದ್ದಾರೆ.

ಇದೇ 26ರಿಂದ ಭಾರತ ತಂಡವು ದಕ್ಷಿಣ ಆಫ್ರಿಕಾ ಎದುರು ಆರಂಭವಾಗಲಿರುವ ಟೆಸ್ಟ್ ಸರಣಿಯಲ್ಲಿ ಆಡಲಿದೆ. ಆ ಪಂದ್ಯದ ವೇಳೆಗೆ ವಿರಾಟ್ ತಂಡವನ್ನು ಮರಳಿ ಸೇರಿಕೊಳ್ಳುವರು ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಕೊಹ್ಲಿ ಮನೆಗೆ ತೆರಳಲು ಮುಂಚಿತವಾಗಿಯೇ ಅನುಮತಿ ಪಡೆದಿದ್ದರು ಎನ್ನಲಾಗಿದೆ.

‘ಗುರುವಾರ ವಿರಾಟ್ ಅವರು ಭಾರತಕ್ಕೆ ತೆರಳಿದರು. ಅದರಿಂದಾಗಿ ಅವರು ಇಲ್ಲಿ ನಡೆಯುತ್ತಿರುವ ಭಾರತ ಮತ್ತು ಭಾರತ ಎ ತಂಡಗಳ ನಡುವಣ ಅಭ್ಯಾಸ ಪಂದ್ಯದಲ್ಲಿ ಆಡುವುದಿಲ್ಲ. ಇದೇ 24ರಂದು ತಂಡಕ್ಕೆ ಮರಳುವರು’ ಎಂದು ಮೂಲಗಳು ತಿಳಿಸಿವೆ.

ಆದರೆ ಅವರು ತುರ್ತಾಗಿ ಮನೆಗೆ ತೆರಳಿದ ಕಾರಣವನ್ನು ಮಾತ್ರ ಯಾರೂ ಬಹಿರಂಗಪಡಿಸಿಲ್ಲ. ಹೋದ ಸಲ ದಕ್ಷಿಣ ಆಫ್ರಿಕಾದಲ್ಲಿ ನಡೆದಿದ್ದ ಟೆಸ್ಟ್ ಪಂದ್ಯವನ್ನು ಕೊಹ್ಲಿ ಬೆನ್ನುನೋವಿನಿಂದಾಗಿ ತಪ್ಪಿಸಿಕೊಂಡಿದ್ದರು.

ವಿರಾಟ್ ಕೊಹ್ಲಿ



ಋತುರಾಜ್ ಗಾಯಕವಾಡ್

ಋತುರಾಜ್‌ಗೆ ಗಾಯ, ಸರಣಿಗೆ ಅಲಭ್ಯ

ಭಾರತ ತಂಡದ ಆರಂಭಿಕ ಬ್ಯಾಟರ್ ಋತುರಾಜ್ ಗಾಯಕವಾಡ್ ಅವರ ಕೈಬೆರಳಿಗೆ ಗಾಯವಾಗಿದೆ. ಇದರಿಂದಾಗಿ ಎರಡು ಟೆಸ್ಟ್ ಪಂದ್ಯಗಳ ಸರಣಿಗೆ ಅವರು ಅಲಭ್ಯರಾಗಿದ್ದಾರೆ.

ದಕ್ಷಿಣ ಆಫ್ರಿಕಾ ಎದುರಿನ ಎರಡನೇ ಏಕದಿನ ಪಂದ್ಯದಲ್ಲಿ ಕ್ಯಾಚ್ ಪಡೆಯುವ ಸಂದರ್ಭದಲ್ಲಿ ಗಾಯಕವಾಡ್ ಅವರ ಕೈಬೆರಳಿಗೆ ಗಾಯವಾಗಿತ್ತು.

ಭಾರತ ವಿರುದ್ಧದ ಟೆಸ್ಟ್ ಸರಣಿಯ ಬಳಿಕ ವಿದಾಯ

ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಎಲ್ಗರ್

ಜೋಹಾನ್ಸ್‌ಬರ್ಗ್ (ಪಿಟಿಐ): ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ಮಾಜಿ ನಾಯಕ ಡೀನ್ ಎಲ್ಗರ್ ಅವರು ಇದೇ 26ರಂದು ಆರಂಭವಾಗುವ ಭಾರತ ವಿರುದ್ಧದ ಎರಡು ಟೆಸ್ಟ್‌ಗಳ ಸರಣಿಯ ಬಳಿಕ ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತಿ ಪಡೆಯುವುದಾಗಿ ಘೋಷಿಸಿದ್ದಾರೆ.

2012ರಲ್ಲಿ ಅಂತರರಾಷ್ಟ್ರೀಯ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಎಡಗೈ ಬ್ಯಾಟರ್, 84 ಪಂದ್ಯಗಳಲ್ಲಿ 13 ಶತಕ ಹಾಗೂ 23 ಅರ್ಧಶತಕ ಗಳಿಸಿದ್ದಾರೆ. 37.28ರ ಸರಾಸರಿಯಲ್ಲಿ 5,146 ರನ್ ಪೇರಿಸಿದ್ದಾರೆ. ಅವರು 19 ಪಂದ್ಯಗಳಲ್ಲಿ ತಂಡವನ್ನು ಮುನ್ನಡೆಸಿದ್ದು, ಆ ಪೈಕಿ 9 ಪಂದ್ಯಗಳಲ್ಲಿ ತಂಡವು ಜಯಿಸಿತ್ತು. 7 ಪಂದ್ಯಗಳಲ್ಲಿ ಸೋತಿದ್ದರೆ, ಉಳಿದ ನಾಲ್ಕು ಪಂದ್ಯಗಳಲ್ಲಿ ಡ್ರಾ ಸಾಧಿಸಿತ್ತು.

36 ವರ್ಷ ವಯಸ್ಸಿನ ಅವರು ಕೇವಲ 8 ಏಕದಿನ ಪಂದ್ಯ ಗಳನ್ನು ಆಡಿದ್ದು, ಅಲ್ಲಿ ಹೆಚ್ಚು ಯಶಸ್ವಿ ಆಗಿರಲಿಲ್ಲ. 2018ರಲ್ಲಿ ಕೊನೆಯ ಬಾರಿ ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಆಡಿದ್ದರು.

‘ಜನವರಿ 3ರಿಂದ 7ರವರೆಗೆ ಕೇಪ್ ಟೌನ್‌ನ ಕ್ರೀಡಾಂಗಣದಲ್ಲಿ ನಡೆಯುವ ಭಾರತ ವಿರುದ್ಧದ ಎರಡನೇ ಟೆಸ್ಟ್ ಪಂದ್ಯವು ಡೀನ್ ಎಲ್ಗರ್ ಅವರ ವೃತ್ತಿಜೀವನದ ಕೊನೆಯ ಟೆಸ್ಟ್ ಆಗಲಿದೆ. ಆ ಮೂಲಕ ಅವರು ತಮ್ಮ 12 ವರ್ಷಗಳ ಕ್ರಿಕೆಟ್ ವೃತ್ತಿಜೀವನಕ್ಕೆ ತೆರೆ ಎಳೆಯಲಿದ್ದಾರೆ’ ಎಂದು ದಕ್ಷಿಣ ಆಫ್ರಿಕಾ ಕ್ರಿಕೆಟ್ (ಸಿಎಸ್‌ಎ) ತಿಳಿಸಿದೆ.

‘ಕ್ರಿಕೆಟ್ ಆಡುವುದು ನನ್ನ ಕನಸಾಗಿತ್ತು. ಆದರೆ, ನನಗೆ ದೇಶವನ್ನು ಪ್ರತಿನಿಧಿಸುವ ಅವಕಾಶ ಸಿಕ್ಕಿರುವುದು ಅದೃಷ್ಟ. ಇದು ಅವಿಸ್ಮರಣೀಯ ಪ್ರಯಾಣವಾಗಿದೆ. ಕೇಪ್‌ಟೌನ್ ನನ್ನ ನೆಚ್ಚಿನ ಕ್ರೀಡಾಂಗಣ. ನನ್ನ ಮೊದಲ ಮತ್ತು ಕೊನೆಯ ಟೆಸ್ಟ್ ಪಂದ್ಯಗಳು ಅಲ್ಲೇ ನಡೆಯುತ್ತಿರುವುದು ಖುಷಿಕೊಟ್ಟಿದೆ’ ಎಂದು ಡೀನ್ ಎಲ್ಗರ್ ಹೇಳಿದ್ದಾರೆ.

ಡೀನ್ ಎಲ್ಗರ್

ರಾಷ್ಟ್ರ ಮಟ್ಟದ ಚೆಸ್ ಟೂರ್ನಿ ಜ.6ರಿಂದ

ಮಂಗಳೂರು: ಕೇಂದ್ರ ಸರ್ಕಾರಿ ಸ್ವಾಮ್ಯದ ಕುದುರೆಮುಖ ಕಬ್ಬಿಣ ಅದಿರು ಕಂಪನಿ (ಕೆಐಒಸಿಎಲ್) ಆಯೋಜಿಸಿರುವ 6ನೇ ‘ಕುದುರೆಮುಖ ಟ್ರೋಫಿ’ ರಾಷ್ಟ್ರ ಮಟ್ಟದ ಓಪನ್ ಫಿಡೆ ರೇಟೆಡ್ ರ್‍ಯಾಪಿಡ್ ಚೆಸ್ ಟೂರ್ನಿಯು ಜನವರಿ 6 ಮತ್ತು 7ರಂದು ಕಾವೂರಿನ ಕೆಐಒಸಿಎಲ್ ಟೌನ್‌ಷಿಪ್‌ನ ನೆಹರೂ ಭವನದಲ್ಲಿ ನಡೆಯಲಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾಹಿತಿ ನೀಡಿದ ಸಂಸ್ಥೆಯ ಅಧ್ಯಕ್ಷ ಟಿ. ಸಾಮಿನಾಥನ್, ಒಟ್ಟು ₹3 ಲಕ್ಷ ಬಹುಮಾನ ಮೊತ್ತದ ಟೂರ್ನಿಯು 5, 7, 9, 11, 13, 15 ವರ್ಷ ವಯಸ್ಸಿನ ವಿಭಾಗಗಳು ಮತ್ತು ಮುಕ್ತ ವಿಭಾಗದಲ್ಲಿ ನಡೆಯಲಿದೆ. ಅತ್ಯುತ್ತಮ ಅನುಭವಿ ಆಟಗಾರ, ಅತ್ಯುತ್ತಮ ಮಹಿಳಾ ಆಟಗಾರ್ತಿ, ಅತ್ಯುತ್ತಮ ಕಿರಿಯ ಆಟಗಾರರಿಗೆ ವಿಶೇಷ ಬಹುಮಾನ, ಪ್ರತಿ ವಯೋಮಾನದ ವಿಭಾಗದಲ್ಲಿ ಬಾಲಕ ಮತ್ತು ಬಾಲಕಿಯರಿಗಾಗಿ ಪ್ರತ್ಯೇಕ ಒಟ್ಟು 10 ಬಹುಮಾನ, ಮುಕ್ತ ವಿಭಾಗಗಳಲ್ಲಿ ಟ್ರೋಫಿಯೊಂದಿಗೆ 10 ಬಹುಮಾನ ಸೇರಿದಂತೆ ಒಟ್ಟು 185 ಬಹುಮಾನಗಳನ್ನು ನೀಡಲಾಗುತ್ತದೆ ಎಂದರು.

ನೋಂದಣಿ ಶುಲ್ಕ ₹1,250. ಜ.4 ರಂದು ಬೆಳಿಗ್ಗೆ 10 ಗಂಟೆಯೊಳಗೆ ಹೆಸರು ನೋಂದಾಯಿಸಬಹುದು. ನೋಂದಣಿಗೆ www.karnatakachess.com ಈ ಲಿಂಕ್ ಮತ್ತು ಮಾಹಿತಿಗೆ kudremukhchess@gmail.com ಈ ವಿಳಾಸಕ್ಕೆ ಮೇಲ್ ಮಾಡಬಹುದು ಎಂದು ತಿಳಿಸಿದರು.

ಇಂಗ್ಲೆಂಡ್‌ಗೆ ಸೋಲು: ವಿಂಡೀಸ್‌ಗೆ ಟಿ20 ಸರಣಿ

ಟ್ರಿನಿಡಾಡ್ (ಎಎಫ್‌ಪಿ): ಬೌಲರ್‌ಗಳ ಪರಿಣಾಮಕಾರಿ ದಾಳಿ ಹಾಗೂ ಶಾಯ್ ಹೋಪ್ ಬ್ಯಾಟಿಂಗ್ ನೆರವಿನಿಂದ ವೆಸ್ಟ್ ಇಂಡೀಸ್ ತಂಡವು ನಿರ್ಣಾಯಕ ಟಿ20 ಪಂದ್ಯದಲ್ಲಿ ಇಂಗ್ಲೆಂಡ್ ವಿರುದ್ಧ ನಾಲ್ಕು ವಿಕೆಟ್‌ಗಳ ಜಯ ಸಾಧಿಸಿತು. ಈ ಮೂಲಕ ಐದು ಪಂದ್ಯಗಳ ಸರಣಿಯನ್ನು 3–2ರಿಂದ ತನ್ನದಾಗಿಸಿಕೊಂಡಿತು.

ಮೊದಲ ಎರಡು ಪಂದ್ಯಗಳಲ್ಲಿ ವೆಸ್ಟ್ ಇಂಡೀಸ್ ಜಯ ಸಾಧಿಸಿದ್ದರೆ, ನಂತರದ ಎರಡು ಪಂದ್ಯಗಳಲ್ಲಿ ಪ್ರವಾಸಿ ಇಂಗ್ಲೆಂಡ್ ತಂಡ ಗೆಲುವು ದಾಖಲಿಸಿತ್ತು. ಇದಕ್ಕೂ ಮೊದಲು ನಡೆದ ಏಕದಿನ ಸರಣಿಯಲ್ಲೂ 2–1ರಿಂದ ಇಂಗ್ಲೆಂಡ್ ಮುಖಭಂಗ ಅನುಭವಿಸಿತ್ತು.

ಬ್ರಯನ್ ಲಾರಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಇಂಗ್ಲೆಂಡ್ ತಂಡ, ಎದುರಾಳಿ ತಂಡದ ಬೌಲರ್‌ಗಳ ದಾಳಿಗೆ ತತ್ತರಿಸಿ 19.3 ಓವರ್‌ಗಳಲ್ಲಿ 132 ರನ್‌ಗಳಿಗೆ ಕುಸಿಯಿತು. ಸತತ ಎರಡು ಶತಕ ಗಳಿಸಿದ್ದ ಫಿಲಿಪ್ ಸಾಲ್ಟ್ ತಂಡದ ಪರ ಗರಿಷ್ಠ 38 ರನ್ ಗಳಿಸಿದರು. ವಿಂಡೀಸ್ ಪರ ಗುಡಕೇಶ್ ಮೋತಿ ಮೂರು, ಜೇಸನ್ ಹೋಲ್ಡರ್, ಅಕೀಲ್ ಹುಸೇನ್ ಮತ್ತು ಆ್ಯಂಡ್ರೆ ರಸೆಲ್ ತಲಾ 2 ವಿಕೆಟ್ ಪಡೆದರು.

ಈ ಗುರಿ ಬೆನ್ನಟ್ಟಿದ ವಿಂಡೀಸ್ ತಂಡವು ಶಾಯ್ ಹೋಪ್ (ಔಟಾಗದೆ 43; 43ಎ, 4x2, 6x1) ಅವರ ಬ್ಯಾಟಿಂಗ್ ಬಲದಿಂದ 19.2 ಓವರ್‌ಗಳಲ್ಲಿ ಆರು ವಿಕೆಟ್ ಕಳೆದುಕೊಂಡು ಗುರಿ ತಲುಪಿತು. ಶೆರ್ಫನ್ ರುದರ್‌ಫೋರ್ಡ್ (30), ಜಾನ್ಸನ್ ಚಾರ್ಲ್ಸ್ (27) ಉಪಯುಕ್ತ ಕಾಣಿಕೆ ನೀಡಿದರು. ಇಂಗ್ಲೆಂಡ್ ಪರ ರೀಸ್ ಟೋಪ್ಲಿ ಹಾಗೂ ಅದಿಲ್ ರಶೀದ್ ತಲಾ ಎರಡು ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್: 19.3 ಓವರ್‌ಗಳಲ್ಲಿ 132 (ಫಿಲಿಪ್ ಸಾಲ್ಟ್ 38, ಲಿಯಾಮ್ ಲಿವಿಂಗ್‌ಸ್ಟೋನ್ 28; ಗುಡಕೇಶ್ ಮೋತಿ 24ಕ್ಕೆ 3, ಜೇಸನ್ ಹೋಲ್ಡರ್ 24ಕ್ಕೆ 2, ಅಕೀಲ್ ಹುಸೇನ್ 20ಕ್ಕೆ 2, ಆ್ಯಂಡ್ರೆ ರಸೆಲ್ 25ಕ್ಕೆ 2). **ವೆಸ್ಟ್ ಇಂಡೀಸ್:** 19.2 ಓವರ್‌ಗಳಲ್ಲಿ 6 ವಿಕೆಟ್‌ಗೆ 133 (ಶಾಯ್ ಹೋಪ್ ಔಟಾಗದೆ 43, ಶೆರ್ಫಾನ್ ರುದರ್‌ಫೋರ್ಡ್ 30, ಜಾನ್ಸನ್ ಚಾರ್ಲ್ಸ್ 27; ರೀಸ್ ಟೋಪ್ಲಿ 17ಕ್ಕೆ 2, ಆದಿಲ್ ರಶೀದ್ 21ಕ್ಕೆ 2) **ಫಲಿತಾಂಶ:** ವೆಸ್ಟ್‌ಇಂಡೀಸ್‌ಗೆ 4 ವಿಕೆಟ್ ಗೆಲುವು, 3–2ರಿಂದ ಸರಣಿ ಜಯ. **ಪಂದ್ಯದ ಆಟಗಾರ:** ಗುಡಕೇಶ್ ಮೋತಿ (ವೆಸ್ಟ್ ಇಂಡೀಸ್), **ಸರಣಿಯ ಆಟಗಾರ:** ಫಿಲಿಪ್ ಸಾಲ್ಟ್ (ಇಂಗ್ಲೆಂಡ್)

ಇಂಗ್ಲೆಂಡ್ ವಿರುದ್ಧದ ಟಿ20 ಸರಣಿಯನ್ನು 3–2ರಿಂದ ಕೈವಶ ಮಾಡಿಕೊಂಡ ವೆಸ್ಟ್ ಇಂಡೀಸ್ ತಂಡದ ಸಂಭ್ರಮ –ಎಎಫ್‌ಪಿ ಚಿತ್ರ

ಟೇಬಲ್ ಟೆನಿಸ್: ರೆಯಾನ್ಶ್, ತನಿಷ್ಕಾಗೆ ಪ್ರಶಸ್ತಿ

ಬೆಂಗಳೂರು: ರೆಯಾನ್ಶ್ ಜಲನ್ ಮತ್ತು ತನಿಷ್ಕಾ ಕಪಿಲ್ ಕಾಲಭೈರವ ಅವರು ಸಿಎಲ್‌ವಿ ಶಾಸ್ತ್ರಿ ಸ್ಮಾರಕ ರಾಜ್ಯ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್ ಟೂರ್ನಿಯಲ್ಲಿ ಕ್ರಮವಾಗಿ 13 ವರ್ಷದೊಳಗಿನ ಬಾಲಕರ ಮತ್ತು ಬಾಲಕಿಯರ ಸಿಂಗಲ್ಸ್‌ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಇಲ್ಲಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಬಾಲಕರ ವಿಭಾಗದ ಫೈನಲ್ ಪಂದ್ಯದಲ್ಲಿ ರೆಯಾನ್ಶ್ 11-5, 11-7, 5-11, 11-13, 11-7 ರಿಂದ ಅಮನ್ ಜಾರ್ಜ್ ಥಾಮಸ್ ಅವರನ್ನು ಮಣಿಸಿದರು.

ಬಾಲಕಿಯರ ವಿಭಾಗದ ಫೈನಲ್‌ನಲ್ಲಿ ತನಿಷ್ಕಾ 11-2, 11-2, 11-3 ರಿಂದ ಅನೆಟ್ಟೆ ಮರಿಯಾನಾ ಅವರನ್ನು ಸೋಲಿಸಿದರು.

ಪ್ರಶಸ್ತಿಯೊಂದಿಗೆ ರೆಯಾನ್ಶ್ ಜಲನ್, ತನಿಷ್ಕಾ ಕಪಿಲ್

ಸೇನಾ ವಾಹನದ ಮೇಲೆ ಹಠಾತ್ ದಾಳಿ ನಡೆಸಿದ್ದ ಪ್ರದೇಶದಲ್ಲಿ ವ್ಯಾಪಕ ಶೋಧ ಕಾರ್ಯಾಚರಣೆ

ಭಯೋತ್ಪಾದಕರ ದಾಳಿ: ಇಬ್ಬರು ವಶಕ್ಕೆ

ಪ್ರಜಾವಾಣಿ ವಾರ್ತೆ

ಶ್ರೀನಗರ: ಸೇನಾ ವಾಹನದ ಮೇಲೆ ಭಯೋತ್ಪಾದಕರು ಹಠಾತ್ ದಾಳಿ ನಡೆಸಿದ ಪ್ರದೇಶದಲ್ಲಿ ಭದ್ರತಾ ಪಡೆಗಳು ವ್ಯಾಪಕ ಶೋಧ ಕಾರ್ಯ ನಡೆಸಿವೆ. ಯೋಧರ ಮೇಲೆ ದಾಳಿ ನಡೆದ ಮಾರನೆಯ ದಿನ ಭದ್ರತಾ ಪಡೆಗಳು ಇಬ್ಬರು ಶಂಕಿತರನ್ನು ವಶಕ್ಕೆ ಪಡೆದಿವೆ. ರಜೌರಿ ಜಿಲ್ಲೆಯ ಡೇರಾ ಕಿ ಗಲಿ ಬಳಿ ಸೇನಾ ವಾಹನದ ಮೇಲೆ ಭಯೋತ್ಪಾದರು ದಾಳಿ ನಡೆಸಿದ್ದರು.

ವಶಕ್ಕೆ ಪಡೆದಿರುವ ಈ ಇಬ್ಬರು ದಾಳಿ ನಡೆದ ಸ್ಥಳದ ಸನಿಹದಲ್ಲಿಯೇ ವಾಸ ಮಾಡುತ್ತಾರೆ. ಇವರಿಗೆ ದಾಳಿಕೋರರ ಬಗ್ಗೆ ಮಾಹಿತಿ ಇರಬಹುದು ಎಂಬ ಅನುಮಾನವನ್ನು ಭದ್ರತಾ ಪಡೆಗಳು ವ್ಯಕ್ತಪಡಿಸಿವೆ ಎಂದು ಮೂಲಗಳು ಹೇಳಿವೆ.

ಅಲ್ಲದೆ, ರಜೌರಿ ಮತ್ತು ಪೂಂಛ್‌ನ ಪರ್ವತ ಪ್ರದೇಶಗಳಲ್ಲಿ ಭದ್ರತಾ ಪಡೆಗಳು ಭಯೋತ್ಪಾದಕರ ಪತ್ತೆಗೆ ಬೃಹತ್ ಪ್ರಮಾಣದ ಶೋಧ ಕಾರ್ಯ ಆರಂಭಿಸಿವೆ. ಈ ಕಾರ್ಯದಲ್ಲಿ ಶ್ವಾನದಳವನ್ನು ಹಾಗೂ ಡ್ರೋನ್‌ಗಳನ್ನು ಬಳಸಿಕೊಳ್ಳಲಾಗಿದೆ.

ಪರ್ವತ ಪ್ರದೇಶದ ದಟ್ಟ ಅಡವಿಗಳಲ್ಲಿ ಅವಿತಿರುವ ಭಯೋತ್ಪಾದಕರನ್ನು ಪತ್ತೆ ಮಾಡಲು ಭದ್ರತಾ ಪಡೆಗಳು ಗುಪ್ತಚರ ಜಾಲದ ನೆರವು ಪಡೆದಿವೆ ಎಂಬುದು ಮೂಲಗಳಿಂದ ಗೊತ್ತಾಗಿದೆ.

ಅವಿತಿರುವ ಭಯೋತ್ಪಾದಕರ ನಿರ್ಮೂಲಕ್ಕೆ ನಡೆದಿರುವ ಕಾರ್ಯಾಚರಣೆಯ ಮೇಲ್ವಿಚಾರಣೆಯನ್ನು ಹದನಾರನೆಯ ಕೋರ್‌ನ ಹಿರಿಯ ಅಧಿಕಾರಿ ಲೆಫ್ಟಿನೆಂಟ್ ಜನರಲ್ ಸಂದೀಪ್ ಜೈನ್ ಅವರು ಖುದ್ದಾಗಿ ನಡೆಸುತ್ತಿದ್ದಾರೆ. ಅವರು ಹಿರಿಯ ಸೇನಾಧಿಕಾರಿಗಳು ಹಾಗೂ ಪೊಲೀಸ್ ಅಧಿಕಾರಿಗಳ ಜೊತೆ ದಾಳಿ ನಡೆದ ಪ್ರದೇಶಕ್ಕೆ ಭೇಟಿ ನೀಡಿದ್ದರು.

ಥಾನಾಮಂಡಿ– ಬಫ್ಲಿಯಾಜ್ ರಸ್ತೆಯಲ್ಲಿ ಸಾರ್ವಜನಿಕರ ವಾಹನ ಸಂಚಾರ ನಿಷೇಧಿಸಲಾಗಿದೆ. ಅವರಿಗೆ ಬದಲಿ ಮಾರ್ಗ ಬಳಸುವಂತೆ ಸೂಚಿಸಲಾಗಿದೆ. ಥಾನಾಮಂಡಿ– ಬಫ್ಲಿಯಾಜ್ ಮಾರ್ಗದ ಪರ್ವತ ಪ್ರದೇಶಗಳಲ್ಲಿ ಮೂರರಿಂದ ನಾಲ್ಕು ಮಂದಿ ಭಯೋತ್ಪಾದಕರು ನೆಲೆ ಕಂಡುಕೊಂಡಿದ್ದು, ಅಲ್ಲಿಂದ ಸೇನಾ ವಾಹನಗಳ ಮೇಲೆ ದಾಳಿ ನಡೆಸಿದ್ದಾರೆ ಎನ್ನಲಾಗಿದೆ.

ಪೀರ್ ಪಂಜಾಲ್ ಪ್ರದೇಶದಲ್ಲಿ ಈಚೆಗೆ ಭಯೋತ್ಪಾದಕ ದಾಳಿಗಳು ಹೆಚ್ಚಿನ ಪ್ರಮಾಣದಲ್ಲಿ ನಡೆದಿವೆ. ಈ ವರ್ಷದಲ್ಲಿ ಇಲ್ಲಿ 20 ಮಂದಿ ಭದ್ರತಾ ಸಿಬ್ಬಂದಿ, ಏಳು ಮಂದಿ ನಾಗರಿಕರು ಭಯೋತ್ಪಾದಕರ ದಾಳಿಗೆ ಬಲಿಯಾಗಿದ್ದಾರೆ. 24 ಮಂದಿ ಭಯೋತ್ಪಾದಕರನ್ನು ಹತ್ಯೆ ಮಾಡಲಾಗಿದೆ.

ಪೂಂಛ್ ಜಿಲ್ಲೆಯ ಸೇನಾ ವಾಹನದ ಮೇಲೆ ದಾಳಿ ನಡೆದ ಪ್ರದೇಶದಲ್ಲಿ ಸೇನೆಯು ಶ್ವಾನ ದಳದೊಂದಿಗೆ ಶುಕ್ರವಾರ ಶೋಧ ಕಾರ್ಯ ನಡೆಸಿತು –ಪಿಟಿಐ ಚಿತ್ರ

ಬದಲಾದ ಪಾಕ್ ಕಾರ್ಯತಂತ್ರ ಕಾರಣ?

ಪಾಕಿಸ್ತಾನದ ಕಾರ್ಯತಂತ್ರದಲ್ಲಿ ಆಗಿರುವ ಬದಲಾವಣೆ ಹಾಗೂ ರಜೌರಿ, ಪೂಂಛ್ ಜಿಲ್ಲೆಗಳಲ್ಲಿ ಭದ್ರತಾ ಸಿಬ್ಬಂದಿ ಕಡಿಮೆ ಸಂಖ್ಯೆಯಲ್ಲಿ ಇರುವುದು ಇಲ್ಲಿ ಎರಡು ವರ್ಷಗಳಲ್ಲಿ ಭಯೋತ್ಪಾದಕರ ದಾಳಿ ಹೆಚ್ಚಾಗುವುದಕ್ಕೆ ಕಾರಣ ಎನ್ನಲಾಗಿದೆ.

ಪೀರ್ ಪಂಜಾಲ್ ಪ್ರದೇಶದ ಹಿಲ್ಕಾಕಾ ಪೂಂಛ್‌-ಸುರಾನ್‌ಕೋಟ್ ವಲಯದಲ್ಲಿ ನೆಲೆ ಕಂಡುಕೊಂಡಿದ್ದ ಭಯೋತ್ಪಾದಕರನ್ನು ಮಟ್ಟಹಾಕಲು ಸೇನೆಯು 2003ರಲ್ಲಿ ‘ಆಪರೇಷನ್ ಸರ್ಪವಿನಾಶ್’ ಕಾರ್ಯಾಚರಣೆ ನಡೆಸಿತ್ತು. ಇದಾದ ನಂತರದಲ್ಲಿ ಅಲ್ಲಿ ಶಾಂತಿ ನೆಲೆಸಿತ್ತು. ಆದರೆ, 2020ರಲ್ಲಿ ಪೂಂಛ್ ಮತ್ತು ರಜೌರಿ ಜಿಲ್ಲೆಗಳಲ್ಲಿ ಭಯೋತ್ಪಾದನೆಯು ಮತ್ತೆ ತಲೆ ಎತ್ತಿತು.

ಪೀರ್ ಪಂಜಾಲ್ ಪರ್ವತ ಪ್ರದೇಶದ ದಕ್ಷಿಣದಲ್ಲಿ ರಜೌರಿ ಮತ್ತು ಪೂಂಛ್ ಜಿಲ್ಲೆಗಳು ಇವೆ. ಇಲ್ಲಿನ 4,304 ಚದರ ಕಿ.ಮೀ. ವಿಸ್ತೀರ್ಣದ ಪರ್ವತ ಪ್ರದೇಶದ ನಡುವೆ ಗಡಿ ನಿಯಂತ್ರಣ ರೇಖೆ ಹಾದುಹೋಗಿದೆ. ಈ ಪ್ರದೇಶವು ಪಾಕಿಸ್ತಾನಿ ಭಯೋತ್ಪಾದಕರಿಗೆ ಭಾರತದ ಒಳಕ್ಕೆ ನುಸುಳಲು ನೆಚ್ಚಿನ ಮಾರ್ಗದಂತಿದೆ. ಭಯೋತ್ಪಾದಕರು ಶಸ್ತ್ರಾಸ್ತ್ರಗಳನ್ನು ಒಂದೆಡೆಯಿಂದ ಇನ್ನೊಂದೆಡೆ ಸಾಗಿಸಲು ಅತ್ಯಾಧುನಿಕ ಡ್ರೋನ್‌ಗಳನ್ನು ಕೂಡ ಬಳಸುತ್ತಿದ್ದಾರೆ ಎಂದು ಮೂಲಗಳು ಹೇಳುತ್ತವೆ.

ಆಸ್ಕರ್: ಪಟ್ಟಿಯಲ್ಲಿ ಸ್ಥಾನ ಪಡೆಯದ ಭಾರತದ ‘2018..’

ನವದೆಹಲಿ (ಪಿಟಿಐ): ಆಸ್ಕರ್ ಪ್ರಶಸ್ತಿಗೆ ಅಂತರರಾಷ್ಟ್ರೀಯ ವಿಭಾಗದಲ್ಲಿ ಭಾರತದ ಅಧಿಕೃತ ಪ್ರವೇಶ ಪಡೆದಿದ್ದ ಮಲಯಾಳ ಭಾಷೆಯ ಚಿತ್ರ ‘2018: ಎವರಿಒನ್ ಇಸ್ ಎ ಹೀರೊ’ ಚಿತ್ರ, ಅಂತಿಮ 15 ಚಿತ್ರಗಳ ಪಟ್ಟಿಯಲ್ಲಿ ಸ್ಥಾನ ಪಡೆಯಲು ವಿಫಲವಾಗಿದೆ.

ಅಂತಿಮ 15ರ ಚಿತ್ರಗಳ ಪಟ್ಟಿಯನ್ನು ಅಕಾಡೆಮಿ ಆಫ್ ಮೋಷನ್ ಪಿಕ್ಚರ್ ಆರ್ಟ್ಸ್ ಅಂಡ್ ಸೈನ್ಸ್ (ಎಎಂಪಿಎಎಸ್) ಶುಕ್ರವಾರ ಪ್ರಕಟಿಸಿದೆ. ಈ ಚಿತ್ರಗಳು ಮತದಾನದ ಹಂತವನ್ನು ಪ್ರವೇಶಿಸಲಿವೆ. 88 ದೇಶಗಳ ಚಲನಚಿತ್ರಗಳು ಸ್ಪರ್ಧೆಗೆ ಅರ್ಹವಾಗಿದ್ದವು.

ಜ್ಯೂಡ್ ಆ್ಯಂಟನಿ ಜೋಸೆಫ್ ನಿರ್ದೇಶನದ ‘2018: ಎವರಿಒನ್ ಇಸ್ ಎ ಹೀರೊ’ ಚಿತ್ರದ ಮುಖ್ಯಪಾತ್ರದಲ್ಲಿ ಟೊವಿನೊ ಥಾಮಸ್ ಇದ್ದಾರೆ. 2018ರಲ್ಲಿ ಕೇರಳದಲ್ಲಿ ಕಂಡುಬಂದಿದ್ದ ಪ್ರವಾಹ ಪರಿಸ್ಥಿತಿಯನ್ನು ಆಧರಿಸಿದ್ದ ಚಿತ್ರ ಇದಾಗಿತ್ತು.

ನಿರ್ಮಾಪಕರ ಪ್ರಕಾರ, ಈ ಚಿತ್ರ ₹ 200 ಕೋಟಿ ವಹಿವಾಟು ನಡೆಸಿದ್ದು, ಹೆಚ್ಚು ಗಳಿಕೆಯ ಮಲಯಾಳ ಸಿನಿಮಾ ಎಂಬ ಹಿರಿಮೆಗೆ ಪಾತ್ರವಾಗಿತ್ತು.

ಈ ಕುರಿತ ಇನ್‌ಸ್ಟಾದಲ್ಲಿ ಸಂದೇಶ ಹಂಚಿಕೊಂಡಿರುವ ಜೋಸೆಫ್, ನಿರಾಸೆ ಉಂಟುಮಾಡಿದ್ದಕ್ಕಾಗಿ ಹಿತೈಷಿಗಳ ಕ್ಷಮೆ ಕೋರುತ್ತೇನೆ. ಸ್ಪರ್ಧೆಯಲ್ಲಿ ದೇಶವನ್ನು ಪ್ರತಿನಿಧಿಸುವ ಅವಕಾಶ ಲಭಿಸಿದ್ದು, ಜೀವನಪರ್ಯಂತ ಮೆಲುಕು ಹಾಕುವಂತಾಗಿದೆ ಎಂದು ಹೇಳಿದ್ದಾರೆ.

ಅತ್ಯಧಿಕ ಗಳಿಕೆಯ ಮತ್ತು ಆಸ್ಕರ್‌ಗೆ ಅಧಿಕೃತ ಪ್ರವೇಶ ಚಿತ್ರವಾಗಿ, ಚಿತ್ರನಿರ್ಮಾಪಕನಾಗಿ ಇದು ಅಪರೂಪದ ಸಾಧನೆ. ಇಂತಹ ಪ್ರಯಾಣಕ್ಕಾಗಿ ನನ್ನನ್ನು ಆಯ್ಕೆ ಮಾಡಿದ್ದಕ್ಕಾಗಿ ದೇವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಹಿಂದೆ 2001ರಲ್ಲಿ ಅಮೀರ್ ಖಾನ್ ನಾಯಕತ್ವದ ‘ಲಗಾನ್’ ಈ ವಿಭಾಗದ ಅಂತಿಮ ಪಟ್ಟಿಯ ಐದು ಚಿತ್ರಗಳಲ್ಲಿ ಸ್ಥಾನ ಪಡೆದಿತ್ತು. 96ನೇ ಸಾಲಿನ ಆಸ್ಕರ್ ಪ್ರಶಸ್ತಿ ಪ್ರದಾನ ಸಮಾರಂಭ ಮಾರ್ಚ್ 10, 2024ರಂದು ಲಾಸ್ ಏಂಜಲೀಸ್‌ನಲ್ಲಿ ನಡೆಯಲಿದೆ.

ಇಮ್ರಾನ್ ಖಾನ್‌ಗೆ ಜಾಮೀನು

ಕರಾಚಿ (ರಾಯಿಟರ್ಸ್): ಜೈಲಿನಲ್ಲಿರುವ ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರಿಗೆ ಅಧಿಕೃತ ರಹಸ್ಯ ಮಾಹಿತಿ ಸೋರಿಕೆ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ಶುಕ್ರವಾರ ಜಾಮೀನು ನೀಡಿದೆ.

ಆದರೆ, ಭ್ರಷ್ಟಾಚಾರ ಮತ್ತು ಇತರ ಆರೋಪಗಳ ಪ್ರಕರಣಗಳಲ್ಲೂ ಇದೇ ವೇಳೆ ಶಿಕ್ಷೆ ಅನುಭವಿಸುತ್ತಿರುವ ಇಮ್ರಾನ್ ಖಾನ್ ಅವರ ಬಿಡುಗಡೆ ಅನಿಶ್ಚಿತವಾಗಿದೆ. ಅಲ್ಲದೆ, ಅವರ ಮೇಲೆ ಇನ್ನಷ್ಟು ಪ್ರಕರಣಗಳಲ್ಲಿ ಬಂಧನದ ವಾರಂಟ್ ಬಾಕಿ ಇವೆ.

ಖಾನ್ ವಿರುದ್ಧ ದೋಷಾರೋಪ ಹೊರಿಸಲು ಸಾಕಷ್ಟು ಸಾಕ್ಷ್ಯಾಧಾರಗಳು ಕಂಡುಬಂದಿಲ್ಲ ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ನೀಡಿರುವ ಲಿಖಿತ ತೀರ್ಪಿನಲ್ಲಿ ಹೇಳಿದ್ದಾರೆ.

ನಾಮಪತ್ರ ಸಲ್ಲಿಕೆ: ಇಮ್ರಾನ್ ಖಾನ್ ಅವರು 2024ರ ರಾಷ್ಟ್ರೀಯ ಚುನಾವಣೆಗೆ ಶುಕ್ರವಾರ ನಾಮಪತ್ರ ಸಲ್ಲಿಸಿದ್ದಾರೆ ಎಂದು ಸ್ಥಳೀಯ ಮಾಧ್ಯಮ ‘ಜಿಯೋ ನ್ಯೂಸ್’ ವರದಿ ಮಾಡಿದೆ.

303 ಭಾರತೀಯರಿದ್ದ ವಿಮಾನ ಮಾರ್ಗ ಮಧ್ಯೆ ಭೂಸ್ಪರ್ಶ

ವಾಟ್ರಿ, ಫ್ರಾನ್ಸ್ (ಎಎಫ್‌ಪಿ): ನಿಕರಾಗುವಾಗೆ ತೆರಳುತ್ತಿದ್ದ ವಿಮಾನವನ್ನು ಇಲ್ಲಿ ಶುಕ್ರವಾರ ಮಾನವ ಕಳ್ಳಸಾಗಾಣೆ ಶಂಕೆ ಮೇರೆಗೆ ತುರ್ತು ಭೂಸ್ಪರ್ಶ ಮಾಡಲಾಗಿದೆ.

ಈ ವಿಮಾನದಲ್ಲಿ 303 ಭಾರತೀಯರು ಪ್ರಯಾಣಿಸುತ್ತಿದ್ದರು.

ಈ ವಿಮಾನವು ಯುಎಇಯಿಂದ ಹೊರಟಿತ್ತು. ರೊಮಾನಿಯಾದ ಕಂಪನಿ ಲೆಜೆಂಡ್ ಏರ್‌ಲೈನ್ಸ್‌ಗೆ ಸೇರಿದ ಎ340 ವಿಮಾನವನ್ನು ಖಚಿತ ಮಾಹಿತಿ ಆಧರಿಸಿ ವಾಟ್ರಿ ವಿಮಾನನಿಲ್ದಾಣದಲ್ಲಿ ಇಳಿಸಲಾಗಿದೆ. ವಿಮಾನದಲ್ಲಿ ಇದ್ದವರು ಮಾನವ ಕಳ್ಳಸಾಗಣೆಗೆ ಒಳಗಾಗಿರುವ ಶಂಕೆ ಇದೆ ಎಂದು ಪ್ಯಾರಿಸ್‌ನ ಅಧಿಕಾರಿಗಳು ತಿಳಿಸಿದ್ದಾರೆ.

‘ವಿಮಾನದಲ್ಲಿ 303 ಭಾರತೀಯ ಪ್ರಜೆಗಳಿದ್ದಾರೆ. ಬಹುಶಃ ಇವರು ಯುಎಇಯಲ್ಲಿ ಕೆಲಸ ಮಾಡುತ್ತಿದ್ದಿರಬೇಕು. ಇವರನ್ನು ಅಮೆರಿಕ ಅಥವಾ ಕೆನಡಾಗೆ ಅಕ್ರಮವಾಗಿ ಪ್ರವೇಶಿಸುವ ಯತ್ನವಾಗಿ ತೆರಳುತ್ತಿದ್ದರು ಎಂದು ಶಂಕಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 2,997ಕ್ಕೆ ಏರಿಕೆ: ಕೇಂದ್ರ ಆರೋಗ್ಯ ಸಚಿವಾಲಯ

ಕೋವಿಡ್: 640 ಹೊಸ ಪ್ರಕರಣಗಳು ಪತ್ತೆ

ನವದೆಹಲಿ (ಪಿಟಿಐ): ದೇಶದಲ್ಲಿ ಶುಕ್ರವಾರ ಹೊಸದಾಗಿ 640 ಕೋವಿಡ್ ಪ್ರಕರಣಗಳು ಪತ್ತೆಯಾಗಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 2,997ಕ್ಕೆ ಏರಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯವು ತಿಳಿಸಿದೆ.

ಇದರೊಂದಿಗೆ ದೇಶದಲ್ಲಿನ ದಾಖಲಾಗಿದ್ದ ಒಟ್ಟು ಪ್ರಕರಣಗಳ ಸಂಖ್ಯೆ 4.5 ಕೋಟಿಯಾಗಿದ್ದು, 4.44 ಕೋಟಿ ಜನರು ಚೇತರಿಸಿಕೊಂಡಿದ್ದಾರೆ. ಒಟ್ಟು ಚೇತರಿಕೆ ಪ್ರಮಾಣ ಶೇ 98.81ರಷ್ಟಿದೆ. ಒಟ್ಟು 5,33,328 ಲಕ್ಷ ಜನರು ಸತ್ತಿದ್ದು, ಸಾವಿನ ಪ್ರಮಾಣ ಶೇ 1.19ರಷ್ಟಿದೆ ಎಂದು ತಿಳಿಸಿದೆ.

ಜೆಎನ್.1 22 ಪ್ರಕರಣಗಳು: ಡಿ.21ರ ವರೆಗಿನ ಅಂಕಿ ಅಂಶದ ಪ್ರಕಾರ, ದೇಶದಲ್ಲಿ ಕೋವಿಡ್‌ನ ನೂತನ ತಳಿ ಜೆಎನ್.1ರ 22 ಪ್ರಕರಣಗಳು ಪತ್ತೆಯಾಗಿವೆ.

ಈ ಪೈಕಿ 21 ಪ್ರಕರಣಗಳು ಗೋವಾ, ಕೇರಳದಲ್ಲಿಯೇ ವರದಿಯಾಗಿವೆ ಎಂದು ಮೂಲಗಳು ತಿಳಿಸಿವೆ.

ಸಂಪುಟ ಉಪ ಸಮಿತಿಗೆ ಸಚಿವ ದಿನೇಶ್ ಗುಂಡೂರಾವ್ ನೇತೃತ್ವ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ನಿಯಂತ್ರಣ ಹಾಗೂ ಅದರ ಕುರಿತು ಪರಾಮರ್ಶೆ ನಡೆಸಲು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅಧ್ಯಕ್ಷತೆಯಲ್ಲಿ ಸಂಪುಟ ಉಪ ಸಮಿತಿ ರಚಿಸಲಾಗಿದೆ.

ಸಮಾಜ ಕಲ್ಯಾಣ ಸಚಿವ ಡಾ.ಎಚ್‌.ಸಿ. ಮಹದೇವಪ್ಪ, ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣ ಪ್ರಕಾಶ ಪಾಟೀಲ ಮತ್ತು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಅವರನ್ನು ಸಂಪುಟ ಉಪ ಸಮಿತಿಯ ಸದಸ್ಯರನ್ನಾಗಿ ನೇಮಿಸಲಾಗಿದೆ.

ಕೋವಿಡ್ ನಿಯಂತ್ರಣ ಮತ್ತು ಆ ಕುರಿತು ಪರಿಶೀಲನೆ ನಡೆಸಲು ಸಂಪುಟ ಉಪ ಸಮಿತಿ ರಚಿಸಲು ಗುರುವಾರ ನಡೆದ ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿತ್ತು. ಅದರನ್ವಯ ದಿನೇಶ್ ಗುಂಡೂರಾವ್ ಅವರ ಅಧ್ಯಕ್ಷತೆಯಲ್ಲಿ ಉಪ ಸಮಿತಿಯನ್ನು ರಚಿಸಿ ಶುಕ್ರವಾರ ಆದೇಶ ಹೊರಡಿಸಲಾಗಿದೆ.

ವ್ಯಕ್ತಿಗೆ ಕೋವಿಡ್: ಆಸ್ಟ್ರೇಲಿಯಾದಿಂದ ಮರಳಿದ್ದ ರಾಜಸ್ಥಾನದ 19 ವರ್ಷ ವಯಸ್ಸಿನ ವಿದ್ಯಾರ್ಥಿಯೊಬ್ಬರಿಗೆ ಕೋವಿಡ್ ಸೋಂಕು ಇರುವುದು ದೃಢಪಟ್ಟಿದೆ. ಆತನ ಕುಟುಂಬ ಸದಸ್ಯರಿಂದಲೂ ಮಾದರಿ ಪಡೆದು ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದಲ್ಲಿ 78 ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ 78 ಕೋವಿಡ್ ಪ್ರಕರಣಗಳು ಹೊಸದಾಗಿ ದೃಢಪಟ್ಟಿವೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 175ಕ್ಕೆ ಏರಿಕೆಯಾಗಿದೆ.

24 ಗಂಟೆಗಳಲ್ಲಿ 2,366 ಪರೀಕ್ಷೆಗಳನ್ನು ನಡೆಸಲಾಗಿದೆ. ಸೋಂಕು ದೃಢ ಪ್ರಮಾಣ ಶೇ 3.29ರಷ್ಟಿದೆ. ಬೆಂಗಳೂರಿನಲ್ಲಿ ಒಂದು ದಿನದ ಅವಧಿಯಲ್ಲಿ 1,272 ಪರೀಕ್ಷೆ ನಡೆಸಲಾಗಿದ್ದು, ಹೊಸದಾಗಿ 68 ಪ್ರಕರಣ ದೃಢಪಟ್ಟಿದೆ.



ಇದರಿಂದಾಗಿ ಬೆಂಗಳೂರಿನಲ್ಲಿ ಸಕ್ರಿಯ ಪ್ರಕರಣಗಳು 156ಕ್ಕೆ ತಲುಪಿದೆ.

ಸೋಂಕಿತರಲ್ಲಿ 162 ಮಂದಿ ಮನೆ ಆರೈಕೆಗೆ ಒಳಗಾದರೆ, 13 ಮಂದಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇವರಲ್ಲಿ 6 ಮಂದಿ ತೀವ್ರ ನಿಗಾ ಘಟಕದಲ್ಲಿ, ಉಳಿದ 7 ಮಂದಿ ಸಾಮಾನ್ಯ ವಾರ್ಡ್‌ನಲ್ಲಿ ಇದ್ದಾರೆ.

ಕೋವಿಡ್: ವಲಸೆ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ವೆನ್ಲಾಕ್ ಆಸ್ಪತ್ರೆಯಲ್ಲಿ ದಾಖಲಾಗಿದ್ದ 40 ವರ್ಷದ ವ್ಯಕ್ತಿಯೊಬ್ಬರು ಕೋವಿಡ್‌ನಿಂದ ಮೃತಪಟ್ಟಿರುವುದು ಶುಕ್ರವಾರ ದೃಢಪಟ್ಟಿದೆ.

‘ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ ಈ ವ್ಯಕ್ತಿ ಎರಡು ದಿನಗಳ ಹಿಂದೆ ಆಸ್ಪತ್ರೆಗೆ ದಾಖಲಾಗಿದ್ದರು. ವಲಸೆ ಕಾರ್ಮಿಕರಾಗಿದ್ದ ಅವರಿಗೆ ಮಧುಮೇಹ ಇತ್ತು, ಮದ್ಯವ್ಯಸನಿ ಕೂಡ ಆಗಿದ್ದರು ಎಂಬ ಮಾಹಿತಿ ದೊರೆತಿದೆ’ ಎಂದು ಡಿಎಚ್‌ಒ ಡಾ. ಎಚ್‌.ಆರ್. ತಿಮ್ಮಯ್ಯ ಪ್ರತಿಕ್ರಿಯಿಸಿದರು.

ಜಿಲ್ಲೆಯಲ್ಲಿ ಎರಡು ಸಕ್ರಿಯ ಪ್ರಕರಣಗಳು ಇವೆ. ಶುಕ್ರವಾರ ಆರು ಜನರಿಗೆ ಕೋವಿಡ್ ತಪಾಸಣೆ ನಡೆಸಲಾಗಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.



ಸಂಜಯ್ ಸಿಂಗ್ ಆಯ್ಕೆಗೆ ವಿರೋಧ: ಪ್ರಧಾನಿ ಮೋದಿಗೆ ಪತ್ರ ಬರೆದ ಕುಸ್ತಿಪಟು ಬಜರಂಗ್ ಪೂನಿಯಾ

‘ಅವಮಾನದ ನಡುವೆ ಸಮ್ಮಾನ ಬೇಡ’

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಸುತ್ತಲಿನ ವಿವಾದಗಳು ಕೊನೆಗೊಳ್ಳುವ ಲಕ್ಷಣಗಳು ಕಾಣುತ್ತಿಲ್ಲ. ಬ್ರಿಜ್ ಭೂಷಣ್ ಶರಣ್ ಸಿಂಗ್ ಆಪ್ತ ಸಂಜಯ್ ಸಿಂಗ್ ಡಬ್ಲ್ಯುಎಫ್‌ಐನ ಚುಕ್ಕಾಣಿ ಹಿಡಿದಿರುವುದನ್ನು ವಿರೋಧಿಸಿ ಒಲಿಂಪಿಕ್ಸ್ ಪದಕ ವಿಜೇತ ಕುಸ್ತಿಪಟು ಸಾಕ್ಷಿ ಮಲಿಕ್ ಕುಸ್ತಿಗೆ ವಿದಾಯ ಘೋಷಿಸಿದ ಬೆನ್ನಲ್ಲೆ ಮತ್ತೊಬ್ಬ ಕುಸ್ತಿಪಟು ಬಜರಂಗ ಪೂನಿಯಾ ಅವರು ಪದ್ಮಶ್ರೀ ಪ್ರಶಸ್ತಿಯನ್ನು ಸರ್ಕಾರಕ್ಕೆ ಮರಳಿಸಿದ್ದಾರೆ.

‘ನಾನು ಪದ್ಮಶ್ರೀ ಪ್ರಶಸ್ತಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮರಳಿಸುತ್ತೇನೆ. ಇದು ನನ್ನ ಹೇಳಿಕೆ’ ಎಂದು ಟೋಕಿಯೋ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಕುಸ್ತಿಪಟು ಶುಕ್ರವಾರ ‘ಎಕ್ಸ್’ನಲ್ಲಿ ಬರೆದಿದ್ದಾರೆ.

ಸಂಜಯ್ ಸಿಂಗ್ ಆಯ್ಕೆ ವಿರೋಧಿಸಿ ಕುಸ್ತಿಪಟುಗಳಾದ ಬಜರಂಗ್, ವಿನೇಶಾ ಫೋಗಟ್ ಅವರೊಂದಿಗೆ ಗುರುವಾರ ಸುದ್ದಿಗೋಷ್ಠಿ ನಡೆಸಿದ ಸಾಕ್ಷಿ ಮಲಿಕ್, ಕುಸ್ತಿಗೆ ವಿದಾಯ ಘೋಷಿಸಿದ್ದರು.

ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಬಜರಂಗ್ ಪೂನಿಯಾ ಸಾಧನೆ ಪರಿಗಣಿಸಿ ಕೇಂದ್ರ ಸರ್ಕಾರ 2019ರಲ್ಲಿ ದೇಶದ 4ನೇ ಅತ್ಯುನ್ನತ ಗೌರವವಾದ ಪದ್ಮಶ್ರೀ ಪ್ರಶಸ್ತಿ ಪ್ರದಾನ ಮಾಡಿತ್ತು.

‘ದೇಶದ ಮಹಿಳಾ ಕುಸ್ತಿಪಟುಗಳಿಗೆ ನ್ಯಾಯ ನಿರಾಕರಿಸಲಾಗಿದೆ’ ಎಂದು ಉಲ್ಲೇಖಿಸಿ ಬಜರಂಗ್ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬರೆದ ಪತ್ರವನ್ನು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸಂಸತ್ತಿನಲ್ಲಿ ಪ್ರಧಾನಿ ಭೇಟಿ ಮಾಡಿ ವೈಯಕ್ತಿಕವಾಗಿ ಪತ್ರ ಹಸ್ತಾಂತರಿಸಲು ಅವರು ಪ್ರಯತ್ನಿಸಿದರು. ಆದರೆ ಕರ್ತವ್ಯಪಥದಲ್ಲಿ ಪೊಲೀಸರು ತಡೆದು ವಾಪಸ್ ಕಳುಹಿಸಿದರು.

ಪತ್ರದ ಸಾರಾಂಶ: ‘ಮೋದಿ ಅವರೇ ನೀವು ಅನೇಕ ಕೆಲಸಗಳಲ್ಲಿ ನಿರತರಾಗಿರಬೇಕು. ಆದರೆ, ನಿಮ್ಮ ಗಮನವನ್ನು ದೇಶದ ಕುಸ್ತಿಪಟುಗಳತ್ತ ಸೆಳೆಯಲು ಪತ್ರ ಬರೆಯುತ್ತಿದ್ದೇನೆ. ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಹೊರಿಸಿ ದೇಶದ ಮಹಿಳಾ ಕುಸ್ತಿಪಟುಗಳು ಪ್ರತಿಭಟನೆ ನಡೆಸಿರುವುದು ನಿಮಗೆ ತಿಳಿದಿರಬೇಕು. ನಾನೂ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದೆ. ಸರ್ಕಾರವು ಕಠಿಣ ಕ್ರಮದ ಭರವಸೆ ನೀಡಿದ ನಂತರ ಪ್ರತಿಭಟನೆ ನಿಲ್ಲಿಸಲಾಯಿತು’ ಎಂದು ಹೇಳಿದ್ದಾರೆ.

‘ಆದರೆ ಮೂರು ತಿಂಗಳ ನಂತರವೂ ಬ್ರಿಜ್ ಭೂಷಣ್ ವಿರುದ್ಧ ಯಾವುದೇ ಎಫ್‌ಐಆರ್ ದಾಖಲಾಗಲಿಲ್ಲ. ಅವರ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಆಗ್ರಹಿಸಿ ಏಪ್ರಿಲ್‌ನಲ್ಲಿ ಮತ್ತೆ ಬೀದಿಗಿಳಿಯಬೇಕಾಯಿತು. ಜನವರಿಯಲ್ಲಿ 19 ದೂರುದಾರರು ಇದ್ದರು. ಆದರೆ, ಏಪ್ರಿಲ್ ವೇಳೆಗೆ ಆ ಸಂಖ್ಯೆ 7ಕ್ಕೆ ಇಳಿದಿದೆ. ಇದರರ್ಥ ಬ್ರಿಜ್ ಭೂಷಣ್ 12 ಮಹಿಳಾ ಕುಸ್ತಿಪಟುಗಳ ಮೇಲೆ ಪ್ರಭಾವ ಬೀರಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

‘ನಮ್ಮ ಪ್ರತಿಭಟನೆ 40 ದಿನಗಳು ನಡೆಯಿತು. ಆ ದಿನಗಳಲ್ಲಿ ನಮ್ಮ ಮೇಲೆ ಸಾಕಷ್ಟು ಒತ್ತಡವಿತ್ತು. ನಮ್ಮ ಪ್ರತಿಭಟನಾ ಸ್ಥಳವನ್ನು ಧ್ವಂಸಗೊಳಿಸಿ, ಮುಂದೆ ಪ್ರತಿಭಟಿಸಲು ಅವಕಾಶ ನೀಡಲಿಲ್ಲ. ಮುಂದೆ ಏನು ಮಾಡಬೇಕೆಂದು ತೋಚದೇ ನಮ್ಮ ಪದಕಗಳನ್ನು ಗಂಗಾ ನದಿಗೆ ಹಾಕಲು ಮುಂದಾದೆವು. ಆಗ ನಮ್ಮನ್ನು ರೈತ ನಾಯಕರು ಮತ್ತು ತರಬೇತುದಾರರು ತಡೆದರು. ಕೇಂದ್ರ ಕ್ರೀಡಾ ಸಚಿವರು ನ್ಯಾಯ ಕೊಡಿಸುವ ಭರವಸೆ ನೀಡಿದ ಮೇರೆಗೆ ಪ್ರತಿಭಟನೆ ನಿಲ್ಲಿಸಲಾಯಿತು’ ಎಂದು ವಿವರಿಸಿದ್ದಾರೆ.

‘ಬ್ರಿಜ್ ಭೂಷಣ್ ಸಿಂಗ್ ಅವರ ಆಪ್ತ ಸಂಜಯ್ ಸಿಂಗ್ ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಮತ್ತೆ ಫೆಡರೇಷನ್ ಮೇಲೆ ಬ್ರಿಜ್ ಭೂಷಣ್ ಹಿಡಿತ ಸಾಧಿಸಲಿದ್ದಾರೆ. ಸಾಕ್ಷಿ ಮಲಿಕ್ ಅವರು ಕುಸ್ತಿಗೆ ವಿದಾಯ ಘೋಷಿಸಿದ್ದಾರೆ. ಇಡೀ ರಾತ್ರಿ ಕಣ್ಣೀರು ಸುರಿಸಿದೆವು. ಏನು ಮಾಡಬೇಕು ಅಥವಾ ಎಲ್ಲಿಗೆ ಹೋಗಬೇಕೆಂದು ತಿಳಿಯಲಿಲ್ಲ. ಸರ್ಕಾರ ನನಗೆ ಪದ್ಮಶ್ರೀ, ಅರ್ಜುನ, ಖೇಲ್ ರತ್ನ ಪ್ರಶಸ್ತಿ ನೀಡಿದೆ’ ಎಂದು ಹೇಳಿದ್ದಾರೆ.

‘ಮಹಿಳಾ ಕ್ರೀಡಾಪಟುಗಳನ್ನು ಕ್ರೀಡೆಯು ಸಬಲೀಕರಣಗೊಳಿಸಿದೆ ಮತ್ತು ಅವರ ಜೀವನ ಬದಲಾಯಿಸಿದೆ. ಆದರೆ ಪರಿಸ್ಥಿತಿ ಹೇಗಿದೆಯೆಂದರೆ ಬೇಟಿ ಬಚಾವೋ, ಬೇಟಿ ಪಢಾವೋ ರಾಯಭಾರಿಗಳಾಗಿದ್ದ ಮಹಿಳೆಯರು ಈಗ ಕ್ರೀಡೆ ತೊರೆಯುತ್ತಿದ್ದಾರೆ. ಪ್ರಶಸ್ತಿ ವಿಜೇತ ಕುಸ್ತಿಪಟುಗಳಾದ ನಾವು ಏನನ್ನೂ ಮಾಡಲು ಸಾಧ್ಯವಾಗಲಿಲ್ಲ. ಮಹಿಳಾ ಕುಸ್ತಿಪಟುಗಳನ್ನು ಅವಮಾನಿಸುವಾಗ ನಾನು ಪದ್ಮಶ್ರೀ ಪ್ರಶಸ್ತಿ ವಿಜೇತನಾಗಿ ನನ್ನ ಜೀವನ ನಡೆಸಲು ಸಾಧ್ಯವಿಲ್ಲ. ಆದ್ದರಿಂದ ನಾನು ಈ ಪ್ರಶಸ್ತಿಯನ್ನು ನಿಮಗೆ ಹಿಂದಿರುಗಿಸುತ್ತೇನೆ’ ಎಂದು ಬಜರಂಗ್ ಹೇಳಿದ್ದಾರೆ.

ಕುಸ್ತಿಪಟುಗಳ ಹೋರಾಟಕ್ಕೆ ಬೆಂಬಲ- ಪ್ರಿಯಾಂಕಾ: ಕುಸ್ತಿಪಟುಗಳಾದ ಸಾಕ್ಷಿ ಮಲಿಕ್, ಬಜರಂಗ್ ಪೂನಿಯಾ ಅವರು ಶುಕ್ರವಾರ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ನ್ಯಾಯಕ್ಕಾಗಿ ಹೋರಾಡುತ್ತಿರುವ ಕುಸ್ತಿಪಟುಗಳಿಗೆ ಬೆಂಬಲ ನೀಡುವುದಾಗಿ ಪ್ರಿಯಾಂಕಾ ಭರವಸೆ ನೀಡಿದರು.

‘ಕುಸ್ತಿಪಟುಗಳನ್ನು ವಿವಿಧ ರೀತಿಯಲ್ಲಿ ಹಿಂಸಿಸಲಾಯಿತು. ಭಾರತೀಯ ಜನತಾ ಪಕ್ಷ (ಬಿಜೆಪಿ) ಇನ್ನೂ ಆರೋಪಿಯೊಂದಿಗೆ ನಿಂತಿದೆ. ದೇಶದ ಮಹಿಳೆಯರು ಈ ದೌರ್ಜನ್ಯಗಳನ್ನು ನೋಡುತ್ತಿದ್ದಾರೆ ಎಂದು ಪ್ರಿಯಾಂಕಾ ಹೇಳಿದರು.

ಕುಸ್ತಿಪಟುಗಳು ಪ್ರಿಯಾಂಕಾ ಅವರನ್ನು ಭೇಟಿಯಾಗಲು ಹೋದಾಗ ಕಾಂಗ್ರೆಸ್ ಮುಖಂಡ ದೀಪೇಂದರ್ ಹೂಡಾ ಅವರೊಂದಿಗೆ ಇದ್ದರು.

ದೀಪೇಂದರ್ ಹೂಡಾ ಅವರು ಮಲಿಕ್ ಮತ್ತು ಪೂನಿಯಾ ಅವರನ್ನು ತಮ್ಮ ನಿವಾಸದಲ್ಲಿ ಭೇಟಿಯಾದರು. ಅಲ್ಲಿ ಹರಿಯಾಣದ ಮಾಜಿ ಮುಖ್ಯಮಂತ್ರಿ ಭೂಪಿಂದರ್ ಸಿಂಗ್ ಹೂಡಾ ಕೂಡ ಹಾಜರಿದ್ದರು.

ನವದೆಹಲಿಯ ಕರ್ತವ್ಯಪಥದ ಬಳಿ ಕುಸ್ತಿಪಟು ಬಜರಂಗ್ ಪೂನಿಯಾ ಪದ್ಮಶ್ರೀ ಪ್ರಶಸ್ತಿಯ ಪದಕ ಹಿಡಿದು ಕುಳಿತಿದ್ದರು (ಮೇಲಿನಚಿತ್ರ). ಶುಕ್ರವಾರ ಕುಸ್ತಿಪಟುಗಳಾದ ಸಾಕ್ಷಿ ಮಲಿಕ್, ಬಜರಂಗ್ ಪೂನಿಯಾ ಹಾಗೂ ಇತರರೊಂದಿಗೆ ಕಾಂಗ್ರೆಸ್ ನಾಯಕಿ ಪ್ರಿಯಾಂಕಾ ಗಾಂಧಿ ಚರ್ಚೆ ನಡೆಸಿದರು –ಪಿಟಿಐ ಚಿತ್ರಗಳು

ಅಮಾನತು ವಾಪಸ್‌ಗೆ ಯುಡಬ್ಲ್ಯುಡಬ್ಲ್ಯುಗೆ ಮನವಿ

ನವದೆಹಲಿ (ಪಿಟಿಐ): ತನಗೆ ವಿಧಿಸಿರುವ ನಿಷೇಧ ತೆರವು ಮಾಡುವಂತೆ ಶುಕ್ರವಾರ ಭಾರತ ಕುಸ್ತಿ ಫೆಡರೇಷನ್ ನೂತನ ಕಾರ್ಯಕಾರಿ ಸಮಿತಿಯು ವಿಶ್ವ ಕುಸ್ತಿ ಸಂಸ್ಥೆ (ಯುಡಬ್ಲ್ಯುಡಬ್ಲ್ಯು)ಗೆ ಮನವಿ ಮಾಡಿದೆ.

ಜನವರಿ 28 ರಿಂದ ಮಹಾರಾಷ್ಟ್ರದ ಅಹ್ಮದ್ ನಗರದಲ್ಲಿ ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್ ಆಯೋಜಿಸುವುದಾಗಿ ಡಬ್ಲ್ಯುಎಫ್‌ಐ ಘೋಷಿಸಿದೆ.

‘ಸ್ಪರ್ಧೆಗಳನ್ನು ಪುನರಾರಂಭಿಸುವುದು ಹೊಸ ಸಮಿತಿಯ ಆದ್ಯತೆಯಾಗಿದೆ. ಚುನಾವಣೆ ಪ್ರಜಾಸತ್ತಾತ್ಮಕವಾಗಿ ನಡೆದಿರುವುದರಿಂದ ಡಬ್ಲ್ಯುಎಫ್‌ಐ ಮೇಲೆ ವಿಧಿಸಿರುವ ನಿಷೇಧ ತೆರವು ಮಾಡುವಂತೆ ಕೋರಿ ವಿಶ್ವ ಕುಸ್ತಿ ಸಂಸ್ಥೆಗೆ ಪತ್ರ ಬರೆದಿದ್ದೇವೆ. ಅಮಾನತು ಶೀಘ್ರದಲ್ಲೇ ಅಂತ್ಯಗೊಳ್ಳಲಿದೆ ಎಂಬ ಖಾತ್ರಿಯಿದೆ’ ಎಂದು ಫೆಡರೇಷನ್ ನೂತನ ಅಧ್ಯಕ್ಷ ಸಂಜಯ್ ಸಿಂಗ್ ಹೇಳಿದ್ದಾರೆ.

‘ಜೂನಿಯರ್ ಮತ್ತು ಸೀನಿಯರ್ ಕುಸ್ತಿಪಟುಗಳು ಕಳೆದ ಕೆಲವು ತಿಂಗಳುಗಳಲ್ಲಿ ಸ್ಪರ್ಧೆಗಳು ಇಲ್ಲದೆ ಸಾಕಷ್ಟು ತೊಂದರೆ ಅನುಭವಿಸಿದ್ದಾರೆ. ಸ್ಪರ್ಧೆಗಳನ್ನು ಪುನರಾರಂಭಿಸುವುದು ಆದ್ಯತೆಯಾಗಿದೆ. ಆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದೇವೆ. ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಮಹಾರಾಷ್ಟ್ರ ಆತಿಥ್ಯ ವಹಿಸಲಿದೆ. ರಾಜ್ಯಗಳು ಸಹ ಆಯ್ಕೆ ಟ್ರಯಲ್ಸ್ ಘೋಷಿಸಿವೆ’ ಸಿಂಗ್ ಹೇಳಿದ್ದಾರೆ.

ನಿಗದಿಪಡಿಸಿದ ಗಡುವಿನೊಂದಿಗೆ ಚುನಾವಣೆ ನಡೆಸಲು ವಿಫಲವಾದ ಕಾರಣ ಡಬ್ಲ್ಯುಎಫ್‌ಐ ಅಮಾನತು ಆಗಿತ್ತು. ಅದರಿಂದಾಗಿ 2023ರ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಕುಸ್ತಿಪಟುಗಳು ತಟಸ್ಥ ಕ್ರೀಡಾಪಟುಗಳಾಗಿ ಭಾಗವಹಿಸಿದ್ದರು.

ಬಜರಂಗ್ ವೈಯಕ್ತಿಕ ನಿರ್ಧಾರ: ಸಚಿವಾಲಯ

ನವದೆಹಲಿ (ಪಿಟಿಐ): ‘ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಸಂಜಯ್ ಸಿಂಗ್ ಆಯ್ಕೆಯನ್ನು ವಿರೋಧಿಸಿ ತಮ್ಮ ಪದ್ಮಶ್ರೀ ಪ್ರಶಸ್ತಿಯನ್ನು ಹಿಂದಿರುಗಿಸುವ ಬಜರಂಗ್ ಪೂನಿಯಾ ಅವರ ನಿರ್ಧಾರವು ವೈಯಕ್ತಿಕವಾಗಿದೆ. ಆದರೆ ತಮ್ಮ ನಿರ್ಧಾರ ಮರುಪರಿಶೀಲಿಸುವಂತೆ ಮನವೊಲಿಸಲು ಪ್ರಯತ್ನಿಸಲಾಗುವುದು’ ಎಂದು ಕ್ರೀಡಾ ಸಚಿವಾಲಯ ಶುಕ್ರವಾರ ಹೇಳಿದೆ.

‘ಪದ್ಮಶ್ರೀ ಪ್ರಶಸ್ತಿಗೆ ಮರಳಿಸುವುದು ಬಜರಂಗ್ ಪೂನಿಯಾ ಅವರ ವೈಯಕ್ತಿಕ ನಿರ್ಧಾರ. ಡಬ್ಲ್ಯುಎಫ್‌ಐ ಚುನಾವಣೆಗಳು ನ್ಯಾಯಸಮ್ಮತ ಮತ್ತು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆದಿವೆ’ ಎಂದು ಸಚಿವಾಲಯದ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

‘ಪದ್ಮಶ್ರೀ ಹಿಂದಿರುಗಿಸುವ ನಿರ್ಧಾರ ಹಿಂತೆಗೆದುಕೊಳ್ಳುವಂತೆ ಬಜರಂಗ್ ಅವರ ಮನವೊಲಿಸಲು ಇನ್ನೂ ಪ್ರಯತ್ನಿಸುತ್ತೇವೆ’ ಎಂದು ಅವರು ಹೇಳಿದ್ದಾರೆ.

ನಿಯಮ ಉಲ್ಲಂಘನೆ: ಡಬ್ಲ್ಯುಎಫ್‌ಐ ಅಧ್ಯಕ್ಷರ ವಿರುದ್ಧ ಕಾರ್ಯದರ್ಶಿ ಆರೋಪ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ನೂತನ ಸಮಿತಿ ಅಧಿಕಾರ ವಹಿಸಿಕೊಂಡು 24 ತಾಸು ಕಳೆಯುವಷ್ಟರಲ್ಲಿಯೇ ಸಮಸ್ಯೆ ಶುರುವಾಗಿದೆ. ಜೂನಿಯರ್ ನ್ಯಾಷನಲ್ಸ್ ಸ್ಪರ್ಧೆಯ ದಿನಾಂಕಗಳನ್ನು ಘೋಷಿಸುವಾಗ ಅಧ್ಯಕ್ಷರು ನಿಯಮಗಳನ್ನು ಪಾಲಿಸಿಲ್ಲ ಎಂದು ಆರೋಪಿಸಿರುವ ನೂತನ ಪ್ರಧಾನ ಕಾರ್ಯದರ್ಶಿ ಪ್ರೇಮ್ ಚಂದ್ ಲೋಚಬ್, ಸ್ಪರ್ಧೆಯನ್ನು ಮುಂದೂಡಬೇಕು ಎಂದು ಆಗ್ರಹಿಸಿದ್ದಾರೆ.

ಡಿಸೆಂಬರ್ 28 ರಿಂದ 30ರವರೆಗೆ ಉತ್ತರ ಪ್ರದೇಶದ ಗೊಂಡಾದಲ್ಲಿ 15 ವರ್ಷದೊಳಗಿನ ಮತ್ತು 20 ವರ್ಷದೊಳಗಿನ ರಾಷ್ಟ್ರೀಯ ಕ್ರೀಡಾಕೂಟ ನಡೆಯಲಿದೆ ಎಂದು ಅಧ್ಯಕ್ಷ ಸಂಜಯ್ ಸಿಂಗ್ ನೇತೃತ್ವದ ಹೊಸ ಸಮಿತಿ ಶುಕ್ರವಾರ ಘೋಷಿಸಿದೆ. ಪ್ರತಿಸ್ಪರ್ಧಿ ಅನಿತಾ ಶೆರಾನ್ ಬಣದಿಂದ ಗೆದ್ದಿರುವ ಲೋಚಬ್ ಸಭೆಯಲ್ಲಿ ಭಾಗವಹಿಸಲಿಲ್ಲ ಮತ್ತು ಎಲ್ಲಾ ನಿರ್ಧಾರಗಳು ಡಬ್ಲ್ಯುಎಫ್‌ಐ ಪ್ರಧಾನ ಕಾರ್ಯದರ್ಶಿ ಮೂಲಕ ಬರಬೇಕು ಎಂದು ಹೇಳಿದ್ದಾರೆ.

‘ಜೂನಿಯರ್ ಕುಸ್ತಿಪಟುಗಳ ಅನುಕೂಲಗಳು ಮತ್ತು ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಮತ್ತು ಡಬ್ಲ್ಯುಎಫ್‌ಐ ನಿಯಮಾವಳಿ ಪ್ರಕಾರ ನಿರ್ಧಾರ ತೆಗೆದುಕೊಳ್ಳಲು ಅವಕಾಶ ನೀಡುವುದರಿಂದ ತಾವು ಯಾವುದೇ ನಿಯಮವನ್ನು ಉಲ್ಲಂಘಿಸಿಲ್ಲ’ ಎಂದು ಸಂಜಯ್ ಸಿಂಗ್ ಸಮರ್ಥಿಸಿಕೊಂಡಿದ್ದಾರೆ.

ಒಂದು ವರ್ಷ ಕಳೆದುಕೊಳ್ಳುವುದನ್ನು ಕಿರಿಯ ಕುಸ್ತಿಪಟುಗಳು ಬಯಸುವುದಿಲ್ಲ ಮತ್ತು ಅದಕ್ಕಾಗಿಯೇ ಈ ನಿಟ್ಟಿನಲ್ಲಿ ತ್ವರಿತ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಸಿಂಗ್ ತಿಳಿಸಿದರು.

‘ವಯೋಮಿತಿ ಮತ್ತು ಜೂನಿಯರ್ ನ್ಯಾಷನಲ್ಸ್ ಅನ್ನು ಮರು ಹೊಂದಿಸಲು ಮತ್ತು ಸ್ಥಳಾಂತರಿಸಲು ಕೆಲವು ರಾಜ್ಯಗಳು ಆಕ್ಷೇಪ ವ್ಯಕ್ತಪಡಿಸಿವೆ. ಹಾಗಾಗಿ ನೂತನ ಕಾರ್ಯಕಾರಿ ಸಮಿತಿ ಸಭೆ ಫೆಡರೇಷನ್‌ನ ನಿಯಮಾವಳಿ ಪ್ರಕಾರ ನಡೆದಿಲ್ಲ’ ಎಂದು ಲೋಚಬ್ ಅವರು ಸಂಜಯ್ ಸಿಂಗ್ ಅವರಿಗೆ ಪತ್ರ ಬರೆದಿದ್ದಾರೆ.

ಪತ್ರದ ಪ್ರತಿಯನ್ನು ಭಾರತ ಒಲಿಂಪಿಕ್ ಸಂಸ್ಥೆ (ಐಒಎ)ಗೂ ಕಳುಹಿಸಲಾಗಿದೆ.

ಕೈರೊ ವಿಶ್ವಕಪ್: ಶೂಟರ್‌ಗಳ ತಂಡ ಕಳುಹಿಸದಿರಲು ನಿರ್ಧಾರ

ನವದೆಹಲಿ (ಪಿಟಿಐ): ಭಾರತದ ಶೂಟರ್‌ಗಳು ಜನವರಿ 24ರಂದು ಕೈರೊದಲ್ಲಿ ಆರಂಭವಾಗುವ ವರ್ಷದ ಮೊದಲ ಸ್ಪರ್ಧೆಯಾದ ಐಎಸ್‌ಎಸ್‌ಎಫ್ ವಿಶ್ವ ಕಪ್‌ನಲ್ಲಿ ಭಾಗವಹಿಸುತ್ತಿಲ್ಲ. ಈ ವರ್ಷ ಸಾಕಷ್ಟು ಟೂರ್ನಿಗಳಲ್ಲಿ ಭಾಗವಹಿಸಿರುವ ಸ್ಪರ್ಧಿಗಳಿಗೆ ವಿಶ್ರಾಂತಿ ನೀಡಲು ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ಗೆ ಮುನ್ನ ಇನ್ನೂ ಕೆಲವು ಒಲಿಂಪಿಕ್ಸ್ ಅರ್ಹತಾ ಟೂರ್ನಿಗಳಿರುವ ಕಾರಣ ಅವರು ದಣಿಯುವುದನ್ನು ತಡೆಯಲು ರಾಷ್ಟ್ರೀಯ ಫೆಡರೇಷನ್ ಮುಂದಾಗಿದೆ.

ಆದರೆ ಟೂರ್ನಿ ತಪ್ಪಿಸಿಕೊಳ್ಳುವ ಈ ನಿರ್ಧಾರ ಇತ್ತೀಚೆಗಷ್ಟೇ ಕೈಗೊಂಡಿರುವ ಕಾರಣ, ಈ ಮೊದಲೇ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಯೋಜನೆ ಹಾಕಿಕೊಂಡಿದ್ದ ಕೆಲವು ಪ್ರಮುಖ ಶೂಟರ್‌ಗಳು ಇಕ್ಕಟ್ಟಿಗೆ ಸಿಲುಕಿದ್ದಾರೆ.

‘ಈ ವಿಷಯವನ್ನು ಕೋಚ್‌ಗಳು, ಕ್ರೀಡಾ ವಿಜ್ಞಾನ ತಂಡದ ಜೊತೆ ಮತ್ತು ಸಂಬಂಧಿಸಿದ ಎಲ್ಲರ ಜೊತೆ ಚರ್ಚಿಸಲಾಗಿದ್ದು, ಅದರಂತೆ ಮುಂದುವರಿಯಲಾಗಿದೆ’ ಎಂದು ಭಾರತ ರಾಷ್ಟ್ರೀಯ ರೈಫಲ್ ಸಂಸ್ಥೆ ಮಹಾ ಕಾರ್ಯದರ್ಶಿ ಸುಲ್ತಾನ್ ಸಿಂಗ್ ತಿಳಿಸಿದ್ದಾರೆ.

ಕೈರೊ ವಿಶ್ವಕಪ್‌ನಲ್ಲಿ ಎಲ್ಲಾ ಮೂರು ವಿಭಾಗಗಳಲ್ಲಿ– ಪಿಸ್ತೂಲ್, ರೈಫಲ್ ಮತ್ತು ಶಾಟ್‌ಗನ್– ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಜನವರಿ 24 ರಿಂದ ಫೆಬ್ರುವರಿ 1ರವರೆಗೆ ನಿಗದಿಯಾಗಿದೆ.

ಮುಂದಿನ ವರ್ಷ ಬಿಡುವಿಲ್ಲದ ಕಾರ್ಯಕ್ರಮಗಳಿರುವ ಕಾರಣ ಶೂಟರ್‌ಗಳಿಗೆ ದಣಿವಾಗಬಾರದು ಎಂದು ಕೋಚ್‌ಗಳೂ ಬಯಸಿದ್ದಾರೆ ಎಂದು ಎನ್‌ಆರ್‌ಎಐ ಸಹಾಯಕ ಕಾರ್ಯದರ್ಶಿ ನಿಮಿತ್ ಚೋಪ್ರಾ ಹೇಳಿದರು.

‘ಕೋಚ್‌ಗಳು ತಮ್ಮ ಶೂಟರ್‌ಗಳಿಗೆ ವಿಶ್ರಾಂತಿ ಬಯಸುತ್ತಾರೆ ವಿನಾ ಎಲ್ಲ ಸ್ಪರ್ಧೆಗಳಲ್ಲಿ ಭಾಗವಹಿಸಲು ಒಲವು ತೋರಿಸುವುದಿಲ್ಲ. ಜನವರಿ 5 ರಿಂದ 18ರವರೆಗೆ ಜಕಾರ್ತಾದಲ್ಲಿ (ಏಷ್ಯಾ ಒಲಿಂಪಿಕ್ ಅರ್ಹತಾ ರೈಫಲ್/ಪಿಸ್ತೂಲ್) ಸ್ಪರ್ಧೆಯಿದ್ದು ಅದರಲ್ಲಿ ಪೂರ್ಣಪ್ರಮಾಣದ ‘ಎ’ ತಂಡ ಭಾಗವಹಿಸಲಿದೆ ಎಂದು ಚೋಪ್ರಾ ತಿಳಿಸಿದ್ದಾರೆ. ಕೈರೊ ವಿಶ್ವಕಪ್‌ನಲ್ಲಿ ಭಾಗವಹಿಸದಿರುವ ತೀರ್ಮಾನವನ್ನು ಕಳೆದ ವಾರವಷ್ಟೇ ಕೈಗೊಳ್ಳಲಾಯಿತು ಎಂದೂ ಮಾಹಿತಿ ನೀಡಿದ್ದಾರೆ.

‘ನಾವು ‘ಬಿ’ ತಂಡವನ್ನೂ ಕಳುಹಿಸುತ್ತಿಲ್ಲ. ಒಂದು ವೇಳೆ ‘ಎ’ ತಂಡವನ್ನು ಕಳುಹಿಸದೇ ‘ಬಿ’ ತಂಡವನ್ನು ಕಳುಹಿಸಿದಲ್ಲಿ ಅವರು ಸಾಕಷ್ಟು ಪಾಯಿಂಟ್‌ಗಳನ್ನು ಕಲೆಹಾಕಿದರಲ್ಲಿ ಅದು ‘ಎ’ ತಂಡಕ್ಕೆ ಅನನುಕೂಲ (ಮುಂದಿನ ವರ್ಷದ ಮೇ ತಿಂಗಳಲ್ಲಿ ನಡೆಯುವ ಒಲಿಂಪಿಕ್ಸ್ ಅರ್ಹತಾ ಟ್ರಯಲ್ಸ್ ವೇಳೆ) ಉಂಟು ಮಾಡಲಿದೆ. ಹೀಗಾಗಿ ಕೈರೊಕ್ಕೆ ನಾವು ಹೋಗುತ್ತಿಲ್ಲ’ ಎಂದರು.

ಟೇಬಲ್ ಟೆನಿಸ್: ಹರ್ಮೀತ್‌ಗೆ ಎರಡನೇ ರಾಷ್ಟ್ರೀಯ ಪ್ರಶಸ್ತಿ

ಪಂಚಕುಲ (ಪಿಟಿಐ); ಇಲ್ಲಿನ ತೌ ದೇವಿ ಲಾಲ್ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 85ನೇ ಯುಟಿಟಿ ಸೀನಿಯರ್ ನ್ಯಾಷನಲ್ಸ್ ಮತ್ತು ಅಂತರ ರಾಜ್ಯ ಟೇಬಲ್ ಟೆನಿಸ್ ಚಾಂಪಿಯಷಿಪ್‌ನ ಪುರುಷರ ಸಿಂಗಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಹರ್ಮೀತ್ ದೇಸಾಯಿ ಎರಡನೇ ಶ್ರೇಯಾಂಕದ ಜಿ ಸತ್ಯನ್ ಅವರನ್ನು 4-3ರಿಂದ ಸೋಲಿಸಿ ಎರಡನೇ ಬಾರಿಗೆ ಪ್ರಶಸ್ತಿ ಗೆದ್ದರು.

ಮಹಿಳಾ ಸಿಂಗಲ್ಸ್ ಕಿರೀಟವನ್ನು ರೈಲ್ವೆಯ ಪೊಯ್ಮಂಟಿ ಬೈಸ್ಯಾ ಅವರಿಗೆ ನೀಡಲಾಯಿತು. ಅವರು ಐಹಿಕಾ ಮುಖರ್ಜಿ ಅವರನ್ನು 4-2 ರಿಂದ ಸೋಲಿಸಿದರು.

ನಿರ್ಣಾಯಕ ಪಂದ್ಯದಲ್ಲಿ ಹರ್ಮೀತ್ 7-4 ರಲ್ಲಿ ಮೇಲುಗೈ ಸಾಧಿಸಿದ್ದರು. ಆದರೆ ಸತ್ಯನ್ ತಮ್ಮ ಎದುರಾಳಿ ತಪ್ಪು ಎಸಗೆಯುವಂತೆ ಮಾಡುವ ಮೂಲಕ ಪ್ರಾಬಲ್ಯ ಸಾಧಿಸಿದರು. ಹರ್ಮೀತ್ ತನ್ನ ಉತ್ಸಾಹ ಉಳಿಸಿಕೊಂಡು ಚಾಂಪಿಯನ್ ಆಗಿ ಹೊರಹೊಮ್ಮಿದರು.

ಅಂಗವಿಕಲರ ಕ್ರಿಕೆಟ್ ತಂಡ ಭಾರತ ಪ್ರವಾಸ

ನವದೆಹಲಿ (ಪಿಟಿಐ): ಮಹತ್ವದ ಬೆಳವಣಿಗೆಯಲ್ಲಿ ಇಂಗ್ಲೆಂಡ್ ಅಂಗವಿಕಲರ ಕ್ರಿಕೆಟ್ ತಂಡವು ಮೊದಲ ಬಾರಿಗೆ ಭಾರತ ಪ್ರವಾಸ ಕೈಗೊಳ್ಳಲು ನಿರ್ಧರಿಸಿದೆ.

ಕೌಶಲಭರಿತ ಮತ್ತು ಸಮರ್ಪಿತ ಆಟಗಾರರನ್ನು ಒಳಗೊಂಡಿರುವ ತಂಡವು, ಜನವರಿ 28 ರಿಂದ ಫೆಬ್ರುವರಿ 6ರವರೆಗೆ ಭಾರತ ವಿರುದ್ಧ ಸರಣಿ ಪಂದ್ಯಗಳನ್ನು ಆಡಲಿದೆ. ‘ಅಂತರರಾಷ್ಟ್ರೀಯ ಮಟ್ಟದಲ್ಲಿ ಅಂಗವಿಕಲ ಕ್ರೀಡಾಪಟುಗಳು ಮಿಂಚಲು ಅವಕಾಶಗಳನ್ನು ಒದಗಿಸಲಾಗುತ್ತಿದೆ’ ಎಂದು ಅಂಗವಿಕಲರ ಕ್ರಿಕೆಟ್ ಕೌನ್ಸಿಲ್ ಆಫ್ ಇಂಡಿಯಾ ಹೇಳಿಕೆಯಲ್ಲಿ ತಿಳಿಸಿದೆ.

ಪ್ರೊ ಕಬಡ್ಡಿ: ಟೈಟನ್ಸ್‌ಗೆ ರೋಚಕ ಜಯ

ಚೆನ್ನೈ: ನಾಯಕ ಪವನ್ ಶೆರಾವತ್ ಅವರ ಅಮೋಘ ಆಟದ ಬಲದಿಂದ ತೆಲುಗು ಟೈಟನ್ಸ್ ತಂಡವು ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ಎದುರು ರೋಚಕ ಜಯ ಸಾಧಿಸಿತು.

ಎಸ್‌ಡಿಎಟಿ ಮಲ್ಟಿ ಪರ್ಪಸ್ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಟೈಟನ್ಸ್ ತಂಡವು 37–36ರಿಂದ ಹರಿಯಾಣ ಸ್ಟೀಲರ್ಸ್ ಎದುರು ಗೆದ್ದಿತು. ಪವನ್ ಅವರು ಹತ್ತು ಅಂಕ ಗಳಿಸಿದರು.

ಪಂದ್ಯದ ಆರಂಭದಿಂದಲೂ ಉಭಯ ತಂಡಗಳ ಆಟಗಾರರು ಜಿದ್ದಾಜಿದ್ದಿಯ ಪೈಪೋಟಿ ನಡೆಸಿದರು. ಪ್ರಥಮಾರ್ಧದಲ್ಲಿಯೇ ಟೈಟನ್ಸ್ ತಂಡವು 21–20 ರಿಂದ ಮುನ್ನಡೆಯಲ್ಲಿತ್ತು. ಎರಡನೇ ಅವಧಿಯಲ್ಲಿ ಉಭಯ ತಂಡಗಳು 16–16ರ ಸಮಬಲ ಸಾಧಿಸಿದವು. ಆದರೆ ಮೊದಲಾರ್ಧದಲ್ಲಿ ಟೈಟನ್ಸ್ ತಂಡವು ಪಡೆದಿದ್ದ ಒಂದು ಅಂಕದ ಮುನ್ನಡೆ ಗೆಲುವಿಗೆ ನೆರವಾಯಿತು. ಟೈಟನ್ಸ್ ತಂಡದ ಡಿಫೆಂಡರ್ ಅಜಿತ್ ಪವಾರ್ ಏಳು ಹಾಗೂ ಲೆಫ್ಟ್ ರೇಡರ್ ಪ್ರಫುಲ್ ಜವಾರೆ ಮೂರು ಅಂಕಗಳನ್ನು ಗಳಿಸಿದರು. ಹರಿಯಾಣ ತಂಡದ ರೇಡರ್‌ಗಳಾದ ಶಿವಂ ಪಟಾರೆ 12 ಮತ್ತು ವಿನಯ್ ಒಂಬತ್ತು ಅಂಕಗಳನ್ನು ಗಳಿಸಿದರು.

ದಿನದ ಇನ್ನೊಂದು ಪಂದ್ಯದಲ್ಲಿ ಪಟ್ನಾ ಪೈರೆಟ್ಸ್ ತಂಡವು 46–33ರಿಂದ ತಮಿಳ್ ತಲೈವಾಸ್ ವಿರುದ್ಧ ಜಯಿಸಿತು. ಪ್ರೊ ಕಬಡ್ಡಿಯಲ್ಲಿ ಇದೇ ಮೊದಲ ಬಾರಿ ಆಡುತ್ತಿರುವ ಎಂ. ಸುಧಾಕರ್ ಅವರು 11 ಅಂಕಗಳನ್ನು ಗಳಿಸಿ, ಪಟ್ನಾ ತಂಡದ ಜಯದ ರೂವಾರಿಯಾದರು. ಅವರು ತಮ್ಮ ಚುರುಕಿನ ರೇಡಿಂಗ್ ಮೂಲಕ ಎದುರಾಳಿ ತಂಡಕ್ಕೆ ಚಳ್ಳೆಹಣ್ಣು ತಿನ್ನಿಸಿದರು.

ಶನಿವಾರದ ಪಂದ್ಯಗಳು

ತಮಿಳ್ ತಲೈವಾಸ್-ಜೈಪುರ್ ಪಿಂಕ್ ಪ್ಯಾಂಥರ್ಸ್ (ರಾತ್ರಿ 8ರಿಂದ), ಗುಜರಾತ್ ಜೈಂಟ್ಸ್–ಯು.ಪಿ. ಯೋಧಾ (ರಾತ್ರಿ 9ರಿಂದ)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



ಹರಿಯಾಣ ಸ್ಟೀಲರ್ಸ್ ಮತ್ತು ತೆಲುಗು ಟೈಟನ್ಸ್ ತಂಡಗಳ ನಡುವಿನ ಹಣಾಹಣಿ

ಬ್ಯಾಡ್ಮಿಂಟನ್: ಲಕ್ಷ್ಯ, ಆಕರ್ಷಿ ನಿರ್ಗಮನ

ಗುವಾಹಟಿ (ಪಿಟಿಐ): ಕಾಮನ್‌ವೆಲ್ತ್ ಕ್ರೀಡಾಕೂಟದ ಚಿನ್ನದ ಪದಕ ವಿಜೇತ ಲಕ್ಷ್ಯ ಸೇನ್ ಮತ್ತು ಅಗ್ರ ಶ್ರೇಯಾಂಕದ ಆಕರ್ಷಿ ಕಶ್ಯಪ್ ಇಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಶುಕ್ರವಾರ ಸೋತಿದ್ದಾರೆ.

ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಸೇನ್ ಅವರು ಅಭಿಷೇಕ್ ಸೈನಿ ವಿರುದ್ಧ 21-23, 21-12, 24-22 ಅಂತರದಲ್ಲಿ ಜಯಗಳಿಸಿದರು. ಆದರೆ, ಕ್ವಾರ್ಟರ್‌ನಲ್ಲಿ ಭರತ್ ರಾಘವ್ ವಿರುದ್ಧ 21-15, 10-21, 21-17 ಅಂತರದಲ್ಲಿ ಸೋತರು.

ಪ್ರಿಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ವರುಣ್ ಕಪೂರ್ ಅವರನ್ನು ಸೋಲಿಸಿದ ರಾಘವ್ ಸೆಮಿಫೈನಲ್‌ನಲ್ಲಿ ನಾಲ್ಕನೇ ಶ್ರೇಯಾಂಕದ ತರುಣ್ ವಿರುದ್ಧ ಸೆಣಸಲಿದ್ದಾರೆ.

ಮತ್ತೊಂದು ಸೆಮಿಫೈನಲ್‌ನಲ್ಲಿ ಚಿರಾಗ್ ಸೇನ್ ಎರಡನೇ ಶ್ರೇಯಾಂಕದ ಕಿರಣ್ ಜಾರ್ಜ್ ವಿರುದ್ಧ ಹೋರಾಡಲಿದ್ದಾರೆ. ಚಿರಾಗ್ ಅವರು ಆರ್ಯ ಅವರನ್ನು ಸೋಲಿಸಿದರೆ, ಜಾರ್ಜ್ ಅವರು ಎಂ. ಮಿಥುನ್ ಅವರನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಕಶ್ಯಪ್ 21-15, 22-20 ರಲ್ಲಿ ತನ್ವಿ ಶರ್ಮಾ ವಿರುದ್ಧ ಸೋತರು. ತನ್ವಿ ಅವರು ಇಶಾರಾಣಿ ಬರುವಾ ಅವರನ್ನು ಎದುರಿಸಲಿದ್ದಾರೆ.

ಮಹಿಳೆಯರ ಮತ್ತೊಂದು ಸೆಮಿಫೈನಲ್‌ನಲ್ಲಿ ಅನ್ಮೋಲ್ ಖಾರ್ಬ್ ಎರಡನೇ ಶ್ರೇಯಾಂಕದ ಅಶ್ಮಿತಾ ಚಾಲಿಹಾ ಅವರನ್ನು ಎದುರಿಸಲಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕದ ಕೃಷ್ಣ ಪ್ರಸಾದ್ – ವಿಷ್ಣುವರ್ಧನ್ ಗೌಡ್ ಜೋಡಿ ನಾಲ್ಕನೇ ಶ್ರೇಯಾಂಕದ ಹರಿಹರನ್ ಅಂಶಕರುಣನ್-ರುಬನ್ ಕುಮಾರ್ ಅವರನ್ನು ಎದುರಿಸಲಿದ್ದು, ಪಿ.ನವೀನ್ –ವಿ.ಲೋಕೇಶ್ ಜೋಡಿ ಆರನೇ ಶ್ರೇಯಾಂಕದ ಕೆ. ಪೃಥ್ವಿ ರಾಯ್– ಸೂರಜ್ ಗೋಲಾ ವಿರುದ್ಧ ಸೆಣಸಾಡಲಿದೆ.

ಮಹಿಳಾ ಡಬಲ್ಸ್‌ನ ಸೆಮಿಫೈನಲ್‌ನಲ್ಲಿ ಐದನೇ ಶ್ರೇಯಾಂಕದ ರಿತಿಕಾ ಥಾಕರ್-ಸಿಮ್ರಾನ್ ಸಿಂಘಿ ಜೋಡಿ ಪಿ.ಅಮೃತಾ-ಪ್ರಂಜಲ್ ಪ್ರಭು ಚಿಮುಲ್ಕರ್ ಅವರನ್ನು ಎದುರಿಸಿದರೆ, ಮೂರನೇ ಶ್ರೇಯಾಂಕದ ಪ್ರಿಯಾ ದೇವಿ– ಶ್ರುತಿ ಮಿಶ್ರಾ ಜೋಡಿ ಮೃಣ್ಮಯಿ ದೇಶಪಾಂಡೆ– ಪ್ರೇರಣಾ ಅಲ್ವೇಕರ್ ವಿರುದ್ಧ ಹೋರಾಡಲಿದೆ.

ಮಿಶ್ರ ಡಬಲ್ಸ್ ಸೆಮಿಫೈನಲ್‌ನಲ್ಲಿ ಆರನೇ ಶ್ರೇಯಾಂಕದ ನಿತಿನ್ ಕುಮಾರ್– ನವಧಾ ಮಂಗಲಂ ಜೋಡಿ ಮೂರನೇ ಶ್ರೇಯಾಂಕದ ನಿತಿನ್– ಮನೀಷಾ ಅವರನ್ನು ಎದುರಿಸಲಿದೆ.

ಆಕರ್ಷಿ ಕಶ್ಯಪ್